ವಿಶ್ವವಾಣಿ
ವಿಶ್ವಾಸವೇ ವಿಶ್ವ

ಸ್ವೀಟಿಗೆ ಕಂಕಣ ಭಾಗ್ಯ

ಬಾಹುಬಲಿ ಖ್ಯಾತಿಯ ಅಭಿನೇತ್ರಿ ಅನುಷ್ಕಾ ಶೆಟ್ಟಿ ಬೆಂಗಳೂರು ಮೂಲದ ಉದ್ಯಮಿಯೊಬ್ಬರನ್ನು ವರಿಸಲು ಸಜ್ಜಾಗಿದ್ದಾರೆಂದು ಹೇಳಲಾಗಿದ್ದು, ಈ ಕುರಿತ ನಿಶ್ಚಿತಾರ್ಥ ಸದ್ಯವೇ ನೆರವೇರಲಿದೆ ಎಂದು ಮೂಲಗಳು ತಿಳಿಸಿವೆ.

ಸೊಂಪಾದ ಪುಟಗಳು

ಆ ಟಿಪ್ಪರರಿ ಮತ್ತು ತಿಪ್ಪಾರಳ್ಳಿ ನಡುವೆ ಹತ್ತಾರು ನೆನಪುಗಳು!

ಇದೇ ಅಂತರಂಗ ಸುದ್ದಿ
ವಿಶ್ವೇಶ್ವರ ಭಟ್ 6



ಶಾಂತಿಯಂತೆ ಸಂಗ್ರಾಮಕ್ಕೂ ಜಗತ್ತಿಗೆ ಭಾರತವೇ ಆದರ್ಶ

ವಿದ್ಯಮಾನ
ವಿನಾಯಕ ವೆಂ.ಭಟ್ಟ, ಅಂಬ್ಲಿಹೊಂಡ 6

ದಾರಿದೀಪೋಕ್ತಿ



ಮನುಷ್ಯನಿಗೆ ಅಹಂಕಾರ ಇರಬಾರದು ಎನ್ನುವುದು ಸರಿ. ಆದರೆ ಹೋಟೆಲ್‌ನಲ್ಲಿ ಆರ್ಡರ್ ಮಾಡಿದ ಊಟ ಲೇಟ್ ಆದಾಗ ತೋರಿಸುವ ಆ 'ಗಾಢ ಮೌನ' ಇದೆಯಲ್ಲ, ಅದು ಅಹಂಕಾರಕ್ಕಿಂತ ಅಪಾಯಕಾರಿ.

ವಕ್ರತುಂಡೋಕ್ತಿ

ಮದುವೆಯಾಗದವನು ಮದುವೆ ಬಗ್ಗೆ, ಕೆಲಸವಿಲ್ಲದವನು ಯಶಸ್ಸಿನ ಬಗ್ಗೆ ಮತ್ತು ಹಲ್ಲು ಉದುರಿದವನು ಊಟದ ರುಚಿಯ ಬಗ್ಗೆ ಪ್ರಬಂಧ ಬರೆಯುವ ಒಂದು ಸುಂದರ ಲೋಕಕ್ಕೆ ಫೇಸ್ಬುಕ್ ಎನ್ನಬಹುದು.

ಇಂದಿನಿಂದ ಹೊಸ ಅಂಕಣ
ಹೊರಸುಸುವ ಮನ
ಐಆರ್‌ಎಸ್ ಅಧಿಕಾರಿ, ಆದಾಯಕರ ವಿಭಾಗದ ಪ್ರಧಾನ ಆಯುಕ್ತೆ ಸುಸಾನ್ ಥಾಮಸ್ ಅವರ ಅಂಕಣ ಪ್ರತೀ ಭಾನುವಾರ

ತಮಿಳುನಾಡಿನ ಕವಿ ವೈರಮುತ್ತುಗೆ ಜ್ಞಾನಪೀಠ ಪ್ರಶಸ್ತಿ

ಚೆನ್ನೈ: ತಮಿಳುನಾಡಿನ ಕವಿ ಹಾಗೂ ಗೀತರಚನೆಕಾರ ವೈರಮುತ್ತು ಅವರು 2025ನೇ ಸಾಲಿನ ಜ್ಞಾನಪೀಠ ಪ್ರಶಸ್ತಿಗೆ ಭಾಜನರಾಗಿದ್ದಾರೆ. 1975ರಲ್ಲಿ ಅಖಿಲನ್ ಮತ್ತು 2002ರಲ್ಲಿ ಜಯಕಾಂತನ್ ನಂತರ ಜ್ಞಾನಪೀಠ ಪ್ರಶಸ್ತಿ ಪಡೆದ ತಮಿಳುನಾಡಿನ 3ನೇ ಸಾಹಿತಿ ಇವರು. ತಮ್ಮ ಸಾಹಿತ್ಯಕ್ಕಾಗಿ ಏಳು ರಾಷ್ಟ್ರೀಯ ಪ್ರಶಸ್ತಿಗಳನ್ನು ಪಡೆದಿದ್ದು, ಪದ್ಮಶ್ರೀ ಮತ್ತು ಪದ್ಮಭೂಷಣ ಗೌರವಗಳಿಗೂ ಭಾಜನರಾಗಿದ್ದಾರೆ. 40ಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದು, 7,500ಕ್ಕೂ ಹೆಚ್ಚು ಹಾಡುಗಳಿಗೆ ಸಾಹಿತ್ಯ ಬರೆದಿದ್ದಾರೆ. ಅಕ್ಷರ ಜಗತ್ತು ಶ್ರೇಷ್ಠ ಎಂದು ಪರಿಗಣಿಸುವ ಜ್ಞಾನಪೀಠ ಪ್ರಶಸ್ತಿಯನ್ನು ಸ್ವೀಕರಿಸಲು ನನಗೆ ಸಂತೋಷವಾಗುತ್ತದೆ' ಎಂದು ವೈರಮುತ್ತು ಸಂತಸ ವ್ಯಕ್ತಪಡಿಸಿದ್ದಾರೆ.

ಫನ್‌ತರಂಗ

- ರಘುಪತಿ ಶೃಂಗೇರಿ -

ಶಿಕ್ಷಕರಿಗೆ ಬೀದಿ ನಾಯಿಗಳ ನಿಯಂತ್ರಣ ಹೊಣೆ ಹೊರಿಸಿದ ಸರ್ಕಾರ



ಇರಾನ್ ತೈಲ ಸಂಪತ್ತಿನ ಖಾರ್ಗ್ ದ್ವೀಪದ ಮೇಲೆ ಅಮೆರಿಕ ಬಾಂಬ್

ಮಿತ್ರರಾಷ್ಟ್ರಗಳ ಅಮೆರಿಕ ನೆಲೆಗಳ ಮುಂದುವರಿದ ಇರಾನ್ ದಾಳಿ

ಕೊಲ್ಲಿ ಸಂಘರ್ಷ ಮತ್ತಷ್ಟು ತೀವ್ರ

ಟೆಹರಾನ್/ ದೆಹಲಿ: ಜಾಗತಿಕ ಮಟ್ಟದಲ್ಲಿ ಇಂಧನ ತೈಲಕ್ಕೆ ಹಾಹಾಕಾರವೆದ್ದಿರುವ ನಡುವೆ ಅಮೆರಿಕ, ಇಸ್ರೇಲ್ ಹಾಗೂ ಇರಾನ್ ನಡುವಿನ ಸಂಘರ್ಷ ಮತ್ತಷ್ಟು ತೀವ್ರಗೊಂಡಿದೆ. ಇರಾನ್‌ನ ಆರ್ಥಿಕ ಜೀವನಾಡಿ ಹಾಗೂ ಕಿರೀಟ ರತ್ನ ಎಂದೇ ಕರೆಯಲಾಗುವ ಖಾರ್ಗ್ ದ್ವೀಪದ ಮೇಲೆ ಅಮೆರಿಕ ಬಾಂಬ್ ದಾಳಿ ನಡೆಸಿದೆ. ಪ್ರತಿಯಾಗಿ ಕೊಲ್ಲಿ ರಾಷ್ಟ್ರಗಳ ಅಮೆರಿಕ ನೆಲೆಗಳ ಮೇಲೆ ಇರಾನ್ ದಾಳಿ ಮುಂದುವರಿಸಿದೆ. ಇರಾಕ್ ರಾಜಧಾನಿ ಬಾಗ್ದಾದ್‌ನಲ್ಲಿರುವ ಅಮೆರಿಕ ರಾಯಭಾರ ಕಚೇರಿ ಆವರಣದ ಮೇಲೆ ಶನಿವಾರ ಕ್ಷಿಪಣಿ ದಾಳಿ ನಡೆದಿದೆ.

ಕೊಲ್ಲಿ ಯುದ್ಧವು ಶನಿವಾರ ಹದಿನೈದನೇ ದಿನಕ್ಕೆ ಕಾಲಿಟ್ಟಿದೆ. ಯುದ್ಧ ನಿರತ ರಾಷ್ಟ್ರಗಳು ತೈಲ ಕೇಂದ್ರಗಳನ್ನೇ ಆಯ್ದು ವೈಮಾನಿಕ ದಾಳಿ ಮಾಡುತ್ತಿರುವ ಹಿನ್ನೆಲೆಯಲ್ಲಿ ಜಾಗತಿಕ ತೈಲ ಪೂರೈಕೆ ಮತ್ತಷ್ಟು ಕುಸಿದಿದೆ. ಸೌದಿ, ಯುಎಇ, ಕತಾರ್ ಸೇರಿದಂತೆ ಕೊಲ್ಲಿಯ ಬಹುತೇಕ ರಾಷ್ಟ್ರಗಳು ದಾಳಿ ಭೀತಿಯಿಂದ ತೈಲ ಉತ್ಪಾದನೆಯನ್ನು ನಿಲ್ಲಿಸಿದ್ದು, ಕಚ್ಚಾ ತೈಲ ದರದ ಬ್ಯಾರಲ್‌ಗೆ 100ರ ಗಡಿ ದಾಟಿ ಮುಂದುವರಿದಿದೆ.

ಈ ನಡುವೆ ಇರಾನ್ ಪರ್ಷಿಯನ್ ಕೊಲ್ಲಿಯಲ್ಲಿ ಸರಕು ಹಡಗು ಮತ್ತು ಇಂಧನ ಮೂಲಸೌಕರ್ಯದ ಮೇಲೆ ದಾಳಿ ಮಾಡುತ್ತಲೇ ಇರುವುದರಿಂದ ಅಮೆರಿಕವು ಪಶ್ಚಿಮ ಏಷ್ಯಾಕ್ಕೆ ಸುಮಾರು 2,500 ನೌಕಾಪಡೆಗಳು ಹಾಗೂ ಹಡಗುಗಳನ್ನು ನಿಯೋಜಿಸಲು ಆದೇಶಿಸಿದೆ.

ಖಾರ್ಗ್ ದ್ವೀಪದ ಮೇಲೆ ಬಾಂಬ್: ಇರಾನ್‌ನ ತೈಲ ರಫ್ತುಗಳನ್ನು ನಿರ್ವಹಿಸುವ ಪ್ರಾಥಮಿಕ ಟರ್ಮಿನಲ್ ಆದ ಖಾರ್ಗ್ ದ್ವೀಪದಲ್ಲಿನ ಮಿಲಿಟರಿ ನೆಲೆಗಳನ್ನು ಅಮೆರಿಕದ ಪಡೆಗಳು ನಾಶಪಡಿಸಿವೆ ಎಂದು ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ. ಖಾರ್ಗ್ ದ್ವೀಪವು ಇರಾನಿನ ತೈಲ ರಫ್ತುಗಳನ್ನು ನಿರ್ವಹಿಸುವ ಪ್ರಾಥಮಿಕ ಟರ್ಮಿನಲ್‌ಗೆ ನೆಲೆಯಾಗಿದ್ದು, ಶುಕ್ರವಾರ ಇದರ ಮೇಲೆ ಅಮೆರಿಕ ಭೀಕರ ಬಾಂಬ್ ದಾಳಿ ನಡೆಸಿದೆ. ಅಮೆರಿಕದ ದಾಳಿಗಳು ಮಿಲಿಟರಿ ಸೌಲಭ್ಯಗಳಿಗೆ ಸೀಮಿತವಾಗಿವೆ ಎಂದು ಫಾರ್ಸ್ ನ್ಯೂಸ್ ವರದಿ ಮಾಡಿದೆ.

ಅಮೆರಿಕ ಸೆಂಟ್ರಲ್ ಕಮಾಂಡ್ ಮಧ್ಯಪ್ರಾಚ್ಯದ ಇತಿಹಾಸದಲ್ಲಿ ಅತ್ಯಂತ ಶಕ್ತಿಶಾಲಿ ಬಾಂಬ್ ದಾಳಿಗಳಲ್ಲಿ ಒಂದನ್ನು ನಡೆಸುವ ಮೂಲಕ, ಇರಾನ್‌ನ ಕಿರೀಟ ರತ್ನವಾದ ಖಾರ್ಗ್ ದ್ವೀಪದಲ್ಲಿನ ಪ್ರತಿಯೊಂದು ಮಿಲಿಟರಿ ಗುರಿಯನ್ನು ಸಂಪೂರ್ಣವಾಗಿ ನಾಶ ಮಾಡಿದೆ. ಆದರೆ, ಸಭ್ಯತೆಯ ಕಾರಣದಿಂದಾಗಿ ಈ ದ್ವೀಪದಲ್ಲಿನ ತೈಲ ಮೂಲಸೌಕರ್ಯವನ್ನು ಅಳಿಸಿಹಾಕಿಲ್ಲ. ಒಂದು ವೇಳೆ, ಇರಾನ್ ಅಥವಾ ಬೇರೆ ಯಾರಾದರೂ, ಹೊರ್ಮುಜ್ ಜಲಸಂಧಿಯಲ್ಲಿ ಸರಕು ಹಡಗುಗಳ ಮುಕ್ತ ಮತ್ತು ಸುರಕ್ಷಿತ ಹಾದಿಗೆ ಅಡ್ಡಿಪಡಿಸಿದರೆ ನಾನು ತಕ್ಷಣ ಈ ನಿರ್ಧಾರವನ್ನು ಮರುಪರಿಶೀಲಿಸುತ್ತೇನೆ ಎಂದು ಟ್ರಂಪ್ ಎಚ್ಚರಿಸಿದ್ದಾರೆ.

ಅಮೆರಿಕ ಬಾಂಬ್ ದಾಳಿ ನಡೆಸಿದ ನಂತರವೂ ತೈಲ ರಫ್ತು ಮತ್ತು ಆಮದು ಕಾರ್ಯಾಚರಣೆಗಳು ಹಾಗೂ ದ್ವೀಪವನ್ನು ಆಧರಿಸಿದ ಕಂಪನಿಗಳ ಚಟುವಟಿಕೆಗಳು ಎಂದಿನಂತೆ ನಡೆಯುತ್ತಿವೆ ಎಂದು ಇರಾನ್ ಹೇಳಿದೆ. ಅಮೆರಿಕ ದಾಳಿಯಲ್ಲಿ ಯಾವುದೇ ಸಾವುನೋವುಗಳು ಸಂಭವಿಸಿಲ್ಲ ಎಂದು ಬುಶೆಹರ್ ಪ್ರಾಂತ್ಯದ ಉಪ ಗವರ್ನರ್ ಎಹ್ಸಾನ್ ಜಹಾನಿಯನ್ ಹೇಳಿದ್ದಾರೆ.

ಮುಂದುವರಿದ ಇರಾನ್ ದಾಳಿ: ಇಸ್ರೇಲ್ ಮತ್ತು ನೆರೆಯ ಗಲ್ಫ್ ರಾಷ್ಟ್ರಗಳ ಮೇಲೆ ಇರಾನ್ ವ್ಯಾಪಕ ಕ್ಷಿಪಣಿ ಮತ್ತು ಡ್ರೋನ್ ದಾಳಿಗಳನ್ನು ಮುಂದುವರಿಸಿದೆ. ಇರಾಕ್ ರಾಜಧಾನಿ ಬಾಗ್ದಾದ್‌ನಲ್ಲಿರುವ ಅಮೆರಿಕ ರಾಯಭಾರ ಕಚೇರಿ ಆವರಣದ ಮೇಲೆ ಇರಾನ್ ಶನಿವಾರ ಕ್ಷಿಪಣಿ ದಾಳಿ ನಡೆಸಿದ್ದು ಈ ದಾಳಿಯಲ್ಲಿ ಇಬ್ಬರು ಮೃತಪಟ್ಟಿದ್ದಾರೆ. ಬಾಗ್ದಾದ್‌ನ ಕರ್ದಾಡಾ ಜಿಲ್ಲೆಯಲ್ಲಿ ನಡೆದ ದಾಳಿಯಲ್ಲಿ ಇಬ್ಬರು ಗಾಯಗೊಂಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಒಮಾನ್ ತೊರೆಯಲು ಆದೇಶ: ಸುರಕ್ಷತಾ ಅಪಾಯಗಳ ಹಿನ್ನೆಲೆಯಲ್ಲಿ, ತುರ್ತು ಸೇವೆಯಲ್ಲಿರದ ಅಮೆರಿಕದ ಸರಕಾರಿ ನೌಕರರು ಮತ್ತು ಕುಟುಂಬ ಸದಸ್ಯರು ಒಮಾನ್ ತೊರೆ ಯುವಂತೆ ಅಮೆರಿಕ ಶುಕ್ರವಾರ ಆದೇಶಿಸಿದೆ. ಮಧ್ಯಪ್ರಾಚ್ಯದಲ್ಲಿ ಉದ್ವಿಗ್ನತೆ ಹೆಚ್ಚುತ್ತಿರುವ ಕಾರಣ ಒಮಾನ್ ಮತ್ತು ಅಲ್ಲಿನ ಗಡಿ ಪ್ರದೇಶಕ್ಕೆ ಪ್ರಯಾಣದ ಬಗ್ಗೆ ಮರುಪರಿಶೀಲಿಸುವಂತೆ ಅಮೆರಿಕನ್ನರಿಗೆ ವಿದೇಶಾಂಗ ವ್ಯವಹಾರಗಳ ಬ್ಯೂರೋ ಸೂಚನೆ ನೀಡಿದೆ.

ಮೊಜ್ತಾಬಾ ತಲೆಗೆ ಕೋಟಿ ಡಾಲರ್ ಇನಾಮು ಘೋಷಿಸಿದ ಅಮೆರಿಕ

ಇರಾನ್‌ನ ನೂತನ ಸರ್ವೋಚ್ಚ ನಾಯಕ ಮೊಜ್ತಾಬಾ ಖಮೇನಿ ಮತ್ತು ಸುಪ್ರೀಂ ರಾಷ್ಟ್ರೀಯ ಭದ್ರತಾ ಮಂಡಳಿಯ ಕಾರ್ಯದರ್ಶಿ ಅಲಿ ಲಾರಿಜಾನಿ ಸೇರಿದಂತೆ ಇತರ ಪ್ರಮುಖರ ಬಗ್ಗೆ ಮಾಹಿತಿ ನೀಡಿದರೆ 10 ಮಿಲಿಯನ್ ಡಾಲರ್‌ಗಳವರೆಗೆ ಬಹುಮಾನ ನೀಡುವುದಾಗಿ ಅಮೆರಿಕ ವಿದೇಶಾಂಗ ಇಲಾಖೆ ಘೋಷಿಸಿದೆ. ಮೊಜ್ತಾಬಾ ಖಮೇನಿ ಸೇರಿದಂತೆ ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ ಕಾರ್ಪ್ಸ್‌ಗೆ ಸಂಬಂಧಿಸಿದ ಹಲವಾರು ಹಿರಿಯ ಅಧಿಕಾರಿಗಳ ಫೋಟೋವನ್ನು ಅಮೆರಿಕದ ಡಿಪಾರ್ಟ್‌ಮೆಂಟ್‌ನ ಡಿಪ್ಲೊಮ್ಯಾಟಿಕ್ ಸೆಕ್ಯುರಿಟಿ ಸರ್ವಿಸ್ ನಡೆಸುವ ರಿವಾರ್ಡ್ಸ್ ಫಾರ್ ಜಸ್ಟೀಸ್ ಅಪ್‌ಲೋಡ್ ಮಾಡಿ ನಗದು ಬಹುಮಾನ ಪ್ರಕಟಿಸಿದೆ. ಈ ವ್ಯಕ್ತಿಗಳು ಪ್ರಪಂಚದಾದ್ಯಂತ ಭಯೋತ್ಪಾದನೆಯನ್ನು ಯೋಜಿಸುವ, ಸಂಘಟಿಸುವ ಮತ್ತು ಕಾರ್ಯಗತಗೊಳಿಸುವ ಕೆಲಸ ಮಾಡುತ್ತಿದ್ದಾರೆಂದು ಅಮೆರಿಕ ಹೇಳಿದೆ.

ಎಲ್‌ಪಿಜಿ ಟ್ಯಾಂಕರ್‌ಗೆ ನೌಕಾಪಡೆ ಬೆಂಗಾವಲು

ದೆಹಲಿ: ಭಾರತೀಯ ನೌಕಾ ಪಡೆಯ ಬೆಂಗಾವಲಿನೊಂದಿಗೆ 40,000 ಮೆಟ್ರಿಕ್ ಟನ್‌ಗಳಿಗೂ ಹೆಚ್ಚು ಎಲ್‌ಪಿಜಿ ಹೊತ್ತ ಭಾರತೀಯ ಹಡಗು ಶಿವಾಲಿಕ್ ಹೊರ್ಮುಜ್ ಜಲಸಂಧಿಯನ್ನು ಯಶಸ್ವಿಯಾಗಿ ದಾಟಿದು ಸೋಮವಾರದೊಳಗೆ ಮುಂಬೈ ಅಥವಾ ಕಾಂಡ್ಲಾ ಬಂದರಿಗೆ ಆಗಮಿಸುವ ಸಾಧ್ಯತೆಯಿದೆ. ಎಲ್‌ಪಿಜಿ ಹೊತ್ತ ಮತ್ತೊಂದು ಹಡಗು ನಂದಾದೇವಿಯೂ ನೌಕಾಪಡೆಯ ಬೆಂಗಾವಲಿನಲ್ಲಿ ಶನಿವಾರ ಬೆಳಗ್ಗೆ ಜಲಸಂಧಿಯಯನ್ನು ದಾಟಿದ್ದು ಎರಡು ದಿನದ ಒಳಗಡೆ ಭಾರತದ ಬಂದರು ತಲುಪುವ ಸಾಧ್ಯತೆಯಿದೆ. ಇದು ಎಲ್‌ಪಿಜಿ ಕೊರತೆಯಿಂದ ತೀವ್ರ ಸಮಸ್ಯೆ ಎದುರಿಸುತ್ತಿರುವ ದೇಶಕ್ಕೆ ವರದಾನವಾಗುವ ಸಾಧ್ಯತೆ ಇದೆ. ಭಾರತೀಯ ಧ್ವಜ ಹೊಂದಿರುವ ಹಡಗುಗಳ ಸಂಚಾರಕ್ಕೆ ಹಾರ್ಮುಜ್ ಜಲಸಂಧಿಯನ್ನು ತೆರೆಯಬೇಕೆಂಬ ಭಾರತದ ಮನವಿಗೆ ಇರಾನ್ ಸ್ಪಂದಿಸಿದ್ದು ಭಾರತದ ಹಡುಗಳ ಸಂಚಾರಕ್ಕೆ ಅನುಮತಿ ನೀಡಿದೆ. ಮುಂದಿನ ದಿನಗಳಲ್ಲಿ ಮತ್ತಷ್ಟು ಹಡಗುಗಳು ಈ ದಾರಿಯ ಮೂಲಕ ಭಾರತಕ್ಕೆ ಬರಲಿದೆ ಎಂದು ಮೂಲಗಳು ತಿಳಿಸಿವೆ.

84 ಇರಾನ್ ನಾವಿಕರ ಶವ ಹೊತ್ತ ವಿಮಾನ ಅರ್ಮೇನಿಯಾಕ್ಕೆ ಪಯಣ

ಕೊಚ್ಚಿ: ಶ್ರೀಲಂಕಾದ ಕರಾವಳಿ ಭಾಗದಲ್ಲಿ ಅಮೆರಿಕ ದಾಳಿ ನಡೆಸಿದ ಪರಿಣಾಮ ಹುತಾತ್ಮರಾದ ತನ್ನ 80ಕ್ಕೂ ನಾವಿಕರ ಶವಗಳೊಂದಿಗೆ ಇರಾನ್ ವ್ಯವಸ್ಥೆ ಮಾಡಿದ ಚಾರ್ಟರ್ಡ್ ವಿಮಾನವು ಶುಕ್ರವಾರ ತಡರಾತ್ರಿ ಕೊಚ್ಚಿಯಿಂದ ಅರ್ಮೇನಿಯಾಗೆ ಹೊರಟಿದೆ. ಕಳೆದ ವಾರ ಕೇರಳ ಬಂದರಿನಲ್ಲಿ ಲಂಗರು ಹಾಕಿರುವ ಇರಾನ್ ಯುದ್ಧನೌಕೆ ಐಆರ್‌ಐಎಸ್ ಲವನ್‌ನ ಹೆಚ್ಚಿನ ಸಿಬ್ಬಂದಿ ಈ ವಿಮಾನ ಏರಿದ್ದಾರೆ.

ಮಾರ್ಚ್ 4 ರಂದು ಲಂಕಾ ಬಳಿ ಅಮೆರಿಕ ತನ್ನ ಜಲಾಂತರ್ಗಾಮಿಯಿಂದ ಕ್ಷಿಪಣಿ ಹಾರಿಸಿ ಐಆರ್‌ಐಎಸ್ ದೇನಾವನ್ನು ಮುಳುಗಿಸಿತ್ತು. ದೇನಾದಲ್ಲಿ 32 ಸಿಬ್ಬಂದಿಯನ್ನು ಲಂಕಾ ನೌಕಾಪಡೆ ರಕ್ಷಿಸಿತ್ತು. 84 ಇರಾನ್ ಯೋಧರು ಮೃತಪಟ್ಟಿದ್ದರು. ಐಆರ್‌ಐಎಸ್ ಲವನ್ ಈಗಲೂ ಕೊಚ್ಚಿ ಬಂದರಿನಲ್ಲೇ ಲಂಗರು ಹಾಕಿದೆ.

ಬಹುತೇಕ ಹೋಟೆಲ್‌ಗಳ ಸಿಲಿಂಡರ್ ಖಾಲಿ

ಬಾರದ ವಾಣಿಜ್ಯ ಸಿಲಿಂಡರ್ ಮತ್ತಷ್ಟು ಹೋಟೆಲ್‌ಗೆ ಬೀಗ

ಬೆಂಗಳೂರು: ಎಲ್‌ಪಿಜಿ ಅನಿಲವನ್ನು ಹೊತ್ತ ಹಡಗುಗಳು ಭಾರತದತ್ತ ಹೊರಟಿದ್ದರೂ, ಇನ್ನೂ ದೇಶದ ಬಂದರುಗಳನ್ನು ತಲುಪದೇ ಇರುವ ಕಾರಣ ರಾಜ್ಯಾದ್ಯಂತ ವಾಣಿಜ್ಯ ಸಿಲಿಂಡರ್‌ಗಳ ಹಾಹಾಕಾರ ಮುಂದುವರೆದಿದೆ. ಸಿಲಿಂಡರ್ ಕಾರಣಕ್ಕೆ ಮತ್ತಷ್ಟು ಹೋಟೆಲ್‌ಗಳು ಬಾಗಿಲೆಳೆದುಕೊಂಡಿವೆ. ಸೇವೆ ಮುಂದುವರಿಸಿರುವ ಹೋಟೇಲ್‌ಗಳು ಮೆನುವಿನಲ್ಲಿ ಕಡಿತ ಮಾಡಿವೆ.

ವಾಣಿಜ್ಯ ಸಿಲಿಂಡರ್‌ಗಳು ಅಕ್ರಮವಾಗಿ ಮಾರಾಟವಾಗುತ್ತಿದ್ದು, ಬಹುತೇಕರು, ಹೆಚ್ಚು ಗ್ಯಾಸ್ ಬಯಸುವ ಆಹಾರ ಪದಾರ್ಥವನ್ನೇ ಸ್ಥಗಿತಗೊಳಿಸುವ ತೀರ್ಮಾನಿಸಿದ್ದಾರೆ. ಇನ್ನೆರೆಡು ದಿನದಲ್ಲಿ ಸಹಜ ಸ್ಥಿತಿಗೆ ಬರಲಿದೆ ಎನ್ನುವ ವಿಶ್ವಾಸವನ್ನು ಸರಕಾರ ನೀಡುತ್ತಿದ್ದರೂ, ಭಾನುವಾರದ ವೇಳೆಗೆ ಬಹುತೇಕ ಹೋಟೆಲ್‌ಗಳ ಸಂಗ್ರಹ ಖಾಲಿಯಾಗುವ ಆತಂಕವಿದೆ. ಕೆಲ ಹೋಟೆಲ್‌ಗಳು ಗ್ಯಾಸ್ ಬದಲಿಗೆ ಸೌದೆ ಬಳಸಿಕೊಂಡು ಕೆಲ ಅಡುಗೆ ಸಾಮಗ್ರಿ ತಯಾರಿಸಲು ಆರಂಭಿಸಿವೆ. ಇಂದಿರಾ ಕ್ಯಾಂಟೀನ್ ಸೇರಿದಂತೆ ಹಲವು ಕಡೆ ಸೌದೆಯ ಮೊರೆ ಹೋಗಲಾಗಿದೆ. ಇನ್ನು ಕೆಲ ಹೋಟೆಲ್‌ಗಳು ಗ್ಯಾಸ್‌ಗೆಂದು ಪ್ರತ್ಯೇಕ ದರ ವಿಧಿಸುತ್ತಿರುವುದು ಸಾಮಾಜಿಕ ಜಾಲತಾಣದಲ್ಲಿ ಚರ್ಚೆಗೆ ಗ್ರಾಸವಾಗಿದೆ.

ಕಾಳಸಂತೆ ಮಾರಾಟ; ಜಪ್ತಿ: ಗೃಹ ಬಳಕೆ ಸಿಲಿಂಡರ್‌ಗಳನ್ನು ವಾಣಿಜ್ಯ ಬಳಕೆ ಉದ್ದೇಶಕ್ಕೆ ಬಳಸುತ್ತಿದ್ದ ಆರೋಪದಡಿ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಆಹಾರ ಇಲಾಖೆ ಅಧಿಕಾರಿಗಳು ಕಾರ್ಯಾಚರಣೆ ನಡೆಸಿ, ಒಟ್ಟು 316 ಸಿಲಿಂಡರ್‌ಗಳನ್ನು ವಶಪಡಿಸಿಕೊಂಡಿದ್ದಾರೆ. ಗೃಹ ಬಳಕೆ ಸಿಲಿಂಡರ್‌ಗಳನ್ನು ವಾಣಿಜ್ಯ ಉದ್ದೇಶಕ್ಕೆ ಬಳಸುತ್ತಿದ್ದ ಆರೋಪದಲ್ಲಿ ಬೆಂಗಳೂರಿನ ಪೀಣ್ಯದಲ್ಲಿ 45, ಚಿಕ್ಕಜಾಲದಲ್ಲಿ 209, ಶಿವಮೊಗ್ಗದಲ್ಲಿ 3, ಯಾದಗಿರಿ 46, ದಾವಣಗೆರೆಯಲ್ಲಿ 13 ಸಿಲಿಂಡರ್‌ಗಳನ್ನು ಜಪ್ತಿ ಮಾಡಿಕೊಳ್ಳಲಾಗಿದೆ.

ಮಾದಕ ವ್ಯಸನಿ ಕೈದಿಗಳನ್ನು ಗುರುತಿಸಿ ಚಿಕಿತ್ಸೆ

ಇನ್ಮುಂದೆ ರಾಜ್ಯ ಎಲ್ಲ ಜೈಲಲ್ಲಿ ಮಾದಕ ದ್ರವ್ಯ ಸೇವನೆ ಪರೀಕ್ಷೆ

ಬೆಂಗಳೂರು: ಡ್ರಗ್ಸ್ ಮುಕ್ತ ಕಾರಾಗೃಹ ನಿರ್ಮಾಣ ಮಾಡುವ ಉದ್ದೇಶದಿಂದ ರಾಜ್ಯದ ಎಲ್ಲ ಕಾರಾಗೃಹಗಳ ಕೈದಿಗಳನ್ನು ಡ್ರಗ್ ಪರೀಕ್ಷೆಗೆ ಒಳಪಡಿಸುವಂತೆ ಡಿಜಿಪಿ ಅಲೋಕ್ ಕುಮಾರ್ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಜೈಲು ಸಿಬ್ಬಂದಿಯಿಂದಲೂ ಮಾದಕ ವಸ್ತುಗಳು ಕಾರಾಗೃಹದೊಳಗೆ ಸಾಗಾಟವಾಗಿರುವ ಘಟನೆಗಳ ಹಿನ್ನೆಲೆಯಲ್ಲಿ ನಿಮಾನ್ಸ್ ಆಸ್ಪತ್ರೆ ಸಹಯೋಗದೊಂದಿಗೆ ಕೈದಿಗಳಿಗೆ ಮಾದಕ ದ್ರವ್ಯ ಪರೀಕ್ಷೆಗಳನ್ನು ನಡೆಸಲು ನಿರ್ಧರಿಸಲಾಗಿದೆ. ರಾಜ್ಯಾದ್ಯಂತ ಇರುವ ಜೈಲುಗಳಲ್ಲಿ ಮಾದಕ ವಸ್ತುಗಳ ಸೇವನೆ ತಡೆಯಲು ಮಹತ್ವದ ಕ್ರಮ ಕೈಗೊಂಡಿದ್ದು ರಾಜ್ಯದ ಎಲ್ಲಾ ಜೈಲುಗಳಲ್ಲಿ ಕೈದಿಗಳನ್ನು ಮಾದಕವಸ್ತು ಪರೀಕ್ಷೆಗೆ ಒಳಪಡಿಸಲಾಗುತ್ತಿದೆ.

ರಾಜ್ಯದ ಶೇ.10 ಕೈದಿಗಳಿಗೆ ಪರೀಕ್ಷೆ: ಪರಪ್ಪನ ಅಗ್ರಹಾರದಲ್ಲಿ ಮಾರ್ಚ್ 9 ರಂದು ಸಿಬ್ಬಂದಿಯೇ ತನ್ನ ಒಳ ಉಡುಪಿನಲ್ಲಿ ಮಾದಕ ವಸ್ತುಗಳನ್ನು ಜೈಲಿನೊಳಗೆ ತಂದ ಘಟನೆ ನಡೆದಿತ್ತು. → 4

ವ್ಯಸನಿ ಕೈದಿಗಳಿಗೆ ಕೌನ್ಸೆಲಿಂಗ್

ಪರೀಕ್ಷೆಯಲ್ಲಿ ಕೈದಿಗಳು ಮಾದಕ ವಸ್ತು ಸೇವಿಸಿರುವುದು ಪತ್ತೆಯಾದರೆ ತಕ್ಷಣವೇ ಅವರಿಗೆ ಕೌನ್ಸೆಲಿಂಗ್ ನೀಡಲಾಗುತ್ತದೆ. ಹೆಚ್ಚು ಅಡಿಕ್ಟ್ ಆಗಿರುವ ಕೈದಿಗಳನ್ನು ಆಸ್ಪತ್ರೆಯಲ್ಲಿ ದಾಖಲಿಸಿ ಚಿಕಿತ್ಸೆ ನೀಡುವ ವ್ಯವಸ್ಥೆಯೂ ಮಾಡಲಾಗಿದೆ. ಮಾದಕ ವಸ್ತು ಸೇವನೆ ಪತ್ತೆಯಾದ ಕೈದಿಗಳ ಮೇಲೆ ಸದ್ಯಕ್ಕೆ ಯಾವುದೇ ಕ್ರಿಮಿನಲ್ ಪ್ರಕರಣ ದಾಖಲಿಸಲಾಗುವುದಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಬದಲಿಗೆ ಕೌನ್ಸೆಲಿಂಗ್ ಮತ್ತು ಚಿಕಿತ್ಸೆಯ ಮೂಲಕ ಕೈದಿಗಳನ್ನು ಸರಿ ದಾರಿಗೆ ತರಲು ಕಾರಾಗೃಹ ಇಲಾಖೆ ಮುಂದಾಗಿದೆ.

ಬೆಂಕಿ ನಂದಿಸಲು ವಾಚರ್‌ಗಳ ಕೊರತೆ

ಮುತ್ತೋಡಿ ಅರಣ್ಯಕ್ಕೆ ಬೆಂಕಿ ನೂರಾರು ಎಕರೆ ಕಾಡು ಭಸ್ಮ

ಚಿಕ್ಕಮಗಳೂರು: ತಾಲೂಕಿನ ಮುತ್ತೋಡಿ ಅರಣ್ಯ ವಲಯದಲ್ಲಿ ಕಳೆದ 2 ದಿನಗಳಿಂದ ಭಾರೀ ಪ್ರಮಾಣದಲ್ಲಿ ಕಾಡ್ಗಿಚ್ಚು ಕಾಣಿಸಿ ಕೊಂಡಿದೆ. ಪರಿಣಾಮ ಅಪರೂಪದ ಅರಣ್ಯ ಸಂಪತ್ತು, ಜೀವ ಸಂಕುಲಕ್ಕೆ ಸಂಚಕಾರ ಎದುರಾಗಿದೆ.

ಭದ್ರಾ ಅಭಯಾರಣ್ಯ ವ್ಯಾಪ್ತಿಗೆ ಕಾಡ್ಗಿಚ್ಚು ಹಬ್ಬಿರುವುದು ಸ್ಥಳೀಯರು ಹಾಗೂ ಪರಿಸರ ಪ್ರೇಮಿಗಳಲ್ಲಿ ಆತಂಕ ಮೂಡಿಸಿದೆ. ಮುತ್ತೋಡಿ ಅರಣ್ಯ ವ್ಯಾಪ್ತಿಯ ಎಮ್ರಹಳ್ಳಿ ಮತ್ತು ಹೊಸಕಾನ್ ಸುತ್ತಮುತ್ತಲಿನ ಅರಣ್ಯ ಪ್ರದೇಶಗಳಲ್ಲಿ ಬೆಂಕಿ ಕಾಣಿಸಿಕೊಂಡಿದೆ. ಬಿಸಿಲ ಬೇಗೆಗೆ ಒಣಗಿದ ತರಗೆಲೆಗಳು ಮತ್ತು ಹುಲ್ಲಿನಿಂದಾಗಿ ಕ್ಷಣಾರ್ಧದಲ್ಲೇ ಕಿಲೋ ಮೀಟರ್‌ಗಳಷ್ಟು ದೂರ ಬೆಂಕಿ ವ್ಯಾಪಿಸಿದೆ. ಬೆಂಕಿಯ ಕೆನ್ನಾಲಿಗೆಗೆ ಅಭಯಾರಣ್ಯದಲ್ಲಿನ ಜೀವಸಂಕುಲಕ್ಕೂ ಸಂಚಕಾರ ಎದುರಾಗಿದೆ. ಬೆಂಕಿಯನ್ನು ನಿಯಂತ್ರಣಕ್ಕೆ ತರಲು ಅರಣ್ಯ ಇಲಾಖೆ ಸಿಬ್ಬಂದಿ ಹರಸಾಹಸಪಟ್ಟಿದ್ದಾರೆ.

ಅರಣ್ಯ ಇಲಾಖೆಯಲ್ಲಿ ವಾಚರ್‌ಗಳ ಕೊರತೆ ಇರುವುದರಿಂದ ಬೆಂಕಿಯನ್ನು ನಿಯಂತ್ರಿಸಲು ತೊಂದರೆಯಾಗುತ್ತಿದೆ ಎಂದು ಸ್ಥಳೀಯರು ಆರೋಪಿಸಿದ್ದಾರೆ. ಬೇಸಿಗೆಯಲ್ಲಿ ಸೂಕ್ಷ್ಮ ಪ್ರದೇಶದಲ್ಲಿ ಅರಣ್ಯ ಇಲಾಖೆ ಫೈರ್ ಲೈನ್‌ಗಳನ್ನು ಮಾಡಿಲ್ಲ ಎಂದು ಸಾರ್ವಜನಿಕರು ಅಸಮಾಧಾನ ಹೊರಹಾಕಿದ್ದಾರೆ. ಮುತ್ತೋಡಿ ಭಾಗದ ಜೇನುಕಲ್ಲುಗಿರಿ, ಕಾಗೆಮನೆಗಿರಿ ಹಾಗೂ ಗೆಸ್ಟ್ ಹೌಸ್ ರಸ್ತೆಯ ಭಾಗಗಳಲ್ಲಿ ಫೈರ್ ಲೈನ್ ಮಾಡದಿರುವುದು ಬೆಂಕಿ ವೇಗವಾಗಿ ಹರಡುವುದಕ್ಕೆ ಕಾರಣವಾಗಿದೆ ಎಂಬ ಆರೋಪಗಳು ಕೇಳಿಬಂದಿವೆ. ತಕ್ಷಣವೇ ಹೆಚ್ಚಿನ ಸಿಬ್ಬಂದಿ ಹಾಗೂ ಅಗ್ನಿ ನಿಯಂತ್ರಣ ಸಾಧನಗಳನ್ನು ನಿಯೋಜಿಸಿ ಕಾಡ್ಗಿಚ್ಚನ್ನು ಸಂಪೂರ್ಣವಾಗಿ ನಂದಿಸಬೇಕು ಎಂದು ಸ್ಥಳೀಯರು ಆಗ್ರಹಿಸಿದ್ದಾರೆ.

ಬಾಗಲಕೋಟೆ ವೈದ್ಯ ಕಾಲೇಜಿಗೆ ಶಂಕುಸ್ಥಾಪನೆ

ಯುಕೆಪಿ ಭೂಪರಿಹಾರಕ್ಕೆ ಹೆಚ್ಚುವರಿ ಅನುದಾನ: ಸಿದ್ದರಾಮಯ್ಯ ವಾಗ್ದಾನ



ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬಾಗಲಕೋಟೆಯ ನವನಗರದಲ್ಲಿ ಬಾಗಲಕೋಟೆ ವೈದ್ಯಕೀಯ ಮಹಾವಿದ್ಯಾಲಯ ಹಾಗೂ ಸಂಶೋಧನಾ ಸಂಸ್ಥೆಗೆ ಶಂಕುಸ್ಥಾಪನೆ ನೆರವೇರಿಸಿದರು. ಡಿಸಿಎಂ ಡಿ.ಕೆ.ಶಿವಕುಮಾರ್, ಸಚಿವರು, ಶಾಸಕರು ಹಾಜರಿದ್ದರು.

ಬಾಗಲಕೋಟೆ: ಉತ್ತರ ಕರ್ನಾಟಕದ ಪ್ರಾದೇಶಿಕ ಅಸಮಾನತೆಯನ್ನು ನಿವಾರಿಸಲು ಸರಕಾರ ಬದ್ಧವಾಗಿದ್ದು, ಕಾಂಗ್ರೆಸ್ ಸರಕಾರ ನುಡಿದಂತೆ ನಡೆಯುವ ಜನರ ಸರಕಾರ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಅವರು ಬಾಗಲಕೋಟೆ ವೈದ್ಯಕೀಯ ಮಹಾವಿದ್ಯಾಲಯ ಹಾಗೂ ಸಂಶೋಧನಾ ಸಂಸ್ಥೆ ಶಂಕುಸ್ಥಾಪನೆ ಹಾಗೂ ವಿವಿಧ ಅಭಿವೃದ್ಧಿ ಕಾಮಗಾರಿಗಳ ಉದ್ಘಾಟನೆ ಮತ್ತು ಕೃಷ್ಣ ಮೇಲ್ದಂಡೆ ಯೋಜನೆ ಹಂತ ಮೂರರ ಭೂ ಸ್ವಾಧೀನಗೊಳ್ಳುವ ಜಮೀನುಗಳಿಗೆ ಒಪ್ಪಂದದ ದರದಂತೆ ಪರಿಹಾರ ವಿತರಣೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

ಬಾಗಲಕೋಟೆ ಸರಕಾರಿ ಮೆಡಿಕಲ್ ಕಾಲೇಜು ಶಂಕುಸ್ಥಾಪನೆಯಾಗಲು ಈ ಭಾಗದ ಶಾಸಕರಾಗಿದ್ದ ದಿವಂಗತ ಎಚ್.ವೈ. ಮೇಟಿಯವರೇ ಕಾರಣ. ಪ್ರತಿ ಜಿಲ್ಲೆಗಳಲ್ಲಿ ಮೆಡಿಕಲ್ ಕಾಲೇಜು ಹಾಗೂ ಟ್ರಾಮಾ ಸೆಂಟರ್‌ಗಳನ್ನು ಸ್ಥಾಪನೆಯ ಉದ್ದೇಶವಿದ್ದು, ಈಗಾಗಲೇ ಸುಮಾರು 25 ಜಿಲ್ಲೆಗಳಲ್ಲಿ ಕಾಲೇಜು ಸ್ಥಾಪನೆಗೆ ಕ್ರಮ ಕೈಗೊಳ್ಳಲಾಗಿದೆ.

ಕಲ್ಯಾಣ ಕರ್ನಾಟಕದ ಮಲೆನಾಡು ಚಿಂಚೋಳಿ ಇನ್ನು ಪ್ರವಾಸಿ ಕೇಂದ್ರ

ಬಿಸಿಲ ನಾಡಲ್ಲಿ ಈಗ ಜಂಗಲ್ ಸಫಾರಿ ಸದ್ದು!

ದೇವೇಂದ್ರ ಜಾಡಿ ಕಲಬುರಗಿ

ಪಶ್ಚಿಮ ಘಟ್ಟಗಳ ದಟ್ಟಾರಣ್ಯ, ಮಲೆನಾಡಿನ ಹಸಿರು ಸಿರಿಯನ್ನು ನೋಡಲು ಇನ್ನು ಮುಂದೆ ದಕ್ಷಿಣ ಕರ್ನಾಟಕದತ್ತ ಮುಖ ಮಾಡಬೇಕಿಲ್ಲ. ಬಿಸಿಲ ನಾಡು ಎಂದೇ ಹಣೆಪಟ್ಟಿ ಹೊತ್ತಿದ್ದ ಕಲ್ಯಾಣ ಕರ್ನಾಟಕದ ಒಡಲಲ್ಲೂ ಈಗ ವನ್ಯಜೀವಿಗಳ ವೈಭವ ಅನಾವರಣಗೊಳ್ಳಲಿದೆ. ಕಲಬುರಗಿ ಜಿಲ್ಲೆಯ ಪ್ರಕೃತಿ ಪ್ರೇಮಿಗಳ ಗುಪ್ತಗಾಮಿನಿಯಾಗಿದ್ದ ಚಿಂಚೋಳಿ ವನ್ಯಜೀವಿ ಧಾಮದಲ್ಲಿ ಈಗ ಅಧಿಕೃತವಾಗಿ 'ಜಂಗಲ್ ಸಫಾರಿ'ಗೆ ಚಾಲನೆ ಸಿಕ್ಕಿದ್ದು, ಈ ಭಾಗದ ಪ್ರವಾಸೋದ್ಯಮಕ್ಕೆ ಹೊಸ ಆಯಾಮ ದೊರೆತಿದೆ.

ಶನಿವಾರ ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಅವರು ಈ ಮಹತ್ವಾಕಾಂಕ್ಷಿ ಯೋಜನೆಗೆ ಚಾಲನೆ ನೀಡುವ ಮೂಲಕ ಚಾರಣಿಗರ ಮತ್ತು ವನ್ಯಜೀವಿ ಪ್ರೇಮಿಗಳ ದಶಕಗಳ ಕನಸನ್ನು ನನಸು ಮಾಡಿದ್ದಾರೆ.

ವನ್ಯಜೀವಿಗಳ ಅಪರೂಪದ ಲೋಕ: ಚಿಂಚೋಳಿ ಅರಣ್ಯವು ಕೇವಲ ಮರಗಿಡಗಳ ಗುಂಪಲ್ಲ, ಇದು ಜೀವವೈವಿಧ್ಯದ ಕಣಜ. ಸಫಾರಿಯ ಹಾದಿಯಲ್ಲಿ ನೀವು ಅದೃಷ್ಟವಂತರಾಗಿದ್ದರೆ ಚಿರತೆ, ಕಾಡುಕೋಣ (ಗೌರ್) ಮತ್ತು ತೋಳಗಳ ದರ್ಶನ ಪಡೆಯಬಹುದು. ಇಲ್ಲಿನ ವಿಶೇಷ ಆಕರ್ಷಣೆ ಎಂದರೆ ಅಪರೂಪದ 'ನಾಲ್ಕು ಕೊಂಬಿನ ಜಿಂಕೆ' (ಚೌಸಿಂಗಾ). ಇದರೊಂದಿಗೆ ಕೃಷ್ಣಮೃಗ, ಹೈನಾ, ನೀಲಗಾಯ್ ಹಾಗೂ ಚುಕ್ಕೆ ಜಿಂಕೆಗಳು ಪ್ರವಾಸಿಗರ ಕಣ್ಮನ ಸೆಳೆಯಲಿವೆ. ಪಕ್ಷಿ ಕಾಶಿ ಎನಿಸಿಕೊಂಡಿರುವ ಇಲ್ಲಿ ಬ್ಲೂ ಪಿಜನ್ ಹಾಗೂ ಬಣ್ಣಬಣ್ಣದ ಪಾತರಗಿತ್ತಿಗಳ ಲೋಕವೇ ಸೃಷ್ಟಿಯಾಗಿದೆ.

ಸಫಾರಿ ಹಾದಿ ಮತ್ತು ಸಿದ್ಧತೆ: ಚಂದ್ರಂಪಳ್ಳಿ ನಿಸರ್ಗ ಧಾಮದಿಂದ ಆರಂಭವಾಗಿ 'ಲಾಲ್ ತಾಲಾಬ್' ವರೆಗಿನ ಸುಮಾರು 28 ಕಿಲೋಮೀಟರ್ ಉದ್ದದ ಹಸಿರು ಹಾದಿಯಲ್ಲಿ ಈ ಸಫಾರಿ ಸಾಗಲಿದೆ. ಅರಣ್ಯ ಇಲಾಖೆಯು ಪ್ರವಾಸಿಗರಿಗಾಗಿ ವಿಶೇಷವಾಗಿ ವಿನ್ಯಾಸಗೊಳಿಸಿದ ಎರಡು ಜೀಪ್‌ಗಳನ್ನು ಸಿದ್ಧಪಡಿಸಿದ್ದು, ಪರಿಸರಕ್ಕೆ ಧಕ್ಕೆ ಬಾರದಂತೆ ಸಫಾರಿ ನಡೆಸಲು ಯೋಜನೆ ರೂಪಿಸಿದೆ. → 4

ಮುಂದಿನ ಒಂದೂವರೆ ವರ್ಷದಲ್ಲಿ ಚಿಂಚೋಳಿಯನ್ನು ಮಿನಿ ಪ್ರವಾಸಿ ಸರ್ಕೀಟ್ ಆಗಿ ಅಭಿವೃದ್ಧಿಪಡಿಸಲಾಗುವುದು. ಕಲೆ, ಸಂಸ್ಕೃತಿ ಮತ್ತು ಪ್ರಕೃತಿ ಸೌಂದರ್ಯವನ್ನು ಪರಿಚಯಿಸುವ ಮೂಲಕ ಕಲಬುರಗಿ ಜಿಲ್ಲೆಯ ಪ್ರವಾಸೋದ್ಯಮದ ಚಿತ್ರಣವನ್ನೇ ಬದಲಾಯಿಕಸಿ, ಸ್ಥಳೀಯರಿಗೆ ಹೆಚ್ಚಿನ ಉದ್ಯೋಗಾವಕಾಶ ಕಲ್ಪಿಸಲು ನಮ್ಮ ಸರಕಾರ ಬದ್ಧವಾಗಿದೆ.
-ಪ್ರಿಯಾಂಕ್ ಖರ್ಗೆ, ಜಿಲ್ಲಾ ಉಸ್ತುವಾರಿ ಸಚಿವ

ಪ್ರವಾಸಿಗರ ಮಾಹಿತಿಗಾಗಿ

- ವಯಸ್ಕರು (12 ವರ್ಷ ಮೇಲ್ಪಟ್ಟವರು): 450 ರು.
- ಮಕ್ಕಳು (5 ರಿಂದ 12 ವರ್ಷದವರು): 250 ರು.
- ಒಂದು ಜೀಪ್‌ನಲ್ಲಿ ಗರಿಷ್ಠ 5 ಜನರಿಗೆ ಅವಕಾಶ.
- ಬೋಟಿಂಗ್‌ಗೆ ಪ್ರತಿ ವ್ಯಕ್ತಿಗೆ 175 ರು.

ಸಫಾರಿ ಸಮಯ

- ಬೆಳಗ್ಗೆ: 06:00 ರಿಂದ 08:00 ಮತ್ತು 08:00 ರಿಂದ 10:00
- ಸಂಜೆ: 04:00 ರಿಂದ 05:00

ನಿಸರ್ಗ ಶಿಬಿರ (ವಾಸ್ತವ್ಯ)

- ಗೊಟ್ಟಂಗೊಟ್ಟಾ ಟೆಂಟ್ ಹೌಸ್: 1,500 ರು. (ಇಬ್ಬರಿಗೆ/ರಾತ್ರಿ)
- ಚಂದ್ರಂಪಳ್ಳಿ ನಿಸರ್ಗ ಶಿಬಿರ: 2,000 ರು. (ಒಂದು ರೂಂಗೆ)

ಸಮಾಚಾರ ಸಣ್ಣದಲ್ಲ

6 ನವಿಲುಗಳು ಸಾವು

ನೆಲಮಂಗಲ: ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನೆಲಮಂಗಲದಲ್ಲಿ ರಾಷ್ಟ್ರಪಕ್ಷಿ 6 ನವಿಲುಗಳು ಸಾವನ್ನಪ್ಪಿರುವಂತಹ ಘಟನೆ ನಡೆದಿದೆ. ಬಿಲಾಲ್ ನಗರದ ತೋಟದ ಶೆಡ್ ಬಳಿ ಒಂದೇ ಜಾಗದಲ್ಲಿ ಆರು ನವಿಲುಗಳ ಕಳೇಬರ ಪತ್ತೆಯಾಗಿದೆ. ನವಿಲುಗಳಿಗೆ ವಿಷ ಪ್ರಾಶನಮಾಡಿ ಕೊಂದಿರುವ ಶಂಕೆ ವ್ಯಕ್ತವಾಗಿದೆ. ನೆಲಮಂಗಲ ಅರಣ್ಯ ಇಲಾಖೆ ಸಿಬ್ಬಂದಿಗೆ ಸ್ಥಳೀಯರು ಮಾಹಿತಿ ನೀಡಿದ್ದಾರೆ. ಸ್ಥಳಕ್ಕೆ ನೆಲಮಂಗಲ ಟೌನ್ ಠಾಣೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ಮಾಡಿದ್ದಾರೆ.

ಭಾರತೀಯರಿಗೆ ವಿದೇಶ ಶಿಕ್ಷಣದತ್ತ ಒಲವು

ಬೆಂಗಳೂರು: ಭಾರತೀಯ ವಿದ್ಯಾರ್ಥಿಗಳು ತಮ್ಮ ಜಾಗತಿಕ ಶಿಕ್ಷಣದ ಪರಿಧಿಯನ್ನು ವಿಸ್ತರಿಸುತ್ತಿದ್ದಾರೆ ಮತ್ತು ಸ್ಪೇನ್, ಜರ್ಮನಿ, ಫ್ರಾನ್ಸ್, ಸಿಂಗಾಪುರ, ಯುಎಇ, ನ್ಯೂಜಿಲೆಂಡ್ ಮತ್ತು ದಕ್ಷಿಣ ಕೊರಿಯಾದಂತಹ ಉದಯೋನ್ಮುಖ ಶಿಕ್ಷಣ ತಾಣಗಳನ್ನು ಹೆಚ್ಚಾಗಿ ಆರಿಸಿಕೊಳ್ಳುತ್ತಿದ್ದಾರೆ. ಯುಎಸ್‌ಎ, ಕೆನಡಾ, ಯುನೈಟೆಡ್ ಕಿಂಗ್ಡಮ್ ಮತ್ತು ಆಸ್ಟ್ರೇಲಿಯಾದಂತಹ ಇಂಗ್ಲಿಷ್ ಭಾಷಾ ತಾಣಗಳು ಹೆಚ್ಚು ಅಪೇಕ್ಷಣೀಯವಾಗಿ ಉಳಿದಿದ್ದರೂ, ವಿಶೇಷವಾಗಿ ಸ್ಟೆಮ್ ಕೋರ್ಸ್‌ಗಳಿಗಾಗಿ ಯುಎಸ್‌ಎ ಮತ್ತು ಭಾರತೀಯ ವಿದ್ಯಾರ್ಥಿಗಳು ಈಗ ತಮ್ಮ ಆಯ್ಕೆಗಳನ್ನು ಸಕ್ರಿಯವಾಗಿ ವೈವಿಧ್ಯಗೊಳಿಸುತ್ತಿದ್ದಾರೆ. ಈ ಬದಲಾವಣೆಯು ಶಿಕ್ಷಣದ ಒಟ್ಟಾರೆ ವೆಚ್ಚ, ಸಂಸ್ಥೆಗಳ ಗುಣಮಟ್ಟ, ವೀಸಾ ಮಾನದಂಡಗಳು, ಇಂಟರ್ನ್‌ಶಿಪ್ ಮತ್ತು ಉದ್ಯೋಗಾವಕಾಶಗಳು ಮತ್ತು ವಿದ್ಯಾರ್ಥಿಗಳ ಸುರಕ್ಷತೆಯಂತಹ ಅಂಶಗಳಿಂದ ಪ್ರಭಾವಿತವಾಗಿದೆ. ಬೋಧನಾ ಶುಲ್ಕ, ಪ್ರಯಾಣ, ವಸತಿ, ಲ್ಯಾಪ್ ಟಾಪ್, ಅಧ್ಯಯನ ಸಾಮಗ್ರಿಗಳು ಮತ್ತು ಜೀವನ ವೆಚ್ಚಗಳ ಸಂಪೂರ್ಣ ವೆಚ್ಚವನ್ನು ಒಳಗೊಂಡಿರುವ ಹಣಕಾಸು ಪರಿಹಾರಗಳನ್ನು ಆಕ್ಸಿಲೋ ನೀಡುತ್ತದೆ. ಇಲ್ಲಿಯವರೆಗೆ, ಆಕ್ಸಿಲೋ 30 ಕ್ಕೂ ಹೆಚ್ಚು ದೇಶಗಳ 1,600 ಕ್ಕೂ ಹೆಚ್ಚು ವಿಶ್ವವಿದ್ಯಾಲಯಗಳಲ್ಲಿ 18,000 ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಶಿಕ್ಷಣ ಹಣಕಾಸು ಒದಗಿಸಿದೆ.

ಭ್ರಷ್ಟಾಚಾರ ಆರೋಪ ಸಿಬಿಐ ತನಿಖೆಗೆ ಆಗ್ರಹ

ಬೆಂಗಳೂರು: ಸಮಾಜ ಕಲ್ಯಾಣ ಇಲಾಖೆಯ ಅಧೀನ ಸಂಸ್ಥೆಯಾದ ಇಂದಿರಾ ಗಾಂಧಿ ವೃತ್ತಿ ಅಭಿವೃದ್ಧಿ ಕೇಂದ್ರದಲ್ಲಿ ಎಸ್‌ಸಿಪಿ/ಟಿಎಸ್‌ಪಿ ನಿಧಿಯಯಲ್ಲಿ ಭ್ರಷ್ಟಾಚಾರ ಆರೋಪ ಕೇಳೀ ಬಂದಿದ್ದು, ಈ ಬಗ್ಗೆ ಸಿಬಿಐ ತನಿಖೆ ನಡೆಸಬೇಕು ಎಂದು ಭೀಮಪುತ್ರಿ ಬ್ರಿಗೇಡ್ ಸಂಸ್ಥಾಪಕಿ ರೇವತಿ ರಾಜ್ ಆಗ್ರಹಿಸಿದ್ದಾರೆ. ಈ ಎಲ್ಲಾ ಅಕ್ರಮಗಳಿಗೆ ಇಂದಿರಾ ಗಾಂಧಿ ವೃತ್ತಿ ಅಭಿವೃದ್ಧಿ ಕೇಂದ್ರದ ಉನ್ನತಾಧಿಕಾರಿಗಳು ಕಾರಣಕರ್ತರಾಗಿದ್ದು, ಇವರನ್ನು ಕೂಡಲೇ ಅಮಾನತ್ತಿನಲ್ಲಿಟ್ಟು, ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕು. ಎಲ್ಲಾ ಗುತ್ತಿಗೆಗಳಲ್ಲಿ ಶೇ.40 ರಷ್ಟು ಕಮೀಷನ್ ಪಡೆಯುತ್ತಿದ್ದು, ಕೆಟಿಪಿಪಿ ಕಾಯಿದೆ ಗಂಭೀರವಾಗಿ ಉಲ್ಲಂಘಿಸಲಾಗಿದೆ. ಅಧಿಕಾರಿಗಳ ಕುಟುಂಬದ ಎಲ್ಲಾ ಬ್ಯಾಂಕ್ ಖಾತೆಯನ್ನು ತಕ್ಷಣವೇ ಮುಟ್ಟುಗೋಲು ಹಾಕಿಕೊಳ್ಳಬೇಕು ಎಂದು ಆಗ್ರಹಿಸಿದರು. ಅಧಿಕಾರಿಗಳ ವಿರುದ್ಧ ರಾಜ್ಯದ ಮುಖ್ಯ ಕಾರ್ಯದರ್ಶಿ, ಸಮಾಜ ಕಲ್ಯಾಣ ಸಚಿವರು, ಇಲಾಖಾ ಆಯುಕ್ತರಿಗೆದೂರು ನೀಡಲಾಗಿದೆ ಎಂದು ತಿಳಿಸಿದರು.

ವಿಶ್ವವಾಣಿ ಪುರವಣಿ ವಿಭಾಗದ ಮುಖ್ಯಸ್ಥ ಶಶಿಧರ ಹಾಲಾಡಿ ಅವರಿಗೆ ದ್ವಾರನಕುಂಟೆ ಪಾತಣ್ಣ ಕಾದಂಬರಿ ಪ್ರಶಸ್ತಿ ಪುರಸ್ಕಾರ

ನದಿ ದಾಟಿ ಬಂದವರು ಬದಲಾವಣೆಗಳನ್ನು ವಿಶ್ಲೇಷಿಸುವ ಕೃತಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಕನ್ನಡ ಸಾಹಿತ್ಯದಲ್ಲಿ ಸಾಮಾಜಿಕ ಹಾಗೂ ರಾಜಕೀಯ ಬದಲಾವಣೆಗಳನ್ನು ವಿಶ್ಲೇಷಿಸುವ ಮಹತ್ವದ ಕೃತಿಯಾಗಿ ಗುರುತಿಸಿಕೊಂಡಿರುವ 'ನದಿ ದಾಟಿ ಬಂದವರು' ಕಾದಂಬರಿಯು ಭಾರತದ ಇತಿಹಾಸದ ಸ್ವಾತಂತ್ರ್ಯ ಪೂರ್ವ ಮತ್ತು ಸ್ವಾತಂತ್ರ್ಯೋತ್ತರ ಕಾಲಘಟ್ಟವನ್ನು ಗಂಭೀರವಾಗಿ ವಿಶ್ಲೇಷಿಸುವ ಕೃತಿ ಎಂದು ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಎಲ್.ಎನ್.ಮುಕುಂದರಾಜ್ ತಿಳಿಸಿದರು.

ದ್ವಾರನಕುಂಟೆ ಪಾತಣ್ಣ ಪ್ರತಿಷ್ಠಾನ ವತಿಯಿಂದ ಶನಿವಾರ ಆಯೋಜಿಸಿದ್ದ ದ್ವಾರನಕುಂಟೆ ಪಾತಣ್ಣ ಕಾದಂಬರಿ ಪ್ರಶಸ್ತಿಯನ್ನು ವಿಶ್ವವಾಣಿ ಪುರವಣಿ ವಿಭಾಗದ ಮುಖ್ಯಸ್ಥ ಶಶಿಧರ ಹಾಲಾಡಿ ಅವರಿಗೆ ಪ್ರದಾನ ಮಾಡಿ ಬಳಿಕ ಮಾತನಾಡಿದ ಅವರು, ಕಾದಂಬರಿಯು ಬ್ರಿಟಿಷರ ಆಳ್ವಿಕೆಯಿಂದ ಮುಕ್ತಿಗೊಳ್ಳುವ ಹೋರಾಟದ ಕಾಲಘಟ್ಟವನ್ನು ಹಾಗೂ ಅದರ ನಂತರದ ಸಾಮಾಜಿಕ-ರಾಜಕೀಯ ಬೆಳವಣಿಗೆಗಳನ್ನು ಸಾಹಿತ್ಯದ ಮೂಲಕ ವಿಶ್ಲೇಷಿಸುತ್ತದೆ. ಸ್ವಾತಂತ್ರ್ಯಕ್ಕೂ ಮುನ್ನ ಬ್ರಿಟಿಷರ ವಿರುದ್ಧ ಹೋರಾಟ ನಡೆಸುವ ಸಂದರ್ಭದಲ್ಲಿ ದೇಶದ ವಿವಿಧ ವರ್ಗಗಳ ಜನರು ರಾಷ್ಟ್ರೀಯ ಚಳವಳಿಗೆ ಬೆಂಬಲ ನೀಡಿದ್ದರು. ಆ ಸಮಯದಲ್ಲಿ ಭೂಮಾಲೀಕ ವರ್ಗಗಳು ಹಾಗೂ ಮೇಲಜಾತಿ ಪ್ರಭುತ್ವವಿದ್ದ ಸಮಾಜದ ವರ್ಗಗಳು ಕೂಡ ರಾಷ್ಟ್ರೀಯ ಚಳವಳಿಗೆ ಬೆಂಬಲ

ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷ ಎಲ್.ಎನ್. ಮುಕುಂದರಾಜ್ ಅವರು ನಗರದ ಶೇಷಾದ್ರಿಪುರಂ ಕಾಲೇಜಿನಲ್ಲಿ ಶನಿವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ವಿಶ್ವವಾಣಿ ಪುರವಣಿ ವಿಭಾಗದ ಮುಖ್ಯಸ್ಥ ಶಶಿಧರ ಹಾಲಾಡಿ ಅವರಿಗೆ ದ್ವಾರನಕುಂಟೆ ಪಾತಣ್ಣ ಕಾದಂಬರಿ ಪ್ರಶಸ್ತಿ-2025 ಪ್ರದಾನ ಮಾಡಿ ಗೌರವಿಸಿದರು. ಈ ವೇಳೆ ಹಿರಿಯ ವಿಮರ್ಶಕ ಡಾ. ಎಚ್.ಎಸ್. ರಾಘವೇಂದ್ರ ರಾವ್, ದ್ವಾರನಕುಂಟೆ ಪಾತಣ್ಣ ಪ್ರತಿಷ್ಠಾನದ ಅಧ್ಯಕ್ಷ ಬಿ.ಎಂ. ಹನೀಫ್, ಡಾ. ಎಂ.ಎಸ್. ಆಶಾದೇವಿ, ಡಾ. ಎಚ್.ಎಲ್. ಪುಷ್ಪ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ನೀಡಿ, ಬ್ರಿಟಿಷರನ್ನು ದೇಶದಿಂದ ಹೊರಹಾಕುವ ಹೋರಾಟದಲ್ಲಿ ಭಾಗಿಯಾಗಿದ್ದವು ಎಂದರು.

ಈ ಹೋರಾಟದಲ್ಲಿ ಮಹಾತ್ಮ ಗಾಂಧಿ ಪ್ರಮುಖ ನಾಯಕತ್ವ ವಹಿಸಿಕೊಂಡಿದ್ದರು. ಗಾಂಧೀಜಿಯ ನೇತೃತ್ವದಲ್ಲಿ ನಡೆದ ಸ್ವಾತಂತ್ರ್ಯ ಹೋರಾಟಕ್ಕೆ ಸಮಾಜದ ಅನೇಕ ವರ್ಗಗಳು ಬೆಂಬಲ ನೀಡಿದ್ದವು. ಆದರೆ ನಂತರದ ಅವಧಿಯಲ್ಲಿ ಗಾಂಧೀಜಿ ದಲಿತರು, ಶೂದ್ರರು ಮತ್ತು ಮಹಿಳೆಯರ ಹಕ್ಕುಗಳ ಪರವಾಗಿ ಮಾತನಾಡಲು ಆರಂಭಿಸಿದಾಗ ಸಮಾಜದ ಕೆಲವು ಪ್ರಭುತ್ವ ವರ್ಗಗಳಲ್ಲಿ ವಿರೋಧವೂ ವ್ಯಕ್ತವಾಗಲು ಆರಂಭವಾಯಿತು ಎಂಬ ಇತಿಹಾಸದ ವಾಸ್ತವವನ್ನು ಕಾದಂಬರಿ ಸೂಕ್ಷ್ಮವಾಗಿ ತೆರೆದಿಡುತ್ತದೆ. ಕಾದಂಬರಿಯು ಸ್ವಾತಂತ್ರ್ಯ ನಂತರ ದೇಶದಲ್ಲಿ ನಡೆದ ಬದಲಾವಣೆಗಳನ್ನೂ ಸಮಗ್ರವಾಗಿ ಚಿತ್ರಿಸುತ್ತದೆ. ಸ್ವಾತಂತ್ರ್ಯ ನಂತರ ಭಾರತದಲ್ಲಿ ಶಿಕ್ಷಣದ ವಿಸ್ತರಣೆ, ಪ್ರಜಾಪ್ರಭುತ್ವ ವ್ಯವಸ್ಥೆಯ ಬಲವರ್ಧನೆ ಹಾಗೂ ಜನರ ಜೀವನಮಟ್ಟದಲ್ಲಿ ಕಂಡುಬಂದ ಸುಧಾರಣೆಗಳು ದೇಶದ ಅಭಿವೃದ್ಧಿಗೆ ದಾರಿ ಮಾಡಿಕೊಟ್ಟವು. ಆರೋಗ್ಯ, ಶಿಕ್ಷಣ, ಉದ್ಯೋಗ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಜನರಿಗೆ ಹೊಸ ಅವಕಾಶಗಳು ದೊರಕತೊಡಗಿದವು. ಕೈಗಾರಿಕೆಗಳ ಸ್ಥಾಪನೆ, ನೀರಾವರಿ ಯೋಜನೆಗಳು ಹಾಗೂ ಅಭಿವೃದ್ಧಿ ಕಾರ್ಯಕ್ರಮಗಳ ಮೂಲಕ ದೇಶದಲ್ಲಿ ಪ್ರಗತಿ ಕಂಡುಬಂದಿತು ಎಂದರು.

ಈ ಹಿನ್ನೆಲೆಯಲ್ಲಿಯೇ ಇತಿಹಾಸದ ಈ ಬದಲಾವಣೆಗಳನ್ನು ಮರೆತಿರುವ ಚಾರಿತ್ರಿಕ ವಿಸ್ಮೃತಿಯೇ ಇಂದಿನ ಸಮಾಜದಲ್ಲಿ ರಾಜಕೀಯ ಹಾಗೂ ಕೋಮು ಸಂಘರ್ಷಗಳಿಗೆ ಕಾರಣವಾಗುತ್ತಿದೆ ಎಂಬ ಅಂಶವನ್ನು ಕಾದಂಬರಿ ಬಲವಾಗಿ ವ್ಯಕ್ತಪಡಿಸುತ್ತದೆ. ದೇಶದ ಸ್ವಾತಂತ್ರ್ಯ ಹೋರಾಟದಿಂದ ಹಿಡಿದು ನಂತರದ ಸಾಮಾಜಿಕ ನ್ಯಾಯ ಚಳುವಳಿಗಳವರೆಗೆ ನಡೆದ ಬೆಳವಣಿಗೆಗಳನ್ನು ಅರಿತುಕೊಳ್ಳುವುದು ಸಮಾಜದ ಮುಂದಿನ ಪಥವನ್ನು ನಿರ್ಧರಿಸಲು ಈ ಕಾದಂಬರಿ ಅತ್ಯಂತ ಮುಖ್ಯವಾಗಿದೆ ಎಂದರು.

ಕೃಷಿ ಕಾರ್ಮಿಕರ ಬದುಕಿನ ಬದಲಾವಣೆಯ ಚಿತ್ರಣ

ಶಶಿಧರ ಹಾಲಾಡಿ ಅವರು ಮಾತನಾಡಿ, ನದಿ ದಾಟಿ ಬಂದವರು ಕಾದಂಬರಿಯು 1930ರ ದಶಕದಿಂದ 1975ರ ದಶಕದವರೆಗೆ ಕರ್ನಾಟಕದ ಕರಾವಳಿ ಭಾಗದ ಹಳ್ಳಿಗಳ ಸಾಮಾಜಿಕ ಹಾಗೂ ಕೃಷಿ ಕ್ಷೇತ್ರದ ಸ್ಥಿತ್ಯಂತರಗಳನ್ನು ಚಿತ್ರಿಸುತ್ತದೆ. ಕಾದಂಬರಿಯ ನಾಯಕ ವೆಂಕಟಯ್ಯ ದೇಶಕ್ಕೆ ಸ್ವಾತಂತ್ರ್ಯ ಬಂದರೆ ಬಡಜನರು ಮತ್ತು ಕೃಷಿ ಕಾರ್ಮಿಕರ ಜೀವನದಲ್ಲಿ ಬದಲಾವಣೆ ಆಗುತ್ತದೆ ಎಂದು ನಂಬಿದ್ದನು. ಮಹಾತ್ಮ ಗಾಂಧೀಜಿಯವರ ಆಲೋಚನೆಗಳಿಂದ ಪ್ರಭಾವಿತರಾದ ಅವನ ಕನಸುಗಳು ನಂತರ 1970ರ ದಶಕದಲ್ಲಿ ಜಾರಿಗೆ ಬಂದ ಭೂಸುಧಾರಣೆ ಕಾಯ್ದೆಯಿಂದ ಸಾಕಾರವಾದವು. ಈ ಮೂಲಕ ಕೃಷಿ ಕಾರ್ಮಿಕರಿಗೆ ಜಮೀನು ದೊರೆತು ಅವರ ಬದುಕಿನಲ್ಲಿ ಮಹತ್ವದ ಬದಲಾವಣೆ ಕಂಡುಬಂದದ್ದು ಕಾದಂಬರಿಯಲ್ಲಿ ಚಿತ್ರಿಸಲಾಗಿದೆ ಎಂದರು.

ಮಕ್ಕಳ ಕಣ್ಣಿನ ಆರೋಗ್ಯಕ್ಕೆ ಹೊರಾಂಗಣ ಆಟ ಅಗತ್ಯ

ಉತ್ತರ ಕನ್ನಡ: ಹೊರಾಂಗಣ ಆಟಗಳು ಕಣ್ಣಿನ ಆರೋಗ್ಯಕ್ಕೆ ಅತ್ಯಂತ ಉಪಯುಕ್ತ. ಅಧ್ಯಯನ ಪ್ರಕಾರ ಪ್ರಾಥಮಿಕ ಹಂತದದ್ದಾಗಿದ್ದರೂ ಉತ್ತಮ ಫಲಿತಾಂಶಗಳನ್ನು ತೋರಿಸಿದೆ. ಮುಂದಿನ 6 ರಿಂದ 12 ತಿಂಗಳ ನಿಯಂತ್ರಿತ ಅಧ್ಯಯನದ ಮೂಲಕ ಇನ್ನಷ್ಟು ಸ್ಪಷ್ಟ ಫಲಿತಾಂಶಗಳನ್ನು ಗಮನಿಸಬಹುದು ಎಂದು ಎಂ.ಎಂ.ಜೋಶಿ ಗಣೇಶ ನೇತ್ರಾಲಯದ ಸಂಸ್ಥಾಪಕ ಡಾ.ಶಿವರಾಮ ಕೆ.ವಿ. ತಿಳಿಸಿದರು.

ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರನ ಸಿದ್ಧಿ ವಿನಾಯಕ ಹೈಸ್ಕೂಲ್ ಆವರಣದಲ್ಲಿ ಥ್ರೋಬಾಲ್ ಮೂಲಕ ರಿಫ್ಲೆಕ್ಸಾಲಜಿ ಹಾಗೂ ದೈಹಿಕ ಚಟುವಟಿಕೆಗಳ ಪ್ರಭಾವ - ಕಣ್ಣಿನ ಆರೋಗ್ಯ, ಶೈಕ್ಷಣಿಕ ಸಾಧನೆ ಮತ್ತು ದೈಹಿಕ ಕ್ಷೇಮ ಕುರಿತು ಸಂಶೋಧನಾ ಅಧ್ಯಯನದ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, ಪ್ರತಿ ದಿನ ಕನಿಷ್ಠ 30 ನಿಮಿಷಗಳ ಕಾಲ ಹೊರಾಂಗಣ ಆಟಗಳಲ್ಲಿ ಭಾಗವಹಿಸುವುದು ಮಕ್ಕಳ ಆರೋಗ್ಯಕ್ಕೆ ಅಗತ್ಯ. ಆಟಗಳು ಬೌದ್ಧಿಕ ಸಾಮರ್ಥ್ಯ, ಭಾವನಾತ್ಮಕ ಸಾಮರ್ಥ್ಯ, ಸಾಮಾಜಿಕ ಸಾಮರ್ಥ್ಯ ಮತ್ತು ಆರೋಗ್ಯ ಸಾಮರ್ಥ್ಯ ಗಳನ್ನೂ ಹೆಚ್ಚಿಸುತ್ತವೆ ಎಂದರು.

ವಿದ್ಯಾರ್ಥಿಗಳ ಸಮಗ್ರ ಬೆಳವಣಿಗೆ ಮತ್ತು ಕ್ಷೇಮಕ್ಕಾಗಿ ಥ್ರೋಬಾಲ್ ಆಟದ ವೈಜ್ಞಾನಿಕ ಪ್ರಯೋಜನಗಳನ್ನು ಬಳಸಿಕೊಂಡು ಸಂಯೋಜಿತ ವಿಧಾನವನ್ನು ರೂಪಿಸುವುದು ಈ ಕಾರ್ಯಕ್ರಮದ ಮುಖ್ಯ ಉದ್ದೇಶವಾಗಿತ್ತು. ಇದರ ಮೂಲಕ ದೈಹಿಕ ಅಭಿವೃದ್ಧಿ, ಮೆದುಳಿನ ಎರಡು ಭಾಗಗಳ ಚಟುವಟಿಕೆ, ಮಾನಸಿಕ ಸ್ಥಿರತೆ, ಕಣ್ಣಿನ ಆರೋಗ್ಯ ಮತ್ತು ಒಟ್ಟು ಜ್ಞಾನಾತ್ಮಕ ಬೆಳವಣಿಗೆಯಲ್ಲಿ ಸುಧಾರಣೆ ಕಂಡುಬರುತ್ತದೆ ಎಂದು ಅಧ್ಯಯನ ತಿಳಿಸಿದೆ. ಒಟ್ಟು 467 ವಿದ್ಯಾರ್ಥಿಗಳಲ್ಲಿ ಕಣ್ಣಿನ ಸಮಸ್ಯೆ ಹೊಂದಿದ್ದ ವಿದ್ಯಾರ್ಥಿಗಳು 43, ಆ 43 ವಿದ್ಯಾರ್ಥಿಗಳಲ್ಲಿ 25 ವಿದ್ಯಾರ್ಥಿಗಳು (ಶೇ.58.1) ಕನಿಷ್ಠ ಒಂದು ಕಣ್ಣಿನಲ್ಲಿ ಸುಧಾರಣೆ, 8 ವಿದ್ಯಾರ್ಥಿಗಳು (ಶೇ. 18.6%) ಎರಡೂ ಕಣ್ಣುಗಳಲ್ಲಿ ಸುಧಾರಣೆ ಕಂಡಿದ್ದಾರೆ. 36-48 ದಿನಗಳ ಕಾಲ ಥ್ರೋಬಾಲ್ ಆಡಿದ ವಿದ್ಯಾರ್ಥಿಗಳಲ್ಲಿ ಶೇ. 84 ವಿದ್ಯಾರ್ಥಿಗಳಿಗೆ ಕನಿಷ್ಠ ಒಂದು ಕಣ್ಣಿನಲ್ಲಿ ಸುಧಾರಣೆ ಕಂಡುಬಂದಿದೆ ಎಂದರು.

ಮದುವೆ ಆಗುವ ಆಸೆ ತೋರಿಸಿ ಪ್ರಿಯತಮೆಯ ಹತ್ಯೆ: ಬಂಧನ

ಬೆಂಗಳೂರು: ಕೊಡಗಿನ ಪುಟ್ಟ ಹಳ್ಳಿಯೊಂದರಲ್ಲಿ ನೆಮ್ಮದಿಯ ಜೀವನ ನಡೆಸುತ್ತಿದ್ದ 23 ವರ್ಷದ ಯುವತಿಯೊಬ್ಬಳನ್ನು ಮದುವೆಯಾಗುವ ಆಸೆ ತೋರಿಸಿ ಬೆಂಗಳೂರಿಗೆ ಕರೆತಂದು ಅಮಾನುಷವಾಗಿ ಕೊಲೆ ಮಾಡಿರುವ ಘಟನೆ ವರ್ತೂರು ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ.

ಪ್ರಿಯಕರನೇ ಕುತ್ತಿಗೆ ಬಿಗಿದು ಕೊಲೆ ಮಾಡಿ, ಬಳಿಕ ಅದನ್ನು ಆತ್ಮಹತ್ಯೆ ಎಂದು ಬಿಂಬಿಸಲು ಯತ್ನಿಸಿ ಪೊಲೀಸರ ಅತಿಥಿಯಾಗಿದ್ದಾನೆ. ಸಹ ಜೀವನದಲ್ಲಿ (ಲಿವಿಂಗ್ ರಿಲೇಶನ್‌ಶಿಪ್) ಶುರುವಾದ ಇವರ ಸಂಬಂಧ ಭೀಕರ ಕೊಲೆಯಲ್ಲಿ ಅಂತ್ಯ ಕಂಡಿದೆ. ಮೂಲತಃ ಕೊಡಗಿನವರಾದ ಅಯ್ಯಪ್ಪ ಹಾಗೂ ರಂಜಿತಾ ಈ ದುರಂತ ಪ್ರಕರಣದ ಪ್ರಮುಖರು. ಆರೋಪಿ ಅಯ್ಯಪ್ಪನಿಗೆ ಈ ಮೊದಲೇ ವಿವಾಹವಾಗಿದ್ದು, ಪತ್ನಿಯಿಂದ ದೂರವಿದ್ದ. ಇದೇ ವೇಳೆ ತನ್ನದೇ ಊರಿನ ಅನ್ಯ ಜಾತಿಯ ಯುವತಿ ರಂಜಿತಾಳ ಮೇಲೆ ಕಣ್ಣು ಹಾಕಿದ್ದ ಆತ, ಆಕೆಯನ್ನು ಪ್ರೀತಿಸುವ ನಾಟಕವಾಡಿದ್ದ. ಆಕೆಯನ್ನು ಮದುವೆಯಾಗುವುದಾಗಿ ನಂಬಿಸಿ, ಯುವತಿಯ ಪೋಷಕರಿಗೂ ಮಾತು ಕೊಟ್ಟು ಒಪ್ಪಿಸಿದ್ದ. ತದನಂತರ ಆಕೆಯನ್ನು ತನ್ನೊಂದಿಗೆ ಬೆಂಗಳೂರಿಗೆ ಕರೆತಂದು ಬಾಡಿಗೆ ಮನೆಯೊಂದರಲ್ಲಿ ಇರಿಸಿಕೊಂಡಿದ್ದ. ಬೆಂಗಳೂರಿನ ವರ್ತೂರು ಪೊಲೀಸ್ ಠಾಣಾ ವ್ಯಾಪ್ತಿಯ ಬಾಡಿಗೆ ಮನೆಯೊಂದರಲ್ಲಿ ಇಬ್ಬರೂ ಕೆಲವು ತಿಂಗಳುಗಳಿಂದ ಒಟ್ಟಿಗೆ ವಾಸವಿದ್ದರು. ಆರಂಭದಲ್ಲಿ ಚೆನ್ನಾಗಿಯೇ ಇದ್ದ ಇವರ ಸಂಬಂಧದಲ್ಲಿ ಇತ್ತೀಚೆಗೆ ಬಿರುಕು ಮೂಡಿತ್ತು. ಇವರಿಬ್ಬರ ನಡುವೆ ಆಗಾಗ್ಗೆ ಜಗಳಗಳು ನಡೆಯುತ್ತಿದ್ದವು ಎನ್ನಲಾಗಿದೆ. ಸಾವಿಗೂ ಕೆಲವೇ ದಿನಗಳ ಮುನ್ನ ತನ್ನ ಪೋಷಕರಿಗೆ ಕರೆ ಮಾಡಿದ್ದ ರಂಜಿತಾ, ಅಯ್ಯಪ್ಪ ತನ್ನ ಮೇಲೆ ಹಲ್ಲೆ ನಡೆಸುತ್ತಿರುವುದಾಗಿ ಅಳಲು ತೋಡಿಕೊಂಡಿದ್ದಳು. ಅಷ್ಟೇ ಅಲ್ಲದೆ, ಆತ ತನಗೆ ಜಾತಿ ನಿಂದನೆ ಮಾಡುತ್ತಿದ್ದಾನೆ ಎಂಬ ಗಂಭೀರ ಆರೋಪವನ್ನೂ ಮಾಡಿದ್ದಳು ಎಂದು ಆಕೆಯ ಪೋಷಕರು ದೂರಿನಲ್ಲಿ ವಿವರಿಸಿದ್ದಾರೆ.

ಕೇಬಲ್ ವೈರ್‌ನಿಂದ ಕುತ್ತಿಗೆ ಬಿಗಿದು ಕೊಲೆ

ಮಗಳು ಕರೆ ಮಾಡಿ ಅಳಲು ತೋಡಿಕೊಂಡ ಎರಡು-ಮೂರು ದಿನಗಳ ಬಳಿಕ, ಅಯ್ಯಪ್ಪನೇ ನೇರವಾಗಿ ರಂಜಿತಾಳ ಪೋಷಕರಿಗೆ ಕರೆ ಮಾಡಿ ನಿಮ್ಮ ಮಗಳು ನೇಣಿಗೆ ಶರಣಾಗಿದ್ದಾಳೆ ಎಂಬ ಸುಳ್ಳು ಕಥೆ ಕಟ್ಟಿದ್ದಾನೆ. ಆತನ ಮಾತುಗಳಿಂದ ಹಾಗೂ ಮಗಳು ಮೊದಲೇ ಹೇಳಿದ್ದ ವಿಚಾರಗಳಿಂದ ತೀವ್ರ ಅನುಮಾನಗೊಂಡ ರಂಜಿತಾಳ ಪೋಷಕರು ತಕ್ಷಣವೇ ವರ್ತೂರು ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದಾರೆ. ಪೋಷಕರ ದೂರಿನ ಆಧಾರದ ಮೇಲೆ ಆರೋಪಿ ಅಯ್ಯಪ್ಪನನ್ನು ವಶಕ್ಕೆ ಪಡೆದು ತೀವ್ರ ವಿಚಾರಣೆ ನಡೆಸಿದಾಗ ಆತ ಸತ್ಯವನ್ನು ಬಾಯಿಬಿಟ್ಟಿದ್ದಾನೆ. ಕೇಬಲ್ ವೈರ್‌ನಿಂದ ರಂಜಿತಾಳ ಕುತ್ತಿಗೆ ಬಿಗಿದು ಬರ್ಬರವಾಗಿ ಕೊಲೆಗೈದಿರುವ ಆತ, ತನ್ನ ಕೃತ್ಯ ಮುಚ್ಚಿಹಾಕಲು ಮೃತದೇಹವನ್ನು ನೇಣುಹಾಕಿ ಆತ್ಮಹತ್ಯೆಯ ರೂಪ ನೀಡಲು ಯತ್ನಿಸಿದ್ದಾನೆ ಎಂಬ ಆಘಾತಕಾರಿ ವಿಚಾರ ತನಿಖೆಯಿಂದ ಬಯಲಾಗಿದೆ.

ಉತ್ತರಹಳ್ಳಿಯ ಕಾಂಗರೂ ಕಿಡ್ಸ್ ಅಂತಾರಾಷ್ಟ್ರೀಯ ಶಾಲೆಯ ವಾರ್ಷಿಕ ಸಮಾರಂಭದಲ್ಲಿ ಜೈವಿಕ ಇಂಧನ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಎಸ್.ಈ ಸುಧೀಂದ್ರ ವಿದ್ಯಾರ್ಥಿಗಳಿಗೆ ಪ್ರಶಸ್ತಿ ನೀಡಿ ಗೌರವಿಸಿದರು. ಈ ವೇಳೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಉಪ ಕಾರ್ಯದರ್ಶಿಗಳಾದ ಉಮೇಶ್, ಪ್ರಾರ್ಥನಾ ವಿಶ್ವ ಶಾಲೆಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಉಮೇಶ್ ಹೆಗಡೆ, ರಕ್ಷಣ, ಮಾನಸ ಮುಂತಾದ ಗಣ್ಯರು ಹಾಗೂ ಮಕ್ಕಳ ಪೋಷಕರು ಭಾಗಿಯಾಗಿದ್ದರು.

ನಗರದ ಖಾಸಗಿ ಹೋಟೆಲ್‌ನಲ್ಲಿ ಆಯೋಜಿಸಿದ್ದ ಸಮತಾ ಸೈನಿಕದಳ ರಾಷ್ಟ್ರೀಯ ಕಾರ್ಯಕಾರಿಣಿ ಸಭೆ ಹಾಗೂ ರಾಜ್ಯಮಟ್ಟದ ಪದಾಧಿಕಾರಿಗಳ ಆಯ್ಕೆ ಸಮಾರಂಭವನ್ನು ರಾಷ್ಟ್ರೀಯ ಅಧ್ಯಕ್ಷ ಅಶೋಕ್ ಖನ್ನಾಡೆ ಉದ್ಘಾಟಿಸಿದರು. ಈ ವೇಳೆ ಉಪಾಧ್ಯಕ್ಷ ದಾಸರಿ ಶ್ಯಾಮ್ ಮನೋಹರ್, ಸದಸ್ಯರಾದ ಅರವಿಂದ್ ಚೌದ್‌ನಾಗ, ಡಾ.ಜಿ.ಗೋವಿಂದಯ್ಯ, ಕರ್ನಾಟಕ ದಲಿತ ಸೇನೆಯ ಬನಶಂಕರಿ ನಾಗು, ರಾಷ್ಟ್ರೀಯ ಅಂಬೇಡ್ಕರ್ ಸೇನೆಯ ರಾಜ್ಯಾಧ್ಯಕ್ಷ ಅರ್ಜುನ್ ಗೋಪಾಲಯ್ಯ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಮಾನ್ಯ 2ನೇ ಅಪರ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ ಕನಕಪುರ
ಸಿ.ಮಿಸ್.ನಂ. 124/2026

ಅರ್ಜಿದಾರರು : ಶ್ರೀಮತಿ ಸುಶೀಲಮ್ಮ ಕೋಂ ಲೇಟ್ ರಾಮಾಚಾರಿ ಬಿನ್ ಲೇಟ್ ಬಸವಚಾರ್, ವಯಸ್ಸು 70 ವರ್ಷ, ವಾಸ: ತಾಮಸಂದ್ರ ಗ್ರಾಮ, ಕಲ್ಲಹಳ್ಳಿ ಅಂಚೆ, ಕಸಬಾ ಹೋಬಳಿ, ಕನಕಪುರ ತಾಲ್ಲೂಕು, ಬೆಂಗಳೂರು ದಕ್ಷಿಣ ಜಿಲ್ಲೆ ಮತ್ತು 03 ಜನ ಇತರರು.

ವಿರುದ್ಧ

ಪ್ರತಿ ಅರ್ಜಿದಾರರು: 1. ಜನನ ಮತ್ತು ಮರಣ ನೊಂದಣಿ ಅಧಿಕಾರಿಗಳು, ತಹಶೀಲ್ದಾರ್ ಕನಕಪುರ, ಕನಕಪುರ ತಾಲ್ಲೂಕು, ಬೆಂಗಳೂರು ದಕ್ಷಿಣ ಜಿಲ್ಲೆ. 2. ಗ್ರಾಮ ಲೆಕ್ಕಾಧಿಕಾರಿಗಳು, ಕಲ್ಲಹಳ್ಳಿ ವೃತ್ತ ಕಸಬಾ ಹೋಬಳಿ, ಕನಕಪುರ ತಾಲ್ಲೂಕು. ಬೆಂಗಳೂರು ದಕ್ಷಿಣ ಜಿಲ್ಲೆ

ಪ್ರಕಟಣೆ

ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, 1 ಮತ್ತು 4 ಅರ್ಜಿದಾರರ ತಾಯಿಯವರಾದ ಶ್ರೀಮತಿ ರತ್ನಮ್ಮ @ ಕೆಂಪಮ್ಮ ಕೋಂ ಲೇಟ್ ಬಸವಚಾರ್ ರವರು, ಬೆಂಗಳೂರು ದಕ್ಷಿಣ ಜಿಲ್ಲೆ, ಕನಕಪುರ ತಾಲ್ಲೂಕು, ಕಸಬಾ ಹೋಬಳಿ, ಕಲ್ಲಹಳ್ಳಿ ಅಂಚೆ, ತಾಮಸಂದ್ರ ಗ್ರಾಮದಲ್ಲಿ ದಿನಾಂಕ 25.04.2020 ರಂದು ಮರಣ ಹೊಂದಿದ್ದು, ಅವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರದಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ ದಿನಾಂಕ 15/04/2026ರ ಬೆಳಿಗ್ಗೆ ಸರಿಯಾಗಿ 11=00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾರದ್ದೂ ತಕರಾರೂ ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರೆಸಿ ಇತ್ಯರ್ಥಗೊಳಿಸಲಾಗುವುದು.

2026ರ ಮಾರ್ಚ್ 10ನೇ ತಾರೀಖು ಈ ದಿವಸ ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ಹೊರಡಿಸಲಾಗಿದೆ.

ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು,
ಮಾನ್ಯ 2ನೇ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಕನಕಪುರ

ಅರ್ಜಿದಾರರ ಪರ ವಕೀಲರು
ವಿ. ವೆಂಕಟೇಶ್
ವಕೀಲರು, ಕನಕಪುರ
ದಿನಾಂಕ: 10/03/2026

ಮಾನ್ಯ 2ನೇ ಅಪರ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ ಕನಕಪುರ
ಸಿ.ಮಿಸ್.ನಂ. 125/2026

ಅರ್ಜಿದಾರರು : ಶ್ರೀಮತಿ ಸುಶೀಲಮ್ಮ ಕೋಂ ಲೇಟ್ ರಾಮಾಚಾರಿ ಬಿನ್ ಲೇಟ್ ಬಸವಚಾರ್, ವಯಸ್ಸು 70 ವರ್ಷ, ವಾಸ: ತಾಮಸಂದ್ರ ಗ್ರಾಮ, ಕಲ್ಲಹಳ್ಳಿ ಅಂಚೆ, ಕಸಬಾ ಹೋಬಳಿ, ಕನಕಪುರ ತಾಲ್ಲೂಕು, ಬೆಂಗಳೂರು ದಕ್ಷಿಣ ಜಿಲ್ಲೆ ಮತ್ತು 03 ಜನ ಇತರರು.

ವಿರುದ್ಧ

ಪ್ರತಿ ಅರ್ಜಿದಾರರು: 1. ಜನನ ಮತ್ತು ಮರಣ ನೊಂದಣಿ ಅಧಿಕಾರಿಗಳು, ತಹಶೀಲ್ದಾರ್ ಕನಕಪುರ, ಕನಕಪುರ ತಾಲ್ಲೂಕು, ಬೆಂಗಳೂರು ದಕ್ಷಿಣ ಜಿಲ್ಲೆ. 2. ಗ್ರಾಮ ಲೆಕ್ಕಾಧಿಕಾರಿಗಳು, ಕಲ್ಲಹಳ್ಳಿ ವೃತ್ತ ಕಸಬಾ ಹೋಬಳಿ, ಕನಕಪುರ ತಾಲ್ಲೂಕು. ಬೆಂಗಳೂರು ದಕ್ಷಿಣ ಜಿಲ್ಲೆ

ಪ್ರಕಟಣೆ

ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, 1 ಮತ್ತು 4 ಅರ್ಜಿದಾರರ ತಂದೆಯವರಾದ ಶ್ರೀ ಬಸವಚಾರ್ ಬಿನ್ ಲೇಟ್ ಚನ್ನಾಚಾರಿ ರವರು, ಬೆಂಗಳೂರು ದಕ್ಷಿಣ ಜಿಲ್ಲೆ, ಕನಕಪುರ ತಾಲ್ಲೂಕು, ಕಸಬಾ ಹೋಬಳಿ, ಕಲ್ಲಹಳ್ಳಿ ಅಂಚೆ, ತಾಮಸಂದ್ರ ಗ್ರಾಮದಲ್ಲಿ ದಿನಾಂಕ 08.08.2011 ರಂದು ಮರಣ ಹೊಂದಿದ್ದು, ಅವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರದಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ ದಿನಾಂಕ 15/04/2026ರ ಬೆಳಿಗ್ಗೆ ಸರಿಯಾಗಿ 11=00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾರದ್ದೂ ತಕರಾರೂ ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರೆಸಿ ಇತ್ಯರ್ಥಗೊಳಿಸಲಾಗುವುದು.

2026ರ ಮಾರ್ಚ್ 10ನೇ ತಾರೀಖು ಈ ದಿವಸ ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ಹೊರಡಿಸಲಾಗಿದೆ.

ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು,
ಮಾನ್ಯ 2ನೇ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಕನಕಪುರ

ಅರ್ಜಿದಾರರ ಪರ ವಕೀಲರು
ವಿ. ವೆಂಕಟೇಶ್
ವಕೀಲರು, ಕನಕಪುರ
ದಿನಾಂಕ: 10/03/2026

ವಿರಾಮ
ಪ್ರತಿ ಭಾನುವಾರ

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ ನನ್ನ ಕಕ್ಷಿದಾರರಾದ ಶ್ರೀ.ರಾಜಶೇಖರ್.ಬಿ ಬಿನ್ ಲೇಟ್ ಶ್ರೀ.ಭುವನೇಶ್ವರ್ ಆರ್, ಇವರು ಈ ಕೆಳಕಂಡ ಷೆಡ್ಯೂಲ್‌ನಲ್ಲಿ ವಿವರಿಸಿರುವ ಸ್ಥಿರಾಸ್ತಿಯ ಮಾಲೀಕರಾಗಿದ್ದು ಇವರು ಬೆಂಗಳೂರು, ಉಪ-ನೋಂದಣಿ ಕಚೇರಿಯಲ್ಲಿ ದಿನಾಂಕ 04/01/1968 ರಂತೆ, ದಾಖಲೆ ಸಂಖ್ಯೆ 5647/ 1967-68, ಪುಸ್ತಕ-1,ರಲ್ಲಿ ನೊಂದಾಯಿತವಾದ ಮತ್ತು ಶ್ರೀ.ಕೆ.ಆರ್. ರಾಮಕೃಷ್ಣ ಪರವಾಗಿ ಶ್ರೀ.ಪಿ.ಎಲ್.ನಾರಾಯಣ ಸ್ವಾಮಿ ಅವರು ಬರೆದುಕೊಟ್ಟಿರುವ ಮೂಲ ಮಾರಾಟ ಪತ್ರವನ್ನು ಕಳೆದುಕೊಂಡಿರುತ್ತಾರೆ ಮತ್ತು ಈ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಯಾರಾದರೂ ಸ್ವತ್ತಿನ ಮೇಲೆ ಸ್ವಾಧೀನವನ್ನು ಹೊಂದಿದ್ದರೆ, ಅದನ್ನು ಈ ದಿನಾಂಕದಿಂದ ನೋಟೀಸು ಪ್ರಕಟವಾದ ಏಳು ದಿನಗಳ ಒಳಗಾಗಿ ಕೆಳಸಹಿದಾರರಿಗೆ ತಲುಪಿಸಬೇಕೆಂದು ಈ ಮೂಲಕ ತಿಳಿಸಲಾಗಿದೆ.

ಷೆಡ್ಯೂಲ್ ಸ್ವತ್ತು

ಬೆಂಗಳೂರು-560 021, ನಾಗಪ್ಪ ಬ್ಲಾಕ್, 2ನೇ ಮುಖ್ಯ ರಸ್ತೆ, ಇಲ್ಲಿರುವ ಆಸ್ತಿ ಸಂಖ್ಯೆ.38, ಹೊಸ ಸಂಖ್ಯೆ.20, ರ ವಿಸ್ತೀರ್ಣ 20 ಅಡಿ X 40 ಅಡಿ ಅಳತೆ, ನೆಲ ಮಹಡಿಯಲ್ಲಿ 800 ಚದರ ಅಡಿ ನಿರ್ಮಿತ ವಾಣಿಜ್ಯ ಕಟ್ಟಡ ಮತ್ತು (ii) ಮೊದಲ ಮಹಡಿಯಲ್ಲಿ 800 ಚದರ ಅಡಿ ಮತ್ತು ಇನ್ನೊಂದು 800 ಚದರ ಅಡಿ ವಿಸ್ತೀರ್ಣವನ್ನು ಹೊಂದಿರುವ ಡ್ಯೂಪ್ಲೆಕ್ಸ್ ಮನೆ, ಪೂರ್ವದಿಂದ ಪಶ್ಚಿಮಕ್ಕೆ 20 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ 40 ಅಡಿ ಅಳತೆ, ಒಟ್ಟು 800 ಚದರ ಅಡಿ ಅಳತೆ. ಈ ಸ್ವತ್ತಿಗೆ ಚಕ್ಕುಬಂದಿ:-ಪೂರ್ವಕ್ಕೆ: ದೇವಸ್ಥಾನ, ಪಶ್ಚಿಮಕ್ಕೆ: ರಸ್ತೆ (2ನೇ ಮುಖ್ಯರಸ್ತೆ), ಉತ್ತರಕ್ಕೆ: ಮಹಾಕವಿ ಕುವೆಂಪು ರಸ್ತೆ, ದಕ್ಷಿಣಕ್ಕೆ: ಶಾಂತಮ್ಮ ಅವರ ಮನೆ.

ಎನ್. ಜಗದೀಶ್ ಕುಮಾರ್, ವಕೀಲರು
ನಂ.30/1, 2ನೇ ಮಹಡಿ, 7ನೇ ಕ್ರಾಸ್,
ಎನ್.ಆರ್. ಕಾಲೋನಿ ಹತ್ತಿರ ಬಸ್ ನಿಲ್ದಾಣ,
ಹೋಟೆಲ್ ದ್ವಾರಕ ಎದುರು, ಬೆಂಗಳೂರು-560019,

ಗಿಗ್ ಕೆಲಸಗಾರರ ಕಾನೂನುಗಳ ಮಧ್ಯೆ ಸಮನ್ವಯದ ಕೊರತೆ: ಐಎಎಂಎಐ

ಬೆಂಗಳೂರು: ಕರ್ನಾಟಕ ಸರಕಾರದ ನೂತನ ಗಿಗ್ ಕೆಲಸಗಾರರ ಕಾಯಿದೆ ಮತ್ತು ಕೇಂದ್ರ ಸರಕಾರದ ಸಾಮಾಜಿಕ ಭದ್ರತಾ ಸಂಹಿತೆಯ ನಡುವೆ ಸಮನ್ವಯ ದ ಕೊರತೆಯಿದ್ದು, ಇದು ಕಾರ್ಮಿಕರ ಕಲ್ಯಾಣಕ್ಕೆ ಸಂಚಕಾರ ತರುವ ಸಾಧ್ಯತೆಯಿದೆ ಎಂದು ಇಂಟರ್ನೆಟ್ ಮತ್ತು ಮೊಬೈಲ್ ಅಸೋಸಿಯೇಷನ್ ಆಫ್ ಇಂಡಿಯಾ (ಐಎಎಂಎಐ) ಎಚ್ಚರಿಸಿದೆ.

ಈ ಕುರಿತು ಕರ್ನಾಟಕ ಸರಕಾರಕ್ಕೆ ಪತ್ರ ಬರೆದಿರುವ ಸಂಸ್ಥೆಯು, ನಿಯಮಗಳಲ್ಲಿ ಸ್ಪಷ್ಟತೆ ಸಿಗುವವರೆಗೆ ಕಲ್ಯಾಣ ನಿಧಿಗೆ ವಂತಿಗೆ ಸಂಗ್ರಹಿಸುವುದನ್ನು ತಡೆಹಿಡಿಯುವಂತೆ ಮನವಿ ಮಾಡಿದೆ. ಕೇಂದ್ರ ಸರಕಾರ ಅಧಿಸೂಚನೆ ನೀಡಿರುವ ಸಾಮಾಜಿಕ ಭದ್ರತಾ ಸಂಹಿತೆ, 2020, ಈಗಾಗಲೇ ಪ್ರತಿಯೊಬ್ಬ ಅಗ್ರಿಗೇಟರ್ (ಸಂಸ್ಥೆ) ತನ್ನ ವಾರ್ಷಿಕ ವಹಿವಾಟಿನ ಶೇ.1 ರಿಂದ ಶೇ.2ರಷ್ಟು ಮೊತ್ತವನ್ನು ಗಿಗ್ ಮತ್ತು ಪ್ಲಾಟ್ ಫಾರ್ಮ್ ಕೆಲಸಗಾರರ ಸಾಮಾಜಿಕ ಭದ್ರತೆಗಾಗಿ ನೀಡಬೇಕೆಂದು ಆದೇಶಿಸಿದೆ ಎಂದು ಐಎಎಂಎಐ ಹೇಳಿದೆ.

ಕರ್ನಾಟಕದ ಕಾಯಿದೆಯು ಅಗ್ರಿಗೇಟರ್‌ಗಳು ರಾಜ್ಯದ ಗಿಗ್ ಕೆಲಸಗಾರರಿಗೆ ಮಾಡುವ ಪಾವತಿಯ ಮೇಲೆ ಶೇ.1 ರಿಂದ ಶೇ.5ರಷ್ಟು ಕಲ್ಯಾಣ ಶುಲ್ಕವನ್ನು ವಿಧಿಸುತ್ತದೆ. ರಾಜ್ಯದ ಕಾಯಿದೆಯು ಈ ಶುಲ್ಕ ಪಾವತಿಯನ್ನು ಕೇಂದ್ರದ ನಿಯಮದ ಅಡಿಯಲ್ಲಿ ಸಲ್ಲಿಸಬೇಕಾದ ವಂತಿಗೆಗೆ ಸರಿಹೊಂದಿಸಬಹುದು ಎಂದು ಹೇಳಿದೆಯಾದರೂ, ಈ ಹೊಂದಾಣಿಕೆಯ ಕಾರ್ಯವಿಧಾನ ಹೇಗೆ ಕೆಲಸ ಮಾಡುತ್ತದೆ ಎಂಬುದು ಇನ್ನೂ ಸ್ಪಷ್ಟವಾಗಿಲ್ಲ. ಈ ಕುರಿತಾದ ಯಾವುದೇ ಮಾರ್ಗಸೂಚಿ ಅಥವಾ ಅಧಿಸೂಚನೆಗಳು ಇದುವರೆಗೆ ಹೊರಬಂದಿಲ್ಲ. ಇಂತಹ ಸ್ಪಷ್ಟತೆಯಿಲ್ಲದ ಸಂದರ್ಭದಲ್ಲಿ, ಸಂಸ್ಥೆಗಳು ಒಂದೇ ಉದ್ದೇಶಕ್ಕಾಗಿ ಎರಡು ಬಾರಿ ಹಣ ಪಾವತಿಸಬೇಕಾದ ಅನಿವಾರ್ಯತೆ ಎದುರಾಗಬಹುದು. ಈ ಹಿನ್ನೆಲೆಯಲ್ಲಿ, ಕೇಂದ್ರ ಮತ್ತು ರಾಜ್ಯ ಸರಕಾರಗಳ ನಡುವೆ ಈ ಹೊಂದಾಣಿಕೆಯ ಕಾರ್ಯವಿಧಾನದ ಬಗ್ಗೆ ಸ್ಪಷ್ಟ ಒಪ್ಪಂದ ಏರ್ಪಡುವವರೆಗೆ ರಾಜ್ಯ ಕಾಯ್ದೆಯಡಿ ಹಣಕಾಸಿನ ವಂತಿಗೆ ತಡೆಹಿಡಿಯಬೇಕೆಂದು ಐಎಎಂಎಐ ವಿನಂತಿಸಿದೆ.

ಬಾಂಬ್ ಪದ ಬಳಸಿ ಸಂಕಷ್ಟಕ್ಕೆ ಸಿಲುಕಿದ ಡಿಸ್ಕ್ ಜಾಕಿ ಬೇರಾ

ಬೆಂಗಳೂರು: ತಡವಾಗಿ ಆಗಮಿಸಿದ್ದಕ್ಕೆ ಪ್ರವೇಶ ನಿರಾಕರಿಸಿದ್ದರಿಂದ ವಿಮಾನದಲ್ಲಿ ಪ್ರಯಾಣಿಸಬೇಕಿದ್ದ ಡಿಸ್ಕ್ ಜಾಕಿ ಕೋಪದಲ್ಲಿ ಬಾಂಬ್ ಪದ ಬಳಸಿ ಸಂಕಷ್ಟಕ್ಕೆ ಸಿಲುಕಿದ ಘಟನೆ ದೇವನಹಳ್ಳಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಗೇಟ್ 16ರಲ್ಲಿ ಮಾರ್ಚ್ 11 ರಂದು ನಡೆದಿದೆ.

ಈ ಸಂಬಂಧ ಪಶ್ಚಿಮ ಬಂಗಾಳದ ನಾರ್ಥ್ 24 ಪರಗಣ ಜಿಲ್ಲೆಯ ರಾಜತೇಶ್ ಬೇರಾ (40) ಎಂಬ ಡಿಸ್ಕ್ ಜಾಕಿಯನ್ನು ಬಂಧಿಸಿ, ಬಳಿಕ ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗಿದೆ. ಈತ ಬೆಂಗಳೂರಿನಿಂದ ರಾಯಪುರ್‌ಗೆ ಮಾರ್ಚ್ 11 ರಂದು ಇಂಡಿಗೋ ವಿಮಾನದಲ್ಲಿ ಪ್ರಯಾಣಿಸಬೇಕಿತ್ತು ಎಂದು ಪೊಲೀಸರು ಶನಿವಾರ ತಿಳಿಸಿದ್ದಾರೆ.

ಪ್ರವೇಶ ನಿರಾಕರಿಸಿದ್ದಕ್ಕೆ ಬಾಂಬ್ ಪದ ಬಳಕೆ: ರಾಜತೇಶ್ ಬೆಂಗಳೂರಲ್ಲಿ ಡಿಸ್ಕ್ ಜಾಕಿಯಾಗಿ ಕೆಲಸ ಮಾಡುತ್ತಿದ್ದಾರೆ. ವಿಮಾನದಲ್ಲಿ ಪ್ರಯಾಣಿಸಬೇಕಿದ್ದ ಈತ ತಡವಾಗಿ ವಿಮಾನ ನಿಲ್ದಾಣದ ಟರ್ಮಿನಲ್ 1 ರ ಗೇಟ್ ಸಂಖ್ಯೆ 16 ಕ್ಕೆ ಬಂದಿದ್ದರು. ಬೋರ್ಡಿಂಗ್ ಸಮಯ ಮೀರಿದ ನಂತರ ಆಗಮಿಸಿದ್ದರಿಂದ ಗೇಟ್ ಸಿಬ್ಬಂದಿ ಪ್ರವೇಶ ನಿರಾಕರಿಸಿದ್ದರು. ಪರಿಣಾಮ ಸಿಬ್ಬಂದಿ ಜತೆ ವಾಗ್ವಾದ ನಡೆಸಿದ್ದರು. ಬಳಿಕ, ಕೋಪದಲ್ಲಿ ವಿಮಾನದೊಳಗೆ ಬಾಂಬ್ ಇದ್ದರೆ ವಿಮಾನ ನಿಲ್ಲುವುದಿಲ್ಲವೇ ಎಂದು ಈತ ಹೇಳಿದ್ದು, ಆತಂಕ ಮೂಡಿಸಿತ್ತು ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಬಾಂಬ್ ಎಂಬ ಪದ ಬಳಸಿದ್ದರಿಂದ ಅಲ್ಲಿನ ಭದ್ರತಾ ಸಿಬ್ಬಂದಿ ಕಳವಳಗೊಂಡು, ತಕ್ಷಣವೇ ಆತನನ್ನು ವಶಕ್ಕೆ ಪಡೆದು ಪೊಲೀಸರಿಗೆ ಹಸ್ತಾಂತರಿಸಿದ್ದರು. ಬಾಂಬ್ ಹೇಳಿಕೆಯ ಗಂಭೀರತೆಯನ್ನು ನಿರ್ಣಯಿಸಲು ಪ್ರೋಟೋಕಾಲ್ ಪ್ರಕಾರ ಬಾಂಬ್ ಬೆದರಿಕೆ ಮೌಲ್ಯಮಾಪನ ಸಮಿತಿ ರಚಿಸಲಾಗಿದೆ. ವಿಮಾನಯಾನ ಸಿಬ್ಬಂದಿ ಸಲ್ಲಿಸಿದ ದೂರಿನ ಆಧಾರದ ಪ್ರಕರಣ ದಾಖಲಿಸಲಾಗಿದೆ ಎಂದು ಅಧಿಕಾರಿ ಮಾಹಿತಿ ನೀಡಿದರು.

ಭಾರತೀಯ ಸ್ಟೇಟ್ ಬ್ಯಾಂಕ್
ಕಲ್ಯಾಣ್‌ನಗರ ಶಾಖೆ (17735)
5ನೇ ಮುಖ್ಯ ರಸ್ತೆ HRBR ಲೇಔಟ್ 2ನೇ ಹಂತ, ಕಲ್ಯಾಣ್‌ನಗರ, ಬೆಂಗಳೂರು-560043.

ಇ-ಹರಾಜು ಮೂಲಕ ವಾಹನಗಳ ಮಾರಾಟಕ್ಕೆ ಸೂಚನೆ

ಈ ಕೆಳಕಂಡ ವಾಹನಗಳನ್ನು ಭಾರತೀಯ ಸ್ಟೇಟ್ ಬ್ಯಾಂಕ್ ಇ-ಹರಾಜಿನ ಮೂಲಕ ಈ ಕೆಳಗೆ ಸೂಚಿಸಿದ ದಿನಾಂಕ ಮತ್ತು ಸಮಯದಂದು **"ಎಲ್ಲಿ ಹೇಗಿದೆಯೋ ಹಾಗೆಯೇ ಸ್ಥಿತಿಯಲ್ಲಿ"** ಎಂಬ ಮೂಲಭೂತ ಆಧಾರದ ಮೇಲೆ ಇ-ಹರಾಜು ಮಾಡಲಾಗುವುದು ಎಂದು ಸಾರ್ವಜನಿಕರಿಗೆ ಈ ಮೂಲಕ ತಿಳಿಸಲಾಗಿದೆ.

ಸಾಲಗಾರರ ಹೆಸರು	ವಾಹನ ಮಾದರಿ	ನೋಂದಣಿ ಸಂಖ್ಯೆ	ಪಾರ್ಕಿಂಗ್ ಸ್ಥಳ	ಮೀಸಲು ಬೆಲೆ	EMD ಮೊತ್ತ
ಶ್ರೀ ಶ್ರವಣ್ ಕುಮಾರ್ ಭೀಮರಾಜ್ ಮಠಾದೀನ್	ಹುಂಡೈ ಕ್ರೆಟಾ ಎಲೆಕ್ಟ್ರಿಕ್ ಎಕ್ಸಲೆನ್ಸ್	KA 04 NF 2418	ಎಸ್‌ಬಿಐ ಪ್ರಾದೇಶಿಕ ಕಚೇರಿ ಬಾಣಸವಾಡಿ ನೆಲಮಾಳಿಗೆ	Rs. 20,12,000/-	Rs. 2,01,200/-

ಇ-ಹರಾಜಿನ ದಿನಾಂಕ ಮತ್ತು ಸಮಯ 23/03/2026, 11.00 AM ರಿಂದ 04.00 PM ರವರೆಗೆ (EMD ಮೊತ್ತದ ಕೊನೆಯ ದಿನಾಂಕ: 23/03/2026 ರಿಂದ 02.00 PMರವರೆಗೆ)

ನಿಯಮಗಳು ಮತ್ತು ಷರತ್ತುಗಳು:

1. ಇ-ಹರಾಜನ್ನು **"ಎಲ್ಲಿ ಹೇಗಿದೆಯೋ ಹಾಗೆಯೇ ಸ್ಥಿತಿಯಲ್ಲಿ"** ನಡೆಸಲಾಗುತ್ತಿದೆ ಮತ್ತು ವಾಹನಗಳ ಮೇಲೆ ಪರಿಣಾಮ ಬೀರುವ ಸ್ಥಿತಿ ಅಥವಾ ಇತರ ಯಾವುದೇ ಸಂಗತಿಗಳಿಗೆ ಬ್ಯಾಂಕ್ ಜವಾಬ್ದಾರನಾಗಿರುವುದಿಲ್ಲ.
2. ಮೇಲಿನ ವಾಹನಗಳನ್ನು ಮೀಸಲು ಬೆಲೆಗಿಂತ ಕಡಿಮೆ ಮಾರಾಟ ಮಾಡಲಾಗುವುದಿಲ್ಲ.
3. ಯಶಸ್ವಿ ಬಿಡ್ದಾರರು ಇ-ಹರಾಜಿನ ಅದೇ ದಿನದಂದು H1 ಬಿಡ್ ಮೊತ್ತ (10% EMD+15% ಮೊತ್ತ) ಬ್ಯಾಂಕ್‌ಗೆ ಪಾವತಿಸಬೇಕು ಮತ್ತು ಉಳಿದ 75% ಅನ್ನು ಇ-ಹರಾಜಿನ ದಿನಾಂಕದಿಂದ 15 ದಿನಗಳಲ್ಲಿ ಪಾವತಿಸಬೇಕು. ತಪ್ಪಿದಲ್ಲಿ ಬ್ಯಾಂಕ್‌ಗೆ ಪಾವತಿಸಿದ ಯಾವುದೇ ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
4. ಪ್ರತಿ ಬಿಡ್ ಹೆಚ್ಚಳ ಮೊತ್ತ ಕನಿಷ್ಠ **ರೂ. 10,000/-**
5. ಉದ್ದೇಶಿತ ಬಿಡ್ದಾರರು ಶ್ರೀಮತಿ ಪ್ರಾಚಿ ಗುಪ್ತಾ, ಮುಖ್ಯ ವ್ಯವಸ್ಥಾಪಕರು. (Mob: 96325 21591) ಇವರಿಗೆ ಕೆಲಸದ ಸಮಯದಲ್ಲಿ ಕರೆ ಮಾಡಿ ಆಯಾ ಪಾರ್ಕಿಂಗ್‌ಯಾರ್ಡ್‌ಗಳಲ್ಲಿ ವಾಹನಗಳನ್ನು ಪರಿಶೀಲಿಸಬಹುದು.
6. ಯಾವುದೇ ಕಾರಣವನ್ನು ನೀಡದೆ, ಯಶಸ್ವಿ ಬಿಡ್ದಾರರನ್ನು ಘೋಷಿಸುವ ಮೊದಲು ಯಾವುದೇ ಸಮಯದಲ್ಲಿ ಇ-ಹರಾಜು ಪ್ರಕ್ರಿಯೆಯನ್ನು ರದ್ದುಗೊಳಿಸಲು ಅಥವಾ ಮುಂದೂಡಲು ಅಧಿಕೃತ ಅಧಿಕಾರಿಗೆ ಸ್ವಾತಂತ್ರ್ಯ ಹೊಂದಿರುತ್ತಾರೆ.
7. ನಿಯಮಗಳು ಮತ್ತು ಷರತ್ತುಗಳ ಪ್ರಕಾರ ಇ-ಹರಾಜು ಪೋರ್ಟಲ್ https://baanknet.com/ ಮೂಲಕ ನಡೆಯುತ್ತದೆ/

ದಿನಾಂಕ: 13.03.2026
ಸ್ಥಳ: ಬೆಂಗಳೂರು

ಸಹಿ/-
ಅಧಿಕೃತ ಅಧಿಕಾರಿ

ನಿರಂತರ ಸ್ವಚ್ಛತೆಯಿಂದ ಬ್ಲ್ಯಾಕ್‌ಸ್ಪಾಟ್ ನಿರ್ಮೂಲನೆ ಸಾಧ್ಯ: ರಾಜೇಂದ್ರ ಚೋಳನ್

ಕೇಂದ್ರ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಸ್ವಚ್ಛತಾ ವಿಶೇಷ ಅಭಿಯಾನ

ಬೆಂಗಳೂರು: ನಿರಂತರ ಸಾಮೂಹಿಕ ಸ್ವಚ್ಛತೆ ಕಾರ್ಯದಿಂದ ಬ್ಲ್ಯಾಕ್ ಸ್ಪಾಟ್ ನಿರ್ಮೂಲನೆ ಹಾಗೂ ಪಾದಚಾರಿ ಒತ್ತುವರಿ ತಡೆಗಟ್ಟಲು ಸಾಧ್ಯ ಎಂದು ಕೇಂದ್ರ ನಗರ ಪಾಲಿಕೆ ಆಯುಕ್ತ ರಾಜೇಂದ್ರ ಚೋಳನ್ ಹೇಳಿದರು.

ಈ ಕುರಿತು ಮಾತನಾಡಿದ ಅವರು, ಬೆಂಗಳೂರು ಕೇಂದ್ರ ನಗರ ಪಾಲಿಕೆ ವ್ಯಾಪ್ತಿಯಲ್ಲಿ ನಗರದ ಸ್ವಚ್ಛತೆ ಕಾಪಾಡುವ ಹಾಗೂ ನಾಗರಿಕರಿಗೆ ಆರೋಗ್ಯಕರ ಪರಿಸರ ಒದಗಿಸುವ ಉದ್ದೇಶದಿಂದ ವಿವಿಧ ಪ್ರದೇಶಗಳಲ್ಲಿ ವಿಶೇಷ ಸ್ವಚ್ಛತಾ ಅಭಿಯಾನವನ್ನು ಕೈಗೊಳ್ಳಲಾಗಿದ್ದು, 6 ವಿಧಾನಸಭಾ ಕ್ಷೇತ್ರಗಳಲ್ಲಿನ ವಿವಿಧ ಭಾಗಗಳಲ್ಲಿ ಕಸ ಸಂಗ್ರಹವಾಗುವ ಸ್ಥಳಗಳನ್ನು ಗುರುತಿಸಿ ಅವುಗಳನ್ನು ತೆರವುಗೊಳಿಸುವ ಕಾರ್ಯವನ್ನು ನಿರಂತರವಾಗಿ ಕೈಗೊಳ್ಳಲಾಗುತ್ತಿದೆ. ಇದಕ್ಕಾಗಿ ನಿಯಮಿತ ಸ್ವಚ್ಛತಾ ಕಾರ್ಯಗಳ ಜತೆಗೆ ವಿಶೇಷ ಕಾರ್ಯಾಚರಣೆಗಳನ್ನು ರೂಪಿಸಿ ಜಾರಿಗೆ ತರಲಾಗಿದೆ ಎಂದರು.

ನಗರದಲ್ಲಿ ಗುರುತಿಸಲ್ಪಟ್ಟ ಬ್ಲ್ಯಾಕ್ ಸ್ಪಾಟ್ ಪ್ರದೇಶಗಳನ್ನು ಶಾಶ್ವತವಾಗಿ ನಿರ್ಮೂಲನೆ ಮಾಡುವುದಕ್ಕೆ ನಗರ ಪಾಲಿಕೆ ಹೆಚ್ಚಿನ ಆದ್ಯತೆ ನೀಡುತ್ತಿದೆ. ಸಾರ್ವಜನಿಕರು ರಸ್ತೆ ಬದಿಗಳು ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ಕಸ ಎಸೆಯದೇ, ನಿಗದಿತ ಸ್ಥಳಗಳಲ್ಲಿ ಮಾತ್ರ ತ್ಯಾಜ್ಯ ವಿಸರ್ಜಿಸುವ ಮೂಲಕ ನಗರ ಸ್ವಚ್ಛತೆ ಕಾಪಾಡಲು ಸಹಕರಿಸಬೇಕು ಎಂದು ಮನವಿ ಮಾಡಿದರು.

ವಿಶೇಷ ಸ್ವಚ್ಛತಾ ಕಾರ್ಯಾಚರಣೆಗಳು ಕೇಂದ್ರ ನಗರ ಪಾಲಿಕೆ ವ್ಯಾಪ್ತಿಯ ಆರು ವಿಧಾನಸಭಾ ಕ್ಷೇತ್ರಗಳಲ್ಲಿ ನಡೆಯಿತು. ಚಾಮರಾಜಪೇಟೆ, ಚಿಕ್ಕಪೇಟೆ, ಗಾಂಧಿನಗರ, ಶಾಂತಿನಗರ, ಶಿವಾಜಿನಗರ ಮತ್ತು ಸಿ.ವಿ. ರಾಮನ್ ನಗರ ಕ್ಷೇತ್ರಗಳ ಪ್ರಮುಖ ರಸ್ತೆ ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ಸ್ವಚ್ಛತಾ ಕಾರ್ಯಗಳನ್ನು ಕೈಗೊಳ್ಳಲಾಯಿತು. ಚಾಮರಾಜಪೇಟೆ ಕ್ಷೇತ್ರದ ವಾರ್ಡ್ 140 ರಲ್ಲಿ 4ನೇ ಮತ್ತು 5ನೇ ಮುಖ್ಯರಸ್ತೆಗಳಲ್ಲಿ ಸ್ವಚ್ಛತಾ ಕಾರ್ಯಾಚರಣೆ ನಡೆಸಲಾಯಿತು.

ಈ ಅಭಿಯಾನವು ಬೆಂಗಳೂರು ಕೇಂದ್ರ ನಗರ ಪಾಲಿಕೆಯ ಅಭಿವೃದ್ಧಿ ಅಪರ ಆಯುಕ್ತ ದಲ್ಜಿತ್ ಕುಮಾರ್ ಮಾರ್ಗದರ್ಶನದಲ್ಲಿ ನಡೆಯಿತು. ಒಟ್ಟು 8.45 ಕಿ.ಮೀ ವ್ಯಾಪ್ತಿಯಲ್ಲಿ ನಡೆದ ಈ ಕಾರ್ಯಾಚರಣೆಯಲ್ಲಿ 6 ಜೆಸಿಬಿ ಯಂತ್ರಗಳು ಮತ್ತು 31 ಟ್ರ್ಯಾಕ್ಟರ್‌ಗಳ ಬಳಕೆಯೊಂದಿಗೆ ದಿಂದ ರಸ್ತೆ ಬದಿಗಳಲ್ಲಿ ಸಂಗ್ರಹವಾಗಿದ್ದ 41 ಲೋಡ್ ತ್ಯಾಜ್ಯವನ್ನು ತೆರವುಗೊಳಿಸಲಾಯಿತು. ಅಲ್ಲದೇ ವಿವಿಧ ಪ್ರದೇಶಗಳಲ್ಲಿ ಗುರುತಿಸಲ್ಪಟ್ಟಿದ್ದ 10 ಬ್ಲ್ಯಾಕ್ ಸ್ಪಾಟ್‌ಗಳನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡಲಾಯಿತು.

ಈ ಕಾರ್ಯಾಚರಣೆಯಲ್ಲಿ ಪೌರಕಾರ್ಮಿಕರು ಹಾಗೂ ಸ್ವಚ್ಛತಾ ಸಿಬ್ಬಂದಿ, ವಿವಿಧ ಇಲಾಖೆಗಳ ಅಧಿಕಾರಿಗಳು ಮತ್ತು ಸಿಬ್ಬಂದಿಯ ಸಹಕಾರದಿಂದ ಅಭಿಯಾನ ಪೂರ್ಣಗೊಂಡಿತು. ಸಾಮೂಹಿಕ ಸ್ವಚ್ಛತಾ ಹಾಗೂ ಪಾದಚಾರಿ ಮಾರ್ಗಗಳ ಒತ್ತುವರಿ ತೆರವು ಕಾರ್ಯಾಚರಣೆಯಲ್ಲಿ ಸಂಬಂಧಿತ ವಿಭಾಗಗಳ ಕಾರ್ಯಪಾಲಕ ಅಭಿಯಂತರರು, ಡಿಜಿಎಂಗಳು, ಎಜಿಎಂಗಳು, ಸಹಾಯಕ ಕಾರ್ಯಪಾಲಕ ಅಭಿಯಂತರರು ಹಾಗೂ ಅರಣ್ಯ ಮತ್ತು ತೋಟಗಾರಿಕೆ ಇಲಾಖೆಯ ಸಿಬ್ಬಂದಿ ಸೇರಿದಂತೆ ಹಲವು ಇಲಾಖೆಗಳ ಅಧಿಕಾರಿಗಳು ಇದ್ದರು.

ಸಮಾಚಾರ ಸಣ್ಣದಲ್ಲ

ವಿಟಿಯುನಲ್ಲಿ ಸ್ತ್ರೀ ನಾವೀನ್ಯತೆ ಯೋಜನೆ

ಬೆಂಗಳೂರು: ವಿಟಿಯು, ವಿಶ್ವೇಶ್ವರಯ್ಯ ಸಂಶೋಧನಾ ಮತ್ತು ನಾವೀನ್ಯತೆಯ ಕೇಂದ್ರ ಸಂಯುಕ್ತಾಶ್ರಯದಲ್ಲಿ ಪರಿಚಯಿಸಿದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಪ್ರಯುಕ್ತ ಮಹಿಳೆಯರ ಸಬಲೀಕರಣಕ್ಕೆ ಸ್ತ್ರೀ ನಾವಿನ್ಯತೆ ಯೋಜನೆಗೆ ಕುಲಪತಿ ಪ್ರೊ.ಎಸ್. ವಿದ್ಯಾಶಂಕರ್ ಚಾಲನೆ ನೀಡಿದರು. ಈ ಯೋಜನೆಗೆ ವಿಪ್ರೊ, ಜಾನ್ ಎಐ, ಯುಎನ್ ವುಮೇನ್, ಕರ್ನಾಟಕ ಡಿಜಿಟಲ್ ಎಕಾನಮಿ ಮಿಷನ್(ಕೆಡಿಇಎಂ), ಟಿಐಇ ಚಾಪ್ಟರ್ ಸಹಕಾರವನ್ನು ನೀಡಿದೆ. ಗ್ರಾಮೀಣ ಮತ್ತು ಜಿಲ್ಲಾ ಹಂತಗಳಲ್ಲಿರುವ ಸಾಮಾಜಿಕ ಮತ್ತು ಆರ್ಥಿಕ ಸಮಸ್ಯೆಗಳಿಗೆ ಕೃತಕ ಬುದ್ಧಿಮತ್ತೆ(ಎಐ) ತಂತ್ರಜ್ಞಾನ ಬಳಸಿಕೊಂಡು ಪರಿಹಾರ ಕಲ್ಪಿಸಿಕೊಡುವುದು ಈ ಯೋಜನೆಯ ಪ್ರಮುಖ ಉದ್ದೇಶವಾಗಿದೆ. ವಿಟಿಯು ವ್ಯಾಪ್ತಿಯಲ್ಲಿ 220 ಎಂಜಿನಿಯರಿಂಗ್ ಕಾಲೇಜುಗಳಿದ್ದು, ಇದರಲ್ಲಿ 3 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. ಪ್ರತಿ ಕಾಲೇಜಿನಿಂದ 80 ವಿದ್ಯಾರ್ಥಿನಿಯರನ್ನು ಈ ಯೋಜನೆಗೆ ನೋಂದಾಯಿಸಿಕೊಳ್ಳುವುದಕ್ಕೆ ಅವಕಾಶ ನೀಡಲಿದೆ. ವಿದ್ಯಾರ್ಥಿನಿಯರಿಗೆ ವಿವಿಧ ಹಂತಗಳಲ್ಲಿ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ ಸ್ಪರ್ಧೆ ನಡೆಸಲಿದೆ. ಅಂತಿಮವಾಗಿ 100 ವಿದ್ಯಾರ್ಥಿನಿಯರನ್ನು ಈ ಯೋಜನೆಗೆ ಆಯ್ಕೆ ಮಾಡಿಕೊಳ್ಳಲಿದೆ. ವಿದ್ಯಾರ್ಥಿನಿಯರು ರೂಪಿಸಿದ ಪ್ರೋಟೋ ಟೈಪ್ ಮಾಡೆಲ್‌ಗಳಿಗೆ ಆರ್ಥಿಕ ಸಹಾಯ ನೀಡುವ ಮೂಲಕ ಅವರ ಯೋಜನೆ ಗಳನ್ನು ದೊಡ್ಡಮಟ್ಟದಲ್ಲಿ ಅನುಷ್ಠಾನಕ್ಕೆ ವಿಟಿಯು ವೇದಿಕೆಯಾಗಲಿದೆ ಎಂದರು. ವಿಟಿಯು ಕುಲಪತಿ ಪ್ರೊ.ಎಸ್.ವಿದ್ಯಾಶಂಕರ್ ಮಾತನಾಡಿ, ಎಂಜಿನಿಯರಿಂಗ್ ಕ್ಷೇತ್ರದಲ್ಲಿ ಮಹಿಳೆಯರಿಗೆ ಹೆಚ್ಚಿನ ಆದ್ಯತೆ ನೀಡುವ ಮೂಲಕ ಅವರ ಪ್ರತಿಭೆ ಗುರುತಿಸಿ ಗೌರವಿಸುವುದಕ್ಕಾಗಿ ಈ ಯೋಜನೆ ರೂಪಿಸಿದ್ದೇವೆ. ಇದರ ಸಹಾಯಕ್ಕಾಗಿ ಹಲವಾರು ಕಂಪನಿಗಳು ಮುಂದೆ ಬಂದಿವೆ ಎಂದು ಹೇಳಿದರು. ವಿಪ್ರೋ ಸಿಇಒ ಸಂಜೀವ್ ಜೈನ್ ಇದ್ದರು.

ಇಂಡಕ್ಷನ್ ಒಲೆಯ ಜಿಎಸ್‌ಟಿ ತಗ್ಗಿಸಿ

ಬೆಂಗಳೂರು: ದೇಶಾದ್ಯಂತ ಭುಗಿಲೆದ್ದಿರುವ ಅಡುಗೆ ಅನಿಲ ಕೊರತೆಗೆ ತಕ್ಷಣದ ಪರಿಹಾರವಾಗಿ ಇಂಡಕ್ಷನ್ ಅಡುಗೆ ಉಪಕರಣಗಳ ಮೇಲಿನ ಸರಕು ಹಾಗೂ ಸೇವಾ ತೆರಿಗೆ (ಜಿಎಸ್‌ಟಿ)ಯನ್ನು ಶೂನ್ಯಕ್ಕಿಳಿಸುವಂತೆ ಲೋರ್ಮನ್ ಕಿಚನ್ ಸಲಕರಣೆಗಳ ಕಂಪನಿ ನಿರ್ದೇಶಕ ಡಾ. ಎಸ್.ಎನ್ ಚಂದ್ರಮೌಳಿ ಪ್ರಧಾನಿ ಮತ್ತು ಹಣಕಾಸು ಸಚಿವರನ್ನು ಒತ್ತಾಯಿಸಿದ್ದಾರೆ. ಈ ಕುರಿತು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿರುವ ಅವರು, ದೇಶದಲ್ಲಿ ಶುದ್ಧ ಮತ್ತು ಇಂಧನ-ಸಮರ್ಥ ಅಡುಗೆ ತಂತ್ರಜ್ಞಾನದ ಅಳವಡಿಕೆಯನ್ನು ಇನ್ನಷ್ಟು ಜನಪ್ರಿಯಗೊಳಿಸಲು ಇಂಡಕ್ಷನ್ ಅಡುಗೆ ಉಪಕರಣಗಳ ಮೇಲಿನ ಜಿಎಸ್‌ಟಿಯನ್ನು ಶೂನ್ಯಕ್ಕಿಸಬೇಕು. ಇಂಡಕ್ಷನ್ ಅಡುಗೆ ವ್ಯವಸ್ಥೆಗಳು ಪರಿಸರ ಸ್ನೇಹಿ ಮತ್ತು ಅವುಗಳ ಇಂಧನ ದಕ್ಷತೆ ಅತಿ ಹೆಚ್ಚಿನದು. ಅವುಗಳ ವ್ಯಾಪಕ ಅಳವಡಿಕೆಯು ಆಮದು ಮಾಡಿಕೊಳ್ಳಲಾಗುವ ಎಲ್‌ಪಿಜಿ ಅನಿಲ ಹಾಗೂ ಇತರ ಪೆಟ್ರೋಲಿಯಂ ಇಂಧನಗಳ ಮೇಲಿನ ದೇಶದ ಅವಲಂಬನೆಯನ್ನು ಗಮನಾರ್ಹವಾಗಿ ಕಡಿಮೆ ಮಾಡುತ್ತದೆ. ಇಂಡಕ್ಷನ್ ಅಡುಗೆ ಉಪಕರಣಗಳು ಪರಿಸರ ಸ್ನೇಹಿ. ಇವುಗಳ ಮೇಲಿನ ಜಿಎಸ್‌ಟಿ ಶೂನ್ಯಕ್ಕಿಳಿಸಿದರೆ, ಅವುಗಳ ಬಳಕೆಯನ್ನು ಇನ್ನಷ್ಟು ಹೆಚ್ಚಿಸಲು ಸಾಧ್ಯವಿದೆ ಎಂದರು.

ಸಿಲಿಂಡರ್ ಬದಲು ಸೌದೆ ಶೇಖರಿಸುತ್ತಿರುವ ಹೋಟೆಲ್‌ಗಳು, ಚಿತಾಗಾರಗಳಲ್ಲಿ ಸೌದೆ ಅಭಾವ

ಸಿಗದ ಸಿಲಿಂಡರ್; ಸೌದೆಗೆ ಹೆಚ್ಚಿದ ಬೇಡಿಕೆ

ಅಪರ್ಣಾ ಎ.ಎಸ್ ಬೆಂಗಳೂರು

ಮಧ್ಯಪ್ರಾಚ್ಯದಲ್ಲಿನ ಯುದ್ಧದಿಂದಾಗಿ ಶುರುವಾಗಿರುವ ಸಿಲಿಂಡರ್ ಅಭಾವ ಒಂದೆಡೆಯಾದರೆ, ಸಿಲಿಂಡರ್ ಸಿಗುತ್ತಿಲ್ಲವೆಂದು ಹೋಟೆಲ್, ಕಲ್ಯಾಣ ಮಂಟಪಗಳು ಸೌದೆ ಮೊರೆ ಹೋಗಿರುವುದರಿಂದ ಏಕಾಏಕಿ ಸೌದೆಗಳಿಗೆ ಭಾರಿ ಬೇಡಿಕೆ ಬಂದಿರುವುದು ಮತ್ತೊಂದು ಸಮಸ್ಯೆಯನ್ನು ಸೃಷ್ಟಿಸಿದೆ.

ವಾಣಿಜ್ಯ ಬಳಕೆಯ ಸಿಲಿಂಡರ್‌ಗಳು ಸಂಖ್ಯೆಯಲ್ಲಿ ಭಾರಿ ಅಭಾವ ಸೃಷ್ಟಿಯಾಗಿರುವುದರಿಂದ ಅನಿವಾರ್ಯವಾಗಿ ಪರ್ಯಾಯ ಮಾರ್ಗದತ್ತ ಹೋಟೆಲ್ ಮಾಲೀಕರು ಆಲೋಚಿಸುತ್ತಿದ್ದಾರೆ. ಸದ್ಯದ ಪರಿಸ್ಥಿತಿಯಲ್ಲಿ ಕಟ್ಟಿಗೆಯ ಬಳಕೆಯೇ ಸುಲಭ ಆಯ್ಕೆಯಾಗಿರುವುದರಿಂದ ಅನೇಕ ಹೋಟೆಲ್ ಮಾಲೀಕರು ಸೌದೆ ಒಲೆಯ ಮೂಲಕ ಆಹಾರ ತಯಾರಿಸುತ್ತಿದ್ದಾರೆ. ಆದರೆ ಈ ರೀತಿ ಸೌದೆಯನ್ನು ಹೋಟೆಲ್‌ಗಳು ಬಳಸಲು ಶುರು ಮಾಡಿದ್ದರಿಂದ ಬೆಂಗಳೂರಿನ ಚಿತಾಗಾರದಲ್ಲಿ ಸೌದೆ ಸಮಸ್ಯೆ ಶುರುವಾಗಿದೆ ಎನ್ನುವ ಮಾತುಗಳು ಕೇಳಿಬರುತ್ತಿದೆ.

ಕಳೆದ ಕೆಲ ದಿನಗಳಿಂದ ಎಲ್‌ಪಿಜಿ ಗ್ಯಾಸ್ ಪೂರೈಕೆಯಲ್ಲಾಗಿರುವ ವ್ಯತ್ಯಯದಿಂದಾಗಿ ನಗರದ ಹೋಟೆಲ್, ದೇವಾಲಯ, ಕಾಲೇಜು ಮೆಸ್, ಚಿತಾಗಾರಗಳಲ್ಲಿ ಕಟ್ಟಿಗೆಗಳ ಬಳಕೆ ಹೆಚ್ಚಾಗುತ್ತಿದ್ದು, ಅಗತ್ಯ ಸಿಲಿಂಡರ್‌ಗಳ ಪೂರೈಕೆಯಲ್ಲಾಗುತ್ತಿರುವ ವ್ಯತ್ಯದಿಂದಾಗಿ ಅನಿವಾರ್ಯವಾಗಿ ಜನರು ಮತ್ತೆ ಸಾಂಪ್ರದಾಯಿಕ ಕಟ್ಟಿಗೆ ವ್ಯವಸ್ಥೆಯನ್ನೇ ಆಶ್ರಯಿಸುವಂತಾಗಿದೆ. ಗ್ಯಾಸ್ ಬದಲು ಸೌದೆ ಬಳಕೆ ಹೆಚ್ಚಾಗಿರುವುದರಿಂದ ಸೌದೆ ಸ್ಟಾಕ್ ಖಾಲಿಯಾಗಿದೆ. ಇದರೊಂದಿಗೆ ಬೇಡಿಕೆ ಹೆಚ್ಚಾಗಿರುವುದರಿಂದ ಸೌದೆಗಳನ್ನು ಮುಂಜಾಗ್ರತಾ ಕ್ರಮವಾಗಿ ಹೆಚ್ಚೆಚ್ಚು ಸಂಗ್ರಹ ಮಾಡಿಕೊಳ್ಳಲಾಗುತ್ತಿದ್ದು, ಗ್ಯಾಸ್‌ಗೆ ಪರ್ಯಾಯವಾಗಿ ಕಟ್ಟಿಗೆ ಬಳಕೆ ಹೆಚ್ಚಾಗುತ್ತಿದೆ.

ವಾಣಿಜ್ಯ ಸಿಲಿಂಡರ್‌ಗಳ ಅಭಾವದಿಂದಾಗಿ ಮನೆಗಳಲ್ಲಿ, ಹೋಟೆಲ್‌ಗಳಿಂದ ಕಟ್ಟಿಗೆಗೆ ಬೇಡಿಕೆ ಹೆಚ್ಚಾಗಿದ್ದು, ಅನೇಕ ಕಟ್ಟಿಗೆಗಳ ಅಂಗಡಿಗಳನ್ನು ಸಂಪರ್ಕಿಸಿ ಸೌದೆಗಳನ್ನು ಖರೀದಿಸಿ ಶೇಖರಿಸಿಟ್ಟುಕೊಳ್ಳುತ್ತಿರುವುದರಿಂದ ಕಟ್ಟಿಗೆಗಳ ಕೊರತೆಯುಂಟಾಗುವ ಸಾಧ್ಯತೆಯಿದೆ ಎಂದು ಹೇಳಲಾಗುತ್ತಿದೆ. ನಗರದ ಹಲವು ಹೋಟೆಲ್‌ಗಳು ಕಟ್ಟಿಗೆಗಳನ್ನೇ ಬಳಕೆ ಮಾಡಿಕೊಂಡು ಮಿತಿಯಲ್ಲಿ ಊಟೋಪಹಾರಗಳನ್ನು ತಯಾರಿಸಲು ಮುಂದಾಗಿದ್ದು, ಮುಂದೊಂದು ದಿನ ಸಿಲಿಂಡರ್‌ಗಳು ದೊರೆಯದಿದ್ದರೆ ಸೌದೆಗಳ ಅಭಾವವುಂಟಾಗಬಹುದು ಎನ್ನುವ ಕಾರಣದಿಂದಾಗಿ ಅಂಗಡಿಗಳಿಂದ ಮುಂಜಾಗ್ರತಾ ಕ್ರಮವಾಗಿ ಅಪಾರ ಮೊತ್ತದ ಸೌದೆಗಳನ್ನು ಖರೀದಿಸಿ ಸಂಗ್ರಹಿಸುತ್ತಿದ್ದಾರೆ. ಜತೆಗೆ ಸಾರ್ವಜನಿಕರೂ ಹಳೆಯ ಒಲೆ ಅಡಿಗೆ ಮಾಡಿಕೊಳ್ಳಲು ಮುಂದಾಗಿದ್ದು, ವಿದ್ಯುತ್ ಕಡಿತ, ಎಲ್‌ಪಿಜಿ ಕೊರತೆಯ ಹೊರತಾಗಿ ಕಟ್ಟಿಗೆಗಳನ್ನೇ ಬಳಸಿಕೊಳ್ಳಲು ಸಂಗ್ರಹಕ್ಕೆ ಮುಂದಾಗಿದ್ದಾರೆ ಎಂದು ಹೇಳಲಾಗುತ್ತಿದೆ.

ಚಿತಾಗಾರಗಳಲ್ಲಿ ಸೌದೆಗೆ ಬೇಡಿಕೆ: ನಗರದ ಹೆಬ್ಬಾಳ, ಚಾಮರಾಜಪೇಟೆ ಚಿತಾಗಾರಗಳಲ್ಲಿ ಅಂತ್ಯ ಸಂಸ್ಕಾರಕ್ಕಾಗಿ ಹಿಂದೂ ರುದ್ರ ಭೂಮಿಗಳಲ್ಲಿ ಸೌದೆಗಳನ್ನು ಸಂಗ್ರಹಿಸಲಾಗುತ್ತಿದ್ದು, ಗ್ಯಾಸ್ ಬಳಸಿಕೊಳ್ಳಲಾಗುತ್ತಿರುವ ಶವಸಂಸ್ಕಾರದ ಬದಲಿಗೆ ಸೌದೆಯನ್ನು ಬಳಸಿಕೊಂಡು ಅಂತ್ಯಸಂಸ್ಕಾರ ಮಾಡಲಾಗುತ್ತಿದೆ. ಈ ಹಿನ್ನಲೆಯಲ್ಲಿ ಹಲವು ಚಿತಾಗಾರಗಳಲ್ಲಿ ಕಟ್ಟಿಗೆಗಳನ್ನು ಶೇಖರಿಸಿಡಲಾಗುತ್ತಿದ್ದು, ಇದಕ್ಕಾಗಿ ಹಲವರನ್ನು ಸಂಪರ್ಕಿಸಿ ಕಟ್ಟಿಗೆಗಳನ್ನು ತರಿಸಿಕೊಳ್ಳಲಾಗುತ್ತಿದೆ ಎಂದು ಮಾಹಿತಿ ಲಭ್ಯವಾಗಿದೆ.

ವಿದ್ಯುತ್ ಚಿತಾಗಾರಗಳಿದ್ದರೂ ಕೆಲವರು ಸೌದೆಯನ್ನೇ ಬಳಸಿ ಅಂತ್ಯ ಸಂಸ್ಕಾರಕ್ಕೆ ಬಳಸಲಾಗುತ್ತಿದೆ. ಎಲ್ಲಾ ಸಮಯದಲ್ಲಿ ವಿದ್ಯುತ್ ಇಲ್ಲದ ಹಿನ್ನೆಲೆ ಈ ಕ್ರಮಕ್ಕೆ ಮುಂದಾಗಿದ್ದು, ವಿದ್ಯುತ್ ಚಿತಾಗಾರಗಳಿಗೆ ಆಗಮಿಸುವ ದೇಹಗಳನ್ನು ಸೌದೆ ಬಳಸಿಕೊಂಡು ಅಂತ್ಯ ಸಂಸ್ಕಾರ ಮಾಡಲಾಗುತ್ತಿರುವುದರಿಂದ ಕಟ್ಟಿಗೆಯ ಅಭಾವ ಉಂಟಾಗಬಾರದು ಎನ್ನುವ ಕಾರಣದಿಂದಾಗಿ ಹೆಚ್ಚುವರಿಯಾಗಿ ಸೌದೆಗಳನ್ನು ಸಂಗ್ರಹಿಸಲಾಗುತ್ತಿದೆ. ಕೋಲಾರ, ಹೊಸಕೋಟೆ ಮಾಲೂರಿನಿಂದ ಸೌದೆಗಳನ್ನು ಲೋಡ್ ಮಾಡಲಾಗುತ್ತಿದ್ದು, ಅಲ್ಲಿಂದ ಚಿತಾಗಾರಗಳಿಗೆ ಮುನ್ನೆಚ್ಚರಿಕಾ ಕ್ರಮವಾಗಿ ಕಟ್ಟಿಗೆಗಳನ್ನು ಸಂಗ್ರಹ ಮಾಡಿಕೊಳ್ಳಲಾಗುತ್ತಿದೆ.

ಈಗಾಗಲೇ ಅನೇಕ ಕಡೆಗಳಲ್ಲಿ ಬಹುತೇಕ ಹೋಟೆಲ್‌ಗಳು ಸೌದೆ ಖರೀದಿಸಿದ್ದು, ಮತ್ತಷ್ಟು ಕಡೆಗಳಲ್ಲಿ ಸಂಗ್ರಹಿಸಲು ಮುಂದಾಗಿರುವುದರಿಂದ ಮುಂದಿನ ದಿನಗಳಲ್ಲಿ ಅಭಾವವುಂಟಾಗಬಹುದು ದೊರೆಯದೇ ಹೋದರೆ ಎನ್ನುವ ಭಯದಿಂದ ಶೇಖರಣೆಗೆ ಅಡ್ವಾನ್ಸ್ ಆಗಿ ಆರ್ಡರ್ ಮಾಡಲಾಗುತ್ತಿದೆ. ಇನ್ನು ಇದರ ಜತೆಗೆ ಚಿತಾಗಾರಗಳಲ್ಲಿ 10-12 ಸ್ಲಾಟ್‌ಗಳಲ್ಲಿ ಅಂತ್ಯ ಸಂಸ್ಕಾರವನ್ನು ಕೈಗೊಳ್ಳಲಾಗುತ್ತಿದ್ದು, ವಿದ್ಯುತ್ ಕೈಕೊಟ್ಟರೆ ಕಟ್ಟಿಗೆಯನ್ನೇ ಬಳಸಿಕೊಳ್ಳಲು ಜನರು ಮುಂದಾಗಿದ್ದಾರೆ. ಸದ್ಯ ಇರುವ ಸ್ಟಾಕ್ ಖಾಲಿಯಾದರೆ ಮುಂದಿನ ದಿನಗಳಲ್ಲಿ ಅತ್ಯಂತ ಅಗತ್ಯ ಬಿದ್ದರೆ ಸಮಸ್ಯೆಯಾಗಬಹುದು ಎನ್ನುವ ಕಾರಣಕ್ಕೆ ಮುಂಜಾಗ್ರತಾ ಕ್ರಮವಾಗಿ ಕಟ್ಟಿಗೆಗಳನ್ನು ಸಂಗ್ರಹಿಸಿಡಲಾಗುತ್ತಿದೆ.

ಕಟ್ಟಿಗೆ ಕಡಿಯಲು ನಿರ್ಬಂಧ

ಇನ್ನು ಬೇಡಿಕೆಗೆ ಅನುಗುಣವಾಗಿ ಸೌದೆಯನ್ನು ಒದಗಿಸಲು ಅರಣ್ಯ ಇಲಾಖೆ ಅವಕಾಶ ನೀಡುತ್ತಿಲ್ಲ. ಮರಗಳನ್ನು ಕಡಿಯುವುದು ಗಮನಕ್ಕೆ ಬಂದರೆ ಪ್ರಕರಣ ದಾಖಲಿಸುವುದಾಗಿ ಹೇಳುತ್ತಿರುವುದರಿಂದ, ಕಟ್ಟಿಗೆಯನ್ನು ಕಡಿಯಲು ಅನೇಕರು ಹಿಂದೇಟು ಹಾಕುತ್ತಿದ್ದಾರೆ. ಇದರೊಂದಿಗೆ ಕಟ್ಟಿಗೆ ಕಡಿಯುವ ಪ್ರಮಾಣ ಹೆಚ್ಚಾಗುವುದನ್ನು ಅರಿತಿರುವ ಅರಣ್ಯ ಇಲಾಖೆ ಸಿಬ್ಬಂದಿಗಳು ಹದ್ದಿನ ಕಣ್ಣು ಇಟ್ಟಿರುವುದರಿಂದ, ಮರಕ್ಕೆ ಕೊಡಲಿ ಹಾಕಲು ಸಾಧ್ಯವಾಗುತ್ತಿಲ್ಲ. ಇದು ಸಹ ಸೌದೆಯ ಕೊರತೆಗೆ ಕಾರಣ ಎನ್ನಲಾಗುತ್ತಿದೆ.

ಸೌದೆಗೆ ಭಾರಿ ಬೇಡಿಕೆಯುಂಟಾಗಿದೆ. ಈಗಿರುವ ಕಟ್ಟಿಗಳ ಸಂಗ್ರಹ ಖಾಲಿಯಾದರೆ ಎನ್ನುವ ಆತಂಕದಿಂದ ಖರೀದಿಗೆ ಮುಂದಾಗಿದ್ದೇವೆ. ಈ ಹಿಂದೆ ಗ್ಯಾಸ್ ಮೂಲಕ, ವಿದ್ಯುತ್ ಮೂಲಕ ಅಂತ್ಯ ಸಂಸ್ಕಾರದ ಕಾರ್ಯ ನಡೆಯುತ್ತಿತ್ತು. ವಿದ್ಯುತ್ ಕೈಕೊಟ್ಟಾಗ ಗ್ಯಾಸ್ ಹಾಗೂ ಕಟ್ಟಿಗೆಯಲ್ಲಿ ಸಂಸ್ಕಾರ ನಡೆಸಲಾಗುತ್ತಿತ್ತು. ಆದರೆ ಈಗ ಸಿಲಿಂಡರ್ ಕೊರತೆಯಿಂದಾಗಿ ಸಂಪೂರ್ಣವಾಗಿ ಕಟ್ಟಿಗೆಯನ್ನೇ ಸಾರ್ವಜನಿಕರು ಅವಲಂಬಿಸಿದ್ದಾರೆ. ಹೀಗಾಗಿ ಸೌದೆಗಳ ಅಭಾವವುಂಟಾಗಬಾರದು ಎನ್ನುವ ಕಾರಣಕ್ಕೆ ಕೋಲಾರ, ಹೊಸಕೋಟೆ,ಮಾಲೂರಿನಿಂದ ಅಡ್ವಾನ್ಸ್ ಕೊಟ್ಟು ಕಟ್ಟಿಗೆಗಳನ್ನು ಲೋಡ್ ಮಾಡಿಸಿಕೊಳ್ಳುತ್ತಿದ್ದೇವೆ.

\- **ಮೂರ್ತಿ, ಹೆಬ್ಬಾಳ** ಚಿತಾಗಾರ ಸಿಬ್ಬಂದಿ

ಗ್ಯಾಸ್ ಸಿಲಿಂಡರ್ ಕೊರತೆ: ದೋಸೆ, ಇಡ್ಲಿ ಬೆಲೆ ಹೆಚ್ಚಳ

ಬೆಂಗಳೂರು: ನಗರದಲ್ಲಿ ಎಲ್‌ಪಿಜಿ ಗ್ಯಾಸ್ ಸಿಲಿಂಡರ್ ಕೊರತೆ ತೀವ್ರವಾದ ಹಿನ್ನೆಲೆ ಹೋಟೆಲ್ ಉದ್ಯಮಕ್ಕೆ ಭಾರಿ ಪೆಟ್ಟು ಬಿದ್ದಿದ್ದು, ದುಬಾರಿ ಬೆಲೆಗೆ ಸಿಲಿಂಡರ್ ಖರೀದಿಸಬೇಕಾದ ಅನಿವಾರ್ಯತೆಯಿಂದಾಗಿ ಇಡ್ಲಿ, ದೋಸೆ ಸೇರಿದಂತೆ ಆಹಾರ ಪದಾರ್ಥಗಳ ಬೆಲೆ ಹೆಚ್ಚಿಸಿವೆ.

ಅಮೆರಿಕ, ಇರಾನ್ ಮತ್ತು ಇಸ್ರೇಲ್ ಯುದ್ಧದ ಪರಿಣಾಮವಾಗಿ ಎಲ್‌ಪಿಜಿ ಗ್ಯಾಸ್ ಸಿಲಿಂಡರ ಕೊರತೆಯುಂಟಾಗಿದ್ದು, ನಗರದ ಹೋಟೆಲ್ ಮಾಲೀಕರಿಗೂ ಸಿಲಿಂಡರ್ ಕೊರತೆಯ ಬಿಸಿತಟ್ಟಿದೆ. ಈ ಹಿನ್ನೆಲೆ ಉದ್ಯಮವನ್ನು ಉಳಿಸಿಕೊಳ್ಳುವ ಸಲುವಾಗಿ ಅನಿವಾರ್ಯವಾಗಿ ಹೋಟೆಲ್ ಮಾಲೀಕರು ಆಹಾರ ಪದಾರ್ಥಗಳ ಬೆಲೆ ಯನ್ನು ಹೆಚ್ಚಿಸಿರುವುದರಿಂದ ಗ್ರಾಹಕರಿಗೂ ಬೆಲೆ ಏರಿಕೆಯ ಬಿಸಿ ಮುಟ್ಟಿದೆ. ವಿಶೇಷವಾಗಿ ಶಿವಾನಂದ ಸರ್ಕಲ್ ಪ್ರದೇಶದಲ್ಲಿರುವ ಬೆಂಗಳೂರು ಕೆಫೆ ಸೇರಿದಂತೆ ಕೆಲವು ಹೋಟೆಲ್‌ಗಳಲ್ಲಿ ತಿಂಡಿ ತಿನಿಸುಗಳ ದರವನ್ನು ಹೆಚ್ಚಿಸಲಾಗಿದೆ. ಎಲ್ಲ ತಿಂಡಿಗಳ ಮೇಲೂ ಸುಮಾರು 10 ರು.ಹೆಚ್ಚುವರಿ ದರ ವಿಧಿಸಲಾಗಿದೆ. ಹೋಟೆಲ್ ಮಾಲೀಕರು ಹಳೆಯ ದರದ ಪಕ್ಕದಲ್ಲೇ ಹೊಸ ದರವನ್ನು ಪ್ರದರ್ಶಿಸಿ ಗ್ರಾಹಕರಿಗೆ ಮಾಹಿತಿ ನೀಡಿದ್ದಾರೆ.

ದುಬಾರಿ ಮೊತ್ತದಲ್ಲಿ ಸಿಲಿಂಡರ್ ಮಾರಾಟ

ಸಾಮಾನ್ಯವಾಗಿ ದೊರೆಯುವ ಬೆಲೆಯಿಗಿಂತ ಒನ್ ಟು ಡಬಲ್ ದರ ನೀಡಿ ಸಿಲಿಂಡರ್ ಖರೀದಿಸಬೇಕಾದ ಪರಿಸ್ಥಿತಿ ಎದುರಾಗಿದ್ದು, ವ್ಯವಹಾರ ನಿಲ್ಲಿಸಲು ಸಾಧ್ಯವಿಲ್ಲದ ಕಾರಣ ಹೆಚ್ಚುವರಿ ಹಣ ನೀಡಿ ಗ್ಯಾಸ್ ಖರೀದಿಸಿ ಹೋಟೆಲ್ ನಡೆಸಬೇಕಾದ ಅನಿವಾರ್ಯತೆ ಎದುರಾಗಿದೆ. ಈ ಹೆಚ್ಚುವರಿ ಖರ್ಚಿನ ಪರಿಣಾಮವಾಗಿ ಇದೀಗ ಹಲವು ಆಹಾರ ಪದಾರ್ಥಗಳ ಬೆಲೆಯಲ್ಲಿಯೂ ಏರಿಕೆ ಮಾಡಲಾಗಿದೆ ಎಂದು ಹೋಟೆಲ್‌ನವರು ಹೇಳುತ್ತಾರೆ.

ರಾಜು ಸಮುದಾಯದ ಏಳಿಗಾಗಿ ಒಗ್ಗೂಡಿ

ಬೆಂಗಳೂರು: ನಮ್ಮ ರಾಜು ಸಮುದಾಯದ ಆರ್ಥಿಕ, ಸಾಮಾಜಿಕ, ರಾಜಕೀಯ ಅಭಿವೃದ್ಧಿಗಾಗಿ ಎಲ್ಲರೂ ಒಗ್ಗೂಡಬೇಕಾದ ಅವಶ್ಯಕತೆ ಇದೆ ಎಂದು ರಾಜಕೀಯ ಮುಖಂಡ ರವಿ ಬೋಸರಾಜು ಹೇಳಿದರು.

ಜಯನಗರದ ಚಾಮರಾಜು ಕಲ್ಯಾಣ ಮಂಟಪದಲ್ಲಿ ರಾಜು ಕ್ಷತ್ರೀಯ ಸಂಘವು ಯುಗಾದಿ ಹಬ್ಬದ ಪ್ರಯುಕ್ತ ಆಯೋಜಿಸಿದ್ದ ಸಾಧಕರಿಗೆ ಸನ್ಮಾನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ನಮ್ಮ ಸಮುದಾಯವು ಹಿಂದುಳಿದ ವರ್ಗಗಳಿಗೆ ಸೇರಲಿದೆ. ರಾಜ್ಯದಲ್ಲಿ 48 ಲಕ್ಷ ಜನರು ಈ ಹಿಂದುಳಿದ ವರ್ಗದಲ್ಲಿದ್ದಾರೆ. ನಮ್ಮಲ್ಲೇ ಆರು ಸಂಘಟನೆಗಳಿವೆ. ನಾವು ಪಕ್ಷಬೇಧ ಮರೆತು, ಸಮುದಾಯದ ಏಳಿಗಾಗಿ ಒಂದೇ ಸಂಘಟನೆಯನ್ನು ಬಲಿಷ್ಟಪಡಿಸಿ ಮುನ್ನಡೆಸಿಕೊಂಡು ಹೋಗಬೇಕಿದೆ ಎಂದರು.

ನಮ್ಮ ಸಮುದಾಯ ಒಳ್ಳೆಯ ಇತಿಹಾಸವನ್ನು ಹೊಂದಿದೆ. ಶ್ರೀಕೃಷ್ಣದೇವರಾಯರು ನಮ್ಮ ಜನಾಂಗಕ್ಕೆ ಸೇರಿದರಾಗಿದ್ದಾರೆ. ಸರಕಾರದ ಸವಲತ್ತುಗಳನ್ನು ನಾವು ಪಡೆದುಕೊಳ್ಳಬೇಕಾದರೆ, ನಾವು ಒಗ್ಗೂಡಬೇಕಿದೆ. ನಮ್ಮ ಸಮುದಾಯದವರಲ್ಲಿ ಉನ್ನತ ವ್ಯಾಸಂಗ ಮಾಡಿಕೊಂಡು ಉತ್ತಮ ಸ್ಥಾನ-ಮಾನ ಪಡೆದುಕೊಂಡಿರುವುದನ್ನು ಕಂಡು ಖುಷಿಯಾಗುತ್ತಿದೆ ಎಂದು ಹರ್ಷ ವ್ಯಕ್ತಪಡಿಸಿದರು.

ಅಖಿಲ ಭಾರತೀಯ ಕ್ಷತ್ರೀಯ ಒಕ್ಕೂಟದ ಅಧ್ಯಕ್ಷ ಪಿ.ವಿ.ಗಿರಿ ಮಾತನಾಡಿ, ನಮ್ಮ ಸಮುದಾಯದಲ್ಲಿರುವ ಜನರ ಸಂಖ್ಯೆ ತೀರಾ ಕಡಿಮೆ ಇದೆ. ಇದರಲ್ಲೂ ನಾವು ಒಡಕು ತೋರಿಸಿಕೊಳ್ಳಬಾರದು. ಎಲ್ಲರೂ ಸಮುದಾಯದ ಒಳಿತಿಗಾಗಿ ಒಗ್ಗೂಡಬೇಕು. ನಮ್ಮ ಸಮುದಾಯದವರು ಅನೇಕ ಮಂದಿ ವೈದ್ಯರಾಗಿರುವುದು ನಮ್ಮ ಸಮುದಾಯಕ್ಕೆ ಹೆಮ್ಮೆಯ ವಿಚಾರವಾಗಿದೆ. ಬಡವರ ಸೇವೆ ಮಾಡುವ ಮೂಲಕ ಹಿಂದುಳಿದವರ ಏಳಿಗೆಗಾಗಿ ಶ್ರಮಿಸುವಂತಾಗಲಿ ಎಂದು ಶುಭ ಹಾರೈಸಿದರು. ರಾಜು ಕ್ಷತ್ರೀಯ ಸಂಘದ ಪ್ರಧಾನ ಕಾರ್ಯದರ್ಶಿ ಪಿ.ಚಂದ್ರಶೇಖರ ರಾಜು ಮಾತನಾಡಿ, ಜೀವದಾನ ಅತಿ ಶ್ರೇಷ್ಠ ದಾನವಾಗಿದೆ. ಇದು ವೈದ್ಯರಿಂದ ಮಾತ್ರ ಸಾಧ್ಯ. ವೈದ್ಯರಾದ ನೀವು, ಆಸೆಗಳಿಗೆ ಒಳಗಾಗಿ ಕೇವಲ ಶ್ರೀಮಂತರಿಗೆ ಮಾತ್ರ ಗುಣಮಟ್ಟದ ಚಿಕಿತ್ಸೆ ನೀಡುವಂತೆ ಆಗಬಾರದು. ಬಡವರಿಗೂ ಗುಣಮಟ್ಟ ಚಿಕಿತ್ಸೆ ಕಲ್ಪಿಸಿಕೊಡಿ ಎಂದು ಮನವಿ ಮಾಡಿದರು. ಈ ವೇಳೆ ಸಮುದಾಯದ 50ಕ್ಕೂ ಹೆಚ್ಚಿನ ವೈದ್ಯರನ್ನು ಗುರುತಿಸಿ ಗೌರವಿಸಲಾಯಿತು. ಸಂಘದ ಅಧ್ಯಕ್ಷ ಗಣೇಶ ರಾಜು, ಕಾರ್ಯಾಧ್ಯಕ್ಷ ಕೆ.ಬಾಬು ರಾಜು ಇದ್ದರು.

ಪ್ರಧಾನಿ ಮೋದಿಗೆ ಪತ್ರ ಬರೆದ ರಸಪಾಕ ಹೋಟೆಲ್ ಮಾಲಕಿ

ಬೆಂಗಳೂರು: ವಾಣಿಜ್ಯ ಎಲ್‌ಪಿಜಿ ಅನಿಲದ ತೀವ್ರ ಕೊರತೆಯಿಂದ ಮಹಿಳಾ ಉದ್ಯಮಿಗಳು ಸಂಕಷ್ಟಕ್ಕೆ ಸಿಲುಕಿದ್ದು, ಈ ಸಮಸ್ಯೆಗೆ ತುರ್ತು ಪರಿಹಾರ ಒದಗಿಸುವಂತೆ ಬೆಂಗಳೂರಿನ ಗಾಂಧಿ ನಗರದ ರಸಪಾಕ ಹೋಟೆಲ್ ಮಾಲಕಿ ರೂಪಾ ಶಾಸ್ತ್ರಿ ಪ್ರಧಾನಿ ನರೇಂದ್ರ ಮೋದಿಗೆ ಪತ್ರ ಬರೆದಿದ್ದಾರೆ.

ಕರ್ನಾಟಕದ ನಾರಿ ಶಕ್ತಿ ಪರವಾಗಿ ಪತ್ರ ಬರೆದಿರುವ ಅವರು, ಕಳೆದ ಕೆಲವು ವಾರಗಳಿಂದ ವಾಣಿಜ್ಯ ಅಡುಗೆ ಅನಿಲದ ತೀವ್ರ ಕೊರತೆ ಮತ್ತು ಬೆಲೆ ಏರಿಕೆಯು ಹೋಟೆಲ್ ಉದ್ಯಮಕ್ಕೆ ದೊಡ್ಡ ಹೊಡೆತ ನೀಡಿದೆ. ಸಿಲಿಂಡರ್ ಪೂರೈಕೆಯಲ್ಲಿ ಶೇ.50ಕ್ಕೂ ಹೆಚ್ಚು ಕಡಿತವಾಗಿರುವುದರಿಂದ ಹೋಟೆಲ್‌ಗಳನ್ನು ನಡೆಸುವುದು ಕಷ್ಟವಾಗುತ್ತಿದೆ ಎಂದು ಪತ್ರದಲ್ಲಿ ಆತಂಕ ವ್ಯಕ್ತಪಡಿಸಿದ್ದಾರೆ. ಇದರ ಜತೆಗೆ ಸಿಲಿಂಡರ್ ಬೆಲೆ ಏರಿಕೆಯ ಪರಿಣಾಮ ಮಹಿಳಾ ಉದ್ಯಮಿಗಳ ಅಲ್ಪ ಲಾಭಾಂಶ ಸಂಪೂರ್ಣವಾಗಿ ಕಡಿಮೆಯಾಗಿದ್ದು, ಈ ಉದ್ಯಮವನ್ನು ನಂಬಿ ಬದುಕುತ್ತಿರುವ ಸಾವಿರಾರು ಮಹಿಳಾ ಕಾರ್ಮಿಕರ ಜೀವನೋಪಾಯಕ್ಕೂ ಹೊಡೆತ ಬಿದ್ದಿದೆ ಎಂದು ಪತ್ರದಲ್ಲಿ ಉಲ್ಲೇಖಿಸಿದ್ದಾರೆ. ಹೀಗಾಗಿ ಕರ್ನಾಟಕದ ಹೋಟೆಲ್ ಉದ್ಯಮಕ್ಕೆ ವಾಣಿಜ್ಯ ಎಲ್‌ಪಿಜಿ ಪೂರೈಕೆಯನ್ನು ತಕ್ಷಣ ಸುಗಮಗೊಳಿಸಬೇಕು. ಸಣ್ಣ ಹೋಟೆಲ್‌ಗಳಿಗೆ ಸಬ್ಸಿಡಿ ಅಥವಾ ಆರ್ಥಿಕ ಪ್ಯಾಕೇಜ್ ಘೋಷಿಸಬೇಕು ಎಂದು ಪ್ರಧಾನಿಗೆ ಮನವಿ ಮಾಡಿದ್ದಾರೆ.

ದೋಸೆ, ಚಿಕನ್ ಕರಿ ಜತೆಗೆ ಗ್ಯಾಸ್ ಶುಲ್ಕ

ಬೆಂಗಳೂರು: ನಗರದ ಜನಪ್ರಿಯ ಹೋಟೆಲ್ ಮಿಸ್ರ ಆಂಧ್ರ ಮೀಲ್ಸ್‌ನಲ್ಲಿ ತಿಂಡಿ ತಿಂದ ಗ್ರಾಹಕರೊಬ್ಬರಿಗೆ ಬಿಲ್‌ನಲ್ಲಿ ಗ್ಯಾಸ್ ಸಪ್ಲೈ ಶುಲ್ಕ ಹೆಸರಿನಲ್ಲಿ ಹೆಚ್ಚುವರಿ 30 ರು. ವಿಧಿಸಿದ್ದು, ಸಾಮಾಜಿಕ ಜಾಲತಾಣದಲ್ಲಿ ಭಾರಿ ಸದ್ದು ಮಾಡುತ್ತಿದೆ.

ಗ್ರಾಹಕರು ತಾವು ತಂಗಿದ್ದ ಪಿಜಿಯಲ್ಲಿ ಆಹಾರದ ಕೊರತೆಯಿದ್ದ ಕಾರಣ ಹೋಟೆಲ್‌ನಲ್ಲಿ ತಿಂಡಿಗೆಂದು ಹೋಗಿದ್ದರು. ಅಲ್ಲಿ ಇಂತಹ ವಿಚಿತ್ರ ಶುಲ್ಕ ವಿಧಿಸಿರುವುದನ್ನು ಕಂಡು, ಇದು ಎಲ್‌ಪಿಜಿ ಕೊರತೆ ಎಂಬ ಹೆಸರು ಬಳಸಿಕೊಂಡು ನಡೆಯುತ್ತಿರುವ ದೊಡ್ಡ ಹಗರಣ ಎಂದು ಆರೋಪಿಸಿದ್ದಾರೆ. ಸಾಮಾಜಿಕ ಜಾಲತಾಣಗಳಲ್ಲಿ ಬಿಲ್‌ನ ಫೋಟೋ ಹಂಚಿಕೊಂಡಿರುವ ಅವರು, ಬೆಂಗಳೂರು ಪೊಲೀಸರಿಗೆ ದೂರು ನೀಡುವಂತೆ ಟ್ಯಾಗ್ ಮಾಡಿ, ಹೋಟೆಲ್‌ಗಳು ಜನರನ್ನು ಲೂಟಿ ಮಾಡುತ್ತಿವೆ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಬೆಂಗಳೂರು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಪಿ.ಸಿ.ರಾವ್ ಪ್ರತಿಕ್ರಿಯಿಸಿದ್ದು, ಈ ಹೋಟೆಲ್ ತಮ್ಮ ಸದಸ್ಯತ್ವವನ್ನು ಹೊಂದಿಲ್ಲ ಮತ್ತು ಈ ವಿಷಯದ ಬಗ್ಗೆ ಗಮನ ಹರಿಸಲಾಗುವುದು. ಅಲ್ಲದೆ, ಇಂತಹ ಪದ್ಧತಿ ಕೈಬಿಡುವಂತೆ ಹೋಟೆಲ್ ಆಡಳಿತ ಮಂಡಳಿಯೊಂದಿಗೆ ಮಾತನಾಡಲಾಗುವುದು ಎಂದರು.

ಸಾಮಾಜಿಕ ಜಾಲತಾಣದಲ್ಲಿ ಗ್ರಾಹಕರು ಇದನ್ನು 'ದೊಡ್ಡ ವಂಚನೆ' ಎಂದು ಕರೆದಿದ್ದಾರೆ ಮತ್ತು ಎಲ್‌ಪಿಜಿ ಕೊರತೆಯ ಲಾಭವನ್ನು ಹೋಟೆಲ್ ಪಡೆದುಕೊಳ್ಳುತ್ತಿದೆ. ಈ ರೀತಿ ಸಾರ್ವಜನಿಕರನ್ನು ಲೂಟಿ ಮಾಡಲಾಗುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ನಗರದಲ್ಲಿ ಆಯೋಜಿಸಿರುವ ಭಾರತೀಯ ಕೈಮಗ್ಗ ಪರಂಪರೆ ಪ್ರದರ್ಶನ ಉದ್ಘಾಟಿಸಿದ ಸಚಿವ ಶಿವಾನಂದ ಪಾಟೀಲ ಅವರು ಮಳಿಗೆಗಳಿಗೆ ಭೇಟಿ ನೀಡಿ ಕೈಮಗ್ಗ ಉತ್ಪನ್ನಗಳನ್ನು ವೀಕ್ಷಿಸಿದರು. ಈ ವೇಳೆ ಕಾವೇರಿ ಹ್ಯಾಂಡ್ ಲೂಮ್ ಅಧ್ಯಕ್ಷ ಬಿ.ಜೆ. ಗಣೇಶ್, ಜವಳಿ ಇಲಾಖೆ ಅಧಿಕಾರಿಗಳಾದ ಪ್ರಭಾಕರಣ್, ಪ್ರಕಾಶ್, ಯೋಗೇಶ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಕೈಮಗ್ಗ ಪರಂಪರೆ ಪ್ರದರ್ಶನ ಉದ್ಘಾಟಿಸಿದ ಶಿವಾನಂದ ಪಾಟೀಲ

ಯಶವಂತಪುರದಲ್ಲಿ ಟೆಕ್ಸ್‌ಟೈಲ್ ಮಾರ್ಕೆಟ್

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಪಾರಂಪರಿಕ ಕಲೆಯನ್ನು ಉಳಿಸಿ ಬೆಳೆಸುವ ನಿಟ್ಟಿನಲ್ಲಿ ನಮ್ಮ ಉತ್ಪನ್ನಗಳಿಗೆ ನಮ್ಮಲ್ಲೇ ಮಾರುಕಟ್ಟೆ ವ್ಯವಸ್ಥೆ ಕಲ್ಪಿಸಲು ಯಶವಂತ ಪುರದಲ್ಲಿರುವ ಇಲಾಖೆಯ ಒಂದೂವರೆ ಎಕರೆ ಪ್ರದೇಶದಲ್ಲಿ ಕಟ್ಟಡ ನಿರ್ಮಿಸಲಾಗುವುದು ಎಂದು ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ ತಿಳಿಸಿದರು.

ರಾಜಾಜಿನಗರದ ಡಾ. ಬಿ.ಆರ್. ಅಂಬೇಡ್ಕರ್ ಸ್ಟೇಡಿಯಂನಲ್ಲಿ ಆಯೋಜಿಸಿದ್ದ 14 ದಿನಗಳ ಭಾರತೀಯ ಕೈಮಗ್ಗ ಪರಂಪರೆ ಪ್ರದರ್ಶನ ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸಿಎಂ ಜತೆ ಚರ್ಚಿಸಿ ಶೀಘ್ರದಲ್ಲಿ ಶಂಕುಸ್ಥಾಪನೆ ನೆರವೇರಿಸಲು ಪ್ರಯತ್ನಿಸಲಾಗುವುದು. ಪಾರಂಪರಿಕ ಕಲೆ ನಶಿಸಿ ಹೋಗುತ್ತಿದೆ. ಈ ಕಲೆಯನ್ನು ಉಳಿಸಿ ಬೆಳೆಸಲು ಉತ್ಪನ್ನಗಳಿಗೆ ಸ್ಥಳೀಯ ಮಾರುಕಟ್ಟೆ ಕಲ್ಪಿಸಬೇಕಾಗಿದೆ. ಯಶವಂತಪುರದಲ್ಲಿ ನಿರ್ಮಿಸಲು ಉದ್ದೇಶಿಸಿರುವ ಕಟ್ಟಡದಲ್ಲಿ ಕೈಮಗ್ಗ ಉತ್ಪನ್ನಗಳು, ಚನ್ನಪಟ್ಟಣದ ಗೊಂಬೆ, ಕುಂಬಾರಿಕೆ ಸೇರಿದಂತೆ ಎಲ್ಲ ರೀತಿಯ ಪಾರಂಪರಿಕ ಕಲೆಯ ಉತ್ಪನ್ನಗಳ ಮಾರಾಟಕ್ಕೆ ಅವಕಾಶ ಕಲ್ಪಿಸಲು ಯೋಜಿಸಲಾಗಿದೆ ಎಂದರು. ರಾಜ್ಯದ ಕೈಮಗ್ಗ ಉತ್ಪನ್ನಗಳು ಹೊರ ರಾಜ್ಯಗಳಲ್ಲಿ ಬೇರೆ ಬೇರೆ ಬ್ರ್ಯಾಂಡ್‌ಗಳಲ್ಲಿ ಮಾರಾಟವಾಗುತ್ತಿವೆ. ನಮ್ಮದೇ ಉತ್ಪನ್ನಗಳು ಬೇರೆ ರಾಜ್ಯಗಳಿಂದ ಬೇರೆ ಬ್ರ್ಯಾಂಡ್‌ಗಳ ರೂಪದಲ್ಲಿ ರಾಜ್ಯಕ್ಕೆ ಬರುತ್ತಿವೆ. ಸ್ಥಳೀಯವಾಗಿ ಮಾರುಕಟ್ಟೆ ವ್ಯವಸ್ಥೆ ಕಲ್ಪಿಸಿದರೆ ಈ ಸಮಸ್ಯೆಗೆ ಪರಿಹಾರ ಸಿಗಲಿದೆ. ಕೈಮಗ್ಗ ಕೇವಲ ಉತ್ಪಾದನಾ ಕ್ಷೇತ್ರವಷ್ಟೇ ಅಲ್ಲ, ಅದು ಭಾರತದ ಸಾಂಸ್ಕೃತಿಕ ಗುರುತು. ಕೈಗಾರಿಕೆ ಮತ್ತು ಪರಂಪರೆಯನ್ನು ಪ್ರತಿಬಿಂಬಿಸುವ ಜೀವಂತ ಸಂಪ್ರದಾಯ. ನಮ್ಮ ನೇಕಾರರು ಪೀಳಿಗೆಯಿಂದ ಪೀಳಿಗೆಗೆ ತಂತ್ರಜ್ಞಾನ ಹಾಗೂ ವಿನ್ಯಾಸವನ್ನು ಸಂರಕ್ಷಣೆ ಮಾಡಿಕೊಂಡು ಬಂದಿದ್ದು, ಅದರ ಫಲವಾಗಿ ಭಾರತೀಯ ಕೈಮಗ್ಗ ಉತ್ಪನ್ನಗಳು ವಿಶ್ವದಾದ್ಯಂತ ಪ್ರಶಂಸೆಗೆ ಪಾತ್ರವಾಗಿವೆ ಎಂದರು.ಕಾವೇರಿ ಹ್ಯಾಂಡ್ ಲೂಮ್ ಅಧ್ಯಕ್ಷ ಬಿ.ಜೆ. ಗಣೇಶ್ ಮಾತನಾಡಿ, ಕೈಮಗ್ಗ ಉತ್ಪನ್ನಗಳು ಸೇರಿ ಸಾಂಪ್ರದಾಯಿಕ ಕಲೆಯ ಎಲ್ಲ ಉತ್ಪನ್ನಗಳು ಒಂದೇ ಸೂರಿನಡಿ ಸಿಗುವಂತೆ ಮಾರುಕಟ್ಟೆ ಕಲ್ಪಿಸಬೇಕು ಹಾಗಾಗಿ ಈ ಪ್ರದರ್ಶನ ಆಯೋಜಿಸಲಾಗಿದೆ.

ಮೇಳದಲ್ಲಿ 80 ಮಳಿಗೆಗಳಿದ್ದು, ರಾಜ್ಯದ ಕೈಮಗ್ಗ ಉತ್ಪನ್ನಗಳೊಂದಿಗೆ ಕಾಶ್ಮೀರ, ಹರಿಯಾಣ, ರಾಜಸ್ಥಾನ ಹಾಗೂ ಇತರ ಹಲವು ರಾಜ್ಯಗಳ ಕೈಮಗ್ಗ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟ ವ್ಯವಸ್ಥೆ ಮಾಡಲಾಗಿದೆ ಎಂದರು. ಈ ವೇಳೆ ಜವಳಿ ಇಲಾಖೆ ಅಧಿಕಾರಿಗಳಾದ ಪ್ರಭಾಕರಣ್, ಪ್ರಕಾಶ್, ಯೋಗೇಶ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಅಂತಿಮ ಹಂತದಲ್ಲಿ ಜವಳಿ ನೀತಿ

2026-30 ಅವಧಿಯ ನೂತನ ಜವಳಿ ನೀತಿ ಅಂತಿಮ ಹಂತಕ್ಕೆ ಬಂದಿದೆ. ಮೆಗಾ ಮತ್ತು ಮಿನಿ ಇಂಡಸ್ಟ್ರೀಸ್‌ಗಳನ್ನು ಒಂದೇ ಸೂರಿನ ಅಡಿಯಲ್ಲಿ ತರುವ ಪ್ರಯತ್ನ ನಡೆದಿದೆ. ಕಲಬುರಗಿಯಲ್ಲಿ ನಿರ್ಮಾಣವಾಗುತ್ತಿರುವ ಪಿಎಂ ಮಿತ್ರ ನೂಲಿನಿಂದ ಬಟ್ಟೆ ಹಂತದವರೆಗೆ ಎಲ್ಲ ಚಟುವಟಿಕೆಗಳು ಪಾರ್ಕ್ ಒಂದೇ ಸೂರಿನ ಅಡಿಯಲ್ಲಿ ಬರಲಿವೆ. ಈ ಯೋಜನೆ ಅನುಷ್ಠಾನವಾದರೆ ಕರ್ನಾಟಕ ದಲ್ಲಿ ಮೈಲಿಗಲ್ಲು ಸಾಧಿಸಲಿದೆ ಎಂದು ಸಚಿವ ಶಿವಾನಂದ ಪಾಟೀಲ ತಿಳಿಸಿದರು.

ಬತ್ತಿದ ಬೋರ್‌ವೆಲ್ ಧೋಬಿಘಾಟ್‌ಗೆ ಕಷ್ಟ

ಬೆಂಗಳೂರು: ನಗರದಲ್ಲಿ ಒಂದೆಡೆ ಗ್ಯಾಸ್ ಸಿಲಿಂಡರ್ ಅಭಾವವಾದರೆ ಮತ್ತೊಂದೆಡೆ ಬಿಸಿಲಿನ ತಾಪದಿಂದಾಗಿ ವಿವಿಧೆಡೆಗಳಲ್ಲಿರುವ ಧೋಬಿ ಘಾಟ್‌ಗಳ ಬಾವಿಯಲ್ಲಿ ನೀರಿನ ಪ್ರಮಾಣವೂ ತಗ್ಗಿದೆ. ನೀರಿನ ಅಭಾವದಿಂದಾಗಿ ಹೋಟೆಲ್‌ಗಳು, ಆಸ್ಪತ್ರೆಗಳು ಮತ್ತು ಖಾಸಗಿ ಡ್ರೈ ಕ್ಲೀನರ್‌ಗಳನ್ನು ಗ್ರಾಹಕರಾಗಿ ಹೊಂದಿರುವ ವಾಶರ್ ಮ್ಯಾನ್‌ಗಳಿಗೆ ಸಮಸ್ಯೆ ಅನುಭವಿಸುವಂತಾಗಿದೆ. ನಗರದಲ್ಲಿ 30ಕ್ಕೂ ಹೆಚ್ಚು ಧೋಬಿ ಘಾಟ್‌ಗಳಿದ್ದು, ಇವುಗಳಲ್ಲಿ ಹೆಚ್ಚಿನವು ಸಾಂಪ್ರದಾಯಿಕ ಬಾವಿಗಳು ಮತ್ತು ಬೋರ್‌ವೆಲ್‌ಗಳನ್ನು ಅವಲಂಬಿಸಿವೆ. ಸದ್ಯ ನೀರಿನ ಅಭಾವದಿಂದಾಗಿ ಸ್ವಚ್ಛತಾ ಕಾರ್ಯಕ್ಕೆ ತಡೆಯುಂಟಾಗಿದೆ. ಹಲಸೂರು ಕೆರೆಯಲ್ಲಿರುವ ಧೋಬಿ ಘಾಟ್ 50 ವರ್ಷಗಳಿಗೂ ಹೆಚ್ಚು ಹಳೆಯದಾಗಿದ್ದು, ಇಲ್ಲಿ 110 ಕ್ಕೂ ಹೆಚ್ಚು ವಾಶರ್ ಮ್ಯಾನ್ ಗಳು ಮತ್ತು ಅವರ ಕುಟುಂಬಗಳನ್ನು ಹೊಂದಿದೆ. ಕೆರೆಯಲ್ಲಿ ನೀರಿನ ಅಲಭ್ಯತೆ ಇರುವುದರಿಂದ ಹೆಚ್ಚಾಗಿ ಕೊಳವೆಬಾವಿಯನ್ನೇ ಅವಲಂಬಿಸಿದ್ದು, ಈಗ ಬಾವಿಗಳಲ್ಲಿ ನೀರಿನ ಕೊರತೆಯಾಗಿದೆ. ಜಿಬಿಎ ಪುನಶ್ಚೇತನ ಕ್ರಮದಿಂದ ಮುಂದಿನ ಎರಡು ತಿಂಗಳು ನೀರಿನ ಕೊರತೆಯಾಗಲಿದೆ. ಬೋರ್‌ವೆಲ್ ಸಂಪೂರ್ಣ ಬತ್ತದಿದ್ದರೂ ನೀರಿನ ಪ್ರಮಾಣ ಕಡಿಮೆಯಾಗುತ್ತದೆ. ಬೇಸಿಗೆಯ ಈ ಮೂರು ತಿಂಗಳುಗಳಲ್ಲಿ ಪಾಳಿಯಲ್ಲಿ ಬಟ್ಟೆ ಒಗೆಯುವ ಕೆಲಸ ಮಾಡುವಂತಾಗಿದೆ ಎನ್ನುವ ಮಾತುಗಳು ಕೇಳಿ ಬಂದಿದೆ.

ವಿದೇಶಿ ಪ್ರವಾಸಿಗರಿಗೆ ನೆರವು: ಎಚ್‌ಕೆಪಿ

ಬೆಂಗಳೂರು: ಇಸ್ರೇಲ್-ಅಮೆರಿಕ ಹಾಗೂ ಇರಾನ್ ನಡುವೆ ನಡೆಯುತ್ತಿರುವ ಯುದ್ಧದ ಪರಿಣಾಮವಾಗಿ ಪ್ರಯಾಣದ ಅಡಚಣೆ ಎದುರಿಸುತ್ತಿರುವ ಮತ್ತು ಸದ್ಯ ಕರ್ನಾಟಕದಲ್ಲಿರುವ ವಿದೇಶಿ ಪ್ರವಾಸಿಗರು ಯಾವುದೇ ನೆರವಿಗಾಗಿ ಅಥವಾ ವೀಸಾ ಸಂಬಂಧಿತ ಸಮಸ್ಯೆಗಳಿಗೆ ಪ್ರವಾಸೋದ್ಯಮ ಇಲಾಖೆಯನ್ನು ಸಂಪರ್ಕಿಸಬಹುದು ಎಂದು ಪ್ರವಾಸೋದ್ಯಮ ಸಚಿವ ಎಚ್.ಕೆ.ಪಾಟೀಲ ತಿಳಿಸಿದ್ದಾರೆ. ಯುದ್ಧದ ಸನ್ನಿವೇಶದಿಂದಾಗಿ ಅಂತರರಾಷ್ಟ್ರೀಯ ಪ್ರಯಾಣದಲ್ಲಿ ಅನಿಶ್ಚಿತತೆ ಉಂಟಾಗಿದೆ. ಈ ಕಾರಣದಿಂದಾಗಿ ವಿದೇಶಿ ಅತಿಥಿಗಳು ಸಂಕಷ್ಟದಲ್ಲಿದ್ದಾರೆ. ಅಂಥವರಿಗೆ ವೀಸಾಗಳ ನಿರ್ವಹಣೆ ಮತ್ತು ಅಗತ್ಯ ಸಹಾಯ ನೀಡಲು ಇಲಾಖೆ ತಯಾರಾಗಿದೆ ಎಂದಿದ್ದಾರೆ. ಯಾವುದೇ ಸಹಾಯ ಅಥವಾ ಮಾಹಿತಿ ಬೇಕಿದ್ದವರು ಬೆಳಿಗ್ಗೆ 5.30ರಿಂದ ರಾತ್ರಿ 10ರ ನಡುವೆ ದೂರವಾಣಿ ಸಂಖ್ಯೆ- 89706 50021 ಅನ್ನು ಸಂಪರ್ಕಿಸಬಹುದು ಎಂದೂ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಸಮಾಚಾರ ಸಣ್ಣದಲ್ಲ

ಅಬಕಾರಿ ಡಿಸಿ ಮನೆಯಲ್ಲಿ ಶೋಧ

ಉಡುಪಿ: ಆದಾಯ ಮೀರಿ ಆಸ್ತಿ ಹೊಂದಿರುವ ಆರೋಪದಲ್ಲಿ ಅಬಕಾರಿ ಇಲಾಖೆಯ ಉಪ ಆಯುಕ್ತ ಶ್ರೀನಿವಾಸ್ ಟಿ.ಎಂ. ಅವರ ಮನೆ ಹಾಗೂ ಸಂಬಂಧಿತ ಸ್ಥಳಗಳಲ್ಲಿ ಲೋಕಾಯುಕ್ತ ಪೊಲೀಸರು ಶೋಧ ಕಾರ್ಯ ನಡೆಸಿ ₹8.69 ಕೋಟಿ ಮೌಲ್ಯದ ಅಕ್ರಮ ಆಸ್ತಿಯನ್ನು ಪತ್ತೆ ಹಚ್ಚಿದ್ದಾರೆ. ನಿಗದಿತ ಆದಾಯ ಮೀರಿದ ಆಸ್ತಿಯನ್ನು ಹೊಂದಿದ್ದ ಬಗ್ಗೆ ಕರ್ನಾಟಕ ಲೋಕಾಯುಕ್ತ ಪೊಲೀಸ್ ವಿಭಾಗದ ಉಡುಪಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಲೋಕಾಯುಕ್ತ ಪೊಲೀಸರು ಮಾ.11 ರಂದು ಆರೋಪಿ ಅಧಿಕಾರಿಗೆ ಸಂಬಂಧಿಸಿದ ಮನೆ, ಕಚೇರಿ ಹಾಗೂ ಸಂಬಂಧಿಕರ ಮನೆಗಳು ಸೇರಿ 15 ಸ್ಥಳಗಳಲ್ಲಿ ಏಕಕಾಲಕ್ಕೆ ಶೋಧ ಕಾರ್ಯ ನಡೆಸಿದ್ದರು. ಈ ವೇಳೆ 11 ನಿವೇಶನಗಳು, 6 ವಾಸದ ಮನೆಗಳು, 31 ಎಕರೆ ಕೃಷಿ ಜಮೀನು ಎಲ್ಲ ಸೇರಿ ಒಟ್ಟು ₹6.90 ಕೋಟಿ ಮೌಲ್ಯದ ಸ್ಥಿರ ಆಸ್ತಿ, ₹3.95 ಲಕ್ಷ ನಗದು, ₹1.47 ಕೋಟಿ ಮೌಲ್ಯದ ಚಿನ್ನಾಭರಣ, ₹17 ಲಕ್ಷ ಮೌಲ್ಯದ ವಾಹನಗಳು, ₹25.75 ಲಕ್ಷದ ಬ್ಯಾಂಕ್ ಠೇವಣಿ, ₹72.68 ಲಕ್ಷ ಮೌಲ್ಯದ ಇತರೆ ವಸ್ತುಗಳು ಸೇರಿ ಒಟ್ಟು ₹2.66 ಕೋಟಿ ಚರ ಆಸ್ತಿ ಕಂಡುಬಂದಿದೆ ಎಂದು ಲೋಕಾಯುಕ್ತ ಪೊಲೀಸರು ತಿಳಿಸಿದ್ದಾರೆ.

ಯುಕೆಪಿ ಪರಿಹಾರಕ್ಕೆ ಹೆಚ್ಚುವರಿ ಅನುದಾನ

← ಮೊದಲಪುಟದಿಂದ

ಮುಂದಿನ ವರ್ಷ ಇಲ್ಲಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯನ್ನು ಸ್ಥಾಪಿಸಲು ಕ್ರಮ ಕೈಗೊಳ್ಳಲಾಗುವುದು ಎಂದರು. ಯುಕೆಪಿ 3ನೇ ಹಂತಕ್ಕೆ ಒಂದೇ ಬಾರಿ ಭೂ ಪರಿಹಾರ: ಕೃಷ್ಣ ಮೇಲ್ದಂಡೆ ಯೋಜನೆ ಹಂತ ಮೂರರ ಭೂ ಸ್ವಾಧೀನಗೊಳ್ಳುವ ಜಮೀನುಗಳಿಗೆ ಒಂದೇ ಬಾರಿಗೆ ಭೂ ಪರಿಹಾರವನ್ನು ನೀಡಲು ಕಾಂಗ್ರೆಸ್ ಸರಕಾರ ನಿರ್ಣಯಿಸಿದೆ. ಈ ಬಾರಿಯ ಬಜೆಟ್ ನಲ್ಲಿ ಯುಕೆಪಿ ಯೋಜನೆಯ 3 ಹಂತದಲ್ಲಿ ಭೂಪರಿಹಾರಕ್ಕೆ ಹಣ ಮೀಸಲಿಡಲಾಗಿದ್ದು, ಪೂರಕ ಬಜೆಟ್‌ನಲ್ಲೂ ಹೆಚ್ಚಿನ ಅನುದಾನಕ್ಕೆ ವ್ಯವಸ್ಥೆ ಮಾಡಲಾಗುವುದು ಎಂದು ಸಿಎಂ ತಿಳಿಸಿದರು. ಸ್ವಯಂಪ್ರೇರಣೆಯಿಂದ ಭೂಮಿ ನೀಡುವ ರೈತರಿಗೆ ನೀರಾವರಿ ಜಮೀನಿಗೆ ಎಕರೆಗೆ 40 ಲಕ್ಷ ರೂ, ಖುಷ್ಕಿ ಜಮೀನಿಗೆ 30 ಲಕ್ಷ ರೂ. ನೀಡಲು ಸರ್ಕಾರ ನಿರ್ಣಯಿಸಿದೆ. ಆದರೆ ಈ ಬಗ್ಗೆ ಬಿಜೆಪಿಯವರು ಅಪಪ್ರಚಾರ ಮಾಡುತ್ತಿದ್ದಾರೆ ಎಂದು ದೂರಿದರು. ಕೇಂದ್ರಕ್ಕೆ ಹಲವು ಮನವಿಗಳ ನಂತರವೂ, ಯುಕೆಪಿ, ಮಹದಾಯಿ ಸೇರಿದಂತೆ ಹಲವು ನೀರಾವರಿ ಯೋಜನೆಗೆ ಬೇಕಾದ ಅಗತ್ಯ ಅನುಮತಿಗಳನ್ನು ಕೇಂದ್ರ ಸರಕಾರ ಇದುವರೆಗೆ ನೀಡಿಲ್ಲ. ನಮ್ಮ ಸರಕಾರ ಉತ್ತರ ಕರ್ನಾಟಕದ ಪ್ರಾದೇಶಿಕ ಅಸಮಾನತೆಯನ್ನು ನಿವಾರಿಸಲು ಸರಕಾರ ಬದ್ಧವಾಗಿದೆ ಎಂದರು.

320 ಕ್ವಿಂಟಲ್ ಮೆಕ್ಕೆಜೋಳ ಭಸ್ಮ

ದಾವಣಗೆರೆ: ಆಕಸ್ಮಿಕವಾಗಿ ಬೆಂಕಿ ಬಿದ್ದು ಸುಮಾರು 4.75 ಲಕ್ಷ ರು. ಮೌಲ್ಯದ 320 ಕ್ವಿಂಟಲ್ ಮೆಕ್ಕೆಜೋಳ ಸುಟ್ಟು ಭಸ್ಮವಾಗಿರುವ ಘಟನೆ ದಾವಣಗೆರೆಯ ನ್ಯಾಮತಿ ತಾಲೂಕಿನ ಯರಗನಾಳ್ ಗ್ರಾಮದಲ್ಲಿ ನಡೆದಿದೆ. ಗ್ರಾಮದ ವೀರಬಸಪ್ಪ ಅವರಿಗೆ ಸೇರಿದ ಎರಡು ಎಕರೆಯಲ್ಲಿ ಬೆಳೆದ 70 ಕ್ವಿಂಟಲ್ ಮೆಕ್ಕೆಜೋಳಕ್ಕೆ ಆಕಸ್ಮಿಕವಾಗಿ ಬೆಂಕಿ ಬಿದ್ದು ಸಂಪೂರ್ಣವಾಗಿ ಸುಟ್ಟು ಭಸ್ಮವಾಗಿದೆ.

ಅಗಲಿದ ಜೀವ

ಪ್ರೊ. ಉಷಾ ಮೂರ್ತಿ

ಧಾರವಾಡ: ನಗರದ ಸಪ್ತಾಪುರ ನಿವಾಸಿ ಹಾಗೂ ಕರ್ನಾಟಕ ಕಲಾ ಮಹಾವಿದ್ಯಾಲಯದ ನಿವೃತ್ತ ಪ್ರಾಚಾರ್ಯೆ ಪ್ರೊ. ಉಷಾ ಮೂರ್ತಿ(90) ಶನಿವಾರ

ನಿಧನರಾದರು. ಕರ್ನಾಟಕ ಕಾಲೇಜಿನಲ್ಲಿ ಸುಮಾರು 40 ವರ್ಷಗಳ ಕಾಲ ರಾಜ್ಯಶಾಸ್ತ್ರ ಪ್ರಾಧ್ಯಾಪಕರಾಗಿದ್ದರು. ಕಾಲೇಜಿನ ಪ್ರಾಚಾರ್ಯರಾಗಿಯೂ ಸೇವೆ ಸಲ್ಲಿಸಿ ನಿವೃತ್ತರಾಗಿದ್ದರು. ನಿವೃತ್ತಿಯ ನಂತರ ಕರ್ನಾಟಕ ವಿಶ್ವವಿದ್ಯಾಲಯದ ಸರ್ ಸಿದ್ದಪ್ಪ ಕಂಬಳಿ ಕಾನೂನು ಮಹಾವಿದ್ಯಾಲಯದಲ್ಲಿ ಸುಮಾರು 15 ವರ್ಷ ಅತಿಥಿ ಉಪನ್ಯಾಸಕರಾಗಿಯೂ ಕಾರ್ಯನಿರ್ವಹಿಸಿದ್ದರು.

ಅಸಹಜ ಸಾವಿಗೂ ಹೆಚ್ಚುವರಿ ಪರಿಹಾರಕ್ಕೆ ಅವಕಾಶ | ಈ ಬಾರಿ ಶೇ.20ರಷ್ಟು ಅನುದಾನ ಹೆಚ್ಚಳ

ಕೈದಿಗಳ ಆಹಾರಕ್ಕೆ 45 ಕೋಟಿ ರು.

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರಾಜ್ಯದಲ್ಲಿರುವ ಕಾರಾಗೃಹಗಳ ಮೇಲಿನ ಒತ್ತಡ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿರುವ ನಡುವೆ, ರಾಜ್ಯ ಸರಕಾರ ಪ್ರಸಕ್ತ ಸಾಲಿನ ಬಜೆಟ್‌ನಲ್ಲಿ ಒಟ್ಟು 416 ಕೋಟಿ ರು. ಮೀಸಲಿಟ್ಟಿದ್ದು, ಕಳೆದ ಎರಡು ವರ್ಷಕ್ಕೆ ಹೋಲಿಸಿದರೆ ಹೆಚ್ಚುವರಿ 69 ಕೋಟಿ ರು. ನೀಡಲಾಗಿದೆ.

2024-25ರಲ್ಲಿ ರಾಜ್ಯ ಕಾರಾಗೃಹಗಳ ನಿರ್ವಹಣೆಗೆ ಒಟ್ಟು 347 ಕೋಟಿ ರು. ಮೀಸಲಿಟ್ಟಿದ್ದ ಸರಕಾರ, 2025-26ನೇ ಸಾಲಿಗೆ ಈ ಮೊತ್ತವನ್ನು 384 ಕೋಟಿ ರು.ಗೆ ಏರಿಸಿತ್ತು. ಇದೀಗ 2026-27ರ ಬಜೆಟ್‌ನಲ್ಲಿ 416 ಕೋಟಿಗೆ ಏರಿಕೆಯಾಗಿದೆ. ಎರಡು ವರ್ಷಗಳಲ್ಲಿ ಸುಮಾರು 69 ಕೋಟಿ ಹೆಚ್ಚಳ ಕಂಡುಬಂದಿರುವುದು ಗಮನಾರ್ಹವಾಗಿದೆ. ಕಳೆದ ಎರಡು ವರ್ಷದ ಅವಧಿಯಲ್ಲಿ ಶೇ.20ರಷ್ಟು ಹೆಚ್ಚುವರಿ ಅನುದಾನವನ್ನು ಮೀಸಲಿಟ್ಟಿರುವುದು ಬಹಿರಂಗವಾಗಿದೆ.

ಈ ಅನುದಾನದ ಬಹುಪಾಲು ಮೊತ್ತ ಕಾರಾಗೃಹ ಇಲಾಖೆ ಸಿಬ್ಬಂದಿಗಳ ವೇತನ ಹಾಗೂ ಭತ್ಯೆಗೆ ಹೋಗಲಿದೆ. ಇನ್ನುಳಿದಂತೆ ಕೈದಿಗಳಿಗೆ ಉತ್ತರ ಆಹಾರ ನೀಡಲು ಸರಕಾರ ಪ್ರತಿವರ್ಷ 45 ಕೋಟಿ ರು. ವ್ಯಯಿಸಿದರೆ, ಕಟ್ಟಡ ನಿರ್ವಹಣೆಗೆ ಏಳು ಕೋಟಿ ಮೀಸಲಿಟ್ಟಿದೆ. ಹಾಗೇ ನೋಡಿದರೆ, ಕಾರಾಗೃಹಗಳ ಬಜೆಟ್‌ನಲ್ಲಿ ಒಟ್ಟು 197 ಕೋಟಿ ರು. ಜೈಲು ಸಿಬ್ಬಂದಿಗೆ ಹೋಗಲಿದೆ.

ಅಸಹಜ ಸಾವಿನ ಪರಿಹಾರಕ್ಕೂ ಅನುದಾನ ಹೆಚ್ಚಳ: ಇನ್ನು ಜೈಲುಗಳಲ್ಲಿ ಅಸಹಜವಾಗಿ ಸಾವನ್ನಪ್ಪುವ ಕೈದಿಗಳ ಕುಟುಂಬಗಳಿಗೆ ಪರಿಹಾರ ನೀಡಲು ಈ ಬಾರಿ ಬಜೆಟ್‌ನಲ್ಲಿ ಹೆಚ್ಚುವರಿ ಅನುದಾನವನ್ನು ಮೀಸಲಿಡಲಾಗಿದೆ. ಈ ಹಿಂದೆ ಒಂದು ಕೋಟಿ ರು. ಮೀಸಲಿಟ್ಟಿದ್ದ ಅನುದಾನ, ಈ ಬಾರಿ ಮೂರು ಕೋಟಿ ಹೆಚ್ಚಿಸಲಾಗಿದೆ. ರಾಷ್ಟ್ರೀಯ ಅಪರಾಧ ದಾಖಲೆಗಳ ಪ್ರಕಾರ, ಕಳೆದ ಐದು ವರ್ಷದಲ್ಲಿ ಕರ್ನಾಟಕದಲ್ಲಿ ಜೈಲಿನಲ್ಲಿರುವ 389 ಕೈದಿಗಳು ಮೃತಪಟ್ಟಿದ್ದು, ಇದರಲ್ಲಿ 40 ಮಂದಿ ಆತ್ಮಹತ್ಯೆ ಸೇರಿದಂತೆ ವಿವಿಧ ರೀತಿಯಲ್ಲಿ ಅಸಹಜವಾಗಿ ಮೃತಪಟ್ಟಿದ್ದಾರೆ ಎನ್ನಲಾಗಿದೆ.

ಇದರೊಂದಿಗೆ ಕಾರಾಗೃಹ ಕಟ್ಟಡಗಳ ನಿರ್ವಹಣೆ ಹಾಗೂ ಮೂಲಸೌಕರ್ಯ ಅಭಿವೃದ್ಧಿಗೆ ಬಜೆಟ್‌ನಲ್ಲಿ ಹೆಚ್ಚುವರಿ ಅನುದಾನ ನೀಡಲಾಗಿದ್ದು, ಲೋಕೋಪಯೋಗಿ ಇಲಾಖೆಯ ಮೂಲಕ ಕಾರಾಗೃಹಗಳ ನಿರ್ವಹಣೆಗೆ 2025-26ರಲ್ಲಿ 4.3 ಕೋಟಿ ಮೀಸಲಿದ್ದರೆ, 2026-27ರಲ್ಲಿ ಅದನ್ನು 7 ಕೋಟಿಗೆ ಹೆಚ್ಚಿಸಲಾಗಿದೆ.

- ಕಳೆದ ವರ್ಷಕ್ಕೆ ಹೋಲಿಸಿದರೆ ಈ ವರ್ಷ ಜೈಲುಗಳಿಗೆ ನೀಡಿರುವ ಬಜೆಟ್‌ನಲ್ಲಿ 32 ಕೋಟಿ ಹೆಚ್ಚಾಗಿದೆ
- ಕೈದಿಗಳ ಅಸಹಜ ಸಾವಿನ ಪರಿಹಾರಕ್ಕೆ ಕಳೆದ ವರ್ಷಕ್ಕೆ ಹೋಲಿಸಿದರೆ ಹೆಚ್ಚುವರಿ 2 ಕೋಟಿ
- ಲೋಕೋಪಯೋಗಿ ಇಲಖೆಯಿಂದ ಜೈಲುಗಳ ನಿರ್ವಹಣೆಗೆ ಶೇ.60ರಷ್ಟು ಹೆಚ್ಚುವರಿ ಅನುದಾನ

15 ಸಾವಿರ ದಾಟಿರುವ ಕೈದಿಗಳ ಸಂಖ್ಯೆ

ಕರ್ನಾಟಕದಲ್ಲಿರುವ ಒಟ್ಟು 106 ಕಾರಾಗೃಹಗಳ ಪೈಕಿ ಒಂಬತ್ತು ಕೇಂದ್ರ ಕಾರಾಗೃಹ, 31 ಜಿಲ್ಲಾ ಕಾರಾಗೃಹ, 63 ಉಪಕಾರಾಗೃಹ ಸೇರಿದಂತೆ ಮಹಿಳಾ ಜೈಲು, ಮುಕ್ತ ಕಾರಾಗೃಹ, ಬೋರ್ಸ್ಟಲ್ ಶಾಲೆಯಲ್ಲಿ ಒಟ್ಟು 15ಸಾವಿರಕ್ಕೂ ಹೆಚ್ಚು ಕೈದಿಗಳಿದ್ದಾರೆ. ವರ್ಷದಿಂದ ವರ್ಷಕ್ಕೆ ಕೈದಿಗಳ ಸಂಖ್ಯೆ ಹೆಚ್ಚಾಗುತ್ತಿರುವ ಹಿನ್ನೆಲೆ ಕಾರಾಗೃಹ ನಿರ್ವಹಣೆಯ ವೆಚ್ಚವೂ ಹೆಚ್ಚುತ್ತಿದೆ ಎನ್ನುವ ಮಾತುಗಳು ಕೇಳಿಬರುತ್ತಿದೆ.

ಯಾವುದಕ್ಕೆ ಎಷ್ಟು ಖರ್ಚು?

ವಿಷಯ	ಕಳೆದ ವರ್ಷ	ಪ್ರಸಕ್ತ ವರ್ಷ
ಕೈದಿಗಳ ಆಹಾರಕ್ಕೆ	45 ಕೋಟಿ	45 ಕೋಟಿ
ಕಟ್ಟಡ ಕಾಮಗಾರಿ	14 ಕೋಟಿ	14ಕೋಟಿ
ನಿರ್ವಹಣೆ	10 ಕೋಟಿ	10 ಕೋಟಿ
ಜೈಲು ನಿರ್ವಹಣೆ	4.3 ಕೋಟಿ	ಏಳು ಕೋಟಿ
ಕೈದಿಗಳ ಅಸಹಜ ಸಾವು	1 ಕೋಟಿ	3 ಕೋಟಿ
ಒಟ್ಟು	384.25 ಕೋಟಿ	416.55 ಕೋಟಿ

ಬಜೆಟ್ ಬಗ್ಗೆ ಶಾಸಕ ಹುಸೇನ್ ಮತ್ತೆ ಅಸಮಾಧಾನ

100 ರುಪಾಯಿ ಕೇಳಿದ್ರೆ 5 ರು. ಆದ್ರೂ ಕೊಡಬಾರದಾ?

ರಾಮನಗರ: ಪ್ರವಾಹದಿಂದ ನನ್ನ ಕ್ಷೇತ್ರದಲ್ಲಾಗಿರುವ ಹಾನಿಯ ಚಿತ್ರಗಳನ್ನು ಮುಖ್ಯಮಂತ್ರಿಗೆ ತೋರಿಸಿ ಅನುದಾನ ಕೇಳಿದ್ದೆ. ₹100 ಕೇಳಿದ್ರೆ ಕನಿಷ್ಠ ₹5 ಆದ್ರೂ ಕೊಡಬಾರದಾ?

ಬಜೆಟ್‌ನಲ್ಲಿ ನನ್ನ ಕ್ಷೇತ್ರಕ್ಕೆ ಏನು ಆಗಬೇಕಿತ್ತೊ ಅದು ಆಗಿಲ್ಲ ಎಂದು ಶಾಸಕ ಎಚ್.ಎ.ಇಕ್ಬಾಲ್ ಹುಸೇನ್ ಬಜೆಟ್ ಕುರಿತು ಮತ್ತೆ ತಮ್ಮ ಅಸಮಾಧಾನ ಹೊರ ಹಾಕಿದರು.

ಬಜೆಟ್ ಬಗ್ಗೆ ಬೇಸರ ವ್ಯಕ್ತಪಡಿಸಿದ್ದಕ್ಕಾಗಿ ಪಕ್ಷದಿಂದ ಹೊರ ಹಾಕಬೇಕು ಎಂದು ಸ್ವಪಕ್ಷದವರೇ ಆಕ್ರೋಶ ವ್ಯಕ್ತಪಡಿಸಿರುವುದರ ಕುರಿತು ನಗರದಲ್ಲಿ ಶನಿವಾರ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಅವರು, ನನಗೆ ಹಾಗೂ ಕ್ಷೇತ್ರಕ್ಕೆ ಆಗಿರುವ ನೋವನ್ನು ನಾನು ತೋಡಿಕೊಂಡಿದ್ದೇನೆ. ಯಾರು ಏನಾದರೂ ಹೇಳಿಕೊಳ್ಳಲಿ ಎಂದರು. ಬೇರಾವುದೇ ವಿಷಯದ ಬಗ್ಗೆ ನಾನು ಮಾತನಾಡಿಲ್ಲ. ನಾನು ಹೇಳಿದ್ದು ಒಳ್ಳೆಯದಾಗಿದ್ದರೆ ಒಪ್ಪಿಕೊಳ್ಳಲಿ. ಕೆಟ್ಟದಾಗಿದ್ದರೆ ತಿರಸ್ಕರಿಸಲಿ. ಕ್ಷೇತ್ರದ ವಿಷಯಕ್ಕೆ ಸಂಬಂಧಿಸಿದಂತೆ ಸಾಕಷ್ಟು ಸಲ ಮುಖ್ಯಮಂತ್ರಿ ಮತ್ತು ಉಪ ಮುಖ್ಯಮಂತ್ರಿಯನ್ನು ಮುಖಾಮುಖಿ ಭೇಟಿಯಾಗಿದ್ದೇನೆ. ಮೂರು ವರ್ಷದ ಹಿಂದೆ ಪ್ರವಾಹದ ಫೋಟೊಗಳ ಸಮೇತ ವಾಸ್ತವ ಸ್ಥಿತಿ ವಿವರಿಸಿದ್ದೇನೆ. ಆದರೂ, ನನ್ನ ಮನವಿಗೆ ಸ್ಪಂದಿಸಿಲ್ಲ ಎಂಬ ನೋವಿದೆ ಎಂದು ಬೇಸರ ವ್ಯಕ್ತಪಡಿಸಿದರು.

'ಬಹಿರಂಗ ಹೇಳಿಕೆ ನೀಡಿದರೆ, ಮುಂದೆ ಟಿಕೆಟ್ ನೀಡುವಾಗ ಹೈಕಮಾಂಡ್ ಅದನ್ನು ಗಮನಿಸುತ್ತದೆ' ಎಂಬ ಗೃಹ ಸಚಿವ ಡಾ.ಜಿ.ಪರಮೇಶ್ವರ್ ಹೇಳಿಕೆ ಕುರಿತ ಪ್ರಶ್ನೆಗೆ, ಅವರು ನಮ್ಮ ನಾಯಕರು. ಏನು ಬೇಕಾದರೂ ಹೇಳಲಿ. 2018ರಲ್ಲಿ ನಾನು ಸೋತಾಗ ಅವರೇ ಟಿಕೆಟ್ ಕೊಟ್ಟಿದ್ದರು. ನೀನು ಗೆಲ್ಲಬೇಕು ಎಂದು ಬೆನ್ನು ತಟ್ಟಿದ್ದರು. ಕೆಲವು ಸಂದರ್ಭದಲ್ಲಿ ಅವರ ಆಶೀರ್ವಾದ ನನಗೆ ಇರುತ್ತದೆ ಎಂದು ಪ್ರತಿಕ್ರಿಯಿಸಿದರು.

> ಮೈಕ್ರೊ ಫೈನಾನ್ಸ್‌ನಿಂದಾಗಿ ಕ್ಷೇತ್ರದಲ್ಲಿ 2,800 ಮನೆಗಳು ಹರಾಜಿಗೆ ಬಂದಿವೆ. ಕರ್ನಾಟಕ ರೇಷ್ಮೆ ಮಾರುಕಟ್ಟೆ ಮಂಡಳಿ (ಕೆಎಸ್ಎಂಬಿ) ಪುನರುಜ್ಜೀವನಕ್ಕಾಗಿ ಕೇಳಿದ್ದ ₹100 ಕೋಟಿ ಅನುದಾನ ಸಹ ಕೊಟ್ಟಿಲ್ಲ. ರಸ್ತೆ ಮತ್ತು ಚರಂಡಿ ದುರಸ್ತಿಗೂ ಹಣವಿಲ್ಲ. ನನ್ನ ಕ್ಷೇತ್ರಕ್ಕಾಗಿರುವ ನೋವನ್ನು ಹೇಳಿದ್ದೇನೆಯೇ ಹೊರತು ಬಜೆಟ್ ಬಗ್ಗೆಯಲ್ಲ.
> – ಎಚ್.ಎ.ಇಕ್ಬಾಲ್ ಹುಸೇನ್ ಶಾಸಕ

ಮೈಸೂರು ಅರಮನೆ ವೀಕ್ಷಿಸಿದ ಒಡಿಶಾ ಕಾಂಗ್ರೆಸ್ ಶಾಸಕರು

ಮೈಸೂರು: ರಾಜ್ಯಸಭಾ ಚುನಾವಣೆ ಹಿನ್ನೆಲೆ ಆಪರೇಷನ್ ಕಮಲದ ಭೀತಿಯಿಂದ ಕರ್ನಾಟಕಕ್ಕೆ ಆಗಮಿಸಿ ಬಿಡದಿಯ ರೆಸಾರ್ಟ್‌ವೊಂದರಲ್ಲಿ ವಾಸ್ತವ್ಯ ಹೂಡಿರುವ ಒಡಿಶಾದ ಕಾಂಗ್ರೆಸ್ ಶಾಸಕರು ಶನಿವಾರ ಬಿಗಿ ಪೊಲೀಸ್ ಬಂದೋಬಸ್ತ್‌ನಲ್ಲಿ ಮೈಸೂರಿಗೆ ಆಗಮಿಸಿ, ಚಾಮುಂಡಿಬೆಟ್ಟದ ದರ್ಶನ ಹಾಗೂ ಅರಮನೆಯನ್ನು ವೀಕ್ಷಣೆ ಮಾಡಿದರು. ಇದೇ ಮಾರ್ಚ್ 16 ರಂದು ರಾಜ್ಯಸಭಾ ಚುನಾವಣೆ ನಡೆಯಲಿದ್ದು, ಒಡಿಶಾದ ಕಾಂಗ್ರೆಸ್ ಶಾಸಕರಿಗೆ ಬಿಜೆಪಿ ಆಪರೇಷನ್ ಕಮಲದ ಮೂಲಕ ಅಡ್ಡ ಮತ ದಾನ ಮಾಡಿಸುವ ಸಾಧ್ಯತೆ ಇದೆ. ಈ ಭೀತಿಯ ಹಿನ್ನೆಲೆ ಶಾಸಕರನ್ನು ಕರ್ನಾಟಕಕ್ಕೆ ಶಿಫ್ಟ್ ಮಾಡಲಾಗಿದೆ.

ಒಡಿಶಾದ ಕಾಂಗ್ರೆಸ್ ಶಾಸಕರು ಶನಿವಾರ ಬಿಗಿ ಪೊಲೀಸ್ ಬಂದೋಬಸ್ತ್‌ನಲ್ಲಿ ಮೈಸೂರಿಗೆ ಆಗಮಿಸಿ, ಚಾಮುಂಡಿಬೆಟ್ಟದ ದರ್ಶನ ಹಾಗೂ ಅರಮನೆಯನ್ನು ವೀಕ್ಷಣೆ ಮಾಡಿದರು.

ಜಂಗಲ್ ಸಫಾರಿ ಸದ್ದು!

← ಮೊದಲಪುಟದಿಂದ

ಇದಲ್ಲದೇ, ಚಂದ್ರಂಪಳ್ಳಿ ಜಲಾಶಯದಲ್ಲಿ ಬೋಟಿಂಗ್ ಸೌಲಭ್ಯ ಆರಂಭವಾಗಿದ್ದು, ಪ್ರತಿ ವ್ಯಕ್ತಿಗೆ 175 ರೂ. ದರ ನಿಗದಿಪಡಿಸಲಾಗಿದೆ. ಪ್ರವಾಸಿಗರ ಸುರಕ್ಷತೆಗಾಗಿ ತರಬೇತಿ ಪಡೆದ ಸಿಬ್ಬಂದಿ, ಲೈಫ್ ಜಾಕೆಟ್ ಹಾಗೂ ವಿಮಾ ಸೌಲಭ್ಯ ಒದಗಿಸಲಾಗಿದೆ. ಇದು ಜಿಲ್ಲೆಯ ಪ್ರವಾಸೋದ್ಯಮಕ್ಕೆ ಹೊಸ ಮೆರಗು ನೀಡಲಿದ್ದು, ಸ್ಥಳೀಯರಿಗೆ ಉದ್ಯೋಗಾವಕಾಶ ಕಲ್ಪಿಸಲಿದೆ.

ಪ್ರಾದೇಶಿಕ ಅಸಮಾನತೆ ನೀಗಿಸುವತ್ತ ಹೆಜ್ಜೆ: ಇದುವರೆಗೆ ಜಂಗಲ್ ಸಫಾರಿ ಎಂದರೆ ಕೇವಲ ಹಳೆ ಮೈಸೂರು ಭಾಗದ (ಬಂಡೀಪುರ, ನಾಗರಹೊಳೆ, ಕೆ.ಗುಡಿ) ಸೊತ್ತು ಎಂಬಂತಿತ್ತು. ಆದರೆ ಈಗ ಕಲ್ಯಾಣ ಕರ್ನಾಟಕ ಭಾಗದಲ್ಲಿ ಸಫಾರಿ ಆರಂಭಿಸಿರುವುದು ಪ್ರಾದೇಶಿಕ ಪ್ರವಾಸೋದ್ಯಮದ ಬೆಳವಣಿಗೆಗೆ ದೊಡ್ಡ ಮಟ್ಟದ ಉತ್ತೇಜನ ನೀಡಲಿದೆ. ಇದರಿಂದ ಸ್ಥಳೀಯವಾಗಿ ಉದ್ಯೋಗ ಸೃಷ್ಟಿಯಾಗುವುದಲ್ಲದೆ, ಜಿಲ್ಲೆಯ ಆರ್ಥಿಕತೆಗೂ ಬಲ ಸಿಗಲಿದೆ. ಅಲ್ಲದೇ, ಹೈದರಾಬಾದ್ ಮತ್ತು ಮಹಾರಾಷ್ಟ್ರದ ಪ್ರವಾಸಿಗರನ್ನು ಸೆಳೆಯುತ್ತಿರುವ ಚಿಂಚೋಳಿಯಲ್ಲಿ ಈಗ ವಾಸ್ತವ್ಯಕ್ಕೆ ಗೊಟ್ಟಂಗೊಟ್ಟಾ ಮತ್ತು ಚಂದ್ರಂಪಳ್ಳಿಯಲ್ಲಿ ಟೆಂಟ್ ಹೌಸ್‌ಗಳ ವ್ಯವಸ್ಥೆಯೂ ಇದೆ.

₹4,824 ಕೋಟಿ ಹೂಡಿಕೆಗೆ ಒಪ್ಪಿಗೆ

ಬೆಂಗಳೂರು: ಬಾಗಲಕೋಟೆ, ವಿಜಯಪುರ, ಚಿತ್ರದುರ್ಗ, ರಾಮನಗರ, ಕೋಲಾರ ಸೇರಿದಂತೆ 13 ಜಿಲ್ಲೆಗಳಲ್ಲಿ 37 ಹೊಸ ಕೈಗಾರಿಕೆಗಳಿಗೆ ಮತ್ತು ಹೆಚ್ಚುವರಿ ಹೂಡಿಕೆಯ ಎರಡು ಯೋಜನೆಗಳೂ ಸೇರಿ ಒಟ್ಟು ₹ 4,824.31 ಕೋಟಿ ಮೊತ್ತದ ಬಂಡವಾಳ ಹೂಡಿಕೆಗೆ

ರಾಜ್ಯಮಟ್ಟದ ಏಕಗವಾಕ್ಷಿ ಅನುಮೋದನಾ ಸಮಿತಿ ಒಪ್ಪಿಗೆ ನೀಡಿದೆ. ಐಟಿ ಮೂಲಸೌಲಭ್ಯ, ಸಕ್ಕರೆ ಕಾರ್ಖಾನೆ, ಟೆಕ್ನಿಕಲ್ ಟೆಕ್ಸ್‌ಟೈಲ್, ಕಂಪ್ರೆಸ್ಡ್ ಗ್ಯಾಸ್, ವೈಮಾಂತರಿಕ್ಷ, ಚಿನ್ನಾಭರಣ ತಯಾರಿಕೆ, ಎಲೆಕ್ಟ್ರಾನಿಕ್ಸ್, ಸಾಫ್ಟ್‌ವೇರ್ ಹಾಗೂ ಪಂಚತಾರಾ ಹೋಟೆಲ್ ನಿರ್ಮಾಣ ಯೋಜನೆಗಳಿಗೆ ಸಮಿತಿಯು ಅನುಮೋದನೆ ನೀಡಿದೆ. ಇದರಿಂದ ರಾಜ್ಯದಲ್ಲಿ ಹೊಸದಾಗಿ 14,525 ಉದ್ಯೋಗ ಅವಕಾಶಗಳು ಸೃಷ್ಟಿ ಆಗಲಿವೆ ಎಂದು ಕೈಗಾರಿಕೆ ಸಚಿವ ಎಂ.ಬಿ.ಪಾಟೀಲ ತಿಳಿಸಿದ್ದಾರೆ.

₹ 50 ಕೋಟಿಗೂ ಹೆಚ್ಚು ಹೂಡಿಕೆಯ 22 ಪ್ರಮುಖ ದೊಡ್ಡ ಮತ್ತು ಮಧ್ಯಮ ಕೈಗಾರಿಕಾ ಯೋಜನೆಗಳಿಗೆ ಅನುಮೋದನೆ ನೀಡಿರುವುದರಿಂದ ಒಟ್ಟು ₹ 3,908.68 ಕೋಟಿ ಹೂಡಿಕೆ ಆಗಲಿದೆ. ಅದರಿಂದ 12,475 ಜನರಿಗೆ ಉದ್ಯೋಗಾವಕಾಶ ದೊರೆಯಲಿವೆ. ₹ 15 ಕೋಟಿಯಿಂದ ₹ 50 ಕೋಟಿವರೆಗಿನ ಹೂಡಿಕೆಯ 15 ಹೊಸ ಯೋಜನೆಗಳಿಗೆ ಅನುಮೋದನೆ ನೀಡಿದ್ದರಿಂದ ₹ 350.60 ಕೋಟಿ ಹೂಡಿಕೆ ಆಗಲಿದ್ದು, 1,750 ಜನರಿಗೆ ಉದ್ಯೋಗ ಸಿಗಲಿವೆ. ಹೆಚ್ಚುವರಿ ಹೂಡಿಕೆಯ 2 ಯೋಜನೆಗಳಿಂದ ₹ 565.03 ಕೋಟಿ ಹೂಡಿಕೆಯಾಗಲಿದ್ದು, 300 ಜನರಿಗೆ ಉದ್ಯೋಗಾವಕಾಶ ಸಿಗಲಿವೆ ಎಂದು ಮಾಹಿತಿ ನೀಡಿದ್ದಾರೆ. ಸಭೆಯಲ್ಲಿ ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯ ಪ್ರಧಾನ ಕಾರ್ಯದರ್ಶಿ ಎನ್.ಸೆಲ್ವಕುಮಾರ್, ಕೈಗಾರಿಕಾ ಅಭಿವೃದ್ಧಿ ಆಯುಕ್ತೆ ಗುಂಜನ್ ಕೃಷ್ಣ, ಕರ್ನಾಟಕ ಉದ್ಯೋಗ ಮಿತ್ರದ ವ್ಯವಸ್ಥಾಪಕ ನಿರ್ದೇಶಕ ದೊಡ್ಡ ಬಸವರಾಜು ಇದ್ದರು.

ಮಾದಕ ದ್ರವ್ಯ ಸೇವನೆ ಪರೀಕ್ಷೆ

← ಮೊದಲಪುಟದಿಂದ

ಹಲವು ಬಾರಿ ರಾಜ್ಯದ ಜೈಲುಗಳಲ್ಲಿ ಈ ರೀತಿಯ ಅಕ್ರಮಗಳು ಬೆಳಕಿಗೆ ಬಂದಿವೆ. ಈ ಹಿನ್ನೆಲೆಯಲ್ಲಿ ನಿಮ್ಹಾನ್ಸ್ ಆಸ್ಪತ್ರೆ ಸಹಯೋಗದೊಂದಿಗೆ ಡ್ರಗ್ಸ್ ಮುಕ್ತ ಕಾರಾಗೃಹ ನಿರ್ಮಾಣ ಮಾಡುವ ಉದ್ದೇಶ ದಿಂದ ಕೈದಿಗಳನ್ನು ಪರೀಕ್ಷೆಗೆ ಒಳಪಡಿಸಲಾಗುತ್ತಿದೆ. ರಾಜ್ಯದ ಜೈಲುಗಳಲ್ಲಿ ಕೈದಿಗಳಿಗೆ ಗಾಂಜಾ, ಹೆರೊಯಿನ್, ಕೊಕೇನ್ ಸೇರಿದಂತೆ ವಿವಿಧ ಮಾದಕ ವಸ್ತುಗಳ ಪರೀಕ್ಷೆಗಳನ್ನು ನಡೆಸಲಾಗುತ್ತಿದೆ. ಮೊದಲ ಹಂತದಲ್ಲಿ ಎಲ್ಲಾ ಜೈಲುಗಳಲ್ಲಿ ಸುಮಾರು ಶೇ10ರಷ್ಟು ಕೈದಿಗಳಿಗೆ ಪರೀಕ್ಷೆ ನಡೆಸಲಾಗುತ್ತಿದೆ. ಕಾರಾಗೃಹ ಇಲಾಖೆ ನೀಡಿರುವ ವಿಶೇಷ ಕಿಟ್‌ಗಳ ಮೂಲಕ ಜೈಲು ವೈದ್ಯಾಧಿಕಾರಿಗಳು ಈ ಪರೀಕ್ಷೆಗಳನ್ನು ಮಾಡುತ್ತಿದ್ದಾರೆ.

ಒಂದೇ ತಿಂಗಳಿನಲ್ಲಿ 22.58 ಕೋಟಿ ರುಪಾಯಿ ಮೌಲ್ಯದ ಅಕ್ರಮ ಮರಳು ದಾಸ್ತಾನು ಜಪ್ತಿ
ರಾಜಕೀಯ ನಾಯಕರ ಕರಿನೆರಳಿನಲ್ಲಿ ದಂಧೆ, ಅಸಹಾಯಕರಾಗುತ್ತಿರುವ ಆಡಳಿತ ವರ್ಗ

ಮರಳು ದಂಧೆ: ಬರಿದಾಗುತ್ತಿದೆ ಕೃಷ್ಣೆಯ ಒಡಲು

ವೀರೇಶ ಎಸ್. ಕೆಂಭಾವಿ ಯಾದಗಿರಿ

ಜಿಲ್ಲೆಯ ಕೃಷ್ಣಾ ನದಿ ತೀರದಲ್ಲಿ ಅಕ್ರಮ ಮರಳುಗಾರಿಕೆಗೆ ಬ್ರೇಕ್ ಬೀಳುತ್ತಿಲ್ಲ. ಈ ನಡುವೆ ಭರ್ಜರಿ ಕಾರ್ಯಚರಣೆ ನಡೆಸಿರುವ ಪೊಲೀಸರು ತಿಂಗಳೊಳಗೆ 22.58 ಕೋಟಿ ರು. ಮೌಲ್ಯದ ಅಕ್ರಮ ದಾಸ್ತಾನು ಮರಳು ವಶಕ್ಕೆ ಪಡೆಯಲಾಗಿದೆ.

ಕೃಷ್ಣಾ ನದಿ ತೀರದ ಟೊಣ್ಣೂರಿನಲ್ಲಿ 5.39 ಕೋಟಿ ರು. ಮೌಲ್ಯದ ಹಾಗೂ ಸುರಪುರ ತಾಲೂಕಿನ ಚೌಡೇಶ್ವರಿಹಾಳ್, ಹೆಮ್ಮಡಗಿ, ಕರ್ನಾಳ್, ಅಡ್ಡೊಡ್ಡಗಿ ಸೇರಿ ವಿವಿಧ ಕಡೆ ದಾಳಿ ನಡೆಸಿದ ಪೊಲೀಸ್ ಹಾಗೂ ಗಣಿ ಇಲಾಖೆ ಅಧಿಕಾರಿಗಳ ತಂಡವು ಬರೋಬ್ಬರಿ 17.19 ಕೋಟಿ ರು. ಮೌಲ್ಯದ ಮರಳು ದಾಸ್ತಾನನ್ನು ಜಪ್ತಿ ಮಾಡಿದೆ.

ಕಳೆದ ವರ್ಷ ಸಹ ಬರೋಬ್ಬರಿ 7 ಕೋಟಿ ರು.ಮೌಲ್ಯದ ಅಕ್ರಮ ಮರಳು ವಶಕ್ಕೆ ಪಡೆದಿದ್ದರು. ಜತೆಗೆ 2025ರ ಅಂತ್ಯಕ್ಕೆ 94 ಪ್ರಕರಣ ದಾಖಲು ಮಾಡಲಾಗಿತ್ತು. ಆದರೆ, 2026ರ ಆರಂಭದಲ್ಲಿಯೇ 22.58 ಕೋಟಿ ಮರಳು ಜಪ್ತಿಯಾಗಿರುವುದು ಕೃಷ್ಣೆ ಒಡಲು ಬಗೆದಿರುವ ಪರಿ ಕುರಿತು ಕಳವಳ ತರಿಸಿದೆ.

ಅಕ್ರಮ ಮರಳು ದಂಧೆ ನಡೆಯುವ ಪ್ರಮುಖ ಸ್ಥಳಗಳು: ವಡಗೇರಾ ತಾಲೂಕಿನ ಹಯ್ಯಾಳ, ಯಕ್ಷಂತಿ, ಟೊಣ್ಣೂರ್ ಹಾಗೂ ಸುರಪುರ ತಾಲೂಕಿನ ಚೌಡೇಶ್ವರಿಹಾಳ್, ಹೆಮ್ಮಡಗಿ, ಕರ್ನಾಳ್, ಹೇಮನೂರ, ಶೆಳ್ಳಗಿ ಗ್ರಾಮದಲ್ಲಿ ಮರಳು ದಂಧೆ ಅವ್ಯಾಹತವಾಗಿದೆ. ನಿತ್ಯ ಇಲ್ಲಿ ನೂರಾರು ಟಿಪ್ಪರ್‌ಗಳು ಮರಳು ಹೊತ್ತು ರಾಜಾರೋಷವಾಗಿ ಸಂಚರಿಸುತ್ತಿವೆ.

ರಾಜಕೀಯ ನಾಯಕರ ಕರಿನೆರಳಲ್ಲಿ ದಂಧೆ?: ಮೊದಲೆಲ್ಲಾ ರಾತ್ರಿ ವೇಳೆ ನಡೆಯುತ್ತಿದ್ದ ಅಕ್ರಮ ಮರಳು ಮಾರಾಟ ದಂಧೆ ಇತ್ತೀಚೆಗೆ ಹಗಲಲ್ಲಿ ಆರಂಭಗೊಂಡಿದೆ. ಇದಕ್ಕೆ ರಾಜಕೀಯ ನಾಯಕರ ಕೃಪಕಟಾಕ್ಷ ಇದೆ ಎನ್ನಲಾಗಿದೆ. ಹೀಗಾಗಿ ಅಧಿಕಾರಿಗಳು ಕೂಡ ಅಸಹಾಯಕರಾಗಿದ್ದಾರೆ. ಇದನ್ನೇ ಬಂಡವಾಳ ಮಾಡಿಕೊಂಡ ಮರಳುಗಳ್ಳರಿಗೆ ರತ್ನಕಂಬಳಿ ಹಾಸಿಕೊಟ್ಟಂತಾಗಿದೆ. ಈ ಮಧ್ಯೆಯೂ ಇತ್ತೀಚಿನ ದಿನಗಳಲ್ಲಿ ಅಧಿಕಾರಿಗಳು ಸಾಕಷ್ಟು ಕಡೆಗಳಲ್ಲಿ ದಾಳಿ ನಡೆಸಿ, ಕೋಟ್ಯಂತರ ರುಪಾಯಿಗಳ ಮೌಲ್ಯದ ಅಕ್ರಮ ಮರಳು ದಾಸ್ತಾನನ್ನು ಜಪ್ತಿ ಮಾಡಿದ್ದಾರೆ.

ಕೃಷ್ಣೆಯ ಒಡಲು ಬಗೆದು ಬರಿದಾಗಿಸುವ ಕಾರ್ಯ ನಿರಂತರವಾಗಿ ನಡೆಯುತ್ತಲಿದೆ. ದಿನನಿತ್ಯ ಮರಳುಗಳ್ಳರ ಹಾವಳಿಗೆ ಗಣಿಗಾರಿಕೆ ಮಾಡುವ ಸುತ್ತಲಿನ ಜನರು ಸಹ ರೋಸಿ ಹೋಗಿದ್ದಾರೆ. ಇನ್ನಾದರೂ ಇದಕ್ಕೆ ಮೂಗುದಾರ ಹಾಕುವ ಕಾರ್ಯ ಆಡಳಿತ ವರ್ಗದಿಂದ ಆಗಬೇಕಿದೆ.

ಕಳೆದ 3 ವರ್ಷದಲ್ಲಿ ದಾಖಲಾದ ಮರಳು ಸಂಬಂಧಿತ ಪ್ರಕರಣಗಳು

- 2023-110 ಕೇಸ್, 22 ಆರೋಪಿಗಳು
- 2024-97 ಕೇಸ್, 217 ಆರೋಪಿಗಳು
- 2025-94 ಕೇಸ್, 201 ಆರೋಪಿಗಳು

> ಕೆಲವೆಡೆ ಅಧಿಕಾರಿಗಳೇ ಈ ದಂಧೆಗೆ ಬೆನ್ನುಲುಬಾಗಿದ್ದಾರೆ ಎನ್ನಲಾಗಿದೆ. ಕೆಲ ಪೊಲೀಸ್ ಅಧಿಕಾರಿಗಳಿಗೆ ಅಕ್ರಮದ ಹೂರಣ ಗೊತ್ತಿದ್ದರೂ ಏನೂ ಮಾಡುತ್ತಿಲ್ಲ. ಅಕ್ರಮ ಮರಳು ದಂಧೆ ನಡೆಸುವವರ ಮೇಲೆ ಕಠಿಣ ಕ್ರಮ ಕೈಗೊಳ್ಳಬೇಕು. ರೌಡಿಶೀಟರ್ ಅಥವಾ ಗಡಿಪಾರು ಮಾಡುವ ರೀತಿ ಆಗಬೇಕು. ಅಂದಾಗ ಮಾತ್ರ ಉಳಿದವರಿಗೂ ಜಿಲ್ಲಾಡಳಿತ ನೀಡುವ ಶಿಕ್ಷೆ ಎಚ್ಚರಿಕೆ ಗಂಟೆಯಾಗುತ್ತದೆ.
> – ಟಿ.ಎನ್.ಭೀಮುನಾಯಕ ಕರವೇ ಜಿಲ್ಲಾಧ್ಯಕ್ಷ, ಯಾದಗಿರಿ

> ಅಕ್ರಮ ಮರಳು ದಂಧೆ ತಡೆಗೆ ಕಡಿವಾಣ ಹಾಕುತ್ತಿದ್ದೇವೆ. ಅಕ್ರಮ ಮರಳು ಸಂಗ್ರಹ ಮಾಡುವ ಸ್ಥಳಗಳ ಮೇಲೆ ನಿಗಾ ಇಡಲಾಗಿದೆ. ಅಕ್ರಮ ಮರಳು ಸಂಬಂಧ ಮಾಹಿತಿ ಅಥವಾ ದೂರು ಬಂದ ಕೂಡಲೇ ಕಾರ್ಯ ಪ್ರವೃತ್ತರಾಗಿ ಕ್ರಮ ಜರುಗಿಸಲಾಗುತ್ತಿದೆ. ಅಲ್ಲದೇ ಟ್ರಾಕ್ಟರ್, ಜೆಸಿಬಿ ಸೇರಿ 20 ವಾಹನಗಳ ನೋಂದಣಿ ರದ್ದುಪಡಿಸಲಾಗಿದೆ.
> – ಪೃಥ್ವಿಕ್ ಶಂಕರ್ ಎಸ್‌ಪಿ, ಯಾದಗಿರಿ

ಪಾಕಿಸ್ತಾನ, ಬಾಂಗ್ಲಾ ಪ್ರಜೆಗಳು ಮತದಾರರ ಪಟ್ಟಿಗೆ ಸೇರಿದರೆ ದೇಶದ ಭದ್ರತೆಗೆ ಅಪಾಯ: ಆರ್.ಅಶೋಕ

ರಾಜಕೀಯ ವ್ಯವಸ್ಥೆಯಲ್ಲಿ ರಾಜರ ಆಡಳಿತವೇ?

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಪಾಕಿಸ್ತಾನ, ಬಾಂಗ್ಲಾ ಪ್ರಜೆಗಳು ನಮ್ಮ ಮತದಾರರ ಪಟ್ಟಿಗೆ ಸೇರಿದರೆ ಅದು ದೇಶದ ಭದ್ರತೆಗೆ ಅಪಾಯಕಾರಿ ಎಂದು ವಿಧಾನಸಭೆ ಪ್ರತಿಪಕ್ಷ ನಾಯಕ ಆರ್.ಅಶೋಕ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ವಿಶೇಷ ತೀವ್ರ ಪರಿಷ್ಕರಣೆಯಲ್ಲಿ (ಎಸ್‌ಐಆರ್) ಕಳ್ಳ ಓಟುಗಳನ್ನು ಸೇರಿಸಲು ಅವಕಾಶ ನೀಡಬಾರದು. ಪಾಕಿಸ್ತಾನ, ಬಾಂಗ್ಲಾದೇಶದವರು ಬಹಳಷ್ಟು ಜನರು ಕರ್ನಾಟಕಕ್ಕೆ ಬಂದಿದ್ದಾರೆ. ಅವರು ಈ ಮತದಾರರ ಪಟ್ಟಿಯಲ್ಲಿ ಸೇರ್ಪಡೆಗೊಂಡರೆ ಖಾಯಂ ನಾಗರಿಕರಾಗುತ್ತಾರೆ. ಇದು ದೇಶದ ಭದ್ರತೆಗೆ ಅಪಾಯಕಾರಿ. ಇದರ ಕುರಿತು ಹೆಚ್ಚಿನ ಕ್ರಮ ಕೈಗೊಳ್ಳುವಂತೆ ಕಾರ್ಯಾಗಾರದಲ್ಲಿ ಚರ್ಚೆ ಆಗಿದೆ ಎಂದರು. ಸಿಎಂ ಸಿದ್ದರಾಮಯ್ಯನವರು ನಾನು ಸಮಾಜವಾದಿ, ಜಾತಿವಾದಿ ಅಲ್ಲ. ಕುಟುಂಬವಾದಿ ಅಲ್ಲ ಎಂದು ದೊಡ್ಡ ಭಾಷಣ ಮಾಡಿದ್ದಾರೆ. ನನ್ನ ಮಗನನ್ನೂ ಸ್ವಲ್ಪ ನೋಡ್ಕೊಳ್ಳಿ ಎಂದಿದ್ದಾರೆ. ಇಷ್ಟು ದಿನ ಇವರನ್ನು ನೋಡಿಕೊಂಡಿದ್ದಾಗಿದೆ. ಇನ್ನು ಇವರ ಮಗನನ್ನೂ ನೋಡಿಕೊಳ್ಳಬೇಕು. ಇನ್ನೊಂದು ಆರು ತಿಂಗಳ ಬಳಿಕ ನನ್ನ ಮೊಮ್ಮಗನನ್ನೂ ನೋಡಿಕೊಳ್ಳಿ ಎಂದರೆ, ರಾಜಕೀಯ ವ್ಯವಸ್ಥೆಯಲ್ಲಿ ಇದು ರಾಜರ ಆಡಳಿತವೇ ಎಂದು ಪ್ರಶ್ನಿಸಿದರು.

ಹಿಂದೆ ರಾಜರು ನಾನಾದ ಬಳಿಕ ನನ್ನ ಮಗ ಉತ್ತರಾಧಿಕಾರಿ, ಯುವರಾಜ ಎನ್ನುತ್ತಿದ್ದರು. ಈಗ ರಾಜ ಯುವರಾಜನ ಪಟ್ಟಾಭಿಷೇಕ ಮಾಡುತ್ತಿದ್ದಾರೆ. ಡಾ. ಅಂಬೇಡ್ಕರ್ ಅವರು ಈ ರಾಜರ ಆಡಳಿತ ರದ್ದು ಮಾಡಿ ಮತದಾನ- ಪ್ರಜಾಪ್ರಭುತ್ವ ವ್ಯವಸ್ಥೆ ತಂದರು. ಡಾ. ಅಂಬೇಡ್ಕರ್ ಅವರ ತತ್ವಕ್ಕೆ ಸಿದ್ದರಾಮಯ್ಯನವರು ತಿಲಾಂಜಲಿ ಇಟ್ಟಿದ್ದಾರೆ. ಇದು ಒಳ್ಳೆಯ ಬೆಳವಣಿಗೆ ಅಲ್ಲ. ಮತದಾನದ ಮೂಲಕ ಗೆದ್ದು ಬರಬೇಕು. ಅದನ್ನು ಬಿಟ್ಟು ನನ್ನ ಮಗನನ್ನು ಬೆಳೆಸಿ, ಮೊಮ್ಮಗನನ್ನು ಬೆಳೆಸಿ ಎನ್ನುವುದು ಡಾ. ಅಂಬೇಡ್ಕರ್ ಅವರ ಸಿದ್ಧಾಂತಕ್ಕೆ ಅಪಚಾರ ಎಂದರು.

ಎಲ್‌ಪಿಜಿ ಸಿಲಿಂಡರ್ ದುರುಪಯೋಗ ತಡೆಗೆ ಎಸ್ಮಾ ಜಾರಿಗೊಳಿಸಲಾಗಿದೆ. ಕಾಳಸಂತೆಯನ್ನು ತಡೆಗಟ್ಟುವ ಕೆಲಸವನ್ನು ರಾಜ್ಯ ಸರಕಾರ ಮಾಡಬೇಕು ಎಂದು ಅವರು ಪ್ರಶ್ನೆಗೆ ಉತ್ತರ ನೀಡಿದರು. ಇದು ಯುದ್ಧದ ಸಂದರ್ಭ. ಜನರು ಸಹಕಾರ ನೀಡಬೇಕೆಂದು ಮನವಿ ಮಾಡಿದರು. ಸಿದ್ದರಾಮಯ್ಯನವರು ಯುದ್ಧದ ಸಂದರ್ಭದಲ್ಲೂ ರಾಜಕೀಯ ಮಾಡುತ್ತಿದ್ದಾರೆ ಎಂದು ಟೀಕಿಸಿದರು.

ಮಲ್ಲೇಶ್ವರದ ಬಿಜೆಪಿ ರಾಜ್ಯ ಕಾರ್ಯಾಲಯ ಜಗನ್ನಾಥ ಭವನದಲ್ಲಿ ಮತದಾರರ ಪಟ್ಟಿ ವಿಶೇಷ ತೀವ್ರ ಪರಿಷ್ಕರಣೆಗೆ (ಎಸ್‌ಐಆರ್) ಸಂಬಂಧಿಸಿದ ಕಚೇರಿ ಉದ್ಘಾಟನೆ ಮಾಡಲಾಯಿತು. ಪಕ್ಷದ ರಾಷ್ಟ್ರೀಯ ಕಾರ್ಯದರ್ಶಿ ಹಾಗೂ ಎಸ್‌ಐಆರ್‌ಕರ್ನಾಟಕ- ತೆಲಂಗಾಣದ ಪ್ರಭಾರಿ ಅಲ್ಕಾ ಗುರ್ಜರ್, ಪ್ರತಿಪಕ್ಷ ನಾಯಕ ಆರ್.ಅಶೋಕ, ವಿಧಾನಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ, ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಪಿ.ರಾಜೀವ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.

> ಸಿದ್ದರಾಮಯ್ಯನವರ ಗ್ಯಾಂಗ್ ಪ್ರತಿದಿನ ಡಿನ್ನರ್ ಮಾಡಿಸಲು ಆದೇಶ ನೀಡಿದೆಯಂತೆ. ಇದು ನನಗಿರುವ ಮಾಹಿತಿ. ರಾಜ್ಯದ ಜನರು ಗೊಜ್ಜನ್ನ, ಅನ್ನ ಸಾಂಬಾರ್ ತಿನ್ನುತ್ತಿದ್ದಾರೋ ಗೊತ್ತಿಲ್ಲ. ಈ ಡಿನ್ನರಂತೂ ಸಕಲ ಪದಾರ್ಥ ಸಿಗುವಂತೆ ಮಾಡುತ್ತಿದ್ದಾರೆ. ಇದು ಡಿನ್ನರ್ ಪಾರ್ಟಿ ಸರಕಾರ.
> – ಆರ್.ಅಶೋಕ, ಪ್ರತಿಪಕ್ಷ ನಾಯಕ

ಕುಡಿಯುವ ನೀರಿನಲ್ಲಿ ಮಾಲಿನ್ಯಕಾರಕ ಹೆಚ್ಚಳ

ದೆಹಲಿ: ಜಲ ಜೀವನ್ ಮಿಷನ್ ಯೋಜನೆಯಡಿ ಕರ್ನಾಟಕ ಸರಕಾರವು ಕಳೆದ ಮೂರು ವರ್ಷಗಳಲ್ಲಿ ಪ್ರಯೋಗಾಲಯಗಳಲ್ಲಿ ನಡೆಸಿದ ಪರೀಕ್ಷೆಗಳಲ್ಲಿ ಕುಡಿಯುವ ನೀರಿನ ಮಾದರಿಗಳಲ್ಲಿ ಗಣನೀಯ

ಮಾಲಿನ್ಯ ಕಾರಕಗಳು ಪತ್ತೆಯಾಗಿವೆ ಎಂದು ಜಲಶಕ್ತಿ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ತಿಳಿಸಿದ್ದಾರೆ.

ಲೋಕಸಭೆಯಲ್ಲಿ ಪ್ರಶ್ನೋತ್ತರ ಅವಧಿಯಲ್ಲಿ ಹಲವು ಸದಸ್ಯರು ಕೇಳಿದ ಪ್ರಶ್ನೆಗಳಿಗೆ ಸಚಿವರು ಲಿಖಿತ ಉತ್ತರ ನೀಡಿದ್ದಾರೆ. ಕುಡಿಯುವ ನೀರಿನ ಮಾದರಿಗಳಲ್ಲಿ ಫ್ಲೋರೈಡ್, ಆರ್ಸೆನಿಕ್, ಕಬ್ಬಿಣ, ನೈಟ್ರೇಟ್, ಲವಣಾಂಶ ಮತ್ತು ಸೂಕ್ಷ್ಮಜೀವಿಯಂತಹ ಮಾಲಿನ್ಯಕಾರಕಗಳು ಕಂಡು ಬಂದಿವೆ. ಉತ್ತರ ಕರ್ನಾಟಕ ಹಾಗೂ ಬಯಲುಸೀಮೆಯ ಜಿಲ್ಲೆಗಳಲ್ಲಿ ಮಾಲಿನ್ಯಕಾರಕಗಳ ಪ್ರಮಾಣ ಜಾಸ್ತಿ ಇದೆ ಎಂದು ಅವರು ಮಾಹಿತಿ ನೀಡಿದ್ದಾರೆ.

ನೀರಿನ ಗುಣಮಟ್ಟದ ವರದಿಗಳ ಆಧಾರದಲ್ಲಿ ನಿಯಮಿತವಾಗಿ ಪರಿಹಾರ ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದು ರಾಜ್ಯ ಸರಕಾರ ತಿಳಿಸಿದೆ. ನೀರಿನ ಮಾದರಿಗಳನ್ನು ಪರೀಕ್ಷೆ ನಡೆಸಿ ಸೋಂಕು ನಿವಾರಕ ಹಾಕಲಾಗುತ್ತಿದೆ ಹಾಗೂ ಶುಚಿಗೊಳಿಸಲಾಗುತ್ತಿದೆ. ನೀರಿನ ಗುಣಮಟ್ಟ ಪರಿಶೀಲಿಸಲು ಜಿಲ್ಲಾ ಹಾಗೂ ತಾಲೂಕು ಮಟ್ಟದ ಕಾರ್ಯಪಡೆಗಳನ್ನು ರಚಿಸಲಾಗಿದೆ ಎಂದು ಅವರು ತಿಳಿಸಿದ್ದಾರೆ.

ಅಮೃತ್ ಯೋಜನೆಯಡಿ ಜಿಯೋಸ್ಪೇಷಿಯಲ್ ದತ್ತಾಂಶಗಳನ್ನು ಬಳಸಿಕೊಂಡು ನೀರು ಹಾಗೂ ಒಳಚರಂಡಿ ಜಾಲಗಳ ಮ್ಯಾಪಿಂಗ್ ಮಾಡುವಂತೆ ರಾಜ್ಯ ಸರಕಾರಗಳಿಗೆ ಇತ್ತೀಚೆಗೆ ನಿರ್ದೇಶನ ನೀಡಲಾಗಿದೆ ಎಂದು ಅವರು ಹೇಳಿದ್ದಾರೆ.

ಸಮಾಚಾರ ಸಣ್ಣದಲ್ಲ

ಒಳಮೀಸಲು ವಿಚಾರ: 28ರಂದು ವಿಶೇಷ ಸಭೆ

ತುಮಕೂರು: ಒಳಮೀಸಲು ವಿಚಾರವಾಗಿ ಮಾ.28ರಂದು ಮುಖ್ಯಮಂತ್ರಿಗಳು ವಿಶೇಷ ಸಭೆ ಕರೆದಿದ್ದಾರೆ. ಅಂದು ಈ ಸಮಸ್ಯೆ ಬಗೆಹರಿಯುವ ವಿಶ್ವಾಸವಿದೆ ಎಂದು ಸಚಿವ ಪರಮೇಶ್ವರ್ ತಿಳಿಸಿದರು. ಸುದ್ದಿಗಾರರೊಂದಿಗೆ ಮಾತನಾಡಿ, ಸರಕಾರದ ಆದೇಶ ಹೊರಬಿದ್ದ ತಕ್ಷಣ 50 ಸಾವಿರ ಹುದ್ದೆಗಳ ಆಯ್ಕೆ ಪ್ರಕ್ರಿಯೆ ಆರಂಭವಾಗಲಿದೆ. ಇದರಲ್ಲಿ ಪೊಲೀಸ್ ಇಲಾಖೆಯ 8 ಸಾವಿರ ಹುದ್ದೆಗಳೂ ಸೇರಿವೆ ಎಂದರು. ಅಂತಾರಾಷ್ಟ್ರೀಯ ಬಿಕ್ಕಟ್ಟಿನ ನಡುವೆಯೂ ಗ್ಯಾಸ್ ಪೂರೈಕೆಯಲ್ಲಿ ತೊಂದರೆಯಿಲ್ಲ. ಹಾರ್ಮೋಸ್ ಸ್ಟ್ರಿಟ್‌ನಿಂದ ಭಾರತದ ಹಡಗುಗಳಿಗೆ ಮುಕ್ತ ಅವಕಾಶವಿರುವುದರಿಂದ ಪೆಟ್ರೋಲ್ ಮತ್ತು ಗ್ಯಾಸ್ ಪೂರೈಕೆ ಸುಗಮವಾಗಿದೆ. ತುಮಕೂರಿನಲ್ಲಿ ಗೃಹ ಬಳಕೆಯ ಸಿಲಿಂಡರ್ ಕೊರತೆ ಇಲ್ಲ. ಒಂದು ವೇಳೆ ಯಾರಾದರೂ ಸಿಲಿಂಡರ್ ದಾಸ್ತಾನು ಮಾಡಿ ಕಾಳಸಂತೆಯಲ್ಲಿ ಮಾರಾಟ ಮಾಡಿದರೆ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಸಿದರು.

ಸಿದ್ದರಾಮಯ್ಯ ಔಟ್ ಗೋಯಿಂಗ್ ಸಿಎಂ

ತುಮಕೂರು: ತಮ್ಮ ಅಧಿಕಾರಾವಧಿಯಲ್ಲಿ ಏನೂ ಸಾಧನೆ ಮಾಡದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಔಟ್ ಗೋಯಿಂಗ್ ಸಿಎಂ. ಅವರು ರಾಜೀನಾಮೆಗೆ ಸಿದ್ಧವಾಗುತ್ತಿದ್ದಾರೆ ಎಂದು ವಿಧಾನ ಪರಿಷತ್ ಪ್ರತಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ವ್ಯಂಗ್ಯವಾಡಿದರು. ಮಲ್ಲೇಶ್ವರದ ಬಿಜೆಪಿ ರಾಜ್ಯ ಕಾರ್ಯಾಲಯದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ನನ್ನ ರೀತಿ ಪುತ್ರ ಯತೀಂದ್ರರನ್ನು ಆಶೀರ್ವದಿಸಿ ಎಂದು ಮುಖ್ಯಮಂತ್ರಿ ಹೇಳಿದ್ದಾರೆ. ಅವರ ರಾಜಕೀಯ ಆಯಿತು. ಈಗ ಮಗನನ್ನು ರಕ್ಷಿಸಿ ಎನ್ನುತ್ತಾರೆ. ವಂಶಪಾರಂಪರ್ಯಕ್ಕೆ ಅವರು ಜೋತು ಬಿದ್ದಿದ್ದಾರೆ. ಅವರು ತಮ್ಮ ಮಗನ ಪರವಾಗಿ ಮಾತನಾಡುವುದನ್ನು ಬಿಟ್ಟು ರಾಜ್ಯದ ಜನತೆ ಪರ ಮಾತನಾಡಬೇಕಿತ್ತು. ಇದು ಅವರ ರಾಜಕೀಯ ಜೀವನದ ಅಂತ್ಯದ ದಿನಗಳ ಮಾತು. ರಾಜ್ಯಸಭಾ ಚುನಾವಣೆ ಬರುತ್ತಿದೆ. ಅವರು ತಮ್ಮ ಸ್ಥಾನ ಕಳೆದುಕೊಳ್ಳುತ್ತಾರೆ. ಇದುವರೆಗೆ ಅವರು ನಾನೇ ಐದು ವರ್ಷ ರಾಜ್ಯದ ಸಿಎಂ ಆಗಿ ಇರುತ್ತೇನೆ ಅಂತ ಹೇಳಿಕೊಂಡಿದ್ದರು. ಈಗ ಅದನ್ನು ಹೇಳಲಿ? ಈಗ ಹಾಗೆ ಹೇಳುವ ತಾಕತ್ತಿಲ್ಲ. ಅದಕ್ಕೆಂದೇ ವೈರಾಗ್ಯದ ಮಾತುಗಳನ್ನು ಆಡುತ್ತಾರೆ. ನನ್ನ ಕಾಲ ಮುಗಿಯಿತು. ಇನ್ನು ನನ್ನ ಮಗನನ್ನು ಕಾಪಾಡಿ ಎಂದು ಅಂಗಲಾಚುತ್ತಿದ್ದಾರೆ. ಸದ್ಯದಲ್ಲೇ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ಬಿಸಾಕಿ ಹೋಗುತ್ತಾರೆ ಎಂದರು.

ಕೆಪಿಎಸ್‌ಸಿ ನೇಮಕ ಅಕ್ರಮ: ಸಮಗ್ರ ತನಿಖೆ

ಕಲಬುರಗಿ: ಕರ್ನಾಟಕ ಲೋಕಸೇವಾ ಆಯೋಗ (ಕೆಪಿಎಸ್‌ಸಿ) ನಡೆಸಿದ ವಿವಿಧ ನೇಮಕಾತಿ ಪರೀಕ್ಷೆಗಳಲ್ಲಿನ ಅಕ್ರಮ ಆರೋಪಗಳ ಕುರಿತು ಸರಕಾರ ಗಂಭೀರವಾಗಿ ಗಮನಹರಿಸಿದ್ದು, ಸಮಗ್ರ ತನಿಖೆಗೆ ಆದೇಶಿಸಲಾಗಿದೆ ಎಂದು ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದರು. ಸುದ್ದಿಗಾರರೊಂದಿಗೆ ಮಾತನಾಡಿ, ಪಿಡಿಒ, ಬಿಬಿಎಂಪಿ ಸಹಾಯಕ ಎಂಜಿನಿಯರ್ ಹಾಗೂ ವಾಣಿಜ್ಯ ತೆರಿಗೆ ಪರಿವೀಕ್ಷಕ ಹುದ್ದೆಗಳ ನೇಮಕಾತಿ ಪರೀಕ್ಷೆಗಳ ಬಗ್ಗೆ ಹಲವು ದೂರುಗಳು ಬಂದಿವೆ. ಈ ಹಿನ್ನೆಲೆಯಲ್ಲಿ ಮುಖ್ಯಮಂತ್ರಿಗಳು ವಿಷಯವನ್ನು ಪರಿಶೀಲಿಸಿ ತನಿಖೆ ನಡೆಸಲು ಸೂಚನೆ ನೀಡಿದ್ದಾರೆ ಎಂದು ಹೇಳಿದರು. 384 ಗೆಜೆಟೆಡ್ ಪ್ರೊಬೆಷನರಿ ಹುದ್ದೆಗಳ ನೇಮಕಾತಿಯಲ್ಲೂ ಅಕ್ರಮದ ಶಂಕೆ ವ್ಯಕ್ತವಾಗಿದ್ದು, ಒಂದೇ ಪರೀಕ್ಷಾ ಕೊಠಡಿಯಲ್ಲಿ ಪರೀಕ್ಷೆ ಬರೆದ ಹಲವು ಅಭ್ಯರ್ಥಿಗಳು ರ‍್ಯಾಂಕ್ ಪಡೆದಿರುವುದು ಗಮನಕ್ಕೆ ಬಂದಿದೆ. ಈ ವಿಷಯದ ಕುರಿತು ತನಿಖೆ ನಡೆಸಲು ಸೂಚಿಸಲಾಗಿದೆ. ಆದರೆ ಕೆಲವರು ನ್ಯಾಯಾಲಯಕ್ಕೆ ಮೊರೆ ಹೋಗಿರುವ ಹಿನ್ನೆಲೆಯಲ್ಲಿ ಪ್ರಕ್ರಿಯೆ ತಾತ್ಕಾಲಿಕವಾಗಿ ಮುಂದು ವರಿದಿದೆ ಎಂದು ತಿಳಿಸಿದರು. ಕಲಬುರಗಿ ನಗರದ ಬಹಮನಿ ಕೋಟೆ ಪ್ರದೇಶದಲ್ಲಿ ವಾಸವಿರುವ ಕುಟುಂಬಗಳನ್ನು ಸುಪ್ರೀಂ ಕೋರ್ಟ್ ನಿರ್ದೇಶನದಂತೆ ಸ್ಥಳಾಂತರಿಸುವ ಯೋಜನೆ ರೂಪಿಸಲಾಗಿದೆ. ಐದು ಎಕರೆ ಜಾಗ ಗುರುತಿಸಲಾಗಿದ್ದು, ಅಲ್ಲಿ ನಿವೇಶನ ನೀಡುವ ಮೂಲಕ ನಿವಾಸಿಗಳನ್ನು ಸ್ಥಳಾಂತರಿಸಿ ಕೋಟೆಯ ಅಭಿವೃದ್ಧಿಗೆ ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದರು.

ಇಂಡಿಗೋ ಸೇವೆ ಮೇ 1ರಿಂದ ಸ್ಥಗಿತ

ಶಿವಮೊಗ್ಗ: ಬೆಂಗಳೂರು, ಹುಬ್ಬಳ್ಳಿ ಸೇರಿದಂತೆ ದೇಶದ 131 ನಗರಗಳಿಗೆ ಸಂಪರ್ಕ ಕಲ್ಪಿಸುತ್ತಿದ್ದ ಪ್ರಮುಖ ವಿಮಾನಯಾನ ಸಂಸ್ಥೆ ಇಂಡಿಗೋ ಏಪ್ರಿಲ್ ಅಂತ್ಯಕ್ಕೆ ತನ್ನ ಸೇವೆಯನ್ನು ಸ್ಥಗಿತಗೊಳಿಸುವ ಮುನ್ಸೂಚನೆ ನೀಡಿದೆ. ಮಾಹಿತಿಯ ಪ್ರಕಾರ, ಇಂಡಿಗೋ ಸಂಸ್ಥೆಯು ಏಪ್ರಿಲ್ 30ರ ವರೆಗಷ್ಟೇ ಟಿಕೆಟ್ ಕಾಯ್ದಿರಿಸಲು ಅವಕಾಶ ನೀಡಿದ್ದು, ಮೇ 1ರಿಂದ ಯಾವುದೇ ಬುಕ್ಕಿಂಗ್ ಲಭ್ಯವಿಲ್ಲ. ಇದು ಅಚ್ಚರಿಗೆ ಕಾರಣವಾಗಿದೆ. ಇತ್ತೀಚೆಗೆ ಅಹಮದಾಬಾದ್‌ನಲ್ಲಿ ನಡೆದ ವಿಮಾನ ದುರಂತದ ಹಿನ್ನೆಲೆ ಡಿಜಿಸಿಎ ವಿಮಾನಯಾನ ನಿಯಮಗಳನ್ನು ಅತ್ಯಂತ ಕಠಿಣಗೊಳಿಸಿದೆ. ಪೈಲಟ್‌ಗಳ ಕೆಲಸದ ಅವಧಿ ಮತ್ತು ವಿಮಾನಗಳ ನಿರ್ವಹಣೆಗೆ ಸಂಬಂಧಿಸಿದ ಹೊಸ ನಿಯಮಗಳಿಂದಾಗಿ ಇಂಡಿಗೋ ಸಂಸ್ಥೆಗೆ ಪೈಲಟ್‌ಗಳು ಕೊರತೆ ಎದುರಾಗಿದೆ. ಈ ತಾಂತ್ರಿಕ ಕಾರಣದಿಂದಾಗಿ ಸಂಸ್ಥೆಯು ಸಣ್ಣ ನಗರಗಳಿಗೆ ನೀಡುತ್ತಿದ್ದ ಎಟಿಆರ್ ವಿಮಾನ ಸೇವೆಗಳನ್ನು ಕಡಿತಗೊಳಿಸಲು ಮುಂದಾಗಿದೆ ಎನ್ನಲಾಗಿದೆ.

ಯುಕೆಪಿ ಹಂತ 3ರ ಭೂಪರಿಹಾರಕ್ಕಾಗಿ 3 ಸಾವಿರ ಕೋಟಿ ರು. ಮೀಸಲು: ಸಿಎಂ ಸಿದ್ದರಾಮಯ್ಯ

ಪ್ರಾದೇಶಿಕ ಅಸಮಾನತೆ ನಿವಾರಿಸಲು ಸರಕಾರ ಬದ್ಧ

ಬಾಗಲಕೋಟೆ: ಉತ್ತರ ಕರ್ನಾಟಕದ ಪ್ರಾದೇಶಿಕ ಅಸಮಾನತೆಯನ್ನು ನಿವಾರಿಸಲು ಸರಕಾರ ಬದ್ಧವಾಗಿದ್ದು, ಕಾಂಗ್ರೆಸ್ ಸರಕಾರ ನುಡಿದಂತೆ ನಡೆಯುವ ಜನರ ಸರಕಾರ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಬಾಗಲಕೋಟೆ ವೈದ್ಯಕೀಯ ಮಹಾವಿದ್ಯಾಲಯ ಹಾಗೂ ಸಂಶೋಧನಾ ಸಂಸ್ಥೆ ಶಂಕುಸ್ಥಾಪನೆ ಹಾಗೂ ವಿವಿಧ ಅಭಿವೃದ್ಧಿ ಕಾಮಗಾರಿಗಳ ಉದ್ಘಾಟನೆ ಮತ್ತು ಕೃಷ್ಣ ಮೇಲ್ದಂಡೆ ಯೋಜನೆಗೆ ಭೂ ಸ್ವಾಧೀನಗೊಳ್ಳುವ ಜಮೀನುಗಳಿಗೆ ಒಪ್ಪಂದದ ದರದಂತೆ ಪರಿಹಾರ ವಿತರಣೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಈ ಭಾಗದ ಶಾಸಕರಾಗಿದ್ದ ಎಚ್.ವೈ. ಮೇಟಿಯವರು ದಿವಂಗತರಾಗಿದ್ದು, ಅವರ ಆತ್ಮಕ್ಕೆ ಚಿರಶಾಂತಿ ಕೋರುವುದಾಗಿ ಸಿಎಂ ತಿಳಿಸಿದರು.

ಬಾಗಲಕೋಟೆ ಸರಕಾರಿ ಮೆಡಿಕಲ್ ಕಾಲೇಜಿನ ಶಂಕುಸ್ಥಾಪನೆಯಾಗಲು ಎಚ್.ವೈ.ಮೇಟಿಯವರೇ ಕಾರಣ. ಮೆಡಿಕಲ್ ಕಾಲೇಜ್ ಸ್ಥಾಪಿಸಲು 2025ರ ಬಜೆಟ್‌ನಲ್ಲಿ ಘೋಷಣೆಯಾಗಿದ್ದು, ಇಂದು ಶಂಕುಸ್ಥಾಪನೆಗೊಳ್ಳುತ್ತಿದೆಯೇ ಹೊರತು, ಉಪ ಚುನಾವಣೆಯ ಕಾರಣಕ್ಕಾಗಿ ಅಲ್ಲ. ನಮ್ಮ ಸರಕಾರ ಅಧಿಕಾರಕ್ಕೆ ಬಂದ ಮೇಲೆ ಅನೇಕ ಜಿಲ್ಲೆಗಳನ್ನು ಅಭಿವೃದ್ಧಿಗೊಳಿಸುವ ದಿಸೆಯಲ್ಲಿ ಹಲವು ಶಂಕು ಸ್ಥಾಪನೆ ಹಾಗೂ ಉದ್ಘಾಟನೆಗಳನ್ನು ಮಾಡಲಾಗಿದೆ ಎಂದರು.

ಯುಕೆಪಿ ಹಂತ 3 ಭೂ ಪರಿಹಾರ ಒಂದೇ ಬಾರಿಗೆ ಪಾವತಿ: ಬಿಜೆಪಿಯವರು ತಮ್ಮ ಅವಧಿಯಲ್ಲಿ ಯುಕೆಪಿ ಯೋಜನೆಗೆ ಪರಿಹಾರ ನೀಡಲು ಆಸಕ್ತಿ ವಹಿಸಲಿಲ್ಲ. ಆದ್ದರಿಂದ ರೈತರು ಭೂಮಿ ನೀಡಲು ಮುಂದೆ ಬರಲಿಲ್ಲ. ಈಗ ರೈತರಿಗೆ ಭೂ ಪರಿಹಾರವನ್ನು ಒಂದೇ ಬಾರಿಗೆ ನೀಡಲು ಕಾಂಗ್ರೆಸ್ ಸರಕಾರ ನಿರ್ಣಯಿಸಿದೆ. ಈ ಬಾರಿಯ ಬಜೆಟ್‌ನಲ್ಲಿ ಯುಕೆಪಿ ಯೋಜನೆಯ 3 ಹಂತದಲ್ಲಿ ಭೂ ಪರಿಹಾರಕ್ಕೆ ಹಣ ಮೀಸಲಿಡಲಾಗಿದ್ದು, ನಂತರವೂ ಹೆಚ್ಚಿನ ಅನುದಾನಕ್ಕೆ ವ್ಯವಸ್ಥೆಗೊಳಿಸಲಾಗುವುದು. ಸ್ವಯಂಪ್ರೇರಣೆಯಿಂದ ಭೂಮಿ ನೀಡುವ ರೈತರಿಗೆ ನೀರಾವರಿ ಜಮೀನಿಗೆ 40 ಲಕ್ಷ ರು. ಹಾಗೂ ಖುಷ್ಕಿ ಜಮೀನಿಗೆ 30 ಲಕ್ಷ ರು. ನೀಡಲು ಸರಕಾರ ನಿರ್ಣಯಿಸಿದೆ. ಆದರೆ ಈ ಬಗ್ಗೆ ಬಿಜೆಪಿಯವರು ಅಪಪ್ರಚಾರ ಮಾಡುತ್ತಿದ್ದಾರೆ ಎಂದರು. ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮಾತನಾಡಿ, ನಮ್ಮ ಸರಕಾರ ನುಡಿದಂತೆ ನಡೆಯುತ್ತಿದ್ದು, ಬಡವರ ಪರವಾಗಿ ಕಾರ್ಯಕ್ರಮಗಳನ್ನು ರೂಪಿಸುತ್ತಿದೆ. ಹೀಗಾಗಿ ಮುಂಬರುವ ಉಪಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗೆ ಬೆಂಬಲ ನೀಡಿ, ಮತ್ತೆ ನಿಮ್ಮ ಗ್ಯಾರಂಟಿ ಸರಕಾರಕ್ಕೆ ಆಶೀರ್ವಾದ ಮಾಡಿ ಎಂದು ಮನವಿ ಮಾಡಿದರು. ನೀವು ನಮಗೆ ಆಶೀರ್ವಾದ ಮಾಡಿದಿರಿ, ನಾವು ಕೊಟ್ಟ ಮಾತಿನಂತೆ ಐದು ಗ್ಯಾರಂಟಿ ಯೋಜನೆಗಳನ್ನು ಜಾರಿ ಮಾಡಿ ದೇಶಕ್ಕೆ ಮಾದರಿಯಾಗಿದ್ದೇವೆ. ಕರ್ನಾಟಕವನ್ನು ನೋಡಿಕೊಂಡು ಬೇರೆ ರಾಜ್ಯಗಳಲ್ಲಿ ಗ್ಯಾರಂಟಿ ಘೋಷಣೆ ಮಾಡಲಾಗುತ್ತಿದೆ. ಚುನಾವಣೆಗೂ ಮುನ್ನ ನಾನು ಇಲ್ಲಿಗೆ ಬಂದಾಗ, ಕಮಲ ಕೆರೆಯಲ್ಲಿದ್ದರೆ ಚಂದ, ತೆನೆ ಹೊಲದಲ್ಲಿದ್ದರೆ ಚಂದ, ದಾನ ಧರ್ಮ ಮಾಡುವ ಕೈ ಅಧಿಕಾರದಲ್ಲಿದ್ದರೆ ಮಾತ್ರ ಚಂದ ಎಂದು ಹೇಳಿದ್ದೆ. ಈ ದಾನ ಧರ್ಮ ಮಾಡುವ ಕೈ ಅಧಿಕಾರದಲ್ಲಿ ಇದ್ದ ಕಾರಣಕ್ಕೆ ಈ ಯೋಜನೆ ಜಾರಿಯಾಗಿವೆ. ಐದು ಬೆರಳು ಸೇರಿ ಕೈ ಮುಷ್ಠಿಯಾಯಿತು, ಐದು ಗ್ಯಾರಂಟಿ ಸೇರಿ ಕೈ ಗಟ್ಟಿಯಾಯಿತು. ನಮ್ಮ ಸರಕಾರ ಗ್ಯಾರಂಟಿ ಯೋಜನೆಗಳ ಮೂಲಕ ಬಡ ಕುಟುಂಬಗಳಿಗೆ ಪ್ರತಿ ತಿಂಗಳು 5 ಸಾವಿರ ರು. ಉಳಿತಾಯವಾಗುವಂತೆ ಮಾಡಿದೆ ಎಂದು ತಿಳಿಸಿದರು.

ಕೆಲವೇ ದಿನಗಳಲ್ಲಿ ಮೇಟಿ ಅವರ ಸ್ಥಾನಕ್ಕೆ ಚುನಾವಣೆ ನಡೆಯಲಿದ್ದು, ಮೇಟಿ ಅವರು ಎಷ್ಟು ಅಂತರದಿಂದ ಗೆದ್ದಿದ್ದರೋ ಅದಕ್ಕಿಂತ ಹೆಚ್ಚಿನ ಅಂತರದಲ್ಲಿ ನಮ್ಮ ಅಭ್ಯರ್ಥಿಯನ್ನು ಗೆಲ್ಲಿಸಬೇಕು. ಈ ಜಿಲ್ಲೆಯ ನಮ್ಮ ಎಲ್ಲ ನಾಯಕರು ನಿಮ್ಮ ಸೇವೆ ಮಾಡಲು ಸಿದ್ಧವಿದ್ದೇವೆ. ನಾವು ನಿಮ್ಮ ಜತೆಗೆ ಇದ್ದೇವೆ ಎಂದು ಹೇಳಲು ನಾವು ಇಲ್ಲಿಗೆ ಬಂದಿದ್ದೇವೆ. ಕಳೆದ ವರ್ಷ ನಡೆದ 3 ಕ್ಷೇತ್ರಗಳ ಉಪಚುನಾವಣೆಯಲ್ಲಿ ಇಬ್ಬರು ಮಾಜಿ ಸಿಎಂ ಪುತ್ರರನ್ನು ಜನ ಸೋಲಿಸಿದರು. ಈ ಗ್ಯಾರಂಟಿ ಸರಕಾರಕ್ಕೆ ಆಶೀರ್ವಾದ ಮಾಡಿದರು. ಇದು ನಮ್ಮದೇ ಕ್ಷೇತ್ರ, ಬಡವರಿಗೆ ನಾವು ಮಾಡುತ್ತಿರುವ ಕಾರ್ಯಕ್ರಮವನ್ನು ಗಮನದಲ್ಲಿಟ್ಟುಕೊಂಡು ನೀವುಗಳೇ ನಮಗೆ ಆಶೀರ್ವಾದ ಮಾಡಬೇಕು ಎಂದು ತಿಳಿಸಿದರು.



ಬಾಗಲಕೋಟೆಯ ನವನಗರದಲ್ಲಿ ಆಯೋಜಿಸಿದ್ದ ಬಾಗಲಕೋಟೆ ವೈದ್ಯಕೀಯ ಮಹಾವಿದ್ಯಾಲಯ ಹಾಗೂ ಸಂಶೋಧನಾ ಸಂಸ್ಥೆಯ ಶಂಕುಸ್ಥಾಪನೆ, ವಿವಿಧ ಅಭಿವೃದ್ಧಿ ಕಾಮಗಾರಿಗಳ ಉದ್ಘಾಟನೆ ಮತ್ತು ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-3ರಲ್ಲಿ ಭೂಸ್ವಾಧೀನಗೊಳ್ಳುವ ಜಮೀನುಗಳಿಗೆ ಒಪ್ಪಂದದ ದರದಂತೆ ಪರಿಹಾರ ವಿತರಿಸುವ ಕಾರ್ಯಕ್ರಮಕ್ಕೆ ಸಿಎಂ ಸಿದ್ದರಾಮಯ್ಯ ಚಾಲನೆ ನೀಡಿದರು. ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಸಚಿವರಾದ ಎಂ.ಬಿ.ಪಾಟೀಲ್, ಎಚ್.ಕೆ.ಪಾಟೀಲ್, ಶಿವನಾಂದ ಪಾಟೀಲ್, ಡಾ. ಶರಣ ಪ್ರಕಾಶ ಪಾಟೀಲ್, ಆರ್.ಬಿ.ತಿಮ್ಮಾಪೂರ, ಶಾಸಕರಾದ ವಿಜಯಾನಂದ ಕಾಶಪ್ಪನವರ್ ಇದ್ದರು.

> **ಸಿಲಿಂಡರ್ ಸರಬರಾಜು ಸುಗಮಗೊಳಿಸುವುದು ಕೇಂದ್ರ ಸರಕಾರದ ಜವಾಬ್ದಾರಿ. ರಾಜ್ಯ ಸರಕಾರ ಕೇಂದ್ರ ಸರಕಾರ ಕೊಟ್ಟರೆ ವಿತರಣೆ ಮಾಡುತ್ತದೆ. ಆಹಾರ ಸಚಿವರು ಎರಡು ಸಭೆಗಳನ್ನು ಈಗಾಗಲೇ ನಡೆಸಿದ್ದು, ಕೇಂದ್ರ ಸಚಿವರಿಗೆ ಪತ್ರವನ್ನೂ ಬರೆಯಲಾಗಿದೆ. ಸಿಲಿಂಡರ್ ಅಭಾವವಾಗದಂತೆ ಎಚ್ಚರಿಕೆ ವಹಿಸಲು ಕೋರಲಾಗಿದೆ.**
>
> **-ಸಿದ್ದರಾಮಯ್ಯ**, ಸಿಎಂ

ಬಿಜೆಪಿಯವರು ಏಕೆ ವೈದ್ಯಕೀಯ ಕಾಲೇಜು ಮಾಡಲಿಲ್ಲ?: ಸಿಎಂ

ಬಾಗಲಕೋಟೆ: ದಿವಂಗತ ಎಚ್.ವೈ.ಮೇಟಿಯವರ ಪ್ರಯತ್ನ ಮತ್ತು ಆಶಯದಂತೆ ಸರಕಾರಿ ವೈದ್ಯಕೀಯ ಕಾಲೇಜು ಉದ್ಘಾಟಿಸುವ ಮೂಲಕ ಅವರ ಕನಸನ್ನು ನನಸು ಮಾಡಲಾಗುತ್ತಿದೆ ಎಂದು ಸಿಎಂ ಸಿದ್ದರಾಮಯ್ಯ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಕೃಷ್ಣಾ ಮೇಲ್ದಂಡೆ ಯೋಜನೆಗೆ ಬಜೆಟ್‌ನಲ್ಲಿ ಯಾವುದೇ ಅನುದಾನ ಮೀಸಲಿಟ್ಟಿಲ್ಲ ಎಂಬುದು ವಿಪಕ್ಷಗಳ ರಾಜಕೀಯ ಟೀಕೆ. ಈ ಯೋಜನೆಯ ಸಂತ್ರಸ್ತರಿಗೆ ಪರಿಹಾರ ಚೆಕ್ ವಿತರಿಸುವ ಕಾರ್ಯವನ್ನು ಇಂದಿನಿಂದ ಪ್ರಾರಂಭಿಸಲಾಗುತ್ತಿದ್ದು, ಸಂತ್ರಸ್ತರೆಲ್ಲರಿಗೂ ಮುಂದಿನ ಮೂರ್ನಾಲ್ಕು ವರ್ಷಗಳ ಅವಧಿಯಲ್ಲಿ ವಿತರಣೆ ಮಾಡಲಾಗುವುದು ಎಂದರು.

ಬಿಜೆಪಿಯವರು ನಾಲ್ಕು ವರ್ಷ ಅಧಿಕಾರದಲ್ಲಿದ್ದರೂ ಈ ಭಾಗದಲ್ಲಿ ವೈದ್ಯಕೀಯ ಕಾಲೇಜು ಏಕೆ ಮಾಡಲಿಲ್ಲ? ನಮ್ಮ ಸರಕಾರ ಜನರ ಅಗತ್ಯತೆಯನ್ನು ಪೂರೈಸುವ ಮೂಲಕ ಅವರಿಗೆ ಸಹಕಾರಿಯಾಗುತ್ತಿದೆ, ಇದು ಗಿಮಿಕ್ ಹೇಗಾಗುತ್ತದೆ? ಈಗಾಗಲೇ ಟೆಂಡರ್ ಕರೆದು ಏಜೆನ್ಸಿ ನಿಗದಿಯಾಗಿದೆ. ಕೆಲಸ ಪ್ರಾರಂಭವಾಗಬೇಕಿದ್ದು, ಅದಕ್ಕೆ ಅಡಿಗಲ್ಲು ಹಾಕಲಾಗುತ್ತಿದೆ ಎಂದು ತಿಳಿಸಿದರು.

ಬಾಗಲಕೋಟೆ ಮತ್ತು ದಾವಣಗೆರೆ ಉಪಚುನಾವಣೆ ಅಭ್ಯರ್ಥಿಗಳ ಆಯ್ಕೆಯನ್ನು ಹೈಕಮಾಂಡ್ ತೀರ್ಮಾನ ಮಾಡುತ್ತದೆ. ಎಚ್.ವೈ ಮೇಟಿ ಕುಟುಂಬದವರೂ ಒಬ್ಬ ಟಿಕೆಟ್ ಆಕಾಂಕ್ಷಿಯಾಗಿದ್ದಾರೆ. ಉಪಚುನಾವಣೆ ಒಂದು ವಾರದೊಳಗೆ ಘೋಷಣೆಯಾಗಬಹುದು. ಯಾರಾದರೂ ಆಕಾಂಕ್ಷಿಯಾಗಬಹುದು. ಒಂದೇ ಕುಟುಂಬದಿಂದ ಎಷ್ಟು ಜನ ಕೇಳಿದರೂ ಒಬ್ಬರಿಗೆ ಹೈಕಮಾಂಡ್ ಟಿಕೆಟ್ ನೀಡುವುದು. ಉಪಚುನಾವಣೆಗೆ ಎಲ್ಲ ತಯಾರಿ ನಡೆದಿದ್ದು, ನಾವು ಅದಕ್ಕೆ ಸಿದ್ಧರಿದ್ದೇವೆ ಎಂದು ತಿಳಿಸಿದರು.

> **ಪ್ರತಿ ಜಿಲ್ಲೆಗಳಲ್ಲಿ ಮೆಡಿಕಲ್ ಕಾಲೇಜು ಹಾಗೂ ಟ್ರಾಮಾ ಸೆಂಟರ್‌ಗಳನ್ನು ಸ್ಥಾಪಿಸುವ ಉದ್ದೇಶವಿದ್ದು, ಈಗಾಗಲೇ ಸುಮಾರು 25 ಜಿಲ್ಲೆಗಳಲ್ಲಿ ಕ್ರಮ ಕೈಗೊಳ್ಳಲಾಗಿದೆ. ಮುಂದಿನ ವರ್ಷ ಬಾಗಲಕೋಟೆಯಲ್ಲಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯನ್ನು ಸ್ಥಾಪಿಸಲು ಕ್ರಮ ಕೈಗೊಳ್ಳಲಾಗುವುದು.**
>
> **-ಸಿದ್ದರಾಮಯ್ಯ**, ಸಿಎಂ

ಬಡವರಿಗಾಗಿ ಮೆಡಿಕಲ್ ಕಾಲೇಜು ಆರಂಭ

ಬಡವರಿಗಾಗಿ ನಾವು ಈ ಭಾಗದಲ್ಲಿ ಮೆಡಿಕಲ್ ಕಾಲೇಜು ಕೊಟ್ಟಿದ್ದೇವೆ. ಆರೋಗ್ಯ ಕ್ಷೇತ್ರದಲ್ಲಿ ಬಡವರಿಗೆ ನೆರವಾಗಲು ಪ್ರತಿ ಜಿಲ್ಲೆಯಲ್ಲಿ ಮೆಡಿಕಲ್ ಕಾಲೇಜು ಮಾಡಲು ಸಂಕಲ್ಪ ಮಾಡಿದ್ದೇವೆ. ಕರ್ನಾಟಕದಲ್ಲಿ 70 ಮೆಡಿಕಲ್ ಕಾಲೇಜುಗಳಿವೆ. ರಾಜ್ಯದಲ್ಲಿ ಬಡವರ ಮಕ್ಕಳಿಗಾಗಿ 13,945 ಮೆಡಿಕಲ್ ಸೀಟುಗಳನ್ನು ನೀಡಲಾಗಿದೆ. 7,501 ಪಿಜಿ ಸೀಟುಗಳಿವೆ. 3,405 ದಂತ ವೈದ್ಯಕೀಯ ಕಾಲೇಜು, 933 ಪಿಜಿ ಸೀಟು ಗಳಿವೆ. 44 ಸಾವಿರ ನರ್ಸಿಂಗ್ ಸೀಟುಗಳಿವೆ. ಪ್ಯಾರಾ ಮೆಡಿಕಲ್ ನಲ್ಲಿ 1 ಲಕ್ಷಕ್ಕೂ ಹೆಚ್ಚು ಸೀಟುಗಳನ್ನು ನೀಡಲಾಗಿದೆ. ಇದರೊಂದಿಗೆ ಕರ್ನಾಟಕ ರಾಜ್ಯ ದೇಶಕ್ಕೆ ಮಾತ್ರವಲ್ಲ, ವಿಶ್ವಕ್ಕೆ ಮಾದರಿಯಾಗಿದೆ. ಮೇಟಿ ಅವರ ಕನಸಿನಂತೆ ನಾವು ಮೆಡಿಕಲ್ ಕಾಲೇಜಿಗೆ ಭೂಮಿ ಪೂಜೆ ಮಾಡಿದ್ದೇವೆ ಎಂದು ಡಿ.ಕೆ.ಶಿವಕುಮಾರ್ ತಿಳಿಸಿದರು

ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್ ಅವರು ಬಾಗಲಕೋಟೆಯ ನವ ನಗರದ ಶ್ರೀ ಜಗದ್ಗುರು ಸಿದ್ದರಾಮೇಶ್ವರ ಮಹಾಸಂಸ್ಥಾನ ಭೋವಿ ಗುರುಪೀಠಕ್ಕೆ ಭೇಟಿ ನೀಡಿ ಶ್ರೀಗಳ ಆಶೀರ್ವಾದ ಪಡೆದರು.

ಭೋವಿ ಮಠಕ್ಕೆ 5 ಕೋಟಿ ಅನುದಾನ

ಬಾಗಲಕೋಟೆ: ಬಾಗಲಕೋಟೆಯಲ್ಲಿರುವ ಭೋವಿ ಪೀಠಕ್ಕೆ ಭೇಟಿ ನೀಡಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು, ಜಗದ್ಗುರು ಸಿದ್ದರಾಮೇಶ್ವರ ಶ್ರೀಗಳೊಂದಿಗೆ ಚರ್ಚಿಸಿದರು. ಈ ವೇಳೆ ಒಳಮೀಸಲು ಸೇರಿದಂತೆ ವಿವಿಧ ವಿಷಯವನ್ನು ಶ್ರೀಗಳು ಸಿಎಂ, ಡಿಸಿಎಂ ಗಮನಕ್ಕೆ ತಂದಿದ್ದು, ಸಮುದಾಯಕ್ಕೆ ಸಮಸ್ಯೆಯಾಗದಂತೆ ಕ್ರಮವಹಿಸುವಂತೆ ಮನವಿ ಮಾಡಿದ್ದಾರೆ ಎಂದು ತಿಳಿದುಬಂದಿದೆ. ಇನ್ನು ಈ ಭೇಟಿಯ ವೇಳೆ ಮಠದ ಅಭಿವೃದ್ಧಿ ಹಾಗೂ ಭೂಮಿ ನೀಡುವ ವಿಷಯಕ್ಕೆ ಸಂಬಂಧಿಸಿದಂತೆ ಶ್ರೀಗಳು ಮನವಿ ಸಲ್ಲಿಸಿದ್ದು, ಇದಕ್ಕೆ ಪೂರಕವಾಗಿ ಸ್ಪಂದಿಸಿರುವ ಸಿದ್ದರಾಮಯ್ಯ ಅವರು, ಭೋವಿ ಮಠಕ್ಕೆ ಐದು ಕೋಟಿ ರು. ನೀಡುವ ಆಶ್ವಾಸನೆ ನೀಡಿದ್ದಾರೆ. ಇದರೊಂದಿಗೆ ಮುಂದಿನ ದಿನದಲ್ಲಿ ಮಠಕ್ಕೆ ಭೂಮಿ ನೀಡುವ ಬಗ್ಗೆಯೂ ಭರವಸೆ ನೀಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಮಂಗಳೂರು ಕರಾವಳಿಯಲ್ಲಿ ದೋಣಿ ಕಾರ್ಯಾಚರಣೆ ಸ್ಥಗಿತ

ಮಂಗಳೂರು: ವಾಣಿಜ್ಯ ಎಲ್‌ಪಿಜಿ ಸಿಲಿಂಡರ್‌ಗಳ ತೀವ್ರ ಕೊರತೆಯಿಂದಾಗಿ ಮಂಗಳೂರು ಕರಾವಳಿಯಲ್ಲಿ ಮೀನುಗಾರಿಕೆ ದೋಣಿಗಳು ಕಾರ್ಯಾಚರಣೆಯನ್ನು ಭಾಗಶಃ ಸ್ಥಗಿತಗೊಳಿಸಿವೆ. ಹೀಗಾಗಿ ಮೀನುಗಾರಿಕೆಗೆ ಅಡ್ಡಿಯಾಗಿದೆ.

ಮಂಗಳೂರು ಮೀನುಗಾರಿಕೆ ಬಂದರಿನಲ್ಲಿ 1,500ಕ್ಕೂ ಹೆಚ್ಚು ಹಡಗುಗಳಿವೆ, ಪರ್ಸ್ ಸೀನರ್‌ಗಳು ಮತ್ತು ಟ್ರಾಲರ್‌ಗಳು ಪ್ರಮುಖವಾಗಿವೆ. ಅನೇಕ ದೋಣಿಗಳು ಈಗಾಗಲೇ ತೀರದಲ್ಲಿಯೇ ಉಳಿದಿವೆ. ಸಿಲಿಂಡರ್‌ಗಳ ಕೊರತೆಯು ಅವರ ಪರಿಸ್ಥಿತಿಯನ್ನು ಇನ್ನಷ್ಟು ಹದಗೆಡಿಸಿದೆ ಎಂದು ಮಂಗಳೂರಿನ ಯಾಂತ್ರೀಕೃತ ದೋಣಿ ಮಾಲೀಕರು ಹೇಳಿದ್ದಾರೆ. ದೋಣಿ ಮಾಲೀಕರ ಪ್ರಕಾರ, ಕಳೆದ ಮೂರು ದಿನಗಳಿಂದ ವಾಣಿಜ್ಯ ಎಲ್‌ಪಿಜಿ ಸಿಲಿಂಡರ್‌ಗಳ ಪೂರೈಕೆಯನ್ನು ನಿಲ್ಲಿಸಲಾಗಿದೆ, ಹೀಗಾಗಿ ಶೀಘ್ರದಲ್ಲೇ ಮೀನುಗಾರಿಕೆ ಕಾರ್ಯಾಚರಣೆಗಳು ಸಂಪೂರ್ಣವಾಗಿ ಸ್ಥಗಿತಗೊಳ್ಳುತ್ತವೆ. ದೋಣಿ ಮಾಲೀಕರಾದ ಸಮೀರ್, ನಾವು 19 ಕೆಜಿ ವಾಣಿಜ್ಯ ಸಿಲಿಂಡರ್‌ಗೆ 1,800 ರು. ಪಾವತಿಸುತ್ತೇವೆ. ಸಿಲಿಂಡರ್ ಪೂರೈಕೆದಾರರು ಇದ್ದಕ್ಕಿದ್ದಂತೆ ಪೂರೈಕೆ ಇಲ್ಲ ಎಂದು ನಮಗೆ ತಿಳಿಸಿದ್ದಾರೆ. ಸಿಲಿಂಡರ್‌ಗಳಿಗೆ ಪರ್ಯಾಯವೆಂದರೆ ಸೀಮೆಎಣ್ಣೆ ಸ್ಟೌವ್‌ಗಳು, ಆದರೆ ಅವುಗಳ ಬಳಕೆ ಕಡಿಮೆ ಇರುವುದರಿಂದ ಅವು ಸಾಕಷ್ಟು ಪ್ರಮಾಣದಲ್ಲಿ ಲಭ್ಯವಿಲ್ಲ. ಸೀಮೆಎಣ್ಣೆಯ ಸಮರ್ಪಕ ಪೂರೈಕೆ ಇಲ್ಲ. ಬ್ಲ್ಯಾಕ್ ಮಾರುಕಟ್ಟೆಯಲ್ಲಿ ಬೆಲೆ 5,000 ರು.ಗೆ ಏರಿದೆ ಎಂದು ಮಾಹಿತಿ ನೀಡಿದ್ದಾರೆ.

ಮೀನುಗಾರಿಕೆ ಸೀಸನ್‌ನ ಉಳಿದ ಎರಡು ತಿಂಗಳು ನಾವು ಹೇಗೆ ಬದುಕಬೇಕು? ಮಳೆಗಾಲದಲ್ಲಿ, ಮೀನುಗಾರಿಕೆ ನಿಷೇಧ ಇರುವುದರಿಂದ ನಾವು ನಿರುದ್ಯೋಗಿಗಳಾಗುತ್ತೇವೆ ಎಂದು ಮತ್ತೊಬ್ಬ ದೋಣಿ ಮಾಲೀಕರು ಅಳಲು ತೋಡಿಕೊಂಡಿದ್ದಾರೆ. ಮೀನುಗಾರಿಕಾ ದೋಣಿಗಳಿಗೆ ಸಿಲಿಂಡರ್‌ಗಳನ್ನು ಪೂರೈಸಲು ಡೀಲರ್‌ಗಳಿಗೆ ನಿರ್ದೇಶನ ನೀಡುವಂತೆ ಅವರು ಸರಕಾರವನ್ನು ವಿನಂತಿಸಿದರು.

ಪ್ರಧಾನಿಗೂ ಪತ್ರ ಬರೆದ ಬಮುಲ್ ಅಧ್ಯಕ್ಷ ಡಿಕೆಸು

ಫ್ಲಿಪ್‌ಕಾರ್ಟ್‌ನಲ್ಲಿ ಲೀಟರ್ ಹಾಲಿಗೆ 1 ರು.: ದೂರು

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಒಂದು ರುಪಾಯಿಗೆ ಒಂದು ಲೀಟರ್ ಹಾಲು ಮಾರಲು ಮುಂದಾಗಿರುವ ಫ್ಲಿಪ್ ಕಾರ್ಟ್ ವಿರುದ್ಧ ದೆಹಲಿಯಲ್ಲಿರುವ ಕಾಂಪಿ ಟೇಷನ್ ಕಮಿಷನ್ ಆಫ್ ಇಂಡಿಯಾಗೆ ದೂರು ನೀಡಲಾಗುತ್ತಿದೆ. ಜತೆಗೆ ಈ ವಿಚಾರವನ್ನು ಪ್ರಧಾನಿ ಮೋದಿಯವರಿಗೆ ಇ ಮೇಲ್ ಮುಖಾಂತರ ಕಳಿಸುತ್ತಿದ್ದೇನೆ ಎಂದು ಬಮುಲ್ ಅಧ್ಯಕ್ಷರಾದ ಡಿ.ಕೆ.ಸುರೇಶ್ ಅವರು ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಹಣ ಮಾಡುವ ಭರದಲ್ಲಿ ಫ್ಲಿಪ್‌ಕಾರ್ಟ್ ಸಂಸ್ಥೆ ಒಂದು ರುಪಾಯಿಗೆ ಒಂದು ಲೀಟರ್ ಹಾಲು ನೀಡಲು ಮುಂದಾಗಿದೆ. ರೈತ ಸಮುದಾಯವನ್ನು ಧ್ವಂಸ ಮಾಡುವ ಕೃತ್ಯಕ್ಕೆ ಕೈಹಾಕಿದೆ. ಕೇಂದ್ರ ಹಾಗೂ ರಾಜ್ಯ ಸರಕಾರ ಕೂಡಲೇ ಕ್ರಮ ತೆಗೆದುಕೊಳ್ಳಬೇಕು. ಇಲ್ಲದಿದ್ದರೆ ಇಡೀ ದೇಶದಾದ್ಯಂತ ದಂಗೆ ಮಾಡಬೇಕಾದ ಪರಿಸ್ಥಿತಿ ಉಂಟಾಗಲಿದೆ ಎಂದರು.

ಮಾರುಕಟ್ಟೆಯನ್ನು ಆವರಿಸಿಕೊಳ್ಳಬೇಕು ಎಂದು ಮಾಡುತ್ತಿರುವ ಸ್ಪರ್ಧೆಯಿಂದ ರೈತರಿಗೆ ಹೊಡೆತ ಬೀಳುತ್ತದೆ. ಇದಕ್ಕಾಗಿಯೇ ಸುಮಾರು 2 ಸಾವಿರ ಕೋಟಿ ವೆಚ್ಚ ಮಾಡಲಾಗಿದೆ. ಸಾರ್ವಜನಿಕರ ಷೇರಿನ ಹಣ ಬಳಸಿ ಹೀಗೆ ದುರ್ಬಳಕೆ ಮಾಡಿಕೊಳ್ಳುವುದು ಸರಿಯಲ್ಲ. ಸ್ವಾತಂತ್ರ್ಯ ಪೂರ್ವದಿಂದಲೂ ಇರುವ ಹಾಲು ಒಕ್ಕೂಟ ಸಂಸ್ಥೆಗಳನ್ನು ನಾಶ ಮಾಡುವ ಪ್ರಕ್ರಿಯೆ ಇದಾಗಿದೆ. ಎಂಎನ್‌ಸಿಗಳು ರೈತರ ಹಿತವನ್ನು ಹಾಳು ಮಾಡುವ ಕೆಲಸ ಮಾಡುತ್ತಿವೆ. ಕಡಿಮೆ ದರಕ್ಕೆ ಎಷ್ಟು ದಿನ ಹಾಲನ್ನು ನೀಡುತ್ತಾರೆ ಎಂದು ಜಾಹೀರಾತಿನಲ್ಲಿ ತಿಳಿಸಬೇಕು. ರೈತ ಸಂಕುಲವನ್ನು ಹಾಳು ಮಾಡುತ್ತಿರುವ ಈ ಕೆಲಸದಿಂದ ಫ್ಲಿಪ್ ಕಾರ್ಟ್ ಸಂಸ್ಥೆ ಹಿಂದೆ ಸರಿಯಬೇಕು ಎಂದು ಆಗ್ರಹಿಸಿದರು.

14.5 ಲಕ್ಷ ಲೀಟರ್ ಹಾಲು ಮಾರಾಟ: ಈಗಾಗಲೇ 14.5 ಲಕ್ಷ ಲೀಟರ್ ಹಾಲು ಮಾರಾಟ ಆಗಿದೆ. ಈಗಾಗಲೇ ಎಲ್ಲ ಕಡೆ ಜಾಹಿರಾತು ನೀಡಿದೆ. ಸಾರ್ವಜನಿಕರ ಹಣವನ್ನು ಹೂಡಿಕೆ ಮಾಡಿ ಗ್ರಾಹಕರನ್ನು ಆಕರ್ಷಣೆ ಮಾಡಲಾಗುತ್ತಿದೆ. ಆ ಕಂಪನಿಯವರು ಎಷ್ಟು ದಿನ ಈ ರೀತಿ ಹಾಲು ಕೊಡುತ್ತಾರೆ? ನಂದಿನಿ ಹಾಲಿನ ಮಾರಾಟ ಪ್ರಮಾಣ ಕಡಿಮೆಯಾಗಿದೆಯೇ ಎಂದು ಕೇಳಿದಾಗ, ಮಾರುಕಟ್ಟೆಯಲ್ಲಿ ನಂದಿನಿ ಹಾಲು ಮಾತ್ರ ಇಲ್ಲ. ಅನೇಕ ಕಂಪನಿಗಳಿವೆ. ಬಮುಲ್ ಒಕ್ಕೂಟಕ್ಕೆ 40-50 ಸಾವಿರ ಹಾಲು ಮಾರಾಟ ಕಡಿಮೆಯಾಗಿದೆ. ಎಷ್ಟು ದಿನದಿಂದ ಇದು ಕಡಿಮೆಯಾಗಿದೆ ಎಂದು ತಿಳಿದುಕೊಳ್ಳಬೇಕು ಎಂದರು.

ರೈತರಿಗೆ ನಾವು 38, 39, 40 ರುಪಾಯಿ ಪಾವತಿ ಮಾಡುತ್ತಿದ್ದೇವೆ. ಇವರು ಒಂದು ರು.ಗೆ ಕೊಡಲು ಹೇಗೆ ಸಾಧ್ಯ? ಯಾರಿಂದ ಖರೀದಿ ಮಾಡುತ್ತಿ ಇದ್ದಾರೆ. ಎಲ್ಲಿಂದ ಹಾಲು ಬರುತ್ತಿದೆ ಎಂದು ತಿಳಿದುಕೊಳ್ಳಬೇಕಿದೆ. ರೈತರು ಯಾರಿಗೆ ಹಾಲು ಮಾರಾಟ ಮಾಡುತ್ತಾರೆ ಎಂಬುದು ತಿಳಿಯುವುದಿಲ್ಲ. ಬಲ್ಕ್ ಮಿಲ್ಕ್ ಉತ್ಪಾದಕರ ಬಳಿ ಸೇರಿ ಎಲ್ಲಿ ಅವರು ಹಾಲು ತೆಗೆದುಕೊಳ್ಳುತ್ತಿದ್ದಾರೆ ಎಂದು ತಿಳಿಯುವುದಿಲ್ಲ. ಅಥವಾ ಹಾಲಿನ ಪೌಡರ್ ಬೆರೆಸುತ್ತಿದ್ದಾರಾ ಎಂದು ತಿಳಿಯಲು ಸ್ಯಾಂಪಲ್ ಅನ್ನ ತರಿಸುತ್ತಿದ್ದೇನೆ. ಅದನ್ನು ಲ್ಯಾಬ್‌ನಲ್ಲಿ ಪರಿಶೀಲನೆ ಮಾಡಲು ತಿಳಿಸಿದ್ದೇನೆ ಎಂದರು.

> **ಶಾಸಕರು ಹಾಗೂ ಸಂಸತ್ ಸದಸ್ಯರು ಈ ರಾಜ್ಯದ ಹಿತದೃಷ್ಟಿಯನ್ನು ಗಮನದಲ್ಲಿ ಇಟ್ಟುಕೊಂಡು ಕೆಲಸ ಮಾಡಬೇಕು. ಕರ್ನಾಟಕಕ್ಕೆ ಅನ್ಯಾಯವಾಗುತ್ತಿದೆ. ಇದನ್ನು ಸಂಸದರು ಪ್ರತಿಭಟಿಸುತ್ತಿಲ್ಲ. ಲೋಕಸಭಾ ಅಧಿವೇಶನದಲ್ಲಿ ರಾಜ್ಯದ ಪ್ರಮುಖ ನೀರಾವರಿ ಯೋಜನೆಗಳ ಬಗ್ಗೆ ಮಾತನಾಡಬೇಕು. ಮೇಕೆದಾಟು, ಕಳಸಾ ಬಂಡೂರಿ, ಕೃಷ್ಣಾ ಮೇಲ್ದಂಡೆ ಯೋಜನೆಗಳ ಬಗ್ಗೆ ಮಾತನಾಡಬೇಕು.**
>
> **-ಡಿ.ಕೆ.ಸುರೇಶ್,** ಬಮೂಲ್ ಅಧ್ಯಕ್ಷ

---

5 ವರ್ಷಗಳಲ್ಲಿ ಶೇ.51ರಷ್ಟು ಹೆಚ್ಚಳ, 16,206 ಪ್ರಕರಣ ದಾಖಲು | ರಾಜ್ಯದಲ್ಲಿ ಪ್ರತಿದಿನ ಸರಾಸರಿ 12 ದೂರುಗಳು

ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿವೆ ಪೋಕ್ಸೋ ಕೇಸ್

ವೈಭವ್.ಸಿ. ಕೊಳ್ಳಿ ಬೆಂಗಳೂರು

ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ತಡೆಗಟ್ಟಲು ಕಾನೂನುಗಳಿದ್ದರೂ ರಾಜ್ಯದಲ್ಲಿ ಪ್ರಕರಣಗಳ ಸಂಖ್ಯೆ ಕಡಿಮೆಯಾಗುವ ಬದಲು, ಹೆಚ್ಚಾಗುತ್ತಿರುವುದು ಆತಂಕಕ್ಕೆ ಕಾರಣವಾಗಿದೆ. ಮಕ್ಕಳ ರಕ್ಷಣೆಗೆ ಜಾರಿಗೆ ತಂದಿರುವ ಲೈಂಗಿಕ ಅಪರಾಧ ಮಕ್ಕಳ ರಕ್ಷಣೆ ಕಾಯ್ದೆ (ಪೋಕ್ಸೋ) 2012, ಇದ್ದರೂ ಪ್ರಕರಣಗಳ ಸಂಖ್ಯೆ ವರ್ಷದಿಂದ ವರ್ಷಕ್ಕೆ ಏರಿಕೆಯಾಗುತ್ತಿರುವುದು ಗಂಭೀರ ಕಾರಣವಾಗಿದೆ.

ಕಳೆದ ಐದು ವರ್ಷಗಳಲ್ಲಿ ರಾಜ್ಯದ ವಿವಿಧ ಜಿಲ್ಲೆಗಳಿಂದ 16,206 ಪ್ರಕರಣಗಳು ದಾಖಲಾಗಿವೆ. 2021ರಲ್ಲಿ 2,884 ಪ್ರಕರಣಗಳು ದಾಖಲಾಗಿದ್ದರೆ, 2022ರಲ್ಲಿ ಅದು 3,209ಕ್ಕೆ ಏರಿಕೆಯಾಗಿದೆ. 2023ರಲ್ಲಿ 3,902 ಪ್ರಕರಣಗಳು ದಾಖಲಾಗಿದ್ದು, 2024ರಲ್ಲಿ ಈ ಸಂಖ್ಯೆ 4,064ಕ್ಕೆ ತಲುಪಿದೆ. ಇನ್ನು 2025ರ ಜೂನ್ 30ರವರೆಗೆ ಮಾತ್ರವೇ 2,147 ಪ್ರಕರಣಗಳು ದಾಖಲಾಗಿರುವುದು ಮಕ್ಕಳ ಸುರಕ್ಷತೆ ಕುರಿತು ಮತ್ತಷ್ಟು ಆತಂಕ ಹುಟ್ಟಿಸಿದೆ.

2025ರಲ್ಲಿ ದಾಖಲಾಗಿರುವ ಒಟ್ಟು 2147 ಪ್ರಕರಣಗಳಲ್ಲಿ 1,207 ಪ್ರಕರಣಗಳು ವಿವಿಧ ಹಂತಗಳಲ್ಲಿ ವಿಲೇವಾರಿಯಾಗಿದ್ದು, 312 ಪ್ರಕರಣಗಳಲ್ಲಿ ಆರೋಪಿಗಳು ಖುಲಾಸೆಯಾಗಿದ್ದಾರೆ. ಇನ್ನೂ 587 ಪ್ರಕರಣಗಳು ನ್ಯಾಯಾಲಯಗಳಲ್ಲಿ ವಿಚಾರಣೆಗೆ ಬಾಕಿ ಇದ್ದು, ಕೆಲವು ಪ್ರಕರಣಗಳು ವರ್ಗಾವಣೆ ಅಥವಾ ಇತರ ಕಾರಣಗಳಿಂದ ಮುಕ್ತಾಯಗೊಂಡಿವೆ. 5 ವರ್ಷಗಳಲ್ಲಿ ಶೇ.51 ರಷ್ಟು ಪ್ರಕರಣಗಳು ಹೆಚ್ಚಳವಾಗಿವೆ. ಒಟ್ಟಾರೆ ಐದು ವರ್ಷಗಳ ಅವಧಿಯಲ್ಲಿ 8,367 ಪ್ರಕರಣಗಳು ಇನ್ನೂ ನ್ಯಾಯಾಲಯಗಳಲ್ಲಿ ವಿಚಾರಣೆಯಲ್ಲೇ ಬಾಕಿ ಉಳಿದಿರುವುದು ಗಮನಾರ್ಹವಾಗಿದೆ. ಇದೇ ವೇಳೆ ಕೇವಲ 579 ಪ್ರಕರಣಗಳಲ್ಲಿ ಮಾತ್ರ ಆರೋಪಿಗಳಿಗೆ ಶಿಕ್ಷೆ ವಿಧಿಸಲಾಗಿದೆ ಎಂದು ಅಂಕಿ ಅಂಶಗಳಿಂದ ತಿಳಿದು ಬಂದಿದೆ.

ಪ್ರತಿ ಗುರುವಾರ ತೆರದ ಮನೆ ಕಾರ್ಯಕ್ರಮ ಆಯೋಜನೆ: ಬೆಂಗಳೂರು ನಗರದಲ್ಲಿ ಪೋಕ್ಸೋ ಪ್ರಕರಣಗಳ ಸಂಖ್ಯೆ ಹೆಚ್ಚಾಗುತ್ತಿರುವ ಹಿನ್ನೆಲೆ, ಶಾಲೆ ಮತ್ತು ಕಾಲೇಜುಗಳಲ್ಲಿ ಮಕ್ಕಳಿಗೆ ಜಾಗೃತಿ ಮೂಡಿಸುವ ಕಾರ್ಯಕ್ರಮಗಳನ್ನು ಮಕ್ಕಳ ರಕ್ಷಣಾ ಆಯೋಗ ಕೈಗೊಂಡಿದೆ. ವಿದ್ಯಾರ್ಥಿಗಳು ತಮ್ಮ ಸುರಕ್ಷತೆ ಬಗ್ಗೆ ಅರಿವು ಹೊಂದುವಂತೆ ವಿವಿಧ ಜಾಗೃತಿ ಕಾರ್ಯಕ್ರಮಗಳು ನಡೆಯುತ್ತಿವೆ. ಪ್ರತಿ ಗುರುವಾರ ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲಿರುವ ಶಾಲೆ-ಕಾಲೇಜುಗಳಲ್ಲಿ ತೆರೆದ ಮನೆ ಕಾರ್ಯಕ್ರಮಗಳನ್ನು ಆಯೋಜಿಸುವ ಯೋಜನೆ ರೂಪಿಸಲಾಗಿದೆ. ಈ ಕಾರ್ಯಕ್ರಮಗಳ ಮೂಲಕ ವಿದ್ಯಾರ್ಥಿಗಳು ತಮ್ಮ ಸಮಸ್ಯೆಗಳು ಮತ್ತು ಅನುಭವಗಳನ್ನು ನೇರವಾಗಿ ಪೊಲೀಸರೊಂದಿಗೆ ಹಂಚಿಕೊಳ್ಳಲು ಅವಕಾಶ ಸಿಗಲಿದೆ ಎಂದು ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ ಅಧ್ಯಕ್ಷ ಶಶಿಧರ್ ಕೋಸಂಬೆ ತಿಳಿಸಿದರು.

> **ರಾಜ್ಯದಲ್ಲಿ ಪ್ರತಿದಿನ ಸರಾಸರಿ 12 ಪೋಕ್ಸೋ ಪ್ರಕರಣಗಳು ದಾಖಲಾಗುತ್ತಿ ರುವುದು ಕಳವಳಕಾರಿ ಬೆಳವಣಿಗೆ ಯಾಗಿದೆ. ಈ ರೀತಿಯ ಪ್ರಕರಣಗಳು ಕಡಿಮೆ ಯಾಗಬೇಕಾದರೆ ಆರೋಪಿಗಳಿಗೆ ಕಠಿಣ ಶಿಕ್ಷೆ ವಿಧಿಸುವ ಪ್ರಮಾಣ ಹೆಚ್ಚಾಗುವುದು ಅತ್ಯಂತ ಅಗತ್ಯ. ಪೋಕ್ಸೋ ಪ್ರಕರಣಗಳಲ್ಲಿ ಸಂತ್ರಸ್ತ ಮಕ್ಕಳಿಗೆ ರಕ್ಷಣೆ ಒದಗಿಸುವುದು ಮತ್ತು ಆರೋಪಿ ಗಳಿಗೆ ಕಾನೂನುಬದ್ಧವಾಗಿ ಶಿಕ್ಷೆ ಆಗುವಂತೆ ಕ್ರಮ ಕೈಗೊಳ್ಳುವುದು ಸರಕಾರ ಹಾಗೂ ಸಂಬಂಧಪಟ್ಟ ಇಲಾಖೆಗಳ ಪ್ರಮುಖ ಹೊಣೆಗಾರಿಕೆಯಾಗಿದೆ. ಈ ದಿಸೆಯಲ್ಲಿ ಪ್ರತಿಯೊಬ್ಬ ನಾಗರಿಕರೂ ಸಹ ಜಾಗೃತಿಯಿಂದ ಸಹಕರಿಸಬೇಕು.**
>
> **-ಶಶಿಧರ್ ಕೋಸಂಬೆ ಅಧ್ಯಕ್ಷ,**
> ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ

ಪೋಕ್ಸೋ ಪ್ರಕರಣ
ಐದು ವರ್ಷಗಳಲ್ಲಿ

ರಾಜ್ಯದಲ್ಲಿ	
2021	2884
2022	3209
2023	3902
2024	4064
2025	2147 ಜೂನ್ 30ರ ವರೆಗೆ

2025 ಜೂನ್ 30ರ ವರೆಗೆ

ಜಿಲ್ಲಾವಾರು	
ಬೆಂಗಳೂರು ನಗರ	262
ಶಿವಮೊಗ್ಗ	108
ಚಿಕ್ಕಬಳ್ಳಾಪುರ	102
ತುಮಕೂರು	97
ಚಿಕ್ಕಮಗಳೂರು	81

ರೊಟೇಷನ್ ಪ್ರಕಾರ ಸಚಿವ ಸ್ಥಾನ ನೀಡಲಿ

ಕೊಪ್ಪಳ: ಸಚಿವ ಸ್ಥಾನ ಕೊಡಬೇಕೆಂದು ಕೇಳುವ ಅರ್ಹತೆ ಎಲ್ಲ ಶಾಸಕರಿಗೂ ಇದೆ. ಕೇಳುವುದು ಕೂಡ ತಪ್ಪಲ್ಲ. ರೊಟೇಷನ್ ಪ್ರಕಾರ ಅವಕಾಶ ಕೊಟ್ಟರೆ ಎಲ್ಲರಿಗೂ ನ್ಯಾಯ ಸಿಕ್ಕಂತಾಗುತ್ತದೆ ಎಂದು ಶಾಸಕ ರಾಘವೇಂದ್ರ ಹಿಟ್ನಾಳ ಹೇಳಿದರು. ಸುದ್ದಿಗಾರರೊಂದಿಗೆ ಮಾತನಾಡಿ, ಹೊಸಬರು ಕೂಡ ಅವಕಾಶ ಕೇಳುವುದರಲ್ಲಿ ತಪ್ಪಿಲ್ಲ. ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಹೈಕಮಾಂಡ್ ವರಿಷ್ಠರು ಈ ಕುರಿತು ನಿರ್ಧಾರ ಕೈಗೊಳ್ಳುತ್ತಾರೆ. ಶಾಸಕರ ಭೋಜನಕೂಟಕ್ಕೆ ನನಗೂ ಆಹ್ವಾನವಿತ್ತು. ವೈಯಕ್ತಿಕ ಕಾರಣಕ್ಕೆ ಹೋಗಲಿಲ್ಲ. ಹೈಕಮಾಂಡ್ ಸಚಿವ ಸ್ಥಾನದ ಅವಕಾಶ ಕೊಟ್ಟರೆ ಸಮರ್ಥವಾಗಿ ನಿಭಾಯಿಸುತ್ತೇನೆ. ನಾನು ಮಂತ್ರಿಯಾಗಲಿ ಎಂದು ನೀವು (ಮಾಧ್ಯಮದವರು) ಹೇಳುವುದೇ ಇಲ್ಲ. ಬಿಜೆಪಿ ಸರಕಾರ ಅಧಿಕಾರಕ್ಕೆ ಬಂದರೆ ಹೊರಗಿನ ಜಿಲ್ಲೆಯವರು ಇನ್ನೊಂದು ಜಿಲ್ಲೆಗೆ ಹೋಗಿ ಉಸ್ತುವಾರಿ ಸಚಿವರಾಗುತ್ತಾರೆ. ಹೀಗಾದರೆ ಅಭಿವೃದ್ಧಿ ಹೇಗೆ ಸಾಧ್ಯ? ಎಂದು ಪ್ರಶ್ನಿಸಿದರು. ಬಜೆಟ್‌ನಲ್ಲಿ ಅನುದಾನ ಹಂಚಿಕೆಯಲ್ಲಿ ತಾರತಮ್ಯವಾಗಿದ್ದರೆ ಪೂರಕ ಬಜೆಟ್‌ನಲ್ಲಿ ಅನುದಾನ ನೀಡುವುದಾಗಿ ಮುಖ್ಯಮಂತ್ರಿ ಹೇಳಿದ್ದಾರೆ. ಎಲ್ಲ ಶಾಸಕರಿಗೂ ಸಿಎಂ ಸ್ಪಂದನೆ ಮಾಡುತ್ತಾರೆ ಎಂದರು.

> **ಕೊಪ್ಪಳ ಜಿಲ್ಲೆಯಲ್ಲಿ ಬಸವರಾಜ ರಾಯರಡ್ಡಿ, ಶಿವರಾಜ ತಂಗಡಗಿ ಹಾಗೂ ನಾನು ಮೂವರೂ ಹಿರಿಯರೇ ಇದ್ದೇವೆ. ಹೀಗಾಗಿ ರೊಟೇಷನ್ ಪ್ರಕಾರ ಅವಕಾಶ ಕೊಟ್ಟರೆ ಸಚಿವರಾಗಲು ಸಾಧ್ಯ.**
>
> **-ರಾಘವೇಂದ್ರ ಹಿಟ್ನಾಳ,** ಶಾಸಕ

ಆ ಟಿಪ್ಪರರಿ ಮತ್ತು ತಿಪ್ಪಾರಳ್ಳಿ ನಡುವೆ ಹತ್ತಾರು ನೆನಪುಗಳು!

ಇದೇ ಅಂತರಂಗ ಸುದ್ದಿ
ವಿಶ್ವೇಶ್ವರ ಭಟ್
vbhat@me.com

ನಾನು ಒಂಬತ್ತು ವರ್ಷಗಳ ಹಿಂದೆ, ಐರ್ಲೆಂಡ್‌ನ ಮನ್‌ಸ್ಟರ್ ಪ್ರಾಂತ್ಯದಲ್ಲಿರುವ ಟಿಪ್ಪರರಿ ಎಂಬ ಊರಿಗೆ ಹೋಗಿದ್ದೆ. ಈ ಊರು ತನ್ನ ಐತಿಹಾಸಿಕ ಶ್ರೀಮಂತಿಕೆ, ಫಲವತ್ತಾದ ಕೃಷಿ ಭೂಮಿ ಮತ್ತು ಸಾಂಸ್ಕೃತಿಕ ಪರಂಪರೆಗೆ ವಿಶ್ವಪ್ರಸಿದ್ಧವಾಗಿದೆ. ನಾನು ಈ ಊರಿನ ಹೆಸರನ್ನು ಕೇಳಿದ್ದು ದಿವಂಗತ ಪತ್ರಕರ್ತ ವೈಎನ್ಕೆ ಅವರಿಂದ.

''ಟಿ.ಪಿ.ಕೈಲಾಸಂಗೆ ಈ ಊರು ಬಹಳ ಇಷ್ಟವಾಗಿತ್ತು. ಅವರು It's a long way to Tipperary ಎಂಬ ಹಾಡನ್ನು ಅದೇ ಧಾಟಿಯಲ್ಲಿ 'ನಮ್ಮ ತಿಪ್ಪಾರಳ್ಳಿ ಬಲುದೂರ' ಎಂದು ಕನ್ನಡಕ್ಕೆ ಅನುವಾದಿಸಿದ್ದರು ಎಂದು ಅನೇಕ ಸಲ ಹೇಳುತ್ತಿದ್ದುದನ್ನು ಕೇಳಿದ್ದೆ. ವೈಎನ್ಕೆ ಹೇಳದಿದ್ದರೆ ನಾನು ಖಂಡಿತವಾಗಿಯೂ ಆ ಊರಿಗೆ ಹೋಗುತ್ತಿರಲಿಲ್ಲ.

ಟಿಪ್ಪರರಿ ಐರ್ಲೆಂಡ್‌ನ ಅತಿದೊಡ್ಡ ಒಳನಾಡಿನ ಕೌಂಟಿ. ಇದು ಸಮುದ್ರ ತೀರವನ್ನು ಹೊಂದಿಲ್ಲದಿದ್ದರೂ, ಪ್ರಕೃತಿ ಸೌಂದರ್ಯಕ್ಕೆ ಕೊರತೆಯಿಲ್ಲ. ಸದಾ ನಿದ್ದೆಯಲ್ಲಿರುವಂತೆ, ನಿಧಾನ ಜೀವನಗತಿ ಹೊಂದಿರುವ ಊರು. ಲಿಮೆರಿಕ್ ನಗರದಿಂದ ಮುಕ್ಕಾಲು ಗಂಟೆ ಕಾರಿನಲ್ಲಿ ಪ್ರಯಾಣದಷ್ಟು ಹತ್ತಿರದಲ್ಲಿರುವ ಪಟ್ಟಣ. ಜನಸಂಖ್ಯೆ ಹೆಚ್ಚೆಂದರೆ ಐದಾರು ಸಾವಿರ ಇರಬಹುದು.

ಇಲ್ಲಿನ ಅತ್ಯಂತ ಗಮನಾರ್ಹ ಭೌಗೋಳಿಕ ಲಕ್ಷಣವೆಂದರೆ 'ಗೋಲ್ಡನ್ ವೇಲ್'. ಇದು ಯುರೋಪಿನಲ್ಲೇ ಅತ್ಯಂತ ಫಲವತ್ತಾದ ಭೂಭಾಗಗಳಲ್ಲಿ ಒಂದಾಗಿದ್ದು, ಡೈರಿ ಫಾರ್ಮಿಂಗ್ ಅಥವಾ ಹೈನುಗಾರಿಕೆಗೆ ಹೆಸರುವಾಸಿಯಾಗಿದೆ. ಇಲ್ಲಿನ ಹಸಿರು ಹುಲ್ಲುಗಾವಲುಗಳು ಉತ್ತಮ ಗುಣಮಟ್ಟದ ಹಾಲು ಮತ್ತು ಚೀಸ್ ಉತ್ಪಾದನೆಗೆ ಪೂರಕವಾಗಿವೆ.

ಟಿಪ್ಪರರಿ ಎಂದ ತಕ್ಷಣ ನೆನಪಿಗೆ ಬರುವುದು 'ರಾಕ್ ಆಫ್ ಕಾಷೆಲ' (The Rock of Cashel). ಇದು ಐರ್ಲೆಂಡ್‌ನ ಅತ್ಯಂತ ಪ್ರಸಿದ್ಧ ಪ್ರವಾಸಿ ತಾಣಗಳಲ್ಲಿ ಒಂದು. ಇದು ಶತಮಾನಗಳ ಕಾಲ 'ಮನ್‌ಸ್ಟರ್' ಪ್ರಾಂತ್ಯದ ರಾಜರ ಆಸ್ಥಾನವಾಗಿತ್ತು. ಇಲ್ಲಿ ಹನ್ನೆರಡು ಮತ್ತು ಹದಿಮೂರನೇ ಶತಮಾನದ ಅದ್ಭುತ ವಾಸ್ತುಶಿಲ್ಪದ ಚರ್ಚ್‌ಗಳು ಮತ್ತು ಗೋಪುರಗಳಿವೆ. ಐರ್ಲೆಂಡ್‌ನ ಸುಪ್ರಸಿದ್ಧ ರಾಜ ಬ್ರಿಯಾನ್ ಬೋರು ಇಲ್ಲಿಯೇ ಪಟ್ಟಾಭಿಷೇಕ ಮಾಡಿಸಿಕೊಂಡ ಬಗ್ಗೆ ಅನೇಕ ರಸವತ್ತಾದ ಕಥೆಗಳಿವೆ.

ಟಿಪ್ಪರರಿ ನೋಡದವರಿಗಿಂತ, ಆ ಹೆಸರನ್ನು ಕೇಳಿದವರೇ ಹೆಚ್ಚಿರಬಹುದು. ಈ ಊರಿನ ಹೆಸರು ಜಗತ್ತಿನಾದ್ಯಂತ ಪಸರಿಸಲು It's a Long Way to Tipperary' ಎಂಬ ಹಾಡು ಪ್ರಮುಖ ಕಾರಣ. ಒಂದನೇ ಮಹಾಯುದ್ಧದ ಸಮಯದಲ್ಲಿ ಬ್ರಿಟಿಷ್ ಸೈನಿಕರು ತಮ್ಮ ಮನೆಯ ನೆನಪಾದರೆ ಈ ಹಾಡನ್ನು ಹಾಡುತ್ತಿದ್ದರು. ಇದು ಕೇವಲ ಒಂದು ಹಾಡಾಗಿ ಉಳಿಯದೇ, ದೂರದಲ್ಲಿರುವ ಪ್ರೀತಿಪಾತ್ರರನ್ನು ಮತ್ತು ತಾಯ್ನಾಡನ್ನು ನೆನೆಯುವ ಸಂಕೇತವಾಯಿತು.

ಐರಿಷ್ ಸಂಸ್ಕೃತಿ, ಧೈರ್ಯ ಮತ್ತು ಆತಿಥ್ಯದ ಪ್ರತೀಕವಾಗಿರುವ ಟಿಪ್ಪರರಿ, ಕನ್ನಡಿಗರಿಗೆ ಅಪರಿಚಿತವೇನಲ್ಲ. ನಾನು ಈ ಊರನ್ನು ಹುಡುಕಿಕೊಂಡು ಹೋಗಲು ಮುಖ್ಯ ಕಾರಣ ಕೂಡ ವೈಎನ್ಕೆ ಸದಾ ಗುನುಗುತ್ತಿದ್ದ ಆ ಹಾಡೇ- 'ಇಟ್ಸ್ ಎ ಲಾಂಗ್ ವೇ ಟು ಟಿಪ್ಪರರಿ'. ಭಾರತದಲ್ಲೂ ಬ್ರಿಟಿಷ್ ಆಳ್ವಿಕೆಯಿದ್ದ ಕಾಲದಲ್ಲಿ ಈ ಹಾಡು ಸಾಕಷ್ಟು ಪ್ರಸಿದ್ಧಿ ಪಡೆದಿತ್ತು.

ಈ ಹಾಡು ಕನ್ನಡಕ್ಕೂ ಹರಿದುಬಂದಿದೆ ಅಂದ್ರೆ ಅಚ್ಚರಿಯಾಗಬಹುದು. ಈ ಹಾಡು ಕೇವಲ ಯುದ್ಧದ ಗೀತೆಯಾಗಿ ಉಳಿಯದೇ, ವಿಶ್ವಾದ್ಯಂತ ಮನ್ನಣೆ ಪಡೆದಿದ್ದು ಸೋಜಿಗವೇ.

ಈ ಹಾಡನ್ನು ಕನ್ನಡಕ್ಕೆ ಅತ್ಯಂತ ಸುಂದರವಾಗಿ ಮತ್ತು ಭಾವನಾತ್ಮಕವಾಗಿ ಅನುವಾದಿಸಿದ ಕೀರ್ತಿ ಖ್ಯಾತ ಸಾಹಿತಿ ಟಿ.ಪಿ.ಕೈಲಾಸಂ ಅವರಿಗೆ ಸಲ್ಲುತ್ತದೆ. ಅವರು ಈ ಹಾಡನ್ನು ಅಣಕುರೂಪದಲ್ಲಿ ಕನ್ನಡದ ಸೊಗಡಿಗೆ ಒಗ್ಗುವಂತೆ ಭಾಷಾಂತರಿಸಿದ್ದರು. ಮೂಲ ಇಂಗ್ಲಿಷಿನ ಈ ಹಾಡಿನ ಮೊದಲ ಚರಣ:

It's a long way to Tipperary,
It's a long way to go.
It's a long way to Tipperary,
To the sweetest girl I know!
Goodbye, Piccadilly,
Farewell, Leicester Square!

ಇದನ್ನು ಕೈಲಾಸಂ ಹೀಗೆ ಅನುವಾದಿಸಿದ್ದಾರೆ:

ನಮ್ ತಿಪ್ಪಾರಳ್ಳಿ ಬಲು ದೂರಾ
ನಡೆಯಕ್ ಬಲು ದೂರಾ
ನಮ್ ತಿಪ್ಪಾರಳ್ಳಿ ಬಲು ದೂರಾ
ಅಲ್ಲಿ ನಡೆಯೋಳ್ ನಮ್ ಬಸ್ವಿ

ಆ ಕಾಲದ ಕನ್ನಡದ ಹಲವು ನಾಟಕಗಳಲ್ಲಿ ಮತ್ತು ಸಭೆಗಳಲ್ಲಿ ಇಂಥ ಪಾಶ್ಚಾತ್ಯ ಧಾಟಿಗಳ ಹಾಡುಗಳನ್ನು ಅಳವಡಿಸಿಕೊಳ್ಳುವ ಸಂಪ್ರದಾಯವಿತ್ತು. ಈ ಹಾಡು ಜನಪ್ರಿಯವಾಗಲು ಕಾರಣವೇನು? ಟಿಪ್ಪರರಿ ಎಂಬುದು ಐರ್ಲೆಂಡ್‌ನ ಒಂದು ಊರಾದರೂ, ಭಾರತೀಯ ಸೈನಿಕರು ಕೂಡ ಬ್ರಿಟಿಷ್ ಸೇನೆಯಲ್ಲಿದ್ದಾಗ ತಮ್ಮ ಊರುಗಳನ್ನು ನೆನೆಯಲು ಈ ರಾಗವನ್ನು ಬಳಸುತ್ತಿದ್ದರು. ಇದರ ರಾಗವು ಅತ್ಯಂತ ಸರಳವಾಗಿದ್ದು, ಗುಂಪಿನಲ್ಲಿ ಹಾಡಲು ಸುಲಭವಾಗಿತ್ತು.

ಟಿಪ್ಪರರಿ ಹಾಡು ಕನ್ನಡಕ್ಕೆ ಬಂದಾಗ ಅದು ಕೇವಲ ಅನುವಾದವಾಗಿ ಉಳಿಯಲಿಲ್ಲ, ಅದು ಕನ್ನಡದ 'ಭಾವಗೀತೆ' ಪರಂಪರೆಯ ಮೇಲೆ ಪ್ರಭಾವ ಬೀರಿತು. ದೂರದ ಊರಿನ ನೆನಪು, ಹಳ್ಳಿಯ ಸೊಬಗು, ಹಳ್ಳಿಗರ ಮುಗ್ಧತೆಯನ್ನು ವ್ಯಕ್ತಪಡಿಸುವ ಹಾಡುಗಳಿಗೆ ಇದೊಂದು ಮಾದರಿಯಾಯಿತು. ಈ ಹಾಡನ್ನು ಕೇವಲ ಕನ್ನಡದಲ್ಲಷ್ಟೇ ಅಲ್ಲದೆ, ಪ್ರಪಂಚದ ಸುಮಾರು 40ಕ್ಕೂ ಹೆಚ್ಚು ಭಾಷೆಗಳಿಗೆ ಅನುವಾದಿಸಲಾಗಿದೆ. ವಿಚಿತ್ರವೆಂದರೆ, ಈ ಹಾಡನ್ನು ಬರೆದ ಜ್ಯಾಕ್ ಜಡ್ಜ್ ಇದನ್ನು ಒಂದು ಸ್ಪರ್ಧೆಯಲ್ಲಿ ಬೆಟ್ಸ್ ಕಟ್ಟಿ ಕೇವಲ ಒಂದೇ ದಿನದಲ್ಲಿ ಬರೆದಿದ್ದ!

ಜ್ಯಾಕ್ ಜಡ್ಜ್ ಇಂಗ್ಲೆಂಡ್‌ನ ಒಬ್ಬ ಸಂಗೀತ ಪ್ರದರ್ಶಕ. ಜನವರಿ 30, 1912ರಂದು ಬ್ರಿಟನ್‌ನ ಸ್ಟಾಲಿಬ್ರಿಡ್ಜ್ ಎಂಬಲ್ಲಿ ಪ್ರದರ್ಶನ ನೀಡುತ್ತಿದ್ದಾಗ, ಅವನ ಸ್ನೇಹಿತನೊಬ್ಬ 'ನೀನು ಒಂದೇ ದಿನದಲ್ಲಿ ಹೊಸ ಹಾಡನ್ನು ಬರೆದು, ಅದಕ್ಕೆ ರಾಗ ಸಂಯೋಜಿಸಿ ಸಂಜೆ ಪ್ರದರ್ಶನ ನೀಡಬಲ್ಲೆಯಾ?' ಎಂದು ಐದು ಶಿಲ್ಲಿಂಗ್‌ಗಳ ಸವಾಲು ಹಾಕಿದ. ಜ್ಯಾಕ್ ಈ ಸವಾಲನ್ನು ಸ್ವೀಕರಿಸಿ, ಕೇವಲ ಒಂದೇ ರಾತ್ರಿಯಲ್ಲಿ ಈ ಹಾಡನ್ನು ಸಿದ್ಧಪಡಿಸಿದ.

ಜ್ಯಾಕ್ ಜಡ್ಜ್‌ನ ಪೋಷಕರು ಐರ್ಲೆಂಡ್‌ನ ಟಿಪ್ಪರರಿ ಮೂಲದವರಾಗಿದ್ದರು. ಹೀಗಾಗಿ, ಅವನಿಗೆ ಆ ಊರಿನ ಬಗ್ಗೆ ವಿಶೇಷ ಪ್ರೀತಿಯಿತ್ತು. ಈ ಹಾಡು ಲಂಡನ್‌ನಲ್ಲಿ ನೆಲೆಸಿರುವ ಒಬ್ಬ ಐರಿಷ್ ವ್ಯಕ್ತಿಯ ಬಗ್ಗೆ ಇದೆ. ಅವನು ತನ್ನ ಪ್ರೇಯಸಿ 'ಮೋಲಿ ವೈರ್' ಮತ್ತು ತನ್ನ ಪ್ರೀತಿಯ ಊರು 'ಟಿಪ್ಪರರಿ'ಯನ್ನು ನೆನೆಯುತ್ತಾ, ಅಲ್ಲಿಗೆ ಹೋಗುವ ಹಾದಿ ಎಷ್ಟು ದೂರವಿದೆ ಎಂದು ಹಾಡುತ್ತಾನೆ. ಆರಂಭದಲ್ಲಿ ಇದು ಯುದ್ಧಗೀತೆಯಾಗಿರದೇ ಕೇವಲ ಒಂದು ಪ್ರೇಮಗೀತೆಯಾಗಿತ್ತು.

1914ರಲ್ಲಿ ಒಂದನೇ ಮಹಾಯುದ್ಧ ಆರಂಭವಾದಾಗ, ಬ್ರಿಟಿಷ್ ಸೇನೆಯ 'ಕೊನಾಟ್ ರೇಂಜರ್ಸ್' ಎಂಬ ರೆಜಿಮೆಂಟ್‌ನ ಐರಿಷ್ ಸೈನಿಕರು ಫ್ರಾನ್ಸ್‌ನ ಬೀದಿಗಳಲ್ಲಿ ಮೆರವಣಿಗೆ ಮಾಡುವಾಗ ಈ ಹಾಡನ್ನು ಹಾಡಿದರು. ಇದನ್ನು ಕಂಡ 'ಡೈಲಿ ಮೇಲ್' ಪತ್ರಿಕೆಯ ವರದಿಗಾರ, ದೊಡ್ಡದಾಗಿ ವರದಿ ಮಾಡಿದಾಗ, ಈ ಹಾಡು ಇಡೀ ಬ್ರಿಟಿಷ್ ಸೇನೆಯಲ್ಲಿ ವೈರಲ್ ಆಯಿತು. ಸೈನಿಕರಿಗೆ ಇದು ಯುದ್ಧದ ನಡುವೆ ತಮ್ಮ ಮನೆ, ಊರು ಮತ್ತು ಪ್ರೀತಿಪಾತ್ರರನ್ನು ನೆನೆಯಲು ಒಂದು ಆಸರೆಯಾಯಿತು.

1914ರಲ್ಲಿ ಜಾನ್ ಮೆಕ್ ಕಾರ್ಮ್ಯಾಕ್ ಎಂಬ ಗಾಯಕ ಈ ಹಾಡನ್ನು ರೆಕಾರ್ಡ್ ಮಾಡಿದ, ಇದರ ಲಕ್ಷಾಂತರ ಪ್ರತಿಗಳು ಮಾರಾಟವಾಗಿ ದಾಖಲೆ ನಿರ್ಮಿಸಿತು. ಈ ಹಾಡಿನ ಯಶಸ್ಸಿನ ನಂತರ ಜ್ಯಾಕ್ ಜಡ್ಜ್ ಶ್ರೀಮಂತನಾದ. ಆತ ತಾನು ಹುಟ್ಟಿದ ಊರಿನ ಮೇಲೆ ಅಪಾರ ಪ್ರೀತಿ ಹೊಂದಿದ್ದ. ಇಂದಿಗೂ ಟಿಪ್ಪರರಿಯಲ್ಲಿ ಅವನ ಸ್ಮರಣಾರ್ಥ ಸ್ಮಾರಕಗಳಿವೆ. ಈ ಹಾಡು ಎಷ್ಟು ಪ್ರಸಿದ್ಧವಾಯಿತೆಂದರೆ, ಜರ್ಮನ್ ಸೈನಿಕರು ಕೂಡ ಇದನ್ನು ತಮ್ಮದೇ ಭಾಷೆಗೆ ಭಾಷಾಂತರಿಸಿ ಹಾಡುತ್ತಿದ್ದರು! ಈ ಹಾಡನ್ನು ಕೆಲವು ಗಗನಯಾತ್ರಿಗಳು ಬಾಹ್ಯಾಕಾಶ ನಿಲ್ದಾಣದಲ್ಲಿ ಕೂಡ ಹಾಡಿರುವ ದಾಖಲೆಗಳಿವೆ.

ಜ್ಯಾಕ್ ಜಡ್ಜ್‌ನ ಈ ಒಂದು ಸಾಧಾರಣ ಹಾಡು ಇತಿಹಾಸದ ಪುಟಗಳಲ್ಲಿ ಚಿರಸ್ಥಾಯಿಯಾಗಿ ಉಳಿಯಿತು.

ಕೈಲಾಸಂ 'ನಮ್ ತಿಪ್ಪಾರಳ್ಳಿ ಬಲು ದೂರಾ ನಡೆಯಕ್ ಬಲು ದೂರಾ' ಎಂದು ಬರೆದು ಈ ಹಾಡನ್ನು ಮೂಲ ಧಾಟಿಯಲ್ಲಿ ಹಾಡುತ್ತಿದ್ದರು. ನಂತರ ಸಿ.ಅಶ್ವಥ್ ಅವರು ಮತ್ತಷ್ಟು ಚೆನ್ನಾಗಿ ರಾಗ ಸಂಯೋಜಿಸಿ, ಸ್ವತಃ ಹಾಡಿದಾಗ ಈ ಹಾಡು ಕನ್ನಡದಲ್ಲೂ ಪ್ರಸಿದ್ಧವಾಯಿತು. ನಂತರ ಈ ಹಾಡನ್ನು ಎಸ್.ಪಿ.ಬಾಲಸುಬ್ರಹ್ಮಣ್ಯಂ ಕೂಡ ಹಾಡಿದರು.

ನಾನು ಟಿಪ್ಪರರಿಗೆ ಹೋದಾಗ, It's a long way to Tipperary ಹಾಡಿನ ಕನ್ನಡ ಅವತರಣಿಕೆಯಾದ 'ನಮ್ ತಿಪ್ಪಾರಳ್ಳಿ ಬಲು ದೂರಾ ನಡೆಯಕ್ ಬಲು ದೂರಾ' ಹಾಡನ್ನು, ನಾನು ಉಳಿದುಕೊಂಡ ಹೋಟೆಲ್ ಮ್ಯಾನೇಜರ್ ಮತ್ತು ಅವರ ಸಿಬ್ಬಂದಿಗೆ ಕೇಳಿಸಿದ್ದೆ. ಅದನ್ನು ಕೇಳಿ ಅವರೂ ಬಹಳ ಖುಷಿಪಟ್ಟಿದ್ದರು.

ಈಗ ನಾನು ಈ ಊರು ಮತ್ತು ಹಾಡನ್ನು ನೆನಪಿಸಿಕೊಳ್ಳಲು ಕಾರಣ, ಐರ್ಲೆಂಡಿನ ಕಾರ್ಕ್‌ನಲ್ಲಿ ಸುಮಾರು ಇಪ್ಪತ್ತು ವರ್ಷ ವಾಸವಾಗಿದ್ದ ಚಳ್ಳಕೇರಿಯ ಮಹಾಂತೇಶ ಸ್ವಾಮಿ, ನಾನು ಅಲ್ಲಿಗೆ ಹೋಗಿದಾಗ ನನ್ನ ಅಪೇಕ್ಷೆಯ ಮೇರೆಗೆ ಟಿಪ್ಪರರಿಗೆ ಕರೆದುಕೊಂಡು ಹೋಗಿದ್ದರು. ಎರಡು ದಿನ ಅವರ ಕಾರಿನಲ್ಲಿ ಟಿಪ್ಪರರಿ, ಲಿಮೆರಿಕ್, ವಾಟರ್ ಫೋರ್ಡ್ ಮುಂತಾದೆಡೆ ಸುತ್ತಾಡಿಸಿದ್ದರು. ಒಂದೂವರೆ ತಿಂಗಳ ಹಿಂದೆ ಅವರು ನಿಧನರಾದರೆಂದು ಹಿಂದಿನ ವಾರವಷ್ಟೇ ಗೊತ್ತಾಯಿತು. ಅವರ ನೆನಪಿನೊಂದಿಗೆ ಟಿಪ್ಪರರಿ ಕೂಡ ಹಾದುಹೋಯಿತು.

ಮರುಲಾ ಮತ್ತು ಅಮರುಲಾ

ದಕ್ಷಿಣ ಆಫ್ರಿಕಾದಿಂದ ನೀವು ಮರಳುವಾಗ, ಜೋಹಾನ್ಸ್‌ಬರ್ಗ್ ಅಥವಾ ಕೇಪ್ ಟೌನ್ ಡ್ಯೂಟಿ ಫ್ರೀ ಶಾಪ್‌ನಲ್ಲಿ ನನ್ನ ಸ್ನೇಹಿತರೊಬ್ಬರು, 'ಬರುವಾಗ ಒಳ್ಳೆಯ ದೇಸಿಯ ಗುಂಡು ಬಾಟಲಿ ತೆಗೆದುಕೊಂಡು ಬಾ ಎಂದು ನನ್ನ ಗೆಳೆಯರೊಬ್ಬರು ಹೇಳಿದ್ದಾರೆ. ಯಾವ ಬಾಟಲಿ ಖರೀದಿಸಲಿ?' ಎಂದು ನಾನೇನೋ ಈ ವಿಷಯದಲ್ಲಿ ಬಹಳ ಪರಿಣತ ಎಂಬಂತೆ ಕೇಳಿದರು. ನಾನು ಅವರಿಗೆ ತಕ್ಷಣ 'ಅಮರುಲಾ ಹೆಸರಿನ ಲಿಕ್ಯೂರ್ ತೆಗೆದುಕೊಂಡು ಹೋಗಿ' ಎಂದು ಹೇಳಿದೆ. ಅದಕ್ಕೆ ಅವರು, 'ಆ ಹೆಸರಿನ ಲಿಕ್ಕರ್ ಇದೆಯೆಂಬುದೇ ಗೊತ್ತಿಲ್ಲವಲ್ಲ?' ಎಂದು ಹೇಳಿದರು.

ನಂತರ ನಾನು ಅವರಿಗೆ ಅಮರುಲಾ ಅಂದರೆ ಏನು, ಆ ಹೆಸರು ಹೇಗೆ ಬಂತು, ಲಿಕ್ಕರ್‌ಗೂ, ಲಿಕ್ಯೂರ್‌ಗೂ ಏನು ವ್ಯತ್ಯಾಸ ಎಂದ ಬಳಿಕ ಅವರು ಒಂದರ ಮೇಲೆ ಇನ್ನೊಂದು ಬಾಟಲಿಯನ್ನು ಖರೀದಿಸಿದರು. ಅದನ್ನು ಕೇಳಿಸಿಕೊಂಡ ನನ್ನ ಅಕ್ಕಪಕ್ಕ ಇದ್ದವರೂ ಅದನ್ನು ಖರೀದಿಸಿದರು.

ಅಮರುಲಾ (Amarula) ಎಂಬುದು ಕೇವಲ ಮದ್ಯವಲ್ಲ. ಅದು ದಕ್ಷಿಣ ಆಫ್ರಿಕಾದ ಕೆಂಪು ಮಣ್ಣಿನ ಘಮಲು, ವನ್ಯಜೀವಿಗಳ ಬದುಕು ಮತ್ತು ಅಲ್ಲಿನ ಜನರ ಸಂಸ್ಕೃತಿಯನ್ನು ಜಗತ್ತಿಗೆ ಪರಿಚಯಿಸುವ ಒಂದು ಜೀವಂತ ಕಥೆ. ವಿಶ್ವದಾದ್ಯಂತ ಎರಡನೇ ಅತಿ ದೊಡ್ಡ ಕ್ರೀಮ್ ಲಿಕ್ಯೂರ್ ಆಗಿ ಗುರುತಿಸಿಕೊಂಡಿರುವ ಅಮರುಲಾದ ಹಿಂದೆ ಪ್ರಕೃತಿ ಮತ್ತು ಮನುಷ್ಯನ ನಡುವಿನ ಅಪೂರ್ವ ಸಂಬಂಧವಿದೆ.

ಈ ಪಾನೀಯದ ಆತ್ಮ ಇರುವುದು 'ಮರುಲಾ' ಎಂಬ ವಿಶಿಷ್ಟ ಹಣ್ಣಿನಲ್ಲಿ. ಅಮರುಲಾ ತಯಾರಾಗುವುದು ಆಫ್ರಿಕಾದ ಉಪ-ಸಹಾರಾ ಪ್ರದೇಶದ ವಿಶಾಲ ಬಯಲುಗಳಲ್ಲಿ ಬೆಳೆಯುವ 'ಮರುಲಾ' ಮರಗಳಿಂದ. ಈ ಮರಗಳನ್ನು ಸ್ಥಳೀಯರು 'ಗಜವೃಕ್ಷ' (Elephant Tree) ಅಥವಾ 'ಸಂತಾನ ವೃಕ್ಷ' ಎಂದು ಕರೆಯುತ್ತಾರೆ. ಮರುಲಾ ಮರದ ಅಡಿಯಲ್ಲಿ ಮದುವೆಯಾದರೆ ಆ ದಂಪತಿಗಳಿಗೆ ಸಂತಾನಭಾಗ್ಯ ಮತ್ತು ಸಮೃದ್ಧಿ ಸಿಗುತ್ತದೆ ಎಂಬ ನಂಬಿಕೆ ಆಫ್ರಿಕಾದ ಬುಡಕಟ್ಟು ಜನರಲ್ಲಿ ಇಂದಿಗೂ ಇದೆ.

ಈ ಮರಗಳನ್ನು ಯಾರೂ ಬೆಳೆಸುವುದಿಲ್ಲ. ಅವು ತಾವಾಗಿಯೇ ಕಾಡಿನಲ್ಲಿ ಬೆಳೆಯುತ್ತವೆ. ವರ್ಷಕ್ಕೊಮ್ಮೆ ಮಾತ್ರ ಈ ಮರಗಳು ಹಳದಿ ಬಣ್ಣದ, ಸುವಾಸನೆಯುಕ್ತ ಹಣ್ಣುಗಳನ್ನು ಬಿಡುತ್ತವೆ. ಈ ಹಣ್ಣುಗಳಲ್ಲಿ ಕಿತ್ತಳೆ ಹಣ್ಣಿಗಿಂತ ಎಂಟು ಪಟ್ಟು ಹೆಚ್ಚು 'ವಿಟಮಿನ್ ಸಿ' ಇರುತ್ತದಂತೆ.

ಅಮರುಲಾ ಬಾಟಲಿಯ ಮೇಲೆ ಆನೆಯ ಚಿತ್ರವಿರುವುದಕ್ಕೆ ಒಂದು ಬಲವಾದ ಕಾರಣವಿದೆ. ಮರುಲಾ ಹಣ್ಣುಗಳು ಮಾಗಿದಾಗ ಹರಡುವ ಸುವಾಸನೆಯು ಮೈಲಿಗಟ್ಟಲೆ ದೂರವಿರುವ ಆನೆಗಳನ್ನು ಸೆಳೆಯುತ್ತದೆ. ಹಣ್ಣುಗಳು ಮಾಗಿದ ತಕ್ಷಣ ಆನೆಗಳ ಹಿಂಡು ಹಿಂಡೇ ಈ ಮರಗಳ ಬಳಿ ಧಾವಿಸುತ್ತವೆ. ಆನೆಗಳು ಈ ಹಣ್ಣನ್ನು ಎಷ್ಟು ಇಷ್ಟಪಡುತ್ತವೆ ಎಂದರೆ, ಮರದ ಕೊಂಬೆಗಳನ್ನು ಜೋರಾಗಿ ಅಲ್ಲಾಡಿಸಿ ಹಣ್ಣುಗಳನ್ನು ಬೀಳಿಸಿ ತಿನ್ನುತ್ತವೆ.

ಹಣ್ಣುಗಳು ಕೆಳಗೆ ಬಿದ್ದು ಕೊಳೆತಾಗ ಅವುಗಳಲ್ಲಿ ನೈಸರ್ಗಿಕವಾಗಿ ಆಲ್ಕೋಹಾಲ್ ಉತ್ಪತ್ತಿಯಾಗುತ್ತದೆ. ಇದನ್ನು ತಿಂದ ಆನೆಗಳು ಮತ್ತೇರಿದಂತೆ ಆಡುತ್ತವೆ ಎಂಬ ದಂತಕಥೆಯಿದೆ. ಆದರೆ ವಿಜ್ಞಾನಿಗಳ ಪ್ರಕಾರ, ಆನೆಗಳಂಥ ಬೃಹತ್ ಪ್ರಾಣಿಗೆ ಮತ್ತೇರಲು ಸಾವಿರಾರು ಹಣ್ಣುಗಳನ್ನು ತಿನ್ನಬೇಕಾಗುತ್ತದೆ. ಆದರೂ, ಆನೆ ಮತ್ತು ಮರುಲಾ ನಡುವಿನ ಈ ಬಾಂಧವ್ಯ ಅಮರುಲಾ ಬ್ರ್ಯಾಂಡ್‌ನ ಜೀವಾಳವಾಗಿದೆ.

ಆನೆ ತಿಂದು ಬಿಟ್ಟ ಮರುಲಾ ಹಣ್ಣುಗಳನ್ನು ಕಾಡಿನಲ್ಲಿದ್ದ ಉಳಿದ ಪ್ರಾಣಿಗಳೆಲ್ಲ ತಿಂದು, ಇಡೀ ಕಾಡಿನಲ್ಲಿರುವ ಪ್ರಾಣಿಗಳೆಲ್ಲ ಕುಡಿದು ಟೈಟ್ ಆದವರಂತೆ ವರ್ತಿಸುವ ವಿಡಿಯೋ ಕೆಲ ವರ್ಷಗಳ ಹಿಂದೆ ವೈರಲ್ ಆಗಿದ್ದು ನೆನಪಿರಬಹುದು (ಈಗಲೂ ಆ ವಿಡಿಯೋವನ್ನು ಯೂಟ್ಯೂಬ್‌ನಲ್ಲಿ ನೋಡಬಹುದು).

ಅಮರುಲಾ ತಯಾರಿಕೆಯ ಹಿಂದೆ ಸಾವಿರಾರು ಆಫ್ರಿಕನ್ ಮಹಿಳೆಯರ ಮತ್ತು ಹಳ್ಳಿಗರ ಬೆವರಿನ ಕಥೆಯಿದೆ. ಮರುಲಾ ಹಣ್ಣುಗಳನ್ನು ಬೆಳೆಯಲು ಯಾವುದೇ ತೋಟಗಳಿಲ್ಲದ ಕಾರಣ, ಕಾಡಿನಲ್ಲಿ ಅಲ್ಲಲ್ಲಿ ಬೆಳೆದಿರುವ ಮರಗಳಿಂದ ಬಿದ್ದ ಹಣ್ಣುಗಳನ್ನು ಆರಿಸುವುದೇ ಒಂದು ದೊಡ್ಡ ಸವಾಲು. ಕಾಡುಪ್ರಾಣಿಗಳ ಭಯದ ಮಧ್ಯದಲ್ಲಿ ಜೀವದ ಹಂಗು ತೊರೆದು ಈ ಹಣ್ಣುಗಳನ್ನು ಆಯ್ದು ತರುವುದು ಸುಲಭದ ಮಾತಲ್ಲ.

ಸುಗ್ಗಿ ಕಾಲದಲ್ಲಿ ಸಾವಿರಾರು ಹಳ್ಳಿಗರು ಈ ಹಣ್ಣುಗಳನ್ನು ಸಂಗ್ರಹಿಸಲೂ ಕಾಡಿಗೆ ಹೋಗುತ್ತಾರೆ. ಇದರಿಂದ ಅವರಿಗೆ ಬದುಕಲು ಬೇಕಾದ ಆರ್ಥಿಕ ನೆರವು ಸಿಗುತ್ತದೆ. ಪ್ರತಿ ಹಣ್ಣನ್ನು ಕೈಯಿಂದಲೇ ಆರಿಸಿ, ಅದರ ತಿರುಳನ್ನು ತೆಗೆಯಲಾಗುತ್ತದೆ. ಈ ಮರಗಳನ್ನು ಕಡಿಯುವಂತಿಲ್ಲ ಎಂಬ ಕಟ್ಟುನಿಟ್ಟಿನ ನಿಯಮವಿದೆ. ಪ್ರಕೃತಿ ಕೊಟ್ಟದ್ದನ್ನು ಮಾತ್ರ ಪಡೆದು, ಅದಕ್ಕೆ ಪ್ರತಿಯಾಗಿ ಕಾಡನ್ನು ರಕ್ಷಿಸುವ ಕೆಲಸವನ್ನು ಅಲ್ಲಿನ ಸಮುದಾಯಗಳು ಮಾಡುತ್ತಿವೆ.

ಅಮರುಲಾ ತಯಾರಿಕೆಯು ವೈನ್ ತಯಾರಿಕೆಯಷ್ಟೇ ಸಂಕೀರ್ಣ ಮತ್ತು ಕಲಾತ್ಮಕವಾಗಿದೆ. ಆರಿಸಿದ ಹಣ್ಣಿನ ತಿರುಳನ್ನು ವೈನ್‌ನಂತೆ ಹುದುಗಿಸಲಾಗುತ್ತದೆ. ಈ ಮರುಲಾ ಫರ್ಮೆಂಟ್ ಆದ ನಂತರ, ಎರಡು ಬಾರಿ ಭಟ್ಟಿ ಇಳಿಸಿ, ಶುದ್ಧ ಮರುಲಾ ಸ್ಪಿರಿಟ್ ತಯಾರಿಸಲಾಗುತ್ತದೆ. ಈ ಸ್ಪಿರಿಟ್ ಅನ್ನು ಸುಮಾರು ಎರಡು ವರ್ಷಗಳ ಕಾಲ ಓಕ್ ಮರದ ಪೀಪಾಯಿಗಳಲ್ಲಿ ಇಡಲಾಗುತ್ತದೆ. ಇದರಿಂದ ಪಾನೀಯಕ್ಕೆ ವೆನಿಲ್ಲಾ ಮತ್ತು ಟೋಸ್ಟ್ ಮಾಡಿದ ಮರದ ಘಮ ಬರುತ್ತದೆ. ಕೊನೆಯ ಹಂತದಲ್ಲಿ ಇದಕ್ಕೆ ತಾಜಾ ಕ್ರೀಮ್ ಅನ್ನು ಬೆರೆಸಲಾಗುತ್ತದೆ. ಇದರ ಫಲಿತಾಂಶವೇ ರೇಷ್ಮೆಯಂಥ ಮೃದುತ್ವ ಹೊಂದಿದ ಅಮರುಲಾ ಲಿಕ್ಯೂರ್.

ಅಮರುಲಾ ಲಾಭ ಗಳಿಸುವ ಉದ್ದೇಶವನ್ನು ಮಾತ್ರ ಹೊಂದಿಲ್ಲ. ಆಫ್ರಿಕಾದ ಆನೆಗಳ ಸಂಖ್ಯೆ ಕ್ಷೀಣಿಸುತ್ತಿರುವುದನ್ನು ಕಂಡು, ಈ ಬ್ರ್ಯಾಂಡ್ 'ಅಮರುಲಾ ಟ್ರಸ್ಟ್' ಎಂಬ ಸಂಸ್ಥೆಯನ್ನು ಸ್ಥಾಪಿಸಿದೆ. ಪ್ರತಿ ಬಾಟಲಿಯ ಮಾರಾಟದ ಒಂದಷ್ಟು ಭಾಗ ಆನೆಗಳ ಸಂರಕ್ಷಣೆಗೆ ಬಳಕೆಯಾಗುತ್ತದೆ. 'ಆನೆಗಳಿಲ್ಲದಿದ್ದರೆ ಮರುಲಾ ಇಲ್ಲ, ಮರುಲಾ ಇಲ್ಲದಿದ್ದರೆ ಅಮರುಲಾ ಇಲ್ಲ' ಎಂಬುದು ಅವರ ಘೋಷವಾಕ್ಯ. ಪರಿಸರ ಮತ್ತು ವನ್ಯಜೀವಿ ಸಂರಕ್ಷಣೆಯ ಇಂಥ ಸಾಮಾಜಿಕ ಬದ್ಧತೆ ಈ ಪಾನೀಯಕ್ಕೆ ವಿಭಿನ್ನ ಘನತೆಯನ್ನು ತಂದುಕೊಟ್ಟಿದೆ.

ನೀವು ಒಂದು ಲೋಟ ಅಮರುಲಾವನ್ನು ಹೀರುತ್ತಿದ್ದೀರಿ ಎಂದರೆ, ನೀವು ಆಫ್ರಿಕಾದ ಹಸಿರು ಕಾಡಿನ ಒಂದು ಭಾಗವನ್ನು ಅನುಭವಿಸುತ್ತಿದ್ದೀರಿ ಎಂದರ್ಥ. ಅದರಲ್ಲಿ ಆಫ್ರಿಕಾ ಆನೆಗಳ ನೆನಪು, ಅಲ್ಲಿನ ಮಹಿಳೆಯರ ಪರಿಶ್ರಮವಿದೆ ಮತ್ತು ಪ್ರಕೃತಿಯನ್ನು ಗೌರವಿಸುವ ಸಂಕಲ್ಪವಿದೆ.

ಕನಕದಾಸರು ಆ ಬಾಳೆಹಣ್ಣನ್ನು ತಿನ್ನಲೇ ಇಲ್ಲವೇಕೆ?

ತಿಳಿರು ತೋರಣ
ಶ್ರೀವತ್ಸ ಜೋಶಿ
srivathsajoshi@yahoo.com

ಅವರಿಗೆ ಹಸಿವಾಗಿರಲಿಲ್ಲವೇನೋ. ಅಥವಾ ಆವತ್ತು ಕೂಡ ಏಕಾದಶಿಯ ಉಪವಾಸ ಆಚರಣೆ ಮಾಡಬೇಕು ಎಂದುಕೊಂಡರೇನೋ. ಅಥವಾ ಬಾಳೆಹಣ್ಣು ತಿಂದಮೇಲೆ ಸಿಪ್ಪೆ ಎಲ್ಲಿ ಬಿಸಾಡಲಿ ಎಂಬ ಚಿಂತೆ ಅವರನ್ನು ಕಾಡಿರಬಹುದು. ಅಥವಾ ಅವರಿಗೆ ಸಿಕ್ಕಿದ ಬಾಳೆಹಣ್ಣು ಹೊರಗಿಂದ ಇನ್ನೂ ಹಸುರಾಗಿಯೇ ಇದ್ದು ಹಳದಿಬಣ್ಣಕ್ಕೆ ತಿರುಗಿ ಪಕ್ವವಾಗಿದ್ದಿಲ್ಲವಿರಬಹುದು. ಅಥವಾ ಅವರಿಗೆ ನಂಜನಗೂಡಿನ ರಸಬಾಳೆ ಮಾತ್ರ ಇಷ್ಟವಾಗುತ್ತಿದ್ದದ್ದು, ಬೇರೆ ತಳಿಗಳು ಅಂದ್ರೆ ಪಚ್ಚಬಾಳೆ, ಏಲಕ್ಕಿಬಾಳೆ, ಬೂದುಬಾಳೆ, ಚಂದ್ರಬಾಳೆಗಳೆಲ್ಲ ಸೇರುತ್ತಿರಲಿಲ್ಲವಿರಬಹುದು... ಹೀಗೆ ಹಲವಾರು ತರ್ಲೆ ಉತ್ತರಗಳನ್ನು ಆ ಪ್ರಶ್ನೆಗೆ ಕೊಡಬಹುದು. ಆದರೆ ಅವ್ಯಾವುವೂ ಸರಿಯುತ್ತರಗಳಲ್ಲ, ಕನಕದಾಸರು ಬಾಳೆಹಣ್ಣನ್ನು ತಿನ್ನದೇ ಇರುವುದಕ್ಕೆ ಬೇರೆಯೇ ಕಾರಣವಿತ್ತು, ಅದರ ಹಿಂದೊಂದು ತಲಸ್ಪರ್ಶಿ ತರ್ಕ ಇತ್ತು, ಆಧ್ಯಾತ್ಮಿಕ ಔನ್ನತ್ಯದ ಚಿಂತನೆ ಇತ್ತು- ಎಂದು ನಾವೆಲ್ಲ ಆ ಕಥೆಯನ್ನು ಕೇಳಿ/ಓದಿ ಬಲ್ಲೆವು. ಇರಲಿ, ಅದನ್ನು ಆಮೇಲೆ ನೋಡೋಣವಂತೆ. ಮೊದಲಿಗೆ ಮನುಷ್ಯಸ್ವಭಾವದ ಬಗೆಗೆ, ಅದರಲ್ಲೂ ಪ್ರಾಮಾಣಿಕತೆಯ ಬಗೆಗೆ ಲೈಟಾಗಿ ಒಂದಷ್ಟು ಚಿಂತನೆ:

'ತುತ್ತು ಅನ್ನ ತಿನ್ನೋಕೆ ಬೊಗಸೆ ನೀರು ಕುಡಿಯೋಕೆ, ತುಂಡು ಬಟ್ಟೆ ಸಾಕು ನನ್ನ ಮಾನ ಮುಚ್ಚೋಕೆ, ಅಂಗೈಯಗಲ ಜಾಗ ಸಾಕು ಹಾಯಾಗಿರೋಕೆ' ಇವು 'ಜಿಮ್ಮಿಗಲ್ಲು' ಚಿತ್ರದ 'ಜಿಮ್ಮಿ'(ವಿಷ್ಣುವರ್ಧನ್)ಗಷ್ಟೇ ಅಲ್ಲ, ಪ್ರಪಂಚದಲ್ಲಿ ಪ್ರತಿಯೊಬ್ಬ ಮನುಷ್ಯನಿಗೂ ಅತ್ಯಂತ ಮೂಲಭೂತ ಅಗತ್ಯಗಳು. ಇದನ್ನೇ ಹಿಂದಿಯಲ್ಲಿ 'ರೋಟಿ ಕಪಡಾ ಔರ್ ಮಕಾನ್' ಎನ್ನುವುದು. ಇದೇನೂ ನಿನ್ನೆಮೊನ್ನೆ ಕಂಡುಕೊಂಡ ಹೊಸ ಸಂಶೋಧನೆಯಲ್ಲ. ಆದರೆ, ಒಂದುವೇಳೆ ಪ್ರತಿಯೊಬ್ಬ ಮನುಷ್ಯನೂ ಕೇವಲ ಸ್ವಾರ್ಥಿಯಾಗಿ, ತನ್ನೊಬ್ಬನ ಉಳಿವು-ಅಳಿವಿನ ಬಗ್ಗೆಯಷ್ಟೇ ಚಿಂತಿಸುವವನಾಗಿದ್ದರೆ ಹೇಗಿರುತ್ತಿತ್ತು? ಪರಸ್ಪರ ವಿಶ್ವಾಸ, ಸಹಾಯ, ಸಹಕಾರ ಅಂತೆಲ್ಲ ಏನೂ ಇಲ್ಲ, ಕುಟುಂಬ, ಸಮಾಜ ಅನ್ನೋದಕ್ಕೆಲ್ಲ ಅರ್ಥವೇ ಇಲ್ಲ, ಮಾನವೀಯ ಸಂಬಂಧಗಳ ಒಂದೊಂದು ಎಳೆಯೂ ಛಿದ್ರಛಿದ್ರ. ಕಾಡಿನಲ್ಲಾದರೂ ಪ್ರಾಣಿಗಳೆಲ್ಲ ಒಂದು ಅಲಿಖಿತ ನೀತಿನಿಯಮ ಪಾಲಿಸಿ ಸಹಬಾಳ್ವೆ ನಡೆಸುತ್ತಿರುವಾಗ ನಾಡಿನ ಮನುಷ್ಯಪ್ರಾಣಿ ಅವುಗಳಿಗಿಂತಲೂ ಕಡೆ ಎನ್ನಿಸಿಕೊಳ್ಳುವಂಥ ಅಸಹ್ಯ ಅನೂಹ್ಯ ಸನ್ನಿವೇಶ!

ಪುಣ್ಯಕ್ಕೆ ಹಾಗೆ ಇಲ್ಲ ಪರಿಸ್ಥಿತಿ. ಎಷ್ಟೋ ಸಂದರ್ಭಗಳಲ್ಲಿ ನಮಗೆ ಗುರುತು-ಪರಿಚಯ ಇಲ್ಲದವರ ಬಗ್ಗೆ ಕೂಡ ನಾವು ಉದಾರಿಗಳಾಗುತ್ತೇವೆ. ಮುಂದೆ ಅವರು ಭೇಟಿಯಾಗುತ್ತಾರೋ ಇಲ್ಲವೋ, ಮಾಡಿದ ಉಪಕಾರಕ್ಕೆ ಪ್ರತಿಫಲ ದೊರಕುತ್ತದೋ ಇಲ್ಲವೋ ಮುಂತಾಗಿ ಯಾವೊಂದು ಆಲೋಚನೆಯೂ ಇಲ್ಲದೆ ಆ ಕ್ಷಣಕ್ಕೆ ಏನು ಸಾಧ್ಯವಾಯ್ತೋ ಅಷ್ಟನ್ನು ಮಾಡುತ್ತೇವೆ. ಕಣ್ಣು ಕಾಣದ ಮುದುಕನನ್ನು ಕೈಹಿಡಿದು ರಸ್ತೆ ದಾಟಿಸುತ್ತೇವೆ. ಕಂಕುಳಲ್ಲಿ ಮಗು, ಕೈಯಲ್ಲೊಂದು ಭಾರದ ಚೀಲ ಹಿಡಿದುಕೊಂಡು ಬಸ್ ಹತ್ತುವ ಹೆಂಗಸಿಗೆ ಸೀಟ್ ಬಿಟ್ಟುಕೊಡುತ್ತೇವೆ. 'ಪ್ರಯಾಣಿಕರು ಮರೆತುಹೋಗಿದ್ದ ಪರ್ಸ್ ಮರಳಿಸಿದ ಆಟೋ ಚಾಲಕ' ರೀತಿಯ ಸುದ್ದಿಗಳನ್ನು ಆಗಾಗ ಓದುತ್ತೇವೆ. ನಾವೂ ಯಾವಾಗಲೂ ಪ್ರಾಮಾಣಿಕರಾಗಿರಬೇಕು ಎಂದು ಸಂಕಲ್ಪಿಸುತ್ತೇವೆ. ನೆರೆ-ಬರ-ಭೂಕಂಪಗಳಿಂದ ತತ್ತರಿಸಿದವರ ಜಾತಿಮತ ಲೆಕ್ಕಿಸದೆ ಮನಮಿಡಿಯುತ್ತೇವೆ, ನಮ್ಮ ಕೈಲಾದ ಸಹಾಯ ಮಾಡುತ್ತೇವೆ. 'ಕೊಟ್ಟದ್ದು ತನಗೆ ಬಚ್ಚಿಟ್ಟದ್ದು ಪರರಿಗೆ' ಎಂಬಂಥ ಸರಳ ಸಂದೇಶಗಳಿಂದಿರಬಹುದು, 'ಪರೋಪಕಾರಾರ್ಥಮಿದಂ ಶರೀರಂ' ಎಂದುಕೊಂಡೇ ಗಂಧದ ಕೊರಡಿನಂತೆ ಬಾಳು ಸವೆಸುವವರನ್ನು ಆದರ್ಶವಾಗಿಟ್ಟುಕೊಂಡು ಇರಬಹುದು, ಸಂತರ ಸದ್ಬೋಧೆಯಿಂದಿರಬಹುದು ಅಂತೂ ಅನಾಮಧೇಯ ಒಳ್ಳೆತನ ಮತ್ತು ಔದಾರ್ಯಗಳು ಈ ಪ್ರಪಂಚದಲ್ಲಿ ಇನ್ನೂ ಜೀವಂತವಾಗಿಯೇ ಇವೆ ಎನ್ನುವುದು ಹದಿನಾರಾಣೆ ಸತ್ಯ.

ಸತ್ಯವಂತ ಮಾದನ ಕಥೆ ನಮಗೆಲ್ಲ ಗೊತ್ತಿರುವಂಥದ್ದೇ. ಅದೇ- ಒಂದು ಹಳ್ಳಿಯಲ್ಲಿ ಮಾದ ಎಂಬುವನೊಬ್ಬನು ಮರ ಕಡಿದು ಸೌದೆ ತಯಾರಿಸಿ ಮಾರುವ ವೃತ್ತಿ ಮಾಡಿಕೊಂಡಿದ್ದದ್ದು, ತನ್ನ ಕೆಲಸದಲ್ಲಿ ಪ್ರಾಮಾಣಿಕನಾಗಿದ್ದು ಕಷ್ಟಪಟ್ಟು ದುಡಿಯುತ್ತಿದ್ದದ್ದು, ದಿನನಿತ್ಯದ ಖರ್ಚಿಗೆ ಬೇಕಾದಷ್ಟೇ ಹಣ ಸಂಪಾದಿಸುತ್ತ ಸರಳ ಜೀವನದಿಂದ ತೃಪ್ತನಾಗಿದ್ದದ್ದು, ಒಂದು ದಿನ ನದಿಯ ಬಳಿ ಮರ ಕಡಿಯುತ್ತಿದ್ದಾಗ ಅವನ ಕೊಡಲಿ ಕೈಯಿಂದ ಜಾರಿ ನದಿಯಲ್ಲಿ ಬಿದ್ದದ್ದು, ನದಿ ಆಳವಾಗಿದ್ದರಿಂದ ಕೊಡಲಿಯನ್ನು ಹೇಗೆ ಹಿಂಪಡೆಯುವುದೆಂದು ಮಾದ ಯೋಚನೆಗೊಳಗಾದದ್ದು, ತನ್ನ ಬಳಿ ಇದ್ದದ್ದೇ ಒಂದು ಕೊಡಲಿ, ಅದನ್ನು ಕಳೆದುಕೊಂಡು ಜೀವನವನ್ನು ಹೇಗೆ ಸಾಗಿಸುವುದೆಂದು ಚಿಂತಿತನಾದದ್ದು, ದುಃಖಿತನಾಗಿ ದೇವರನ್ನು ಪ್ರಾರ್ಥಿಸಿದಾಗ ದೇವರು ಪ್ರತ್ಯಕ್ಷನಾಗಿ ಮೊದಲಿಗೆ ನದಿಯ ಆಳದಿಂದ ಬೆಳ್ಳಿಯ ಮತ್ತು ಬಂಗಾರದ ಕೊಡಲಿಗಳನ್ನು ತೋರಿಸಿದ್ದು, ಮಾದ ಅವು ತನ್ನದಲ್ಲವೆಂದೂ ಅವುಗಳಿಂದ ತನಗೇನೂ ಪ್ರಯೋಜನ ಇಲ್ಲವೆಂದೂ ಹೇಳಿದ್ದು, ದೇವರು ಮುಗುಳ್ನಕ್ಕು ಕೊನೆಗೆ ಮಾದನ ಅಸಲಿ ಕಬ್ಬಿಣದ ಕೊಡಲಿಯನ್ನೇ ತೆಗೆದು ''ಇದು ನಿನ್ನ ಕೊಡಲಿಯೇ?'' ಎಂದು ಕೇಳಿದ್ದು, ಅದಕ್ಕೆ ಮಾದ ''ಹೌದು! ಇದು ನನ್ನದು! ಧನ್ಯವಾದಗಳು'' ಎಂದಿದ್ದು, ದೇವರು ಅವನ ಪ್ರಾಮಾಣಿಕತೆಗೆ ಮೆಚ್ಚಿ ಮೂರೂ ಕೊಡಲಿಗಳನ್ನಿತ್ತು ಹರಸಿದ್ದು... ತಲೆಮಾರಿಂದ ತಲೆಮಾರಿಗೆ ದಾಟಿಬಂದಿರುವ ಕಥೆಯಿದು.

ಮಾದನ ಕಥೆಯನ್ನೇನೋ ಓದಿ ಬಲ್ಲೆವು. ನಮ್ಮಲ್ಲಿ 'ಮಾದ'ತನ ಇದೆಯೇ? ಇದ್ದರೆ ಎಷ್ಟಿದೆ? ಕಳೆದ ವರ್ಷ ಏಪ್ರಿಲ್‌ನಲ್ಲಿ ಜಪಾನ್ ದೇಶದಲ್ಲಿ ನಡೆದ ವಿದ್ಯಮಾನವೊಂದು ಈ ಸಂದರ್ಭದಲ್ಲಿ ಪ್ರಸ್ತಾವಿಸಲು ಯೋಗ್ಯವೆನಿಸುತ್ತದೆ. 2025ರ ಏಪ್ರಿಲ್ 8ರಂದು ಜಪಾನ್‌ನಲ್ಲಿ 100ಕ್ಕಿಂತಲೂ ಹೆಚ್ಚು ಹೆದ್ದಾರಿ ಟೋಲ್‌ಗೇಟ್‌ಗಳು ದೊಡ್ಡದೊಂದು ತಾಂತ್ರಿಕದೋಷದ ಕಾರಣದಿಂದ ಕೆಲಸ ನಿಲ್ಲಿಸಿದವು. ರಸ್ತೆಗಳಲ್ಲಿ ಸಂಚಾರಸಿಕ್ಕು ಆಗಬಾರದೆಂಬ ದೃಷ್ಟಿಯಿಂದ ಅಧಿಕಾರಿಗಳು ಎಲ್ಲ ಗೇಟ್‌ಗಳನ್ನು ತೆರೆದಿಟ್ಟರು. ಸಾವಿರಾರು ವಾಹನಗಳು ಟೋಲ್ ಪಾವತಿಸದೆ ಹೋಗಲು ಅವಕಾಶ ದೊರಕಿತು. ಸುಮಾರು 38 ಗಂಟೆಗಳ ಕಾಲ ಹೀಗೆ ಅನಿವಾರ್ಯವಾಗಿ ಮುಕ್ತಸಂಚಾರದ ವ್ಯವಸ್ಥೆ ಮಾಡಬೇಕಾಗಿ ಬಂತು. ಹೆದ್ದಾರಿಗಳನ್ನು ನಿರ್ವಹಿಸುವ ಸಂಸ್ಥೆಯು ಚಾಲಕರನ್ನು ಆಮೇಲೆ ಆನ್‌ಲೈನ್‌ನಲ್ಲಿ ಟೋಲ್ ಹಣ ಪಾವತಿಸುವಂತೆ ವಿನಂತಿಸಿತು. ಆ ಅವಧಿಯಲ್ಲಿ ಯಾವ್ಯಾವ ವಾಹನಗಳು ಎಷ್ಟು ಬಾರಿ ಟೋಲ್‌ಗೇಟ್‌ಗಳ ಮೂಲಕ ಸಂಚರಿಸಿದವೆಂಬ ಮಾಹಿತಿಯೇನೂ ಸಂಸ್ಥೆಯ ಬಳಿ ಇರಲಿಲ್ಲ. ಆದರೆ 24,000ಕ್ಕಿಂತಲೂ ಹೆಚ್ಚು ಚಾಲಕರು ಸ್ವಯಂಪ್ರೇರಿತರಾಗಿ ಸಂಸ್ಥೆಯ ವೆಬ್‌ಸೈಟ್‌ಗೆ ಹೋಗಿ ತಮ್ಮ ಟೋಲ್ ಹಣವನ್ನು ಪಾವತಿಸಿದರು! ಈ ಸುದ್ದಿ ಮತ್ತು ವಿಡಿಯೊ ತುಣುಕುಗಳು ಸಾಮಾಜಿಕ ಮಾಧ್ಯಮದಲ್ಲಿ ಹರಿದಾಡಿದವು. ಜಪಾನಿಯರ ಪ್ರಾಮಾಣಿಕತೆ, ಹೊಣೆಗಾರಿಕೆ, ಅಲ್ಲಿನ ಸಮಾಜದಲ್ಲಿರುವ ಬಲವಾದ ಸಾಮಾಜಿಕ ಮೌಲ್ಯಗಳನ್ನು ಮತ್ತೊಮ್ಮೆ ಪ್ರಪಂಚಕ್ಕೆ ಪರಿಚಯಿಸಿದವು.

ರೈಲಿನ ಆಗಮನ/ನಿರ್ಗಮನ ಹತ್ತಿಪ್ಪತ್ತು ಸೆಕೆಂಡುಗಳಷ್ಟು ತಡವಾದರೂ ಸಿಬ್ಬಂದಿಯು ಪ್ರಯಾಣಿಕರ ಕ್ಷಮೆ ಯಾಚಿಸುವ ಪರಿಪಾಠವಿರುವ ಜಪಾನ್‌ನಲ್ಲಿ ಅಂಥ ಪ್ರಾಮಾಣಿಕತೆಯ ಅಸ್ತಿತ್ವ ಮತ್ತು ಪ್ರದರ್ಶನ ಆಶ್ಚರ್ಯವೇ ಅಲ್ಲ. ಬೇರೆ ದೇಶಗಳಲ್ಲಾದರೆ- ಭಾರತ ಅಂತಷ್ಟೇ ಅಂದುಕೊಳ್ಳಬೇಡಿ, ಅಮೆರಿಕದಲ್ಲೂ- ಇದು ಖಂಡಿತ ವ್ಯಕ್ತವಾಗುತ್ತಿರಲಿಲ್ಲ. ಪೊಲೀಸ್ ವಾಹನ ಕಂಡಾಗ ಮಾತ್ರ ಬಾಲ ಮುದುರಿಸಿಕೊಂಡು ವೇಗ ತಗ್ಗಿಸುವ, ಕ್ಯಾಮರಾ ಇರುವ ಟ್ರಾಫಿಕ್ ಸಿಗ್ನಲ್‌ಗಳಲ್ಲಿ ಮಾತ್ರ ರೆಡ್‌ಲೈಟ್ ಜಂಪ್ ಮಾಡಲು ಹಿಂಜರಿಯುವ ಡ್ರೈವರರು ಈ ದೇಶದಲ್ಲಿ ಬೇಕಾದಷ್ಟಿದ್ದಾರೆಂದು ಗಮನಿಸಿದ್ದೇನೆ. ರೋಮ್‌ನಲ್ಲಿ ರೋಮನ್ನನಾಗಿರು ಎಂದುಕೊಂಡು ಇಲ್ಲಿರುವ ವಲಸಿಗರು ನಾವೂ ಕೆಲವೊಮ್ಮೆ ಮಾಡುತ್ತೇವೆ, ಇಲ್ಲವೆನ್ನಲಾರೆ. ''ನನ್ನ ತಪ್ಪನ್ನು ಯಾರೂ ನೋಡಿರಲಿಕ್ಕಿಲ್ಲ, ನಾನು ಮಾಡಿದ್ದು ತಪ್ಪಾದರೂ ಬೇರಾರಿಗೂ ಗೊತ್ತಾಗಿರಲಿಕ್ಕಿಲ್ಲ'' ಎಂದುಕೊಳ್ಳುತ್ತೇವೆ. ಸುಭಗರಂತೆ ನಟಿಸುತ್ತೇವೆ. ಲೋಕದ ಕಣ್ಣಿಗೆ ತಾನೊಬ್ಬ ಸಾಚಾ ಶುದ್ಧಾತ್ಮ ಅನಿಸಿಕೊಳ್ಳಬೇಕೆಂಬ ಬಯಕೆ, ಅದಕ್ಕೆ ತಕ್ಕಷ್ಟು ಹೆದರಿಕೆ ಎಲ್ಲರಿಗೂ ಇರುತ್ತದೆ.

ಈ ಬಗ್ಗೆ ಮನಃಶಾಸ್ತ್ರಜ್ಞರು ಇನ್ನಷ್ಟು ಬೆಳಕು ಚೆಲ್ಲುತ್ತಾರೆ. ಮನುಷ್ಯನಲ್ಲಿ ಒಳ್ಳೆತನವೂ ಸುಖಾಸುಮ್ಮನೆ ಇರುವುದಿಲ್ಲ. ತನ್ನ ವಾಂಛೆಗಳಿಗಾಗಿ ಏನನ್ನೂ ಮಾಡಬಲ್ಲನಾದರೂ 'ಸಮಾಜದ ದೃಷ್ಟಿ'ಯಲ್ಲಿ ತನ್ನ ಗೌರವಕ್ಕೆ ಚ್ಯುತಿ ಬರಬಾರದೆಂದು ಸಾಮಾನ್ಯವಾಗಿ ಪ್ರತಿಯೊಬ್ಬನಿಗೂ ಕಾಳಜಿ ಇರುತ್ತದೆ. ಸ್ವಾರ್ಥ, ಮೋಸ, ವಂಚನೆಗಳಲ್ಲಿ ತೊಡಗಿರುವವರು ಒಂದೊಮ್ಮೆ ಸಿರಿವಂತರಾದರೂ ಅದು ಶಾಶ್ವತವಲ್ಲ ಎಂದು ಇತಿಹಾಸದುದ್ದಕ್ಕೂ ಸಾಕ್ಷಿಗಳೇ ಇವೆಯಲ್ಲ? ಇತಿಹಾಸವೇಕೆ ಈಗಲೂ ಕೆಲವು ಸಿರಿವಂತರೇ ಜೈಲುಕಂಬಿ ಎಣಿಸುತ್ತಿರುವವರೂ ಇದ್ದಾರಲ್ಲ! ಹಾಗಾಗಿ 'ಸಮಾಜದ ದೃಷ್ಟಿ' ತನ್ನ ಮೇಲಿರುತ್ತದೆ ಎಂಬ ಹೆದರಿಕೆ, ಲಜ್ಜೆಗೆಟ್ಟ ದಗಾಕೋರರಿಗೆ ಇರದಿದ್ದರೂ ಸರಳ ಮನಸ್ಸಿನ ಶ್ರೀಸಾಮಾನ್ಯನಿಗೆ ಇದ್ದೇ ಇರುತ್ತದೆ. ಆ ಹೆದರಿಕೆಯೇ ಒಳ್ಳೆತನಕ್ಕೆ, ಸಹಕಾರಯುತ ಸಹಬಾಳ್ವೆಗೆ ಸಹಾಯಕವಾಗುತ್ತದೆ. ಯಾರಾದರೂ ತನ್ನನ್ನು ನೋಡುತ್ತಿದ್ದಾರೆ ಅಥವಾ ಗಮನಿಸುತ್ತಿದ್ದಾರೆ ಎಂಬ ಅರಿವು ಇದ್ದಾಗ ಮನುಷ್ಯನ ವರ್ತನೆಯ ಖದರೇ ಬೇರೆ. ಎಲ್ಲಿಯವರೆಗೆಂದರೆ ಆ 'ನೋಡುವ ಕಣ್ಣು'ಗಳು ನಿಜವೇ ಆಗಿರಬೇಕಾದ್ದಿಲ್ಲ. ಸರ್ವೈಲೆನ್ಸ್ ಕ್ಯಾಮರಾ, ಕ್ಲೋಸ್ಡ್ ಸರ್ಕ್ಯೂಟ್ ಟಿವಿ ರೀತಿಯ ವಿದ್ಯುನ್ಮಾನ ನೇತ್ರಗಳಾಗಿರಬೇಕಂತನೂ ಇಲ್ಲ, ಕಣ್ಣುಗಳನ್ನು ಹೋಲುವ ಚಿತ್ರವಿದ್ದರೂ ಸಾಕು, ಅದನ್ನು ನೋಡಿ ಮಿದುಳು ಜಾಗೃತವಾಗುತ್ತದಂತೆ. ಒಂದು ಪ್ರಯೋಗದಲ್ಲಿ, ಹಾಳೆ-ಪೆನ್ನಿನ ಬದಲು ಕಂಪ್ಯೂಟರ್‌ನಲ್ಲಿ ಪರೀಕ್ಷೆ ತೆಗೆದುಕೊಂಡಿದ್ದ ವಿದ್ಯಾರ್ಥಿಗಳು, ಪರದೆಯ ಮೇಲೆ ಪುಟ್ಟದಾದ ಜೋಡಿಕಣ್ಣುಗಳ ಚಿತ್ರವಿದ್ದುದರಿಂದ ಹೆಚ್ಚಿನ ಪ್ರಾಮಾಣಿಕತೆ ತೋರಿದ್ದನ್ನು ಪರೀಕ್ಷಕರು ಗಮನಿಸಿದ್ದಾರಂತೆ.

ಇಂಗ್ಲೆಂಡ್‌ನ ವಿಶ್ವವಿದ್ಯಾಲಯವೊಂದರ ಸೈಕಾಲಜಿ ವಿಭಾಗದವರು ನಡೆಸಿದ ಒಂದು ವಿಶಿಷ್ಟ ಸಮೀಕ್ಷೆಯ ಫಲಿತಾಂಶ ಕೂಡ ಕಣ್ಣಾವಲಿನ ಹಿರಿಮೆಯನ್ನು ಪುಷ್ಟೀಕರಿಸಿದೆ. ಅಲ್ಲಿ ಸೈಕಾಲಜಿ ವಿಭಾಗದ 'ಟೀ ರೂಮ್'ನಲ್ಲಿ ಕಾಲೇಜಿನ ಸಿಬ್ಬಂದಿಗೆ, ವಿದ್ಯಾರ್ಥಿಗಳಿಗೆ, ಅಧ್ಯಯನ ವಸ್ತುವಾಗಿ ಸ್ವಯಂಸ್ಫೂರ್ತಿಯಿಂದ ಬರುವ ಸಾರ್ವಜನಿಕರಿಗೆಂದು ಟೀ, ಕಾಫಿ ಒದಗಿಸುವ ವ್ಯವಸ್ಥೆಯಿತ್ತು. ದುಡ್ಡು ವಸೂಲಿಗೆ ಅಲ್ಲಿ ಯಾರೂ ಇರುತ್ತಿರಲಿಲ್ಲ. ನಾಣ್ಯ ಹಾಕಿದರೆ ಮಾತ್ರ ಕಾಫಿ ಸುರಿಸುವ ಯಂತ್ರ ಇದ್ದದ್ದೂ ಅಲ್ಲ. ಬಿಸಿನೀರು, ಹಾಲು, ಸಕ್ಕರೆ, ಟೀ-ಬ್ಯಾಗ್, ಕಾಫಿಪುಡಿ ಇಟ್ಟಿದ್ದನ್ನು ಬಳಸಿ ಸ್ವಂತ ಟೀ/ಕಾಫಿ ಮಾಡಿಕೊಳ್ಳಬೇಕು. ಅಲ್ಲೇ ಪಕ್ಕದಲ್ಲಿಟ್ಟಿದ್ದ 'ಪ್ರಾಮಾಣಿಕತೆ ಪೆಟ್ಟಿಗೆ'ಯಲ್ಲಿ ದುಡ್ಡು ಹಾಕಬೇಕು. ಒಂದು ಕಪ್ ಕಾಫಿಗಾದರೆ ಇಂತಿಷ್ಟು, ಟೀಗಾದರೆ ಇಂತಿಷ್ಟು, ಚಾಕೊಲೇಟ್ ಮಿಲ್ಕ್‌ಗೆ ಇಂತಿಷ್ಟು ಅಂತೆಲ್ಲ ಬರೆದ ಫಲಕವನ್ನು ಕಣ್ಣಿಗೆ ಕಾಣುವಂತೆ, ಕಣ್ಣಿನ ಎತ್ತರಕ್ಕೆ ಬರುವಂತೆ ಇಡಲಾಗಿತ್ತು. ಗುಪ್ತವಾಗಿ ಸಮೀಕ್ಷಾರ್ಥಿಗಳಿಗೆ ತಿಳಿಯದಂತೆ ಸಮೀಕ್ಷೆ ನಡೆಸಿದ್ದ ಸೈಕಾಲಜಿ ವಿಭಾಗದ ಮುಖ್ಯಸ್ಥೆ ಏನು ಮಾಡುತ್ತಿದ್ದರೆಂದರೆ ಪ್ರತಿವಾರವೂ ದರ ಪಟ್ಟಿಯ ಫಲಕವನ್ನು ಬದಲಾಯಿಸುತ್ತಿದ್ದರು. ದರಗಳು ಅವೇ ಆದರೂ ಅದನ್ನು ಬರೆದ ಕಾಗದದ ಹಾಳೆ ಪ್ರತಿವಾರ ಹೊಸತು. ದರ ಪಟ್ಟಿಯ ಮೇಲ್ಗಡೆ ಪುಟ್ಟದಾದ ಒಂದು ಚಿತ್ರ. ಒಂದು ವಾರ ಜೋಡಿ ಕಣ್ಣುಗಳ ಚಿತ್ರ; ಮುಂದಿನವಾರ ಹೂವಿನ ಚಿತ್ರ; ಅದರ ನಂತರದ ವಾರ ಮತ್ತೆ ಜೋಡಿ ಕಣ್ಣುಗಳ ಚಿತ್ರ. ಮತ್ತೊಮ್ಮೆ ಹೂವಿನ ಚಿತ್ರ... ಹೀಗೆ ಆವರ್ತನ. ಜೋಡಿ ಕಣ್ಣುಗಳ ಚಿತ್ರವನ್ನು ದೃಷ್ಟಿಸಿದರೆ ನಿಜವಾಗಿಯೂ ಆ ಕಣ್ಣುಗಳು ನಮ್ಮನ್ನೇ ನೋಡುತ್ತಿವೆಯೇನೋ ಎಂಬಂತಿರುತ್ತಿತ್ತು, ಅಷ್ಟು ಚಾಕಚಕ್ಯತೆಯಿಂದ ನೈಜವೆನಿಸುವ ಚಿತ್ರಗಳನ್ನೇ ಆಯ್ದುಕೊಳ್ಳುತ್ತಿದ್ದರು ಆ ಸಮೀಕ್ಷಕಿ.

ಹತ್ತು ವಾರಗಳ ಕಾಲ ಸಮೀಕ್ಷೆ ನಡೆಯಿತು. ಒಂದು ಆಶ್ಚರ್ಯಕರ ಸತ್ಯಾಂಶ ಅದರಿಂದ ಹೊರಬಂತು. ದರ ಪಟ್ಟಿಯ ಮೇಲೆ ಕಣ್ಣುಗಳ ಚಿತ್ರವಿದ್ದ ವಾರಗಳಲ್ಲಿ ಮೂರು ಪಟ್ಟು ಹಣ ಜಮೆಯಾಗುತ್ತಿತ್ತು! ನೈಜವಾದರೂ ಅಷ್ಟೇ, ಚಿತ್ರದಲ್ಲಾದರೂ ಅಷ್ಟೇ, ಕಣ್ಣು ಮುಖ ಇತ್ಯಾದಿಗಳನ್ನು ಕಂಡಾಗ ನಮ್ಮ ಮಿದುಳಿನ ನರಗಳು ತೀವ್ರವಾಗಿ ಸಂವೇದಿಸುವುದನ್ನು ಮನಃಶಾಸ್ತ್ರಜ್ಞರು ತುಂಬಾ ಹಿಂದೆಯೇ ಕಂಡುಕೊಂಡಿದ್ದಾರೆ. ಹಾಗಾಗಿ ಟೀ-ರೂಮ್‌ನಲ್ಲಿ ದರ ಪಟ್ಟಿಯ ಮೇಲೆ ಕಣ್ಣುಗಳ ಚಿತ್ರವನ್ನು ನೋಡಿ ಗಿರಾಕಿಗಳ ಮಿದುಳಿನಲ್ಲಿ ವಿಶೇಷ ಸಂವೇದನೆ ಆಗಿರುವುದು ಹೌದು. ಪ್ರಾಮಾಣಿಕ ಪೆಟ್ಟಿಗೆಯೊಳಗೆ ತಾನು ಕರಾರುವಾಕ್ಕಾಗಿ ದುಡ್ಡು ಹಾಕಬೇಕು ಎಂಬ ಎಚ್ಚರ ಮೂಡಿರುವುದೂ ಹೌದು. ಆ ಪ್ರಕಾರ ದುಡ್ಡು ಜಮೆಯಾಗಿರುವುದೂ ಹೌದು.

ಕನಕದಾಸರ ಕಥೆಯಲ್ಲಿಯೂ ಹಾಗೆಯೇ ಅಲ್ಲವೇ ಆದದ್ದು? ಗುರು ವ್ಯಾಸರಾಯರು ಶಿಷ್ಯರನ್ನೆಲ್ಲ ಕರೆದು ಒಂದೊಂದು ಬಾಳೆಹಣ್ಣು ಕೊಟ್ಟು ಯಾರೂ ನೋಡದೇ ಇರುವಲ್ಲಿ ಹೋಗಿ ತಿಂದುಕೊಂಡು ಬನ್ನಿ ಎಂದರು. ಒಬ್ಬೊಬ್ಬರು ಒಂದೊಂದು ಜಾಗವನ್ನು, ಯಾರೂ ನೋಡುತ್ತಿಲ್ಲ ಎಂದು ತಮಗೆ ಸಮಾಧಾನವೆನಿಸಿದ ಆಯಕಟ್ಟಿನ ಸ್ಥಳವನ್ನು ಆಯ್ದುಕೊಂಡು ಅಲ್ಲಿ ಬಾಳೆಹಣ್ಣು ಭಕ್ಷಣ ಮಾಡಿ ಬಂದರು. ಬಂದು ಗುರುಗಳಿಗೆ ವರದಿಯೊಪ್ಪಿಸಿದರು. 'ಭಕ್ತ ಕನಕದಾಸ' ಚಿತ್ರದಲ್ಲಿ ಇದನ್ನು ತಮಾಷೆಯಾಗಿಯೇ ತೋರಿಸಿದ್ದಾರೆ. ''ಊರುಮುಂದ್ಲು ಮುಖ್ಯಪ್ರಾಣ ಗುಡಿಯ ಹತ್ರ ಯಾರೂ ಇಲ್ಲದ್ದನ್ನು ನೋಡಿ ಅಲ್ಲಿ ತಿಂದ್ಕೊಂಡ್ಬಂದೆ!'' ಎಂದು ಒಬ್ಬಾತನೆಂದರೆ ''ಮನೆಗೆ ಹೋದೆ, ಹಾಸ್ಗೆ ಹಾಸ್ಕೊಂಡು, ಶ್ರೀಗಳು ದಯಪಾಲಿಸಿದ ಶಾಲುಜೋಡಿಯಲ್ಲಿ ಒಂದನ್ನು ತೆಗೆದುಕೊಂಡು ಪೂರ್ತಿ ಮುಸುಕುಹಾಕ್ಕೊಂಡು, ಸಿಪ್ಪೆಸಹಿತ ಸುಲಿಯದ ಹಾಗೆ ಇಡೀ ಬಾಳೆಹಣ್ಣನ್ನು ಹಾಗೇ ಬಾಯೊಳಗಿಟ್ಕೊಂಡು ಗುಳುಕ್ಕಂತ ನುಂಗ್ಬಿಟ್ಟೆ!'' ಎಂದು ಇನ್ನೊಬ್ಬನೆನ್ನುತ್ತಾನೆ. ''ಯಾರೂ ನೋಡಲಿಲ್ಲವೇ?'' ಎಂದು ಗುರುಗಳು ನಸುನಕ್ಕು ಕೇಳಿದಾಗ ''ಒಂದು ಸೊಳ್ಳೆ ಸಹ ನೋಡಲಿಲ್ಲ ಸ್ವಾಮೀ!'' ಎಂದು ಹೆಮ್ಮೆಯಿಂದ ದೃಢಪಡಿಸುತ್ತಾನೆ. ಮಗದೊಬ್ಬವ ''ಜಳಕ ಮಾಡ್ಲಿಕ್ಕೆ ನದಿಯಲ್ಲಿ ಮುಳುಗುವಾಗ ಮೂಗು ಹಿಡ್ಕೊಂಡು ನಾರಾಯಣಾ ಅಂತ ಮುಳುಗುಹಾಕ್ದೆ, ಕೃಷ್ಣಾ ಅಂತ ಮೇಲೆದ್ದೆ, ಅಷ್ಟರೊಳಗೆ ಬಾಳೆಹಣ್ಣು ತಿಂದುಮುಗಿಸ್ದೆ!'' ಎಂದು ತನ್ನ ಜಾಣತನವನ್ನು ಪ್ರದರ್ಶಿಸುತ್ತಾನೆ. ನಾಲ್ಕನೆಯವನಂತೂ- ಬಹಿರ್ದೆಶೆಗೆ ಹೋದಾಗ ಬಾಳೆಹಣ್ಣು ತಿಂದುಬಂದವನು- ''ಹೇಳಬಾರದ ಸ್ಥಳದಲ್ಲಿ ಹೋಗಿ ತಿಂದುಬಂದೆ ಸ್ವಾಮೀ'' ಎನ್ನುತ್ತಾನೆ. ಕನಕನಿಗಾದರೋ ಎಲ್ಲಿ ಹೋದರೂ 'ದೇವರ ಕಣ್ಣು' ಕಾಣಿಸುತ್ತದೆ. ಅಪ್ಪಟ ಪ್ರಾಮಾಣಿಕತೆ ಹೆಡೆಯೆತ್ತಿ ನಿಲ್ಲುತ್ತದೆ. ನೋಡುವ/ಗಮನಿಸುವ ಮನುಷ್ಯರು ಇಲ್ಲದೇ ಇರಬಹುದು, ಆದರೆ ದೇವರು ಇಲ್ಲದ ಸ್ಥಳವೇ ಸಿಗುತ್ತಿಲ್ಲವಲ್ಲ ಎಂಬ ದಿವ್ಯಸತ್ಯದ ಮನವರಿಕೆಯಾಗುತ್ತದೆ. ಬಾಳೆಹಣ್ಣನ್ನು ಹಾಗೇ ಕೈಯಲ್ಲಿ ಹಿಡಿದುಕೊಂಡು ಗುರುಗಳ ಬಳಿಗೆ ವಾಪಸಾಗುತ್ತಾನೆ. ''ಎಲ್ಲೆಲ್ಲಿ ಹೋದ್ರೂ ಪರಮಾತ್ಮ, ತತ್ತ್ವಾಭಿಮಾನಿಗಳಾದ ಆ ದೇವತೆಗಳು, ಮನುಷ್ಯರು ಮಾಡುವ ಸಕಲ ಕೆಲಸಗಳನ್ನೂ ನೋಡ್ತಾನೇ ಇರ್ತಾರೆ. ಎಲ್ಲಿ ಅವರುಗಳು ನೋಡೋದಿಲ್ವೋ ಅಂಥ ಏಕಾಂತ ಸ್ಥಳವೇನಾದ್ರೂ ಬುದ್ಧಿಯಲ್ಲಿದ್ದರೆ ಮಹಾಸ್ವಾಮಿಗಳು ಅಪ್ಪಣೆಮಾಡ್ಬೇಕು, ಅಲ್ಲಿಗ್ಹೋಗಿ ತಿಂದುಬರುತ್ತೇನೆ'' ಎಂದು ಗುರುಗಳಲ್ಲಿ ಬಿನ್ನವಿಸಿ ಕೈಮುಗಿಯುತ್ತಾನೆ.

ಅಂದರೆ, ಇಂಗ್ಲೆಂಡ್‌ನ ವಿಶ್ವವಿದ್ಯಾಲಯದ ಸೈಕಾಲಜಿ ವಿಭಾಗದವರು ನಾಲ್ಕಾರು ದಶಕಗಳ ಹಿಂದೆಯಷ್ಟೇ ಕಂಡುಕೊಂಡಿದ್ದನ್ನು ನಾಲ್ಕು ನೂರು ವರ್ಷಗಳ ಹಿಂದೆಯೇ ಪ್ರತಿಪಾದಿಸಿದ್ದರು ಕನಕದಾಸರು. ಅಷ್ಟೇ ಅಲ್ಲ, ಅವರೇನೂ ಕಣ್ಣುಗಳ ಚಿತ್ರ ನೋಡಿ ಜಾಗೃತರಾದವರಲ್ಲ, ಸತ್ಯ ಮತ್ತು ಪ್ರಾಮಾಣಿಕತೆಗಳೆಂಬ ತಮ್ಮ ಒಳಗಣ್ಣುಗಳಿಂದ ಭಗವಂತನನ್ನು ನೋಡಿ ಎಚ್ಚರಗೊಂಡವರು. ಭಗವಂತನಿಲ್ಲದ ಸ್ಥಳವೇ ಇಲ್ಲ ಎಂದು ಎಚ್ಚರಿಸಿದವರು. ಆ ಎಚ್ಚರದಿಂದಲೇ ಉಚ್ಚ ಮಟ್ಟಕ್ಕೇರಿದವರು.

ಇಂಥದೊಂದು ಸಚ್ಚಿಂತನೆಗೆ ಮುಕುಟಪ್ರಾಯವಾಗಿ, ಪ್ರೊ.ಎಂ.ವಿ. ಸೀತಾರಾಮಯ್ಯನವರದೊಂದು ಕವನ 'ಏನು ಭಯ?' ಎಂಬ ಶೀರ್ಷಿಕೆಯದು. ಸುತ್ತಮುತ್ತ ಅಲ್ಲ ನಮ್ಮೊಳಗೇ ಭಗವಂತನಿದ್ದಾನೆಂದ ಮೇಲೆ ನಮಗೆ ಅಪ್ರಾಮಾಣಿಕತೆಯ ಭಯವೇ ಬೇಡ ಎಂದು ಸಾರುವ ಸುಂದರ ಸುನೀತವಿದು:

ಏನು ಭಯ ನಮಗ್ಯಾರ ಭಯ
ತಾನೇ ತಾನಾಗಿಹುದಭಯ ॥
ಪರರೊಡವೆಯನು ಮುಟ್ಟದ ತನಕ
ಪರದೂಷಣೆಯನು ಮಾಡದ ತನಕ
ಪರಸತಿಗೆ ಮನವಿಕ್ಕದ ತನಕ
ಪರಸುಖಕಿಹವನು ಬಾಳುವ ತನಕ ॥
ನ್ಯಾಯಮಾರ್ಗದಲಿ ನಡೆಯುವವರೆಗೆ
ಕಾಯಕದಲಿ ಕೈ ಸೋಲದವರೆಗೆ
ಹೇಯ ಕೃತ್ಯಗಳ ಹೇಸುವವರೆಗೆ
ಮಾಯೆಮೋಸಗಳ ಮಾಡದವರೆಗೆ ॥
ಧನದ ಗಳಿಕೆ ದಾನಕ್ಕೆವುದಕಾಗಿರೆ
ತನಗೆಂಬುದ ಬಿಟ್ಟು ಪರರಿಗೆನುತ್ತಿರೆ
ಜನುಮದ ಹಂಗಿಗೆ ಜೋತು ಬೀಳದೆ
ಮನವ ರಾಘವನ ಮನೆಯ ಮಾಡಿರೆ ॥

ಶಾಂತಿಯಂತೆ ಸಂಗ್ರಾಮಕ್ಕೂ ಜಗತ್ತಿಗೆ ಭಾರತವೇ ಆದರ್ಶ

ಸನಾತನ ಧರ್ಮದಲ್ಲಿ, ಯುದ್ಧಗಳನ್ನು ಧರ್ಮದ ಅವಿಭಾಜ್ಯ ಅಂಗವೆಂದು ಸಂಪೂರ್ಣವಾಗಿ ಸಮರ್ಥಿಸಲಾಗಿದೆ. ಧರ್ಮವನ್ನು ಎತ್ತಿಹಿಡಿಯಲು ಅಥವಾ ದುರ್ಬಲರು ಮತ್ತು ಮುಗ್ಧರನ್ನು ರಕ್ಷಿಸಲು ಹೋರಾಡಿದರೆ ಯುದ್ಧವು ಸಂಪೂರ್ಣವಾಗಿ ಸ್ವೀಕಾರಾರ್ಹವಾಗಿದೆ. ಯಾವ ಸಂದರ್ಭದಲ್ಲಿ ಯುದ್ಧ ಅನಿವಾರ್ಯ ಅಥವಾ ಕರ್ತವ್ಯವಾಗುತ್ತದೆ ಎನ್ನುವುದನ್ನು ಭಗವದ್ಗೀತೆಯಲ್ಲಿ ವಿಸ್ತ್ರತವಾಗಿ ಚರ್ಚಿಸಲಾಗಿದೆ.

ವಿದ್ಯಮಾನ
ವಿನಾಯಕ ವೆಂ.ಭಟ್ಟ, ಅಂಬ್ಲಿಹೊಂಡ
vinayakbhat1669@gmail.com

ಮಧ್ಯಪ್ರಾಚ್ಯದಲ್ಲಿ ನಡೆಯುತ್ತಿರುವ ಯುದ್ಧದ ಪರಿಣಾಮವನ್ನು ಒಂದಲ್ಲಾ ಒಂದು ರೀತಿಯಿಂದ ಇಡೀ ಜಗತ್ತು ಅನುಭವಿಸುತ್ತಿದೆ. ಯುದ್ಧ ಅಂದಮೇಲೆ ಪ್ರಾಣ ಹಾಗೂ ಆಸ್ತಿಪಾಸ್ತಿಗಳ ಹಾನಿ ಸ್ವಾಭಾವಿಕ ಎನ್ನುವವರಿದ್ದಾರೆ. ಅದು ನಿಜವೇ ಆದರೂ, ಇನ್ನೂ ಕಣ್ಣುಬಿಡುತ್ತಿದ್ದ ನೂರಾರು ಮುಗ್ಧ ಶಾಲಾ ಮಕ್ಕಳ ಸಾವಿನ ನೋವು, ಸಾಮೂಹಿಕ ಅಂತ್ಯಸಂಸ್ಕಾರದ ಗೋಳು ಮರೆಯುವಂಥಾದ್ದಲ್ಲ. 'Every thing is fair in war and love' ಎನ್ನುವುದು ಪಾಶ್ಚಾತ್ಯ ಚಿಂತನೆ, ಭಾರತೀಯ ಚಿಂತನೆಯಲ್ಲ. ಭಾರತದಲ್ಲಿ ಯುದ್ಧಕ್ಕೆ ದೀರ್ಘ ಇತಿಹಾಸವೇ ಇದೆ. ಭಾರತ ಕಂಡಷ್ಟು ಯುದ್ಧಗಳನ್ನು ಬೇರಾವ ದೇಶವೂ ಕಂಡಿರಲಿಕ್ಕಿಲ್ಲ. ವೇದಕಾಲದಿಂದಲೂ ಯುದ್ಧಗಳು ನಡೆದಿರುವುದನ್ನು ನಾವು ಕೇಳುತ್ತೇವೆ. ಆದರೆ ಭಾರತದಲ್ಲಿ ಯುದ್ಧಕ್ಕೂ ಒಂದು ನೀತಿಯಿದೆ. ಅದಕ್ಕೆ ವಿಧಿ ನಿಷಿದ್ಧಗಳಿವೆ. ಧರ್ಮ ನಿರ್ಣಯಕ್ಕೆ ಎಲ್ಲ ಸಾಧ್ಯತೆಗಳು ಮುಗಿದಾಗ ಮಾತ್ರ ಯುದ್ಧವನ್ನು ಭಾರತೀಯ ಸಂಸ್ಕೃತಿ ಅಪ್ಪಿಕೊಳ್ಳುತ್ತದೆ, ಹಾಗಾಗಿಯೇ ಇಲ್ಲಿನ ಯುದ್ಧವನ್ನು ಧರ್ಮಯುದ್ಧವೆಂದೇ ಕರೆಯಲಾಗುತ್ತದೆ. ಸಾಮ, ದಾನ, ಭೇದ ಎನ್ನುವ ಮೂರು ಉಪಾಯಗಳು ಫಲ ನೀಡದಿದ್ದಾಗ ಮಾತ್ರ ಭಾರತದಲ್ಲಿ ದಂಡವನ್ನು ಕೈಗೆತ್ತಿಕೊಳ್ಳಲಾಗುತ್ತದೆ. ಭಾರತೀಯರು ಶಾಂತಿಪ್ರಿಯರು, ಎರಡು ಮಾತಿಲ್ಲ; ಆದರೆ ಯುದ್ಧವನ್ನು, ಯುದ್ಧದ ನೀತಿಯನ್ನು ಜಗತ್ತಿಗೆ ಕಲಿಸಿದವರು ಭಾರತೀಯರೇ ಆಗಿದ್ದಾರೆ ಎಂದರೆ ತಪ್ಪಾಗಲಾರದು.

ಸಮಾಜ ಜೀವನದ ಎಲ್ಲ ಆಯಾಮಗಳಿಗೂ ರಾಮಾಯಣ ಆದರ್ಶವಾದಂತೆ, ಯುದ್ಧಕ್ಕೂ ರಾಮ-ರಾವಣರ ನಡುವಿನ ತ್ರೇತಾಯುಗದ ಯುದ್ಧವೇ ಇಂದಿಗೂ ಮಾದರಿಯಾಗಿದೆ. 'ಗಗನಂ ಗಗನಾಕಾರಂ ಸಾಗರಃ ಸಾಗರೋಪಮಾ ರಾಮರಾವಣಯೋರ್ಯುದ್ಧಂ ರಾಮರಾವಣಯೋರಿವ'- ಸಮುದ್ರ ಹಾಗೂ ಆಕಾಶದ ಅಳತೆಗೆ ಹೇಗೆ ಹೋಲಿಕೆಯಾಗಿ ಇನ್ನೊಂದು ವಸ್ತುವನ್ನು ಹೇಳಲಾಗುವುದಿಲ್ಲವೋ, ರಾಮ-ರಾವಣರ ಯುದ್ಧಕ್ಕೂ ಅವರ ಯುದ್ಧವೇ ಸಾಟಿ, ಬೇರೆ ಸಾಟಿಯೇ ಇಲ್ಲ. ಸುಮಾರು ಏಳು ದಿನಗಳ ಕಾಲ ನಡೆದ ರಾಮ-ರಾವಣರ ಯುದ್ಧವೇ ಇಂದಿಗೂ ಯುದ್ಧಗಳಿಗೆಲ್ಲ ತಾಯಿ. ರಾಮನು ಅತಿಪರಾಕ್ರಮಶಾಲಿಯಾಗಿದ್ದರೂ, ರಾವಣನ ಸಂಹಾರ ಮಾಡುವ ಮುನ್ನ ಒಮ್ಮೆ ರಾವಣನನ್ನು ಸೋಲಿಸಿ, ಅವನಿಗೆ ಅವಕಾಶವೊಂದನ್ನು ನೀಡುತ್ತಾನೆ: ಲಂಕೆಗೆ ಹಿಂದಿರುಗಿ ಮತ್ತೆ ಸಿದ್ಧನಾಗಿ ಬರಲು ಹೇಳುತ್ತಾನೆ. ಏಕೆ? ಅಂದೇ ರಾವಣನನ್ನು ಕೊಲ್ಲಲು ರಾಮನಿಗೆ ಸಾಮರ್ಥ್ಯವಿರಲಿಲ್ಲವೇ? ಸುಮ್ಮನೆ ಏಕೆ ಹೋಗಬಿಟ್ಟ? ಅವಕಾಶ ಸಿಕ್ಕಿದಾಗ ಹಾಕಿ ಅಂದೇ ಅವನನ್ನು ಬಡಿದುಹಾಕಬೇಕಿತ್ತು ಎಂದು ಹೇಳುವವರಿರಬಹುದು. ಹೇಗಿದ್ದರೂ ಅವತ್ತಿನ ದಿನ ಸಾಕಷ್ಟು ಜನರ ಮೇಲೆ ಯುದ್ಧಮಾಡಿ ದಣಿದಿದ್ದ ರಾವಣನನ್ನು ಮುಗಿಸುವ ಸದವಕಾಶವನ್ನು ರಾಮನು ಏಕೆ ಕೈಬಿಟ್ಟ?

ರಾಮನೆಂಥಾ ಪರಾಕ್ರಮಶಾಲಿ ಎಂಬುದನ್ನು ವಾಲ್ಮೀಕಿಗಳು ರಾಮಾಯಣದಲ್ಲಿ ನಮಗೆ ಆಗಾಗ ತಿಳಿಸುತ್ತಲೇ ಬಂದಿದ್ದಾರೆ. ಸರಿಸಾಟಿಯಾದ ಪ್ರತಿನಾಯಕನೊಬ್ಬ ಇರುವಾಗ, ನಾಯಕನ ವಿಜಯವು ನಿರ್ಣಾಯಕವಾಗಿರಬೇಕಿದ್ದರೆ, ಪ್ರತಿನಾಯಕನಾದವನು ತನ್ನ ಪೂರ್ಣಬಲದಿಂದ ಕದನಮಾಡುತ್ತಿರಬೇಕು. ಏನೋ, ದೌರ್ಬಲ್ಯವಿದ್ದ ಸಂದರ್ಭದಲ್ಲಿ ಸೋಲಿಸಿದರೆ ಅದಕ್ಕೆ ಅಷ್ಟಾಗಿ ಬೆಲೆಯಿರುವುದಿಲ್ಲ ಮತ್ತು ನಾಯಕನ ಪರಾಕ್ರಮಕ್ಕೆ ಅದೊಂದು ಕಳಂಕವೂ ಆಗಬಹುದು. ಎಂದೇ ಶ್ರೀರಾಮನು ಇದಾವುದಕ್ಕೂ ಆಸ್ಪದವನ್ನೇ ಕೊಡಲಿಲ್ಲ. ಜತೆಗೆ, ರಾವಣನಿಗೆ ಆತ್ಮಾವಲೋಕನ ಪಶ್ಚಾತ್ತಾಪಗಳಿಗೆ ಶ್ರೀರಾಮನು ಸಂದರ್ಭವೊದಗಿಸಿಕೊಟ್ಟ. ಇವನೊಬ್ಬನಿಂದ ಸಂಪೂರ್ಣ ಲಂಕಾವಾಸಿಗಳು ನಾಶವಾಗುವುದನ್ನು ತಡೆಯಲು ಸರ್ವಪ್ರಯತ್ನ ಮಾಡಿದ್ದ. ಹೀಗೆ ತಪ್ಪುಹಾದಿಯನ್ನು ಬಿಡಲು ಒಂದು ಅನಿರೀಕ್ಷಿತವಾದ ಅವಕಾಶ ದೊರೆತಾಗಲೂ, ದೌಷ್ಟ್ಯ, ಅಹಂಕಾರಗಳು ಮೈಗೂಡಿಬಿಟ್ಟಿದ್ದಲ್ಲಿ ಆ ಅವಕಾಶವನ್ನು ಪೋಲುಮಾಡುವುದಾಗುತ್ತದೆ. ಮುಂದಿನ ದಿನ ಮತ್ತೆ ರಾಮ-ರಾವಣರ ಯುದ್ಧವಾರಂಭವಾದಾಗ ಅತ್ಯುಗ್ರವಾಗಿ ಅದು ನಡೆಯಿತು. ಎರಡು ಬಾರಿ ರಾವಣನನ್ನು ರಾಮನು ಪರಾಜಯಗೊಳಿಸಿದ ಮೇಲೆ ಈಗ ಮೂರಕ್ಕೆ ಮುಕ್ತಾಯವೆಂಬಂತೆ ಸಂಹಾರದ ಸಂದರ್ಭ. ಶ್ರೀರಾಮನು ರಾವಣನ ಹೃದಯಕ್ಕೆ ಗುರಿಯಿಟ್ಟನು. ಬ್ರಹ್ಮಾಸ್ತ್ರಪ್ರಯೋಗವನ್ನು ಮಾಡಿ, ರಾವಣಸಂಹಾರವನ್ನು ಮಾಡಿ ತನ್ನ ಅವತಾರದ ಧ್ಯೇಯೋದ್ದೇಶವನ್ನು ರಾಮಚಂದ್ರನು ಪೂರೈಸಿದ.

ಇಲ್ಲಿಯವರೆಗೆ ಭಾರತದಲ್ಲಿ ನಡೆದ ಯುದ್ಧಗಳಲ್ಲಿ ರಾಮ-ರಾವಣರ ನಡುವಿನ ಯುದ್ಧವನ್ನು ಅತ್ಯಂತ ಭೀಕರವೆಂದು ಪರಿಗಣಿಸಲಾಗಿದೆ. ಅವರ ಬಿಲ್ಲುಗಳ ಠೇಂಕಾರ ಶಬ್ದಗಳಿಂದಲೇ ಸಾವಿರಾರು ಸೈನಿಕರು ನೆಲಕ್ಕುರುಳಿದ್ದರಂತೆ. ರಾಮನು ರಾವಣನನ್ನು ಸಾಂಪ್ರದಾಯಿಕ ಆಯುಧಗಳಿಂದ ಸೋಲಿಸಲಿಲ್ಲ; ಆದರೆ ಬೆಂಕಿ, ಗಾಳಿ ಮತ್ತು ಸೂರ್ಯನ ಶಕ್ತಿಯನ್ನು ಒಳಗೊಂಡಿರುವ ನಿರ್ದಿಷ್ಟವಾದ ಆಯುಧದಿಂದ ಸೋಲಿಸಿದನು. ಈ ಯುದ್ಧವು ವಿಮಾನಗಳು (ಹಾರುವ ರಥಗಳು) ಮತ್ತು ಮಂತ್ರಗಳಿಂದ ಚಾಲಿತವಾದ ಶಸ್ತ್ರಾಸ್ತ್ರಗಳು ಸೇರಿದಂತೆ ಮುಂದುವರಿದ ತಂತ್ರಜ್ಞಾನವನ್ನು ಒಳಗೊಂಡಿತ್ತು. ರಾವಣನು ನಾಗಪಾಶ (ಸರ್ಪ-ಬಾಣಗಳು) ಮತ್ತು ಮಾಯಾ ಈಟಿಯಂಥ ಭ್ರಮೆಗಳನ್ನು ಬಳಸಿದನು; ರಾಮನಿಗೆ ಋಷಿಗಳಿತ್ತ ದಿವ್ಯಾಸ್ತ್ರಗಳು ಮತ್ತು ಇಂದ್ರನ ಈಟಿಯಿಂದ ಇವುಗಳನ್ನು ಎದುರಿಸಲಾಯಿತು. ಯುದ್ಧದಲ್ಲಿ ರಾವಣನ ಮರಣದ ನಂತರ, ರಾಮನು ತನ್ನ ಶತ್ರುವಿಗೆ ಸರಿಯಾದ ಅಂತ್ಯಕ್ರಿಯೆಗಳನ್ನು ಆದೇಶಿಸುವ ಮೂಲಕ, ಭಾರತೀಯ ಸಂಸ್ಕೃತಿಯ ಪ್ರತೀಕವಾಗಿ ಅತ್ಯುನ್ನತ ಸದ್ಗುಣವನ್ನು ಪ್ರದರ್ಶಿಸಿದ. ವೈರತ್ವವು ಸಾವಿನೊಂದಿಗೆ ಕೊನೆಗೊಳ್ಳಬೇಕು, ದ್ವೇಷವನ್ನು ಮರಣದೊಂದಿಗೆ ಮುಕ್ತಾಯಗೊಳಿಸಬೇಕು. 'ಮರಣಾಂತಾನಿ ವೈರಾನಿ ನಿವೃತ್ತಂ ನ ಪ್ರಯೋಜನಮ್ ಕ್ರಿಯತಾಮಸ್ಯ ಸಂಸ್ಕಾರೋ ಮಮಾಪೇಷ್ಯ ತಥಾ ತವ'- 'ರಾವಣನೊಂದಿಗಿನ ನನ್ನ ವೈರತ್ವ ಎನ್ನುವುದು ಅವನ ಮರಣದಲ್ಲಿ ಪರಿಸಮಾಪ್ತಿಯಾಯ್ತು; ಈಗ ಆತ ನಿನಗೆ ಹೇಗೆ ಸಹೋದರನೋ ನನಗೂ ಸಹೋದರನೇ ಆಗಿದ್ದಾನೆ. ಶಾಸ್ತ್ರೋಕ್ತವಾಗಿ ನೀನು ಆತನ ಅಂತ್ಯಸಂಸ್ಕಾರ ಮಾಡಲು ಒಪ್ಪದಿದ್ದರೆ ನಾನು ಮಾಡುತ್ತೇನೆ' ಎನ್ನುವ ಮೂಲಕ ಮನುಷ್ಯತ್ವಕ್ಕೆ ಹೊಸ ಭಾಷ್ಯ ಬರೆಯುತ್ತಾನೆ.

ರಾಮ-ರಾವಣರ ನಡುವಿನ ಯುದ್ಧವನ್ನು ಬೇರೆ ಯಾವ ಯುದ್ಧಕ್ಕೂ ಹೋಲಿಸಲಾಗದು ಎಂಬುದು ಪ್ರತ್ಯಕ್ಷದರ್ಶಿಯಾಗಿದ್ದ ಆಂಜನೇಯನ ಅನಿಸಿಕೆ. ಮಹಾಭಾರತದಲ್ಲಿನ ಕುರುಕ್ಷೇತ್ರ ಯುದ್ಧದ ಆರಂಭದಲ್ಲಿ, ಅರ್ಜುನನ ರಥದ ಮೇಲೆ ಬಂದು ಕುಳಿತು ಯುದ್ಧವನ್ನು ವೀಕ್ಷಣೆ ಮಾಡಬೇಕು ಎಂದು ಆಂಜನೇಯನಲ್ಲಿ ವಿನಂತಿಸಲಾಯಿತಂತೆ. ಅದಕ್ಕೆ ಆಂಜನೇಯ, 'ನಿಮ್ಮದೊಂದು ಕೌಟುಂಬಿಕ ಜಗಳ ರಾಮ-ರಾವಣರ ಯುದ್ಧವನ್ನು ನೋಡಿದ ನಾನು ಇದನ್ನ ಯುದ್ಧ ಎನ್ನಲಾದೀತೆ?' ಎಂದು ಕೇಳಿದ್ದನಂತೆ.

ಇನ್ನು ಕೌರವ-ಪಾಂಡವರ ನಡುವಿನ 18 ದಿನಗಳ ಕುರುಕ್ಷೇತ್ರ ಯುದ್ಧವಂತೂ ಇನ್ನೊಂದು ದೃಷ್ಟಿಯಿಂದ ದಾಖಲೆಯೇ ಸರಿ. ಹದಿನೆಂಟು ಅಕ್ಷೋಹಿಣಿ ಸೇನೆ ಒಂದು ಕಡೆ ಬಂದು ನಿಂತು ಹದಿನೆಂಟು ದಿನ ಕಾದಾಡಿವೆ. ಒಂದು ಅಕ್ಷೋಹಿಣಿಯೆಂದರೆ ಸುಮಾರು ಎರಡು ಲಕ್ಷದ ಹದಿನೆಂಟು ಸಾವಿರದ ಏಳುನೂರು ಯೋಧರು ಹಾಗೂ ಆನೆ-ಕುದುರೆಗಳ ಕಡಿ. (21,870 ರಥಗಳು, 21,870 ಆನೆಗಳು 65,610 ಕುದುರೆಗಳು ಹಾಗೂ 1,09,350 ಸೈನಿಕರು) ಹೀಗೆ, ಏಳು ಅಕ್ಷೋಹಿಣಿ ಸೇನೆ ಪಾಂಡವರ ಪರವಾಗಿದ್ದರೆ ಹನ್ನೊಂದು ಅಕ್ಷೋಹಿಣಿ ಸೇನೆ ಕೌರವರ ಪರವಾಗಿ ಒಟ್ಟೂ ಹದಿನೆಂಟು ಅಕ್ಷೋಹಿಣಿ. ಅಂದರೆ ಸುಮಾರು ಎರಡು ಮಿಲಿಯನ್ ಸೈನಿಕರು ಎದುರುಬದುರು ನಿಂತು ಯುದ್ಧಮಾಡಿರುವ ಇನ್ನೊಂದು ಇತಿಹಾಸವಿಲ್ಲ.

ಪ್ರಾಚೀನ ಭಾರತವು ಪ್ರತಿ ಯುಗದಲ್ಲಿ ಅನೇಕ ಯುದ್ಧಗಳಿಗೆ ಸಾಕ್ಷಿಯಾಗಿದೆ. ಕೆಲವು ಪ್ರಸಿದ್ಧ ಯುದ್ಧಗಳೆಂದರೆ, ವೇದಕಾಲದ ಹತ್ತು ರಾಜರ ಯುದ್ಧ, ತ್ರೇತಾಯುಗದಲ್ಲಿ ರಾಮ ಮತ್ತು ರಾವಣರ ನಡುವಿನ ಯುದ್ಧ ಮತ್ತು ದ್ವಾಪರ ಯುಗದಲ್ಲಿ ಕುರುಕ್ಷೇತ್ರ ಯುದ್ಧ. ಇದಲ್ಲದೆ, ಇತರ ಅನೇಕ ಯುದ್ಧಗಳನ್ನು ವಿವಿಧ ಪುರಾಣಗಳಲ್ಲಿ ಉಲ್ಲೇಖಿಸಲಾಗಿದೆ. ಭಾರತವು ಯುದ್ಧ, ಶಸ್ತ್ರಾಸ್ತ್ರಗಳು ಮತ್ತು ಸಮರ ಕಲೆಗಳ ಶ್ರೀಮಂತ ಇತಿಹಾಸವನ್ನು ಹೊಂದಿದೆ ಎನ್ನುವುದನ್ನು ಅದು ಸೂಚಿಸುತ್ತದೆ. ಯಜುರ್ವೇದದ ಭಾಗವಾದ ಧನುರ್ವೇದವು ಬಿಲ್ಲುಗಾರಿಕೆ ಮತ್ತು ಮಿಲಿಟರಿ ವಿಜ್ಞಾನದ ಬಗ್ಗೆ ವ್ಯವಹರಿಸುತ್ತದೆ. 'ಧನುರ್ವೇದ' ಎಂಬ ಪದವು ಸಾಮಾನ್ಯವಾಗಿ ಬಿಲ್ಲು-ಬಾಣಗಳ ವಿಜ್ಞಾನವನ್ನು ಸೂಚಿಸುತ್ತದೆ. ಧನುರ್ವೇದವು ಮುಖ್ಯವಾಗಿ ಶಸ್ತ್ರಾಸ್ತ್ರಗಳು ಮತ್ತು ತರಬೇತಿ, ಯುದ್ಧ ನೀತಿಶಾಸ್ತ್ರ, ಯುದ್ಧ ತಂತ್ರ ಮತ್ತು ಸೇನಾ ಸಂಯೋಜನೆಯನ್ನು ಒಳಗೊಂಡಿದೆ ಮತ್ತು ಕುದುರೆಗಳು, ಆನೆಗಳು ಇತ್ಯಾದಿಗಳಿಗೆ ತರಬೇತಿ ನೀಡುವುದರ ಕುರಿತು ವ್ಯವಹರಿಸುತ್ತದೆ. ಇನ್ನು ಅಗ್ನಿ ಪುರಾಣವು ಶಸ್ತ್ರಾಸ್ತ್ರಗಳ ಬಗ್ಗೆಯೂ ವ್ಯವಹರಿಸುತ್ತದೆ.

ಸನಾತನ ಧರ್ಮದಲ್ಲಿ, ಯುದ್ಧಗಳನ್ನು ಧರ್ಮದ ಅವಿಭಾಜ್ಯ ಅಂಗವೆಂದು ಸಂಪೂರ್ಣವಾಗಿ ಸಮರ್ಥಿಸಲಾಗಿದೆ. ಧರ್ಮವನ್ನು ಎತ್ತಿಹಿಡಿಯಲು ಅಥವಾ ದುರ್ಬಲರು ಮತ್ತು ಮುಗ್ಧರನ್ನು ರಕ್ಷಿಸಲು ಹೋರಾಡಿದರೆ ಯುದ್ಧವು ಸಂಪೂರ್ಣವಾಗಿ ಸ್ವೀಕಾರಾರ್ಹವಾಗಿದೆ. ಯಾವ ಸಂದರ್ಭದಲ್ಲಿ ಯುದ್ಧ ಅನಿವಾರ್ಯ ಅಥವಾ ಕರ್ತವ್ಯವಾಗುತ್ತದೆ ಎನ್ನುವುದನ್ನು ಭಗವದ್ಗೀತೆಯಲ್ಲಿ ವಿಸ್ತ್ರತವಾಗಿ ಚರ್ಚಿಸಲಾಗಿದೆ. ಮನು ಮತ್ತು ಕೌಟಿಲ್ಯನ ಪ್ರಕಾರ, ಬಾಹ್ಯ ಆಕ್ರಮಣದ ವಿರುದ್ಧ ಆತ್ಮರಕ್ಷಣೆಗಾಗಿ ಮಾತ್ರವಲ್ಲದೆ ವಿಜಯದ ಮೂಲಕ ಪ್ರದೇಶದ ವಿಸ್ತರಣೆಗಾಗಿ ಯುದ್ಧಗಳು ನಡೆಯುತ್ತಿದ್ದವು. ಇದಲ್ಲದೆ, ರಾಜನು ನೈಸರ್ಗಿಕ ಶತ್ರುವನ್ನು ನಾಶಪಡಿಸುವ ಗುರಿಯನ್ನು ಹೊಂದಿರುತ್ತಿದ್ದ. ಕಾರಣ, ಅವನು ಮೊದಲು ಶತ್ರುವನ್ನು ತೊಡೆದುಹಾಕದಿದ್ದರೆ, ಅವನು ಶತ್ರುಗಳಿಂದ ನಿರ್ಮೂಲನೆಯಾಗಬೇಕಾಗುತ್ತದೆ ಎನ್ನುವ ನೀತಿ. ಇರಾನಿನ ಮೇಲಿನ ಯುದ್ಧಕ್ಕೆ ಅಮೆರಿಕ ಹಾಗೂ ಇಸ್ರೇಲ್ ದೇಶಗಳು ನೀಡುತ್ತಿರುವ ಕಾರಣವೂ ಇದೇ ಆಗಿದೆ. ನಾವು ಈಗ ಮತಾಂಧರಿಂದ ಆಳಲ್ಪಡುತ್ತಿರುವ ಇರಾನಿನ ಬಲವನ್ನು ತಗ್ಗಿಸದಿದ್ದರೆ, ಅವರೇ ಜಗತ್ತಿನ ಮೇಲೆ ಎರಗುತ್ತಿದ್ದರು ಎನ್ನುವುದು ಅವರ ವಾದ.

ಯುದ್ಧದ ಸಮಯದಲ್ಲಿ ಭಾರತದ ರಾಜರು ನೈತಿಕತೆಗಳಿಗೆ ಬದ್ಧರಾಗಿರುತ್ತಿದ್ದರು ಎಂದು ಅನೇಕ ದಾಖಲೆಗಳಿಂದ ಸಿದ್ಧವಾಗುತ್ತದೆ. ಗ್ರೀಕ್ ವಿದ್ವಾಂಸರ ದಾಖಲೆಗಳು ಸಹ ಭಾರತದಲ್ಲಿ ಯುದ್ಧ ಪ್ರಕ್ರಿಯೆಯಲ್ಲಿ ಯಾವುದೇ ನಾಗರಿಕರಿಗೆ ಹಾನಿಯಾಗುತ್ತಿರಲಿಲ್ಲ ಎಂದು ಉಲ್ಲೇಖಿಸಿದ್ದಾರೆ. ಗ್ರೀಕ್ ರಾಯಭಾರಿ ಮೆಗಾಸ್ತನೀಸ್ ಹೇಳುತ್ತಾನೆ, 'ಇತರ ರಾಷ್ಟ್ರಗಳಲ್ಲಿ ಯುದ್ಧದ ಸ್ಪರ್ಧೆಗಳಲ್ಲಿ ಮಣ್ಣನ್ನು ಧ್ವಂಸಗೊಳಿಸುವುದು ಮತ್ತು ಆ ಮೂಲಕ ಅದನ್ನು ಕೃಷಿ ಮಾಡದ ತ್ಯಾಜ್ಯವಾಗಿಸುವುದು ಸಾಮಾನ್ಯವಾಗಿದೆ; ಆದರೆ ಇದಕ್ಕೆ ವಿರುದ್ಧವಾಗಿ ಭಾರತದಲ್ಲಿ ರೈತರನ್ನು ಪವಿತ್ರತಮ ವರ್ಗವೆಂದು ಪರಿಗಣಿಸಲಾಗುತ್ತದೆ. ನೆರೆಹೊರೆಯಲ್ಲಿ ಯುದ್ಧ ನಡೆಯುತ್ತಿರುವಾಗಲೂ ಮಣ್ಣನ್ನು ಉಳುಮೆ ಮಾಡುವವರು ಯಾವುದೇ ಅಪಾಯ ಪ್ರಜ್ಞೆಯಿಂದ ತೊಂದರೆಗೊಳಗಾಗುವುದಿಲ್ಲ, ಸಂಘರ್ಷವನ್ನು ನಡೆಸುವಲ್ಲಿ ಎರಡೂ ಕಡೆಯವರು ಪರಸ್ಪರ ಹತ್ಯೆ, ಸಾವು-ನೋವಿನಲ್ಲಿ ಬಳಲುತ್ತಾರಾದರೂ ಕೃಷಿಯಲ್ಲಿ ತೊಡಗಿರುವ ರೈತರಿಗೆ ಯಾವುದೇ ಕಿರುಕುಳವಿಲ್ಲದೆ ಉಳಿಯಲು ಅವಕಾಶ ಮಾಡಿಕೊಡುತ್ತಿದ್ದರು'. ಇದಲ್ಲದೆ ಅವರು ಶತ್ರುವಿನ ದೇಶವನ್ನು ಬೆಂಕಿಯಿಂದ ಧ್ವಂಸಗೊಳಿಸುವುದಿಲ್ಲ ಅಥವಾ ನಿಸರ್ಗವನ್ನು ಹಾಳುಗೆಡುವುದಿಲ್ಲ, ಭೂಮಿಯಲ್ಲಿ ಕೆಲಸ ಮಾಡುತ್ತಿದ್ದ ರೈತನ ಮೇಲೆ ಶತ್ರುವಿನಿಂದ ಯಾವುದೇ ಹಾನಿಯಾಗುವುದಿಲ್ಲ, ಏಕೆಂದರೆ ಈ ವರ್ಗದ ಜನರನ್ನು ಸಾರ್ವಜನಿಕ ಉಪಕಾರಕರೆಂದು ಪರಿಗಣಿಸಲಾಗುತ್ತದೆ ಎಂದು ಆತ ಉಲ್ಲೇಖಿಸುತ್ತಾನೆ.

ಮಹಾಭಾರತ, ರಾಮಾಯಣ, ಧನುರ್ವೇದ ಮತ್ತು ವೇದಗಳಲ್ಲಿ ಯುದ್ಧದ ನೀತಿಶಾಸ್ತ್ರ ಮತ್ತು ತೊಡಗಿಸಿಕೊಳ್ಳುವಿಕೆಯ ನಿಯಮಗಳು ಹೀಗಿದ್ದವು: ಯುದ್ಧದ ಸ್ಥಳ ಮತ್ತು ಸಮಯವನ್ನು ಮೊದಲೇ ನಿರ್ದಿಷ್ಟಪಡಿಸಬೇಕು. ಯುದ್ಧವು ಹಗಲಿನಲ್ಲಿ ಮಾತ್ರ ನಡೆಯಬೇಕು. ಒಬ್ಬ ಯೋಧನ ಮೇಲೆ ಅನೇಕ ಯೋಧರು ದಾಳಿ ಮಾಡಕೂಡದು. ನಿರಾಯುಧ ಯೋಧನಿಗೆ ಹಾನಿ ಮಾಡುವಂತಿಲ್ಲ. ಸೊಂಟದ ಕೆಳಗೆ ಶತ್ರುವನ್ನು ಹೊಡೆಯುವಂತಿರಲಿಲ್ಲ, ಭೂಮಿಗೆ ಯಾವುದೇ ರೀತಿಯಲ್ಲಿ ಹಾನಿಯಾಗಬಾರದು. ಮಹಿಳೆಯರು, ಮಕ್ಕಳು, ರೋಗಿಗಳು ಮತ್ತು ರೈತರು ಯುದ್ಧದಲ್ಲಿ ಬಾಧಿತರಾಗಬಾರದು ಮತ್ತು ಯುದ್ಧ ಕೈದಿಗಳನ್ನು ಗೌರವದಿಂದ ಕಾಣಬೇಕು, ವಿಷಪೂರಿತ ಶಸ್ತ್ರಾಸ್ತ್ರಗಳು ಮತ್ತು ಬಾಣದ ತಲೆಗಳನ್ನು ನಿಷೇಧಿಸಲಾಗಿತ್ತು. ಇಡೀ ಜನಸಂಖ್ಯೆಯನ್ನು ಅಳಿಸಿಹಾಕುವ ಸಾಮೂಹಿಕ ವಿನಾಶಕಾರಿ ಶಸ್ತ್ರಾಸ್ತ್ರಗಳನ್ನು ನಿಷೇಧಿಸಲಾಗಿತ್ತು. ಪ್ರಜ್ಞಾಹೀನರಾಗಿ ಮಲಗಿರುವ, ಅಂಗವಿಕಲನಾಗಿರುವ, ಆಯುಧವಿಲ್ಲದ ಅಥವಾ ಭಯದಿಂದ ಪೀಡಿತನಾಗಿರುವ ಮತ್ತು ಆಶ್ರಯಕ್ಕಾಗಿ ಬಂದ ಶತ್ರುವನ್ನು ಕೊಲ್ಲಬಾರದು. ಹೋರಾಟದಲ್ಲಿ ಕೆಳಗೆ ಬಿದ್ದವರನ್ನು, ಯುದ್ಧರಂಗದಿಂದ ಬೆನ್ನು ತೋರಿಸಿ ಪಲಾಯನ ಮಾಡುವವರನ್ನು, ಶರಣಾಗತರನ್ನು ಶರಣಾಗತಿಯ ಸಂಕೇತವಾಗಿ ತನ್ನ ಕೂದಲನ್ನು ಬಿಚ್ಚುವ ಅಥವಾ ತನ್ನ ಶಸ್ತ್ರಾಸ್ತ್ರಗಳನ್ನು ಕೆಳಕ್ಕೆ ಎಸೆಯುವ ಯಾರೇ ಆದರೂ ಅವರಿಗೆ ತೊಂದರೆ ಕೊಡಬಾರದು. ವಿಷಯುಕ್ತ ಶಸ್ತ್ರಾಸ್ತ್ರಗಳನ್ನು ಬಳಸುವ ಕ್ರಿಯೆಯನ್ನು ಹೇಡಿತನವೆಂದು ಪರಿಗಣಿಸಬೇಕು ಇತ್ಯಾದಿ.

ಅನಾದಿ ಕಾಲದಿಂದಲೂ, ಭಾರತವು ಯುದ್ಧದ ಸಮಯದಲ್ಲಿಯೂ ಜೀವದ ಘನತೆ, ಮಾನವ ಸಹಾನುಭೂತಿ ಮತ್ತು ನೈತಿಕತೆಯ ಪ್ರಾಬಲ್ಯಕ್ಕೆ ಹೆಚ್ಚಿನ ಮೌಲ್ಯವನ್ನು ನೀಡುವ ನಾಗರಿಕತೆಯಾಗಿದೆ. ಕೇವಲ ವಿಜಯ ಅಥವಾ ಸೇಡಿಗಾಗಿ ಯುದ್ಧವನ್ನು ನಡೆಸುವ ಅನೇಕ ದೇಶಗಳಿಗಿಂತ ಭಿನ್ನವಾಗಿ, ಭಾರತೀಯ ವಿಶ್ವದೃಷ್ಟಿಕೋನವು ಅದರ ಪ್ರಾಚೀನ ಧಾರ್ಮಿಕ, ಆಧ್ಯಾತ್ಮಿಕ ಮತ್ತು ತಾತ್ವಿಕ ಪರಂಪರೆಯಲ್ಲಿ ಬೇರೂರಿದೆ. ಭೂಸೇನೆ, ನೌಕಾಪಡೆ ಮತ್ತು ವಾಯುಪಡೆಯನ್ನು ಒಳಗೊಂಡಿರುವ ಭಾರತೀಯ ಸಶಸ್ತ್ರ ಪಡೆಗಳು ಆಧುನಿಕ ಯುದ್ಧದಲ್ಲಿಯೂ ಈ ತತ್ವಗಳನ್ನು ಅಳವಡಿಸಿಕೊಳ್ಳುತ್ತಲೇ ಸಾಗಿವೆ. ಪಾಕಿಸ್ತಾನದಂಥ ನೆರೆರಾಷ್ಟ್ರಗಳ ತೀವ್ರ ಪ್ರಚೋದನೆಯ ಸಂದರ್ಭಗಳಲ್ಲಿಯೂ ಭಾರತವು ಈ ನಿಲುವನ್ನು ಸತತವಾಗಿ ಉಳಿಸಿಕೊಂಡಿರುವುದು ವಿಶೇಷವಾಗಿದೆ.

ರಾಮಾಯಣ ಮತ್ತು ಮಹಾಭಾರತದ ಕಾಲದಿಂದಲೂ, ಭಾರತೀಯ ಯುದ್ಧನೀತಿ ಶಾಸ್ತ್ರವು ಕೇವಲ ಸಾಹಿತ್ಯಿಕ ಆದರ್ಶವಾದವಾಗಿರಲಿಲ್ಲ; ಅವು ಮೂಲಭೂತ ನಿಯಮಗಳಾಗಿದ್ದು ಇಂದಿಗೂ ಭಾರತೀಯ ಸಶಸ್ತ್ರ ಪಡೆಗಳ ನೀತಿಯಲ್ಲಿ ಪ್ರತಿಧ್ವನಿಸುತ್ತಿವೆ. ಜಾಗತಿಕವಾಗಿ ಅತ್ಯಂತ ಶಿಸ್ತುಬದ್ಧ ಮತ್ತು ಗೌರವಾನ್ವಿತ ಮಿಲಿಟರಿ ಪಡೆಗಳಲ್ಲಿ ಒಂದು ಎಂದು ಗುರುತಿಸಲ್ಪಟ್ಟ ಭಾರತೀಯ ಸೇನೆ, ಈ ಯುದ್ಧ ನೈತಿಕತೆಯನ್ನು ಅಚಲ ಬದ್ಧತೆಯೊಂದಿಗೆ ಎತ್ತಿಹಿಡಿಯುತ್ತಿದೆ. ನಾಗರಿಕ ಪ್ರದೇಶಗಳ ಮೇಲೆ ವಿವೇಚನಾರಹಿತ ದಾಳಿ ಅಥವಾ ಸಾಂಸ್ಕೃತಿಕ ಮತ್ತು ಧಾರ್ಮಿಕ ಸ್ಥಳಗಳನ್ನು ಗುರಿಯಾಗಿಸಿಕೊಂಡಿರುವ ಕೆಲವು ಯುದ್ಧ ತಂತ್ರಗಳನ್ನು ಒಳಗೊಂಡಿರುವ ಕೆಲವು ರಾಷ್ಟ್ರಗಳಿಗಿಂತ ಭಿನ್ನವಾಗಿ, ಭಾರತವು ಅಂಥ ತಂತ್ರಗಳ ವಿರುದ್ಧ ದೃಢವಾದ ನಿಲುವನ್ನು ಉಳಿಸಿಕೊಂಡಿದೆ. ಪಾಕಿಸ್ತಾನದ ವಿರುದ್ಧದ ಅತ್ಯಂತ ತೀವ್ರವಾದ ಮಿಲಿಟರಿ ಕಾರ್ಯಾಚರಣೆಗಳ ಸಂದರ್ಭದಲ್ಲಿಯೂ, ಭಾರತದ ಮಿಲಿಟರಿ ನಾಯಕತ್ವವು ನಾಗರಿಕ ಸಾವು-ನೋವುಗಳನ್ನು ತಪ್ಪಿಸಲು ಮತ್ತು ಸಾಮಾನ್ಯ ನಾಗರಿಕರನ್ನು ರಕ್ಷಿಸಲು ಸ್ಪಷ್ಟ ನಿರ್ದೇಶನಗಳನ್ನು ನೀಡಿತ್ತು.

ಇತ್ತೀಚಿನ 'ಆಪರೇಷನ್ ಸಿಂದೂರ್' ಕಾರ್ಯಾಚರಣೆಯಲ್ಲಿಯೂ ಈ ಅಭ್ಯಾಸವು ಮತ್ತೆ ಸ್ಪಷ್ಟವಾಯಿತು, ಗಡಿಯುದ್ದಕ್ಕೂ ಭಾರತೀಯ ನಾಗರಿಕ ಗ್ರಾಮಗಳ ಮೇಲೆ ಪಾಕಿಸ್ತಾನದ ತೀವ್ರ ಶೆಲ್ ದಾಳಿಯ ಹೊರತಾಗಿಯೂ ಭಾರತೀಯ ಮಿಲಿಟರಿಯು, ಶತ್ರು ಹೋರಾಟಗಾರರು, ಭಯೋತ್ಪಾದಕ ನೆಲೆಗಳು ಮತ್ತು ಆಯಕಟ್ಟಿನ ಜಾಗಗಳನ್ನು ಮಾತ್ರ ಗುರಿಯಾಗಿಸಿಕೊಂಡಿತ್ತು ಎನ್ನುವುದನ್ನು ಗಮನಿಸಬಹುದಾಗಿದೆ. ಇತರ ಪರಮಾಣು ಶಸ್ತ್ರಸಜ್ಜಿತ ರಾಷ್ಟ್ರಗಳ ಅಸ್ಪಷ್ಟ ಅಥವಾ ಆಕ್ರಮಣಕಾರಿ ಪರಮಾಣು ಸಿದ್ಧಾಂತಗಳಿಗೆ ವ್ಯತಿರಿಕ್ತವಾಗಿ, ಭಾರತವು ತನ್ನ ಪರಮಾಣು ಪರೀಕ್ಷೆಗಳನ್ನು ನಡೆಸಿದಾಗ, 'ಭಾರತವು ಎಂದಿಗೂ ಪರಮಾಣು ದಾಳಿಯನ್ನು ತಾನಾಗಿ ಪ್ರಾರಂಭಿಸುವುದಿಲ್ಲ, ಆದರೆ ದಾಳಿ ಮಾಡಿದರೆ ನಿರ್ಣಾಯಕವಾಗಿ ಪ್ರತಿಕ್ರಿಯಿಸುವ ಹಕ್ಕನ್ನು ಉಳಿಸಿಕೊಳ್ಳುತ್ತದೆ' ಎಂದು ಭರವಸೆ ನೀಡಿತ್ತು.

ಯುದ್ಧವು ಕ್ರೂರತೆಯ ಪರಾಕಾಷ್ಠೆಯನ್ನು ಮುಟ್ಟುವ ಈ ಕಾಲದಲ್ಲಿಯೂ, ಯುದ್ಧದ ನೈತಿಕತೆಗೆ ಭಾರತದ ಪ್ರಾಚೀನ ಮತ್ತು ಆಧುನಿಕ ಬದ್ಧತೆಯು ಅಪರೂಪದ ಮತ್ತು ಅಗತ್ಯವಾದ ಉದಾಹರಣೆಯಾಗಿ ಜಗತ್ತಿನ ಮುಂದೆ ನಿಂತಿದೆ.

ಪೆಂಗ್ವಿನ್ ಮತ್ತು ಪಂಚ್ ಆಧುನಿಕ ನಿರ್ವಾತವನ್ನು ಹೇಗೆ ತುಂಬುತ್ತವೆ?

ಹೊರಸೂಸುವ ಮನ
ಸುಸಾನ್ ಥಾಮಸ್
vveditoped@gmail.com

ಜಪಾನ್‌ನ ಇಚಿಕಾವಾ ಮೃಗಾಲಯದಲ್ಲಿರುವ ಏಳು ತಿಂಗಳ ಪಂಚ್- ಕುನ್ ಮಕಾಕ್ ಬಗ್ಗೆ ನಿಮಗೆ ತಿಳಿದಿಲ್ಲದಿದ್ದರೆ ಮತ್ತು ಇನ್ನೂ ಕಣ್ಣೀರು ಸುರಿಸದಿದ್ದರೆ ಅಥವಾ ಅಯ್ಯೋ ಎಂದು ಭಾವಿಸದಿದ್ದರೆ, ನೀವು ಬಹುಶಃ ಕಲ್ಲುಹೃದಯದವರೇ ಇರಬೇಕು. ತಾಯಿಯಿಂದ ತ್ಯಜಿಸಲ್ಪಟ್ಟ ಮರಿ ಕೋತಿ ಮತ್ತು ಅದರ ತುಕ್ಕು ಹಿಡಿದ ಐಕಿಯಾ ಆಟಿಕೆಯಾಗಿರುವ ನವಿರಾದ ಒರಾಂಗುಟಾನ್ (ಇದನ್ನು 'ಒರಮಾಮಾ' ಎಂದು ಕರೆಯಲಾಗುತ್ತದೆ) ಇವನ್ನು ಈಗ ಜಗತ್ತು ಕುತೂಹಲದಿಂದ ನೋಡುತ್ತಿದೆ. ಜನರು ಅವನನ್ನು ನೋಡಲೆಂದು ಮೃಗಾಲಯಕ್ಕೆ ಹೋಗಲು ತಮ್ಮ ಚೀಲಗಳನ್ನು ಪ್ಯಾಕ್ ಮಾಡಿಕೊಳ್ಳುತ್ತಿದ್ದಾರೆ.

ಟೇಟ್ ಸಹೋದರರು ಅವನನ್ನು ಖರೀದಿಸಲು ಕೆಲವು ಕೋಟಿಗಳನ್ನು ನೀಡಿದ್ದಾರೆ ಮತ್ತು ಒಂಟಿತನದ ಸಾಂಕ್ರಾಮಿಕ ರೋಗದಿಂದ ಮತ್ತು ನಿಜವಾದ ಸಂಪರ್ಕಗಳ ಕೊರತೆಯಿಂದ ಬಳಲುತ್ತಿರುವ 'ಜಂತಾ', ಅದು ನಾನೇ ಎಂದು ಹೇಳುತ್ತಾ ನಕಲಿ ರೆಪ್ಪೆಗೂದಲುಗಳ ಮೂಲಕ ಹೇರಳವಾಗಿ ಕಣ್ಣೀರು ಸುರಿಸುತ್ತಿದೆ. ಇದು, ಹೆರ್ಜಾಗ್ ಅವರ 2007ರ ಸಾಕ್ಷ್ಯಚಿತ್ರದ ನಿರಾಕರಣವಾದಿ ಪೆಂಗ್ವಿನ್ ಬಗ್ಗೆ ನೆಟಿಜನ್‌ಗಳು ಕೂಗಿದ ಕೆಲವು ವಾರಗಳ ನಂತರ, ಅದು ವಸಾಹತು ಜತೆಗಿನ ತನ್ನ ಸಂಬಂಧವನ್ನು 'ಧಿಕ್ಕಾರದಿಂದ' ಮುರಿದು ಅಜ್ಞಾತದ ಕಡೆಗೆ ಏಕಾಂಗಿಯಾಗಿ ಹೊರಟಿತು. ಇಬ್ಬರೂ ಯುದ್ಧಗಳು, ಲೈಂಗಿಕ ಹಗರಣಗಳು ಮತ್ತು ಸುಂಕದ ಜಗಳಗಳಿಂದ ತುಂಬಿರುವ ಆಧುನಿಕತಾವಾದದ ಮುಜುಗರದ ಪ್ರತಿಮೆಗಳಾಗಿದ್ದಾರೆ. ಪೆಂಗ್ವಿನ್‌ನಂತೆ, ನಮ್ಮಲ್ಲಿ ಅನೇಕರು 'ಇದನ್ನು ಧಿಕ್ಕರಿಸಬೇಕು' ಎಂದು ಹೇಳಿ ಮೌನವಾಗಿ ಹೊರನಡೆಯಲು ಬಯಸುತ್ತೇವೆ.

2025ರಲ್ಲಿ, ಪ್ರಪಂಚಕ್ಕೆ 'ಕಿಡಲ್ಟ್ ಪ್ರವೃತ್ತಿ'ಯನ್ನು ಪೂರ್ಣವಾಗಿ ತಂದ ಕೊಳಕು-ಮುದ್ದಾದ ಗೊಂಬೆಗಳಾದ ಲ್ಯಾಬುಬಸ್ ಬಗ್ಗೆ ಜಗತ್ತು ಭಯಭೀತವಾಗಿತ್ತು. 18ರಿಂದ 25 ವರ್ಷದೊಳಗಿನ ಯುವಕರು, ಸಾಮಾಜಿಕ ಮಾಧ್ಯಮದ ಸಕ್ರಿಯ ಬಳಕೆದಾರರು, ಅವುಗಳನ್ನು ಚೀಲಗಳಲ್ಲಿ ಮೋಡಿಗಳಂತೆ ನೇತುಹಾಕಿದರು, ಅವುಗಳನ್ನು ಷೇರುಗಳಂತೆ ಮಾರಾಟ ಮಾಡಿದರು ಮತ್ತು ಖರೀದಿಸಿದರು, ಬಾಲ್ಯ ಮತ್ತು ಪ್ರೌಢಾವಸ್ಥೆಯ ಅಚ್ಚುಕಟ್ಟಾದ ವರ್ಗೀಕರಣಗಳ ಬಗ್ಗೆ ಪುನರ್ವಿಮರ್ಶಿಸಲು ಜಗತ್ತಿಗೆ ಅವಕಾಶ ನೀಡಿದರು, ವಯಸ್ಕರು ಸಹ ಮಕ್ಕಳಾಗಿರಬೇಕು ಎಂಬ ವಾದವನ್ನು ಮಂಡಿಸಿದರು. ವಯಸ್ಕರಿಗೂ ಜಗತ್ತು ದುಃಖಕರವಾಗಿದೆ ಎಂಬುದು ಇಂದಿನ ವಾಸ್ತವ. ನಾನು 80ರ ದಶಕದಲ್ಲಿ ಟಾಮ್ ಆ್ಯಂಡ್ ಜೆರ್ರಿ, ಜೇಮೀ ಆ್ಯಂಡ್ ದಿ ಮ್ಯಾಜಿಕ್ ಟಾರ್ಚ್ ಮತ್ತು ಇತರ ಸರಣಿಗಳನ್ನು ನೋಡುತ್ತಾ ಬೆಳೆದೆ. ನಾವು ಮಲಗುವ ಮುನ್ನ ಓದುತ್ತಿದ್ದದ್ದು ಪಂಚತಂತ್ರ ಕಥೆಗಳನ್ನು. ಅದರಲ್ಲಿ ಪ್ರಾಣಿಗಳು ಹೇರಳವಾಗಿದ್ದವು, ಮಾತನಾಡುತ್ತಿದ್ದವು, ಅಳುತ್ತಿದ್ದವು, ಕುತಂತ್ರಿಗಳಾಗಿದ್ದವು ಮತ್ತು ನಿಷ್ಠಾವಂತವಾಗಿದ್ದವು. ವಯಸ್ಕಳಾದ ಮೇಲೆ ನಾನು ಈಗ ಶುದ್ಧ ನಾಸ್ಟಾಲ್ಜಿಯಾ ಮತ್ತು ಸಂತೋಷಕ್ಕಾಗಿ tomandjerry ಸರಣಿಯ Instagram ಹ್ಯಾಂಡಲ್ ಅನ್ನು ಅನುಸರಿಸುತ್ತೇನೆ.

ಯಾರಾದರೂ ನನಗೆ ವಾಟ್ಸಾಪ್‌ನಲ್ಲಿ ಅದರ ಸ್ಟಿಕ್ಕರ್ ಕಳುಹಿಸಿದರೆ, ನಾನು ತಕ್ಷಣ ಅದನ್ನು ನನ್ನ ನೆಚ್ಚಿನ ಸಂಗ್ರಹದಲ್ಲಿ ಉಳಿಸುತ್ತೇನೆ. ನಮ್ಮ ಬಾಲ್ಯದ ವ್ಯಂಗ್ಯಚಿತ್ರಗಳು ಮತ್ತು ಆಟಿಕೆಗಳು ಪ್ರಾಣಿ ಪ್ರಪಂಚದವು, ಅಂದರೆ ಬೆಚ್ಚಗಿನ ಟೆಡ್ಡಿ ಬೇರ್‌ಗಳು, ಚಪ್ಪಾಳೆ ತಟ್ಟುವ ಕೋತಿಗಳು, ಬೊಗಳುವ ನಾಯಿಗಳು. ನಾವು ಅವುಗಳಿಂದ ಎಂದಿಗೂ ಬೆಳೆದಿಲ್ಲ. ಆದರೆ ನನ್ನ ಹೆತ್ತವರು ಪ್ರಾಣಿಗಳ ಕಥೆಗಳು ಅಥವಾ ಗೊಂಬೆಗಳ ಬಗ್ಗೆ ಸುಮ್ಮನಿದ್ದುದು ನನಗೆ ನೆನಪಿಲ್ಲ. ಬಹುಶಃ ಪ್ರೌಢಾವಸ್ಥೆ ಅಷ್ಟು ಅಸ್ತವ್ಯಸ್ತವಾಗಿರಲಿಲ್ಲ, ಅತ್ಯುತ್ತಮೀಕರಣದ ಬೇಡಿಕೆಗಳು ತೀರಾ ಕಡಿಮೆಯಾಗಿದ್ದವು ಮತ್ತು ಅವು 'ಮಲ್ಟಿ ಟಾಸ್ಕಿಂಗ್' ಆಗಿರಲಿಲ್ಲ, ಇದು ಬಂಡವಾಳಶಾಹಿಯ ನರಕಕ್ಕೆ ಖಚಿತವಾದ ಮಾರ್ಗವಾಗಿತ್ತು.

'ಪಂಚ್'ನ ಕಥೆಯನ್ನು ಅವನ ಮೃದು ಆಟಿಕೆಯೊಂದಿಗೆ ಕೇಳಿದಾಗ, ನನಗೆ ಅದು ಅರ್ಥವಾಗುವುದಿಲ್ಲ ಎನಿಸುತ್ತದೆ. ಖಂಡಿತ, ಎಲ್ಲರಂತೆ, ನನಗೂ ಒಳ್ಳೆಯ ಕಥೆ ಇಷ್ಟ, ಅದು ಪರಿತ್ಯಾಗ, ಬೆಳೆಯುವುದು ಮತ್ತು ಎಲ್ಲಾ ಪ್ರತಿಕೂಲಗಳ ವಿರುದ್ಧ ಬದುಕುಳಿಯುವ ಕಥಾವಸ್ತುಗಳಿಂದ ತುಂಬಿರುತ್ತದೆ. 'ದಿ ಜಂಗಲ್ ಬುಕ್'ನಲ್ಲಿ ಮೋಗ್ಲಿ ಮತ್ತು 'ದಿ ಲಯನ್ ಕಿಂಗ್'ನಲ್ಲಿ ಸಿಂಬಾ ಆಗಿದ್ದುದು ಇನ್ನೇನು? ಪಂಚ್ ಪ್ರಕರಣದಲ್ಲಿ, ನಮ್ಮ ಜೀವನವು ಅದರ ಮೇಲೆ ಅವಲಂಬಿತವಾಗಿದೆ ಎಂಬಂತೆ ಅವನ ಬೆಳವಣಿಗೆಯ ಬಗ್ಗೆ ವಿಡಿಯೋಗಳು ಮತ್ತು ನವೀಕರಣಗಳಿಗಾಗಿ ಜಗತ್ತು ಉಸಿರು ಬಿಗಿಹಿಡಿದು ಕಾಯುತ್ತಿದೆ. ಇದು ಕ್ಷುಲ್ಲಕ-ಕ್ಲಾಸಿಕ್ ಹಿಂಜರಿತ ನಡವಳಿಕೆ ಮತ್ತು ಬಳಲಿಕೆ ಹಾಗೂ ವಾಸ್ತವ ಜಗತ್ತಿನಲ್ಲಿ ಹೆಚ್ಚು ಜ್ವಲಂತ ಸಮಸ್ಯೆಗಳ ತಪ್ಪಿಸುವಿಕೆಯ ಉತ್ಪ್ರೇಕ್ಷೆಯಾಗಿದೆ. ವಾಸ್ತವ ಪ್ರಪಂಚದ ಬಗ್ಗೆ ಇದ್ದ ನಿರಾಶೆ ಮತ್ತು ಭ್ರಮನಿರಸನವನ್ನು ಈಗ ಈ ಪ್ರಾಣಿಗಳ ಹೃದಯಸ್ಪರ್ಶಿ ಕಥೆಗಳಿಂದ ಸರಿದೂಗಿಸಲಾಗಿದೆ ಮತ್ತು ಅವುಗಳ 'ವೈರಾಲಿಟಿ'ಯು ಒಂದು ಸಾಂಸ್ಕೃತಿಕ ಕ್ಷಣವನ್ನು ಖಾತ್ರಿಗೊಳಿಸುತ್ತದೆ, ನಂತರ ಅದು ಸಾಮಯಿಕ ವಿಷಯವನ್ನು ಹುಡುಕುತ್ತಿರುವ ಬ್ರ್ಯಾಂಡ್‌ಗಳಿಗೆ ಆಹಾರವಾಗುತ್ತದೆ.

ಕೇರಳ ಪ್ರವಾಸೋದ್ಯಮದ 'ಇನ್ಸ್ಟಾ-ಗೇಮ್' ಅತ್ಯಂತ ಬಲಿಷ್ಠವಾದದ್ದು, ಆನೆಯ ಮೂರ್ತಿಯೊಂದಿಗೆ 'ಸ್ವಲ್ಪ ದಾರಿ ತಪ್ಪಿದೆ' ಎಂಬ ಶೀರ್ಷಿಕೆಯೊಂದಿಗೆ ಬೇಬಿ ಪಂಚ್-ಒರಮಾಮಾ ಸೃಜನಶೀಲತೆಯನ್ನು ತ್ವರಿತವಾಗಿ ಪ್ರದರ್ಶಿಸಿತು. ಅದು ತುಂಬಾ ಇಷ್ಟವಾಯಿತು. ಇಂಡಿಯಾ ಗೇಟ್‌ನಲ್ಲಿ ಮಹಿಳಾ ಕಾನ್‌ಸ್ಟೆಬಲ್-ಪಂಚ್ ಸೃಜನಶೀಲತೆಯೊಂದಿಗೆ ದೆಹಲಿ ಪೊಲೀಸರು ಹಿಂದೆ ಬೀಳಲಿಲ್ಲ, ನೀವು ನಮ್ಮನ್ನು ನಂಬಬಹುದು. ಪಂಚ್ ನಮ್ಮೆಲ್ಲರಲ್ಲೂ ರಕ್ಷಣಾತ್ಮಕ ಪ್ರವೃತ್ತಿಯನ್ನು ಜಾಗೃತಗೊಳಿಸಿದೆ. ಎಪ್‌ಸ್ಟೀನ್ ಫೈಲ್‌ಗಳ ವಿಷಯಗಳ ಬಗ್ಗೆ ಸಾಮಾನ್ಯ ಜಗತ್ತು ಅನುಭವಿಸಿದ ಅಸಹಾಯಕತೆಗೆ ಇದು ಸಹಜ ಪ್ರತಿಕ್ರಿಯೆಯಾಗಿದೆ ಎಂದು ನಾನು ಭಾವಿಸುತ್ತೇನೆ. ನಾವೆಲ್ಲರೂ ಪ್ರಚೋದಿಸಲ್ಪಟ್ಟಿದ್ದೇವೆ ಮತ್ತು ನಂತರ ಪಂಚ್ ಎಂಬ ಮಗು ಬರುತ್ತದೆ, ಅದನ್ನು ಜಗತ್ತು ಇಂಟರ್ನೆಟ್ ಮೂಲಕ ದತ್ತು ತೆಗೆದುಕೊಂಡಿದೆ.

ನಾವು ಅವನನ್ನು ಸುರಕ್ಷಿತವಾಗಿ ಮತ್ತು ಪ್ರೀತಿಯಿಂದ ನೋಡಬೇಕೆಂದು ಬಯಸುತ್ತೇವೆ. ಅವರ ಆರೈಕೆದಾರ ಕೊಸುಕೊ ಶಿಕಾನೆಯವರನ್ನು, ಅಂಟಿಕೊಂಡಿರುವಂತೆ ಕಾಣುತ್ತಿರುವ ಅವರ ಆರೈಕೆಗಾಗಿ ಇಂಟರ್ನೆಟ್ ಚಪ್ಪಾಳೆ ತಟ್ಟುತ್ತಿದೆ. ಕೈಬಿಡುವ ಅಥವಾ ಶೋಷಿಸುವ ಬದಲು ಕಾಳಜಿ ವಹಿಸುವ ಒಬ್ಬ ಕೇರ್‌ಟೇಕರ್ ಅವರು. ಪಂಚ್ ತಮಾಷೆಯಾಗಿ ಅವರ ಮೇಲೆ ಹತ್ತಿ ಅವರಿಗೆ ಅಂಟಿಕೊಳ್ಳುವ ದೃಶ್ಯಗಳು 'ಎಲ್ಲವೂ ಕಳೆದುಹೋಗಿಲ್ಲ' ಎಂಬ ಭರವಸೆಯನ್ನು ಜಗತ್ತಿಗೆ ನೀಡುತ್ತಿವೆ. ಪಂಚ್ ಅನ್ನು ವಯಸ್ಕ ಕೋತಿಯೊಂದು ತಬ್ಬಿಕೊಂಡಾಗ, ಅದು ವೈಯಕ್ತಿಕ ಗೆಲುವಿನಂತೆ ಭಾಸವಾಯಿತು. ಅವನು ತಿನ್ನುವುದು, ಪ್ರತಿದಾಳಿ ಮಾಡುವುದು, ತನ್ನ ಆಟಿಕೆಯನ್ನು ಎಳೆಯುವುದು, ಅದರೊಂದಿಗೆ ಮಲಗುವುದು- ಇವೆಲ್ಲವೂ ದ್ವೇಷ ಯುದ್ಧಗಳು ಮತ್ತು ಅಧಿಕಾರದ ಅತಿರೇಕಗಳಿಂದ ಜಡಗೊಂಡ ಹೃದಯಗಳನ್ನು ಕರಗಿಸಿವೆ.

ವರ್ತಮಾನದ ಪ್ರತಿಯೊಂದು ಸಾಂಸ್ಕೃತಿಕ ಕ್ಷಣವೂ ಕೇವಲ ಒಂದು ಕ್ಷಣ. ಅದು ಬರುತ್ತದೆ, ಹೋಗುತ್ತದೆ, ರದ್ದಾಗುತ್ತದೆ ಮತ್ತು ಬದಲಾಯಿಸಲ್ಪಡುತ್ತದೆ. 2026ರಲ್ಲಿ ಪಂಚ್ ಒಂದು ವರದಾನವಾಗಿದೆ. ನಮ್ಮಲ್ಲಿ ಅನೇಕರು ಈಗ ಪೋಸ್ಟ್‌ಗಾಗಿ ಗಲಾಟೆ ಮಾಡುವ ಬದಲು ಪೋಸ್ಟ್‌ನಲ್ಲಿರುವ ಕಾಮೆಂಟ್‌ಗಳಿಗಾಗಿ ಹೋಗುತ್ತೇವೆ. ಸಾಮೂಹಿಕ ಸಂತಾಪ, ಅಭಿಪ್ರಾಯ ಹಂಚಿಕೆ ಮತ್ತು ವ್ಯಕ್ತಪಡಿಸುವಿಕೆಗಾಗಿ ಸಮುದಾಯವು (ಅವೆಂಜರ್ಸ್‌ನಂತೆ) ಒಟ್ಟುಗೂಡುವ ಸ್ಥಳ ಇದು. ಒಬ್ಬ ವ್ಯಕ್ತಿಯು ತನ್ನ ನೈತಿಕ ತಲ್ಲಣದಲ್ಲಿ ಒಬ್ಬಂಟಿಯಾಗಿಲ್ಲ ಎಂಬುದು ಸಮಾಧಾನಕರವಾಗಿದೆ. ಬೇಗನೆ ಕೂಗಿ ರದ್ದುಗೊಳಿಸುವ ಸಂಸ್ಕೃತಿಯ ಬಗ್ಗೆ ನನಗಿರುವ ಆಕ್ರೋಶಕ್ಕೆ ನಾನು ಕ್ಷಮೆಯಾಚಿಸಬೇಕಾಗಿಲ್ಲ. ನನ್ನ ಹದಿಹರೆಯದ ಆರಂಭದಲ್ಲಿ ನಾನು ರಿಚರ್ಡ್ ಬಾಚ್ ಅವರ 'ಜೊನಾಥನ್ ಲಿವಿಂಗ್‌ಸ್ಟೋನ್ ಸೀಗಲ್' ಅನ್ನು ಓದಿದ್ದೇನೆ ಮತ್ತು ಅದು ನನ್ನ ಜೀವನ ವಿಧಾನದಲ್ಲಿ ಬಲವಾದ ಶಕ್ತಿಯಾಗಿದೆ. ನನ್ನ ಭಾಷಣಗಳಲ್ಲಿ ನಾನು ಅದರಿಂದ ಆಯ್ದ ಭಾಗಗಳನ್ನು ಉಲ್ಲೇಖಿಸಿದ್ದೇನೆ, ಅದರ ಪ್ರತಿಗಳನ್ನು ವಿದ್ಯಾರ್ಥಿಗಳಿಗೆ ಉಡುಗೊರೆಯಾಗಿ ನೀಡಿದ್ದೇನೆ ಮತ್ತು ಸಾಧ್ಯತೆಗಳ ಹೊರತಾಗಿಯೂ ಶ್ರೇಷ್ಠತೆಗಾಗಿ ಶ್ರಮಿಸುವ ಸೀಗಲ್‌ನ ರೂಪಕವು ನನ್ನ ನೆಚ್ಚಿನ ಮುಖ್ಯಾಂಶವಾಗಿದೆ.

ನಂತರ 1982ರ ಏಷ್ಯನ್ ಕ್ರೀಡಾಕೂಟದ ಮುದ್ದಾದ ಆನೆ 'ಮ್ಯಾಸ್ಕಾಟ್' ಅಪ್ಪು ಇತ್ತು, ಆಗ ನನ್ನಷ್ಟೇ ವಯಸ್ಸಿನವನಾಗಿದ್ದ ಕೇರಳದ 5 ವರ್ಷದ ಕುಟ್ಟಿನಾರಾಯಣನ್ ಅವರಿಂದ ಸ್ಫೂರ್ತಿ ಪಡೆದ ಅಪ್ಪು ಇತ್ತು. 2019ರಲ್ಲಿ, NIFT ನಲ್ಲಿದ್ದಾಗ, ನಾವು 'ಗ್ರಿಫಿನ್' ಎಂಬ ರೆಸ್ಕ್ಯೂ ಲ್ಯಾಬ್ ಅನ್ನು ಚಿಕಿತ್ಸಾ ನಾಯಿಯಾಗಿ ದತ್ತು ಪಡೆದೆವು. ವಿದ್ಯಾರ್ಥಿಗಳು ನೀಡುವ ಸ್ಪರ್ಶ, ಉಪಚಾರಗಳಿಂದ ಅದು ಸಂತೋಷಗೊಂಡು, ಇನ್ನೂ ಕ್ಯಾಂಪಸ್‌ನಲ್ಲಿ ಹೃದಯಗಳನ್ನು ಕರಗಿಸುತ್ತಲೇ ಇದೆ. ಕ್ರೌರ್ಯದ ಮಟ್ಟಗಳು ಹೊಸ ಮಟ್ಟಕ್ಕೆ ತಲುಪುತ್ತಿರುವ ಹೃದಯಹೀನ ಪ್ರಪಂಚದಿಂದ ಜರ್ಜರಿತರಾಗಿರುವ, ವಯಸ್ಕರು ಮತ್ತು ಮಕ್ಕಳು ಇಬ್ಬರೂ ಭಾವನಾತ್ಮಕ ಬೆಂಬಲದ ಆಟಿಕೆಗಳು ಮತ್ತು ಮನಸ್ಸಿಗೆ ಇಂಥ ಆಯ್ಕೆಗಳು ಬೇಕಾಗುತ್ತಿರುವಂತೆ ತೋರುತ್ತದೆ.

ಪಂಚ್ ಮತ್ತು ಪೆಂಗ್ವಿನ್ ಒಂದು ನಿರ್ವಾತವನ್ನು ತುಂಬಿವೆ, ಜಗತ್ತನ್ನು ತಮ್ಮ ಬೆಚ್ಚನೆಯ ಭಾವದಿಂದ ಸಂಪರ್ಕಿಸಿವೆ, ಸಂಪರ್ಕ ಮತ್ತು ಬಾಂಧವ್ಯದ ಬಲವಾದ ಭಾವನೆಯಿಂದ ನಮ್ಮನ್ನು ತುಂಬಿವೆ. ನಾವೆಲ್ಲರೂ ಗುಣಮುಖರಾಗೋಣ.

(ಲೇಖಕಿ ಐಆರ್‌ಎಸ್ ಅಧಿಕಾರಿ. ಪ್ರಸ್ತುತ ಆದಾಯ ತೆರಿಗೆ ಪ್ರಧಾನ ಆಯುಕ್ತರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ)

MOMO ಮತ್ತು MEME

ಸಿನಿಗನ್ನಡ

ತುಂಟರಗಾಳಿ
ಹರಿ ಪರಾಕ್
vveditoped@gmail.com

ನಮ್ ಸಿನಿಮಾ ನಟರು ಏನ್ ಮಾಡ್ತಾ ಇದ್ದಾರೆ? ರಾಜ್ಯದಲ್ಲಿ ಏನಾದರೂ ತೊಂದರೆ ಆದ ಕೂಡಲೇ ಇಂಥದೊಂದು ಪ್ರಶ್ನೆ ನಮ್ಮ ಜನಗಳ ಬಾಯಲ್ಲಿ ಬರೋದು ತೀರಾ ಕಾಮನ್. 'ಸಿನಿಮಾ ನಟರು ನಮಗಾಗಿ ಏನು ಮಾಡಿದ್ದಾರೆ?' ಅಂತ ಕೇಳೋ ಈ ಕಾಯಿಲೆ, ಆಗಾಗ ಬರುತ್ತಿರುತ್ತೆ. ಇದೇನೂ ಹೊಸದಲ್ಲ ಬಿಡಿ, ಮೇರುನಟ ಡಾ. ರಾಜ್‌ಕುಮಾರ್ ಅವರಿಂದ ಹಿಡಿದು ಇಂದಿನ ಯುವಪೀಳಿಗೆಯ ನಟರನ್ನೂ ಈ ಗೀಳು ಬಿಟ್ಟಿಲ್ಲ. ಈಗ ಮತ್ತೆ ನಮ್ಮ ಕನ್ನಡದ ನಟರು ಜನರಿಗೆ ಸಹಾಯ ಮಾಡಬೇಕು, ತಮ್ಮ ದುಡ್ಡನ್ನ ಜನರಿಗೆ ಕೊಡಬೇಕು, ತಮ್ಮ ಸಿನಿಮಾಗಳಲ್ಲಿ ವಿಲನ್‌ಗಳನ್ನು ಹೊಡೆದೋಡಿಸಿದಂತೆ ಒಂದೇ ಸಲ ಸಂಕಷ್ಟಗಳನ್ನು ಓಡಿಸಬೇಕು ಎಂಬೆಲ್ಲ ಪ್ರಲಾಪಗಳು ಶುರುವಾಗಿವೆ. ಅಂದಹಾಗೆ ನಮ್ಮ ಜನಗಳಿಗೆ ಪಾಪ, ಈ ಸಿನಿಮಾ ನಟರು ತುಂಬಾ ಸುಲಭಕ್ಕೆ ಸಿಗುವ ಮಿಕಗಳಾಗಿಬಿಡುತ್ತಾರೆ. ಈ ಸಿನಿಮಾ ನಟರು ನಮಗೇನೂ ಮಾಡಿಲ್ಲ ಎಂದು ಮುಲುಗುವ ಈ ಜನ, ತಾವು ಅವರನ್ನು ಉದ್ಧಾರ ಮಾಡಿದ್ದೇವೆ, ಅವರ ಸಿನಿಮಾಗಳನ್ನು ಹಣ ಕೊಟ್ಟು ನೋಡಿದ್ದೇವೆ, ಹಾಗಾಗಿ ಅವರು ನಮಗೆ ಸಹಾಯ ಮಾಡಬೇಕು ಎಂಬ ಮನೋಭಾವದಿಂದ ಮಾತನಾಡುತ್ತಾರೆ. ಆದರೆ ಒಂದು ವರ್ಷದಲ್ಲಿ ಒಬ್ಬ ಸ್ಟಾರ್ ನಟನ ಒಂದು ಚಿತ್ರವನ್ನು ಹೆಚ್ಚೆಂದರೆ 200 ರುಪಾಯಿ ಕೊಟ್ಟು ನೋಡುವ ಇವರು ತಮ್ಮ ಮಕ್ಕಳನ್ನು ಮಿನಿಮಮ್ ಎಂದರೂ ವರ್ಷಕ್ಕೆ 50 ಸಾವಿರ ಕೊಟ್ಟು ಓದಿಸುವ ಸ್ಕೂಲ್ ಮ್ಯಾನೇಜ್‌ಮೆಂಟ್‌ನವರನ್ನು ಈ ರೀತಿ ಕೇಳುವುದಿಲ್ಲ, ಇವರಿಂದಲೇ ಲಕ್ಷಾಂತರ ಹಣ ಪೀಕುವ ಆಸ್ಪತ್ರೆ ಕಟ್ಟಿಸಿದವನನ್ನಾಗಲೀ ಅಥವಾ ನಮ್ಮ ಸಮಾಜದ ಇನ್ಯಾವುದೇ ಉದ್ಯಮಿಗಳನ್ನಾಗಲೀ ಇವರು ಕೇಳುವುದಿಲ್ಲ. ತಮ್ಮ ಮನೆಯ ಬಳಿಯ ಇರುವ ಕಿರಾಣಿ ಅಂಗಡಿಗೂ ಇವರು ಸಾವಿರಾರು ರುಪಾಯಿ ಬ್ಯುಸಿನೆಸ್ ಕೊಟ್ಟರೂ ಅವನನ್ನೂ ಕೇಳುವುದಿಲ್ಲ. ಅವರೆಲ್ಲರೂ ಜನಗಳಿಂದಲೇ ಅಷ್ಟು ಶ್ರೀಮಂತರಾಗಿದ್ದರೂ ಅವರ ಗಳಿಕೆಯಲ್ಲಿ ನಮ್ಮ ಪಾಲಿದೆ ಎಂದು ಜನಗಳಿಗೆ ಅನ್ನಿಸೋದಿಲ್ಲ. ಅವರನ್ನು ಬಿಡಿ, ಸಿನಿಮಾ ಮಾಡಿ ನೂರಾರು ಕೋಟಿಗಟ್ಟಲೆ ಹಣ ಮಾಡುವ ನಿರ್ಮಾಪಕರನ್ನೂ ಇವರು ಕೇಳೋದಿಲ್ಲ. ಬದಲಾಗಿ ಅದರಲ್ಲಿ ಒಂದು ಪಾಲು ತೆಗೆದುಕೊಳ್ಳುವ ನಟರು ಇವರಿಗೆ 'ಬಲಿ-ಕಾ-ಬಕ್ರಾ' ಆಗುತ್ತಾರೆ. ವಿಚಿತ್ರ ಅಂದ್ರೆ, ಈ ಜನಗಳು ನಮಗೆ ಯಾಕೆ ಏನೂ ಮಾಡಿಲ್ಲ ಅಂತ ಕೇಳಬೇಕಾದ ಸರಕಾರಗಳನ್ನೇ ಕೇಳೋದಿಲ್ಲ. ಇವರಿಗೆ ಕೇಳಬೇಕಾದ ಒಂದೇ ಪ್ರಶ್ನೆ ಅಂದ್ರೆ, ಸಿನಿಮಾ ನಟರೇನು ಬಿಟ್ಟಿ ಬಿದ್ದಿದ್ದಾರಾ?

ಲೂಸ್ ಟಾಕ್ ▶▶ ಸಿದ್ದರಾಮಯ್ಯ

- **ಏನ್ ಮುಖ್ಯಮಂತ್ರಿಗಳೇ, ಈ ಸಲ ಬಜೆಟ್‌ನಲ್ಲಿ ಯಾವುದರ ರೇಟ್ ಅನ್ನೂ ಜಾಸ್ತಿ ಮಾಡ್ಲಿಲ್ಲವಲ್ಲ, ಏನ್ ಸಮಾಚಾರ?**
- ಏನ್ ಮಾಡೋದಪ್ಪ, ಎಲ್ಲದರ ರೇಟ್ ಜಾಸ್ತಿ ಮಾಡಿನೂ ಅಧಿಕಾರ ಉಳಿಸ್ಕೊಳ್ಳೋಕೆ ನಾನು ಮೋದಿ ಅಲ್ಲವಲ್ಲ
- **ಸರಿ. ಅದೇನು, ಇರೋ ಬರೋ ಜಾತಿ, ಧರ್ಮಗಳಿಗೆಲ್ಲ ಫಂಡ್ ರಿಲೀಸ್ ಮಾಡಿಬಿಟ್ಟಿದ್ದೀರ, ಏನ್ ಸಮಾಚಾರ?**
- ಇಲ್ಲಾಂದ್ರೆ ರಾಜಕಾರಣ ನಡೀಬೇಕಲ್ಲ, ಅದಕ್ಕೆ ದಾನಗಳಲ್ಲಿ ಶ್ರೇಷ್ಠದಾನ ಅನುದಾನ ಅಂತ ಡಿಸೈಡ್ ಮಾಡಿಬಿಟ್ಟಿದ್ದೀನಿ.
- **ಅಂದಂಗೆ ನಿಮ್ಮ ಸರಕಾರ ಬೀಳ್ಳೋಕೆ ತುಂಬಾ ಜನ ಪಿತೂರಿ ಮಾಡ್ತಾ ಇದ್ದಾರಂತೆ?**
- ಏನ್ ಮಾಡೋದು ಕರ್ನಾಟಕದ ಮುಖ್ಯಮಂತ್ರಿಗಳ ಹಣೆಬರಹನೇ ಇಷ್ಟು, ಅವರಿಗೆ ಆಡಳಿತ ನಡೆಸೋಕಿಂತ ಅಧಿಕಾರ ಉಳಿಸಿಕೊಳ್ಳೋದೇ ದೊಡ್ಡ ಕೆಲಸ.
- **ನಿಮ್ಮವರೇ ನಿಮ್ಮನ್ನ ಕೆಳಗಿಳಿಸಬೇಕು ಅಂತ ನೋಡ್ತಾ ಇದ್ದಾರಂತೆ?**
- ಹೌದು, ಏನ್ ಮಾಡೋಕಾಗುತ್ತೆ. ಶತ್ರುಗಳು ವಿರೋಧ್ ಪಕ್ಷಕ್ಕಿಂತ ನಮ್ಮಲ್ಲೇ ಇರೋದ್ ಜಾಸ್ತಿ. ಪಾರ್ಟಿ ಒಳಗೇ ಪಾರ್ಟಿಷನ್ ಜಾಸ್ತಿ.
- **ಈ ರಾಜಕೀಯ ಹೋಗ್ಲಿ ಬಿಡಿ, ಐಪಿಎಲ್ ಬರ್ತಾ ಇದೆ. ಈ ಸಲ ಆರ್‌ಸಿಬಿ ಮತ್ತೆ ಕಪ್ ಗೆಲ್ಲುತ್ತಾ?**
- ಖಂಡಿತಾ ಗೆಲ್ಲಲೇಬೇಕು. ಇಲ್ಲಾ ಅಂದ್ರೆ ಟೂರ್ನಮೆಂಟ್ ಅರ್ಧ ಮುಗಿದ ಮೇಲೆ ಬೇರೆ ಟೀಮಲ್ಲಿ ಯಾರ್ಯಾರು ಚೆನ್ನಾಗಿ ಆಡ್ತಾ ಇದ್ದಾರೋ **ಅವರನ್ನೆಲ್ಲಾ ಆಪರೇಷನ್ ಹಸ್ತ ಮಾಡಿಸಿ ಆರ್‌ಸಿಬಿಗೆ ಸೇರಿಸಿಕೊಳ್ತೀವಿ**

(ಕಾಲ್ಪನಿಕ ಸಂದರ್ಶನ)

ನೆಟ್ ಪಿಕ್ಸ್

ಊರಿಗೆ ಹೊಸದಾಗಿ ಒಂದು ನಾಟಕದ ಕಂಪನಿ ಬಂದಿತ್ತು. ಆ ಕಂಪನಿ ಮಾಡುತ್ತಿದ್ದ ನಾಟಕ, ಆ ಊರಲ್ಲಿ ಹೌಸ್‌ಫುಲ್ ಆಗಿ ಓಡುತ್ತಿತ್ತು. ಆ ನಾಟಕದಲ್ಲಿ ಅಂಥಾದ್ದೇನಿದೆ ಅಂತ ಊರ ಹೆಂಗಸರು ತುಂಬಾನೇ ಯೋಚನೆ ಮಾಡ್ತಾ ಇದ್ರು. ಯಾಕಂದ್ರೆ ಅವರ ಗಂಡಂದಿರು ಸಂಜೆ ಆಯ್ತು ಅಂದ್ರೆ ಸಾಕು, ನಾಟಕದ ಕಂಪನಿ ಕಡೆಗೆ ಹೊರಟುಬಿಡುತ್ತಿದ್ದರು. ಇದೇನು ವಿಷ್ಯ, ಕಂಡುಹಿಡಿಯಲೇಬೇಕು ಅಂತ ಒಂದು ದಿನ ಎಲ್ಲ ಹೆಂಗಸರೂ ಮಾತಾಡಿಕೊಂಡು ಕಂಪನಿಗೆ ಹೋದರು. ಅಲ್ಲಿ ಅವರು ತಮ್ಮ ಮನೆಯ ಗಂಡಸರು ಮಾತಾಡಿಕೊಳ್ಳುತ್ತಾ ಇದ್ದುದನ್ನ ನೋಡಿದ್ರು. ಅದರಿಂದ ಅವರಿಗೆ ಗೊತ್ತಾದ ವಿಷಯ ಅಂದ್ರೆ, ಆ ನಾಟಕದಲ್ಲಿ ಮುಖ್ಯಪಾತ್ರ ಮಾಡುತ್ತಿದ್ದ ಹುಡುಗಿಯೊಬ್ಬಳ ತುಟಿ ತುಂಬಾ ದಪ್ಪ ಇದ್ದು, ಅದು ಎಲ್ಲ ಗಂಡಸರಿಗೂ ಇಷ್ಟ ಆಗಿ, ಅದನ್ನು ನೋಡೋಕಂತನೇ ಎಲ್ಲಾ ಗಂಡಸರೂ ಬರ್ತಾ ಇದ್ರು ಅನ್ನೋದು. ಸರಿ, ಹೆಂಗಸರೆಲ್ಲಾ ಪ್ಲ್ಯಾನ್ ಮಾಡಿ ಒಂದು ದಿನ ಆ ಹುಡುಗಿಯನ್ನು ಭೇಟಿ ಮಾಡಿ, ''ನೋಡಮ್ಮಾ, ನಿನ್ನಿಂದ ನಮ್ಮ ಸಂಸಾರ ಹಾಳಾಗ್ತಿದೆ'' ಅಂತ ಹೇಳಿದ್ರು. ಅದಕ್ಕೆ ಆ ಹುಡುಗಿ ''ನಾನೇನ್ಮಾಡೋಕಾಗುತ್ತೆ?'' ಅಂದ್ಲು. ಅದಕ್ಕೆ ಹೆಂಗಸರು ಒಂದು ಗಿಡಮೂಲಿಕೆ ಔಷಧ ಕೊಟ್ಟು, ''ಒಂದ್ ಕೆಲ್ಸ ಮಾಡು, ಇದನ್ನ ನಿನ್ನ ತುಟಿಗೆ ಹಚ್ಕೋ, ನಿನ್ನ ತುಟಿಗಳು ಸಣ್ಣ ಆಗ್ತವೆ. ಆದ್ರೆ ಅಪ್ಪಿ ತಪ್ಪಿ ಇದನ್ನ ನುಂಗಬೇಡ, ಮಾತೇ ಬಿದ್ದುಹೋಗುವ ಸಾಧ್ಯತೆ ಇರುತ್ತೆ, ಹುಷಾರು'' ಅಂತ ಹೇಳಿಹೋದರು. ಮರುದಿನ ನಾಟಕ ಶುರು ಆಗೋ ಟೈಮಿಗೆ ಎಲ್ಲಾ ಗಂಡಸರೂ ಬಂದು ಕೂತರು. ಆಗ ನಾಟಕ ಕಂಪನಿಯವನೊಬ್ಬ ಬಂದು ಹೇಳಿದ- ''ನಮ್ಮ ಕಂಪನಿ ಯಜಮಾನರಿಗೆ ಮಾತು ಬಿದ್ದು ಹೋಗಿರುವುದರಿಂದ ನಾಟಕ ಕ್ಯಾನ್ಸಲ್ ಮಾಡಲಾಗಿದೆ''.

ಲೈನ್ ಮ್ಯಾನ್

- **ಇಂದಿನ ಯುವಪೀಳಿಗೆಯ ಆಟಿಟ್ಯೂಡ್**
- ಜೀವನದಲ್ಲಿ ಖುಷಿಮೂಲ ಹುಡುಕ್ರೋ ಅಂದ್ರೆ, ಋಷಿಮೂಲ ಹುಡುಕ್ತಾರೆ.
- **ಒಂದು ಇ-ಮೇಲ್‌ಗೆ ತಕ್ಕ ಉತ್ತರ ಕೊಡೋದು ಅಂದ್ರೆ ಏನು ?**
- YOU MAILED IT, I NAILED IT
- **ತುಂಬಾ ಸುಲಭದ ಕೆಲಸ ಅಂದ್ರೆ, ಯಾವ್ದು?**
- MOMO ಬಗ್ಗೆ MEME ಮಾಡೋದು
- **ಪಬ್ಲಿಕ್ ಟಿವಿ ರಂಗನಾಥ್ ಅವರಿಗೂ ನರೇಂದ್ರ ಮೋದಿಗೂ ಇರೋ ವ್ಯತ್ಯಾಸ**
- ಏನಾದ್ರೂ ಒಳ್ಳೇದಾದ್ರೆ ರಂಗನಾಥ್ ಅವರು 'ಆಲ್‌ರೈಟ್ ಮುಂದಕ್ಕೋಗಣ' ಅಂತಾರೆ
- ಕೆಟ್ಟದ್ದಕ್ಕೆಲ್ಲ ಹಿಂದಿನ ಸರಕಾರವೇ ಹೊಣೆ ಅನ್ನೋ ಮೋದಿ, 'ಹಿಂದಕ್ಕೋಗಣ' ಅಂತಾರೆ.
- **ಎಲ್ಲರ ಬಗ್ಗೆನೂ ಸಂದೇಹ ಪಡುವವನು**
- 'ಅನುಮಾನ್' ಭಕ್ತ
- **ಚಳಿಗಾಲದಲ್ಲಿ ತಿನ್ನೋಕಾಗದ ಚಿಕನ್ ಡಿಷ್**
- 'ಚಿಲ್ಲಿ' ಚಿಕನ್
- **ಮಾತ್ರೆ ತಿನ್ನುವ ಚಟದ ಪರಮಾವಧಿ**
- ಮೆಡಿಕಲ್ ಸ್ಟೋರಿಗೆ ಹೋಗಿ, ಯಾವುದಾದ್ರೂ ಹೊಸ ಟ್ಯಾಬ್ಲೆಟ್ ಬಂದಿದೆಯಾ ಅಂತ ಕೇಳೋದು.
- **ಸದಾ ಉಗುರು ಕಡಿಯುವವನು**
- 'ಉಗುರು'ಗಾಮಿ
- **ಎಂಥಾ ಅನಕ್ಷರಸ್ಥ ಹುಡುಗನ ಎದೆ ಸೀಳಿದರೂ ಎರಡಕ್ಷರ ಇದ್ದೇ ಇರುತ್ತೆ**
- ಯಾವುದಾದರೂ ಹುಡುಗಿಯ ಹೆಸರಿನದ್ದು
- **ದುಬಾರಿ ಕಾರುಗಳನ್ನು ಇನ್‌ಸ್ಟಾಲ್ಮೆಂಟ್‌ನಲ್ಲೇ ತಗೋಬೇಕು**
- ಮೊದಲು ಎಂಜಿನ್, ಆಮೇಲೆ ಬಾಡಿ, ಟೈರು, ಸೀಟು ಹೀಗೆ

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942 Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:11, Issue:59

ಸಮಾಚಾರ ಸಣ್ಣದಲ್ಲ

ಅನಿಲ ಪೂರೈಕೆ ನೆಪ ಸೈಬರ್ ಕ್ರೈಂ ಕೂಪ

ಮುಂಬೈ: ಅಡುಗೆ ಅನಿಲ ಸಿಲಿಂಡರ್ ಪೂರೈಕೆ ವ್ಯತ್ಯಯವಾಗಿರುವ ಸಂದರ್ಭವನ್ನೇ ಸೈಬರ್ ವಂಚಕರು ಗ್ಯಾಸ್ ವಿತರಣೆ ಸಂಸ್ಥೆಗಳ ಅಧಿಕಾರಿಗಳ ಸೋಗಿನಲ್ಲಿ ಎಲ್‌ಪಿಜಿ ಬಳಕೆದಾರರನ್ನು ವಂಚಿಸಿ ಹಣ ವಸೂಲಿ ಮಾಡಲಾರಂಭಿಸಿದ್ದಾರೆ.

ಗ್ರಾಹಕರಿಗೆ ಕರೆ ಮಾಡಿ, ನಿಮ್ಮ ಮನೆ ಗ್ಯಾಸ್ ಕನೆಕ್ಷನ್ ಬಿಲ್ (ಪೈಪ್‌ಲೈನ್‌ನಲ್ಲಿ ಅನಿಲ ಪೂರೈಕೆ) ಬಾಕಿ ಇದೆ. ತಕ್ಷಣವೇ ಹಣ ಪಾವತಿ ಮಾಡಿ. ಇಲ್ಲವಾದರೆ ಪೂರೈಕೆ ಸ್ಥಗಿತಗೊಳಿಸಲಾಗುತ್ತದೆ ಎಂದು ಬೆದರಿಸುತ್ತಾರೆ. ಮೊದಲಿ 20-30 ರು. ಪಾವತಿಸುವಂತೆ ಕೇಳುವ ವಂಚಕರು, ಬಳಿಕ 'ಮಹಾನಗರ್ ಎಪಿಕೆ' ಫೈಲ್ ಡೌನ್‌ಲೋಡ್ ಮಾಡಲು ಸೂಚಿಸುತ್ತಾರೆ. ಫೈಲ್ ಡೌನ್‌ಲೋಡ್ ಮಾಡಿದರೆ ಗ್ರಾಹಕರ ಮೊಬೈಲ್ ಮೇಲೆ ಸೈಬರ್ ವಂಚಕರಿಗೆ ಪೂರ್ಣ ನಿಯಂತ್ರಣ ಸಿಗುತ್ತದೆ. ಬಳಿಕ ಗ್ರಾಹಕರ ಬ್ಯಾಂಕ್ ಖಾತೆಯಿಂದ ನೇರವಾಗಿ ಹಣ ಎಗರಿಸುತ್ತಾರೆ. ಮುಂಬೈನಲ್ಲಿ 4 ದಿನದಲ್ಲಿ ನಾಲ್ವರು ಗ್ರಾಹಕರು ಒಟ್ಟು 26.43 ಲಕ್ಷ ರು. ಕಳೆದುಕೊಂಡಿದ್ದಾರೆ. ದೆಹಲಿ ಮೊದಲಾದೆಡೆಯೂ ಇಂತಹುದೇ ಪ್ರಕರಣಗಳು ನಡೆದಿರುವ ಬಗ್ಗೆ ವರದಿಯಾಗಿದೆ.

ಯುದ್ಧ 15 ದಿನ: ತೈಲ ಧಾರಣೆ ಶೇ.40 ಏರಿಕೆ

ದೆಹಲಿ: ಇರಾನ್ ಮೇಲೆ ಅಮೆರಿಕ-ಇಸ್ರೇಲ್ ಯುದ್ಧ ಆರಂಭಿಸಿ 15 ದಿನಗಳಾಗಿವೆ. ಪರಿಣಾಮವಾಗಿ ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲ ಬೆಲೆ 2 ವಾರದಲ್ಲಿ ಶೇ.41.1ರಷ್ಟು ಏರಿಕೆ ಕಂಡಿದೆ. ಫೆ.27ರಂದು ಕಚ್ಚಾ ತೈಲ ಬೆಲೆ ಬ್ಯಾರಲ್‌ಗೆ 73 ಡಾಲರ್ ನಷ್ಟಿತ್ತು. ಫೆ.28ಕ್ಕೆ ಯುದ್ಧ ಶುರುವಾಯಿತು. ಜತೆಗೆ ಇರಾನ್, ತನ್ನ ನಿಯಂತ್ರಣದಲ್ಲಿರುವ ಹಾರ್ಮುಜ್ ಜಲಸಂಧಿಯಲ್ಲಿ ತೈಲಸಾಗಣೆ ನೌಕೆಗಳು ಹಾದು ಹೋಗುವುದಕ್ಕೆ ನಿರ್ಬಂಧ ವಿಧಿಸಿದ ಬಳಿಕ ಕಚ್ಚಾತೈಲ ಬೆಲೆ 123 ಡಾಲರ್‌ವರೆಗೂ ಏರಿತು. ಬಳಿಕ ಜಿ7 ದೇಶಗಳ ತುರ್ತು ಬಳಕೆ ಸಂಗ್ರಹದಲ್ಲಿನ ಕಚ್ಚಾತೈಲವನ್ನು ಹೆಚ್ಚುವರಿಯಾಗಿ ಮಾರುಕಟ್ಟೆಗೆ ಬಿಡುಗಡೆ ಮಾಡಿದ್ದರಿಂದ ಇಂಧನ ದರ 85-90 ಡಾಲರ್ ಆಸುಪಾಸಿಗೆ ಇಳಿಕೆಯಾಯಿತು. ಶನಿವಾರದ ವಹಿವಾಟಿನಲ್ಲಿ ಕಚ್ಚಾತೈಲ ಧಾರಣೆ ಬ್ಯಾರಲ್‌ಗೆ 103 ಡಾಲರ್‌ಗಳಷ್ಟಿದೆ.

ತೃತೀಯ ಲಿಂಗಿ ಹಕ್ಕು ರಕ್ಷಣಾ ಕಾಯಿದೆ

ದೆಹಲಿ: ಕೇಂದ್ರದ ಎನ್‌ಡಿಎ ಸರಕಾರ ತೃತೀಯ ಲಿಂಗಿಗಳ ರಕ್ಷಣೆ ಮತ್ತು ಅವರ ಹಕ್ಕುಗಳ ಸಂರಕ್ಷಣೆ ಕುರಿತಂತೆ 'ಟ್ರಾನ್ಸ್‌ಜೆಂಡರ್ ಪರ್ಸನ್ಸ್(ಹಕ್ಕುಗಳ ರಕ್ಷಣೆ) ತಿದ್ದುಪಡಿ ಕಾಯಿದೆ 2026' ಹೆಸರಿನ ವಿಧೇಯಕವನ್ನು ಲೋಕಸಭೆಯಲ್ಲಿ ಶುಕ್ರವಾರ ಮಂಡನೆ ಮಾಡಿದೆ. ಸಾಮಾಜಿಕ ಮತ್ತು ನ್ಯಾಯ ಸಚಿವ ವಿರೇಂದ್ರ ಕುಮಾರ್ ಅವರು ತೃತೀಯ ಲಿಂಗಿಗಳ(ಹಕ್ಕುಗಳ ರಕ್ಷಣೆ) ಕಾಯಿದೆ-2019ಕ್ಕೆ ತಿದ್ದುಪಡಿ ಮಾಡಿದ 2026ರ ವಿಧೇಯಕವನ್ನು ಸದನದಲ್ಲಿ ಶುಕ್ರವಾರ ಮಂಡಿಸಿದರು. ತೃತೀಯ ಲಿಂಗಿಗಳು ಯಾರು ಎಂದು ಗುರುತಿಸುವುದು, ಅವರಿಗೆ ಕಾನೂನಿನ ಮೂಲಕ ರಕ್ಷಣೆ ಒದಗಿಸುವುದು, ಅವರ ಹಕ್ಕುಗಳನ್ನು ಸಂರಕ್ಷಣೆ ಮಾಡುವುದು ಈ ವಿಧೇಯಕದ ಪ್ರಮುಖ ಅಂಶಗಳಾಗಿವೆ ಎಂದರು.

ಮಹಾರಾಷ್ಟ್ರ ಶಾಲೆ ಮರಾಠಿ ಕಡ್ಡಾಯ

ಮುಂಬೈ: ಮಹಾರಾಷ್ಟ್ರ ರಾಜ್ಯ ಸರಕಾರ ರಾಜ್ಯದಲ್ಲಿನ ಎಲ್ಲಾ ಬಗೆಯ ಶಾಲೆಗಳಲ್ಲಿಯೂ ಮರಾಠಿ ಭಾಷಾ ಬೋಧನೆಯನ್ನು ಒಂದು ಕಡ್ಡಾಯ ವಿಷಯವಾಗಿ ಸೇರ್ಪಡೆಗೊಳಿಸಿ ಆದೇಶ ಹೊರಡಿಸಿದೆ. ಎರಡನೇ ಭಾಷೆಯಾಗಿಯೋ ಅಥವಾ 3ನೇ ಭಾಷಾ ಪಠ್ಯವಾಗಿಯೋ ಮಕ್ಕಳಿಗೆ ಮರಾಠಿ ಕಲಿಕೆ ಕಡ್ಡಾಯ. ಈ ನಿಯಮವನ್ನು ಉಲ್ಲಂಘಿಸಿದ ಶಾಲೆಯ ವಿರುದ್ಧ ಕಠಿಣ ಕ್ರಮವನ್ನು ಕೈಗೊಳ್ಳಲಾಗುವುದೆಂದೂ ಎಚ್ಚರಿಕೆ ನೀಡಲಾಗಿದೆ ಎಂದು ಶಾಲಾ ಶಿಕ್ಷಣ ಸಚಿವ ದಾದಾಜಿ ಭುಸೆ ವಿಧಾನಸಭೆಗೆ ತಿಳಿಸಿದರು.

'ದೇನಾ' ನೌಕೆ ನಾಶಕ್ಕೆ ಪ್ರತಿಕಾರ: ಇರಾನ್

ಟೆಹರಾನ್: ಹಿಂದೂ ಮಹಾಸಾಗರದಲ್ಲಿ ಇರಾನ್‌ನತ್ತ ಬರುತ್ತಿದ್ದ 'ಐರಿಸ್ ದೇನಾ' ಯುದ್ಧನೌಕೆಯನ್ನು ಅಮೆರಿಕದ ಜಲಾಂತರ್ಗಾಮಿ ಟಾರ್ಪೆಡೊ ಮೂಲಕ ದಾಳಿ ನಡೆಸಿ ಹಾನಿಗೊಳಿಸಿ ಮುಳುಗುವಂತೆ ಮಾಡಿರುವುದಕ್ಕೆ ತೀಕ್ಷ್ಣವಾಗಿ ಪ್ರತಿಕ್ರಿಯಿಸಿರುವ ಇರಾನ್ ಸೇನಾ ಮುಖ್ಯಸ್ಥ ಕಮಾಂಡರ್ ಇನ್ ಚೀಫ್ ಮೇಜರ್ ಜನರಲ್ ಅಮೀರ್ ಹತಾಮಿ, ನಮ್ಮ ಯುದ್ಧನೌಕೆಯ ಯೋಧರ ಸಾವಿಗೆ ಪ್ರತೀಕಾರ ಖಚಿತ ಎಂದು ಎಚ್ಚರಿಕೆ ನೀಡಿದ್ದಾರೆ. ದೇನಾ ನೌಕೆ ಶಾಂತಿ ಕಾರ್ಯಾಚರಣೆ ಪೂರ್ಣಗೊಳಿಸಿ ಇರಾನ್‌ಗೆ ಮರಳುವಾಗ ಅಮೆರಿಕ ದಾಳಿ ಮಾಡಿದೆ ಎಂದು ಹತಾಮಿ ಹೇಳಿಕೆಯನ್ನು ಉಲ್ಲೇಖಿಸಿ ಅಲ್ ಜಜೀರಾ ವರದಿ ಮಾಡಿದೆ. ಐರಿಸ್ ದೇನಾ ಮೇಲಿನ ದಾಳಿಯಲ್ಲಿ ಇರಾನ್‌ನ 87 ನಾವಿಕರು ಮೃತಪಟ್ಟಿದ್ದಾರೆ. ಇರಾನಿನ ವಿದೇಶಾಂಗ ಸಚಿವ ಅಬ್ಬಾಸ್ ಅರಾಘ್ಚಿ ಅವರು ಇದನ್ನು ಸಮುದ್ರದ ದೌರ್ಜನ್ಯ ಎಂದು ಟೀಕಿಸಿದ್ದಾರೆ.

ಇತರೆ 9 ಪ್ರಮುಖರ ಸೆರೆಗೆ ನೆರವಾದರೂ ತಲಾ 1 ಕೋಟಿ ಡಾಲರ್ | ಭಾರೀ ಬಹುಮಾನದ ಆಸೆ ತೋರಿಸಿರುವ ಅಮೆರಿಕದ ಆರ್‌ಎಫ್‌ಜೆ

ಮೊಜ್ತಾಬಾ ತಲೆಗೆ 1 ಕೋಟಿ ಡಾಲರ್

ವಾಷಿಂಗ್ಟನ್: ಇರಾನ್ ದೇಶದ ಮುಖ್ಯ ಧರ್ಮಗುರು ಮತ್ತು ವಿಶ್ವಾದ್ಯಂತದ ಷಿಯಾ ಸಮುದಾಯದ ಸರ್ವೋಚ್ಚ ನಾಯಕ ಮೊಜ್ತಾಬಾ ಖಮೇನಿ ಬಗ್ಗೆ ಸುಳಿವು/ನಿಖರ ಮಾಹಿತಿ ನೀಡಿದವರಿಗೆ 1 ಕೋಟಿ ಡಾಲರ್ (ಭಾರತದ ಲೆಕ್ಕದಲ್ಲಿ 92.47 ಕೋಟಿ ರು.) ಬಹುಮಾನ ನೀಡುವುದಾಗಿ ಅಮೆರಿಕದ ರಕ್ಷಣಾ ಇಲಾಖೆ ಶುಕ್ರವಾರ ಘೋಷಿಸಿದೆ.

ಮೊಜ್ತಾಬಾ ಮತ್ತು ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ ಕಾಪ್ಸ್‌ನ(ಐಆರ್‌ಜಿಸಿ) ಇತರೆ 9 ಪ್ರಮುಖರ ಸೆರೆಗಾಗಿ ಅಮೆರಿಕದ ಡಿಪಾರ್ಟ್‌ಮೆಂಟ್ ಆಫ್ ಸ್ಟೇಟ್ ಡಿಪ್ಲೊಮ್ಯಾಟಿಕ್ ಸೆಕ್ಯುರಿಟಿ ಸರ್ವಿಸ್‌ನ 'ರಿವಾರ್ಡ್ಸ್ ಫಾರ್ ಜಸ್ಟೀಸ್' (ಆರ್‌ಎಫ್‌ಜೆ)ವಿಭಾಗ ತಲಾ 1 ಕೋಟಿ ಡಾಲರ್‌ವರೆಗೂ ನಗದು ಬಹುಮಾನ ನೀಡುವುದಾಗಿ ಘೋಷಿಸಿದೆ.ಈ 10 ವ್ಯಕ್ತಿಗಳು ಪ್ರಪಂಚದಾದ್ಯಂತ ಭಯೋತ್ಪಾದನೆಯನ್ನು ಯೋಜಿಸುವ, ಸಂಘಟಿಸುವ ಮತ್ತು ಕಾರ್ಯಗತಗೊಳಿಸುವ ಐಆರ್‌ಜಿಸಿಯ ವಿವಿಧ ವಿಭಾಗಗಳ ಮುಖ್ಯಸ್ಥರಾಗಿದ್ದಾರೆ. ಇವರ ಬಗೆಗಿನ ಮಾಹಿತಿಯನ್ನು ಟಾರ್ ಆಧಾರಿತ ಟಿಪ್‌ಲೈನ್ ಅಥವಾ ಸಿಗ್ನಲ್ ಮೂಲಕ ಕಳುಹಿಸಿಕೊಡಿ ಎಂದು ಆರ್‌ಎಫ್‌ಜೆ ಕೇಳಿದೆ. ಒಟ್ಟು 10 ಜನ: ಮೊಜ್ತಬಾ ಖಮೇನಿ ಅಲ್ಲದೇ 'ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ಸ್ ಕಾರ್ಪ್'(ಐಆರ್‌ಜಿಸಿ)ನ ಇತರೆ 9 ಪ್ರಮುಖರ ಹೆಸರು-ಹುದ್ದೆಗಳನ್ನೂ

ಕೆಲವರ ಫೋಟೋಗಳನ್ನು 'ಹಿಡಿದುಕೊಟ್ಟವರಿಗೆ/ಮಾಹಿತಿ ನೀಡಿದವರಿಗೆ ಬಹುಮಾನ' ಎಂಬ ಶೀರ್ಷಿಕೆಯಡಿ ಅಮೆರಿಕ ಸರಕಾರ ಘೋಷಣೆ ಮಾಡಿದೆ. ಅವರಲ್ಲಿ ಇರಾನ್ 'ಸ್ಟೇಟ್ ಸುಪ್ರೀಂ ಲೀಡರ್ಸ್ ಆಫೀಸ್'(ಎಸ್‌ಎಲ್‌ಒ)ನ ಸಿಬ್ಬಂದಿಗಳ ಉಪ ಮುಖ್ಯಸ್ಥರಾದ ಅಲಿ ಅಸ್ಗರ್ ಹೆಜಾಝಿ, ಎಸ್‌ಎಲ್‌ಒ ಸಲಹೆಗಾರ ಮೇಜರ್ ಜನರಲ್ ಯಾಹ್ಯಾ ರಹೀಂ ಸಫಾವಿ, ಇರಾನ್ ಸುಪ್ರೀಂ ನ್ಯಾಷನಲ್ ಸೆಕ್ಯುರಿಟಿ ಕೌನ್ಸಿಲ್‌ನ ಕಾರ್ಯದರ್ಶಿ ಮತ್ತು ಎಸ್‌ಎಲ್‌ಒ ಸಲಹೆಗಾರರೂ ಆಗಿರುವ ಅಲಿ ಲಾರಿಜನಿ, ಇರಾನ್ ಸರಕಾರದ ಗುಪ್ತಚರ ಮತ್ತು ಭದ್ರತಾ ವಿಭಾಗದ ಸಚಿವ ಇಸ್ಮೈಲ್ ಖಾತಿಬ್(ಇವರ ಭಾವಚಿತ್ರಗಳೂ ಲಭ್ಯವಿವೆ) ಹಾಗೂ ಇರಾನ್ ಸರಕಾರದ ರಕ್ಷಣಾ ಸಮಿತಿಯ ಕಾರ್ಯದರ್ಶಿ, ಸರ್ವೋಚ್ಚ ನಾಯಕರ ಸಲಹೆಗಾರ, ಎಸ್‌ಎಲ್‌ಒನ ಮಿಲಿಟರಿ ಕಚೇರಿ ಮುಖ್ಯಸ್ಥ ಮತ್ತೊಬ್ಬರು ಐಆರ್‌ಜಿಸಿ ಕಮಾಂಡರ್(ಈ ನಾಲ್ವರ ಹೆಸರು-ಫೋಟೊ ಲಭ್ಯವಿಲ್ಲ) ಪಟ್ಟಿ ಮಾಡಿ ಪ್ರಕಟಿಸಿರುವ ಅಮೆರಿಕ ಸೇನೆ, ಇವರ ಬಂಧನಕ್ಕೆ ನೆರವಾದವರಿಗೆ ಅಥವಾ ನಿಖರ ಮಾಹಿತಿ ಕೊಟ್ಟವರಿಗೆ 1 ಕೋಟಿ ಡಾಲರ್‌ವರೆಗೂ ಬಹಮಾನ ಮೊತ್ತ ನೀಡಲಾಗುವುದು ಎಂದು ಪ್ರಕಟಣೆಯನ್ನು ಶನಿವಾರ ಹೊರಡಿಸಿದೆ.

ಸೌದಿ: ಅಮೆರಿಕ ನೆಲೆಗೆ ಇರಾನ್ ದಾಳಿ

ಟೆಹರಾನ್: ಅಮೆರಿಕ-ಇಸ್ರೇಲ್‌ನ ದಾಳಿಗಳಿಗೆ ಪ್ರತಿಯಾಗಿ ಇರಾನ್ ಸೇನಾಪಡೆಗಳೂ ಗಲ್ಫ್ ದೇಶಗಳಲ್ಲಿನ ಅಮೆರಿಕದ ಸೇನೆ-ವಾಯು ನೆಲೆಗಳ ಮೇಲೆ ತೀವ್ರ ದಾಳಿ ನಡೆಸುವ ಮೂಲಕ ತಿರುಗೇಟು ಕೊಡುತ್ತಿದೆ.

ಮತ್ತೊಂದೆಡೆ 'ಆಪರೇಷನ್ ಟ್ರೂ ಪ್ರಾಮಿಸ್' ಹೆಸರಲ್ಲಿ ಇರಾನ್ ಸೇನಾಪಡೆಗಳು ಪಾಲ್ಮಚಿಮ್ ಮತ್ತು ಒವ್ಡಾದಲ್ಲಿನ ವಾಯು ನೆಲೆಗಳ ಮೇಲೆ ಹಾಗೂ ಷಿನ್‌ಬೆಟ್ ಪ್ರಧಾನ ಕಚೇರಿಯ ಮೇಲೆ ಕ್ಷಿಪಣಿಗಳು ಮತ್ತು ಡ್ರೋನ್‌ಗಳಿಂದ ದಾಳಿ ಮಾಡಿವೆ. ಸೌದಿ ಅರೇಬಿಯಾದಲ್ಲಿರುವ ಅಮೆರಿಕದ ಸೇನೆ ಮತ್ತು ವಾಯು ನೆಲೆಗಳ ಮೇಲೆ ಇರಾನ್ ಶನಿವಾರ ಕ್ಷಿಪಣಿ ಮತ್ತು ಡ್ರೋನ್‌ಗಳಿಂದ ದಾಳಿ ನಡೆಸಿದೆ. ಪರಿಣಾಮ ಈ ದಾಳಿಯಲ್ಲಿ ಅಮೆರಿಕ ವಾಯುಪಡೆಯ 5 ಇಂಧನ ಟ್ಯಾಂಕರ್ ವಿಮಾನಗಳಿಗೆ ಹಾನಿಯಾಗಿದೆ ಎಂದು ಅಮೆರಿಕದ ಇಬ್ಬರು ಅಧಿಕಾರಿಗಳೇ ಹೇಳಿರುವುದಾಗಿ 'ದಿ ವಾಲ್ ಸ್ಟ್ರೀಟ್ ಜರ್ನಲ್' ವರದಿ ಪ್ರಕಟಿಸಿದೆ.

ಸೌದಿಯಲ್ಲಿರುವ ಪ್ರಿನ್ಸ್ ಸುಲ್ತಾನ್ ಏರ್‌ಬೇಸ್‌ನಲ್ಲಿದ್ದ ಅಮೆರಿಕ ವಾಯುಪಡೆಯ 5 ಟ್ಯಾಂಕರ್ ವಿಮಾನಗಳು ಇರಾನ್ ಕ್ಷಿಪಣಿ ದಾಳಿಯಲ್ಲಿ ಭಾಗಶಃ ಹಾನಿಗೀಡಾಗಿವೆ. ತಕ್ಷಣವೇ ವಿಮಾನಗಳನ್ನು ದುರಸ್ತಿ ಕೆಲಸ ಆರಂಭಿಸಲಾಗಿದೆ ಎಂದು ವರದಿ ತಿಳಿಸಿದೆ.

ಭಾರತದ ನಾಗರಿಕರ ನೆರವು ಕೇಳಿದ ಇರಾನ್

ಅಮೆರಿಕ-ಇಸ್ರೇಲ್ ಫೆ.28ರಿಂದ ಇರಾನ್ ವಿರುದ್ಧ ನಡೆಸುತ್ತಿರುವ ಯುದ್ಧದಿಂದ ಸಂಕಷ್ಟಕ್ಕೀಡಾಗಿರುವ ನಾಗರಿಕರಿಗೆ ನೆರವಾಗಲು ದೇಣಿಗೆ ನೀಡುವಂತೆ ದೆಹಲಿಯಲ್ಲಿರುವ ಇರಾನ್ ರಾಯಭಾರ ಕಚೇರಿ ಶನಿವಾರ ಮನವಿ ಮಾಡಿದೆ. ಭಾರತದ ಸೋದರ-ಸೋದರಿಯರು ಯುದ್ಧದ ಕಾರಣ ಇರಾನ್‌ನಲ್ಲಿ ಸಂಕಷ್ಟಕ್ಕೀಡಾಗಿರುವವರಿಗೆ ನೆರವಾಗಬೇಕು ಎಂದು ಇಸ್ಲಾಮಿಕ್ ರಿಪಬ್ಲಿಕ್ ಆಫ್ ಇರಾನ್ ಪರವಾಗಿ ಮನವಿ ಮಾಡುತ್ತಿರುವುದಾಗಿ ರಾಯಭಾರ ಕಚೇರಿ 'ಎಕ್ಸ್' ಸಂದೇಶದಲ್ಲಿ ಬರೆದುಕೊಂಡಿದೆ.

ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಎಷ್ಟೋ ಬಾರಿ ಕಠಿಣ ಎಚ್ಚರಿಕೆ ನೀಡಿದರೂ ಲೆಕ್ಕಿಸದೇ ಇರಾನ್ ಅಮೆರಿಕದ ವಾಯುನೆಲೆಗಳ ಮೇಲೆ ದಾಳಿ ಮಾಡುವುದನ್ನು ಮುಂದುವರಿಸಿದೆ.

ಇರಾನ್ ಫೆ.28ರ ಬಳಿಕ ಇಸ್ರೇಲ್ ಮೇಲೆ ನಡೆಸಿದ ಈವರೆಗಿನ ದಾಳಿಯಿಂದ ಇಸ್ರೇಲ್‌ನ ವಿವಿಧೆಡೆ 13 ಮಂದಿ ಸಾವಿಗೀಡಾಗಿದ್ದಾರೆ, 2 ಸಾವಿರಕ್ಕೂ ಅಧಿಕ ಮಂದಿ ಗಾಯಗೊಂಡಿದ್ದಾರೆ.

ಎನ್‌ಎಸ್‌ಎ ಕಲಂ ರದ್ದು: ಸೋನಂ ಬಿಡುಗಡೆ

ದೆಹಲಿ: ಕೇಂದ್ರಾಡಳಿತ ಪ್ರದೇಶ ಲಡಾಖ್ ಭಾಗದಲ್ಲಿ ಪರಿಸರ ಮತ್ತು ಹವಾಗುಣ ಹೋರಾಟಗಾರ ಎಂದು ಗುರುತಿಸಿಕೊಂಡಿದ್ದ, ಕೇಂದ್ರ ಸರಕಾರದ ವಿರುದ್ಧ ಪ್ರಚೋದನಕಾರಿ ಭಾಷಣ-ವಿಡಿಯೊಗಳ ಮೂಲಕ ಜನರನ್ನು 'ನೇಪಾಳದ ಜನ್ ಝೆಡ್' ರೀತಿಯ ದಂಗೆಗೆ

ಪ್ರಚೋದಿಸುತ್ತಿದ್ದ ಆರೋಪದಡಿ ಬಂಧನಕ್ಕೊಳಗಾಗಿದ್ದ ಸೋನಮ್ ವಾಂಗ್‌ಚುಕ್ ವಿರುದ್ಧ ಹೊರಿಸಲಾಗಿದ್ದ 'ನ್ಯಾಷನಲ್ ಸೆಕ್ಯುರಿಟಿ ಆಕ್ಟ್' ಕಾಯಿದೆಯ ಅಂಶಗಳನ್ನು ಕೈಬಿಡಲಾಗಿದೆ. ಸೋನಂ ವಾಂಗ್‌ಚುಕ್ ವಿರುದ್ಧ ರಾಷ್ಟ್ರೀಯ ಭದ್ರತೆಗೆ ಸಂಬಂಧಿಸಿದ ಕಾಯಿದೆಯಡಿ ಹೊರಿಸಿದ್ದ ಆರೋಪಗಳನ್ನು ಕೈಬಿಡಲಾಗಿದೆ ಎಂದು ಕೇಂದ್ರದ ಗೃಹ ಸಚಿವಾಲಯ ಶನಿವಾರ ಹೇಳಿದೆ. ಪರಿಣಾಮವಾಗಿ, ಎನ್‌ಎಸ್‌ಎ ಆರೋಪಗಳಡಿ ಹಲವು ತಿಂಗಳುಗಳಿಂದ ಬಂಧನದಲ್ಲಿದ್ದ ವಾಂಗ್‌ಚುಕ್‌ಗೆ ಜಾಮೀನು ಪಡೆಯಲು ಅವಕಾಶವಾಗಿದೆ.

ಅಲ್ಲದೇ, ಲಡಾಖ್‌ನಲ್ಲಿ ಉತ್ತಮ ಪರಿಸರ ಕಾಯ್ದುಕೊಳ್ಳುವುದು, ಶಾಂತಿ-ಸ್ಥಿರತೆ, ಪರಸ್ಪರ ವಿಶ್ವಾಸ ವೃದ್ಧಿಗೆ ಕೇಂದ್ರ ಸರಕಾರ ಬದ್ಧವಾಗಿದೆ. ಈ ಸಂಬಂಧ ಹೋರಾಟಗಾರರ ಜತೆ ಅರ್ಥಪೂರ್ಣ ಮಾತುಕತೆಗೂ ಸಿದ್ಧವಿದೆ ಎಂದು ಕೇಂದ್ರ ಸರಕಾರ ಶನಿವಾರ ಹೇಳಿದೆ.

ನಡೆದಿದ್ದು: ಕೇಂದ್ರಾಡಳಿತ ಪ್ರದೇಶ ಲಡಾಖ್‌ಗೆ ರಾಜ್ಯದ ಸ್ಥಾನಮಾನ ನೀಡಬೇಕು ಮತ್ತು ಸಂವಿಧಾನದ 6ನೇ ಪರಿಚ್ಛೇದಕ್ಕೆ ಸೇರಿಸಬೇಕೆಂದು ಆಗ್ರಹಿಸಿ ವಾಂಗ್‌ಚುಕ್ ಮಾಡಿದ್ದ ಉತ್ತೇಜನಕಾರಿ ಭಾಷಣಗಳ ಕಾರಣವಾಗಿ 2025ರ ಸೆ.24ರಂದು ಲೇಹ್‌ನಲ್ಲಿ ನೂರಾರು ಜನರು ಹಿಂಸಾತ್ಮಕ ಪ್ರತಿಭಟನೆಗಿಳಿದಿದ್ದರಿಂದ ನಾಲ್ಕು ಜೀವಗಳ ಬಲಿಯಾಗಿದ್ದವು, 90 ಮಂದಿ ಗಾಯಗೊಂಡಿದ್ದರು. ಸೆ.26ರಂದು ಲೇಹ್‌ನಲ್ಲಿ ನಿರಶನ ನಡೆಸುತ್ತಿದ್ದ ವಾಂಗ್‌ಚುಕ್‌ರನ್ನು 'ಎನ್‌ಎಸ್‌ಎ' ಕಲಂಗಳಡಿಯಲ್ಲಿ ಬಂಧಿಸಲಾಗಿತ್ತು.

ಈಗ ಸೋನಂ ಪತ್ನಿ ಗೀತಾಂಜಲಿ ಆಂಗ್ಮೊ ಅವರು 'ಇನ್ನು ಮುಂದೆ ವಾಂಗ್‌ಚುಕ್ ಯಾವುದೇ ರೀತಿಯ ಪ್ರತಿಭಟನೆ ನಡೆಸುವುದಿಲ್ಲ' ಎಂದು ಲಿಖಿತ ಭರವಸೆ ನೀಡಿದ್ದಾರೆ.

ಭಾರತದ ಕ್ಷಮೆ ಕೇಳಿದ ಅಮೆರಿಕದ ಲೂಮರ್

ದೆಹಲಿ: ಅಮೆರಿಕದ ಅತೀವ ಬಲಪಂಥೀಯ ಹೋರಾಟಗಾರ್ತಿ, ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಪ್ರಬಲ ಬೆಂಬಲಗಾರ್ತಿ, ಪತ್ರಕರ್ತೆ ಲೌರಾ ಲೂಮರ್, ಭಾರತದ ಕ್ಷಮೆ ಕೋರಿದ್ದಾರೆ. ದೆಹಲಿಯಲ್ಲಿ ಆಯೋಜಿತವಾಗಿರುವ ಇಂಡಿಯ ಟುಡೆ ಕಾನ್‌ಕ್ಲೇವ್-2026ರಲ್ಲಿ ಶನಿವಾರ ಭಾಗಿಯಾಗಿದ್ದ ಲೂಮರ್, ಈ ಹಿಂದೆ ತಾವು ಭಾರತದ ವಿರುದ್ಧವಾಗಿ, ವರ್ಣಭೇದ, ನಿಂದನಾತ್ಮಕ

ಅಭಿಪ್ರಾಯಗಳನ್ನು ಜಾಲತಾಣದಲ್ಲಿ ಮಾಡಿದ್ದ ಪೋಸ್ಟ್ ಮಾಡಿದ್ದಕ್ಕಾಗಿ ಭಾರತೀಯರಲ್ಲಿ ಕ್ಷಮೆ ಕೇಳಿದ್ದಾರೆ. ಹಿಂದೂಗಳನ್ನು ಬೆಂಬಲಿಸಿ ಹಲವು ಬಾರಿ ಮಾತನಾಡಿರುವುದಾಗಿಯೂ ಹೇಳಿದ್ದಾರೆ.

ನ್ಯೂಯಾರ್ಕ್ ಮೇಯರ್ ಜೊಹ್ರಾನ್ ಮಮ್ದಾನಿ, ಮಿನ್ನೆಸೋಟಾ ಸಂಸದರಾದ ಇಲ್ಹಾನ್ ಓಮರ್ ಮತ್ತು ಅಟಾರ್ನಿ ಜನರಲ್ ಕೀತ್ ಎಲ್ಲಿಸನ್, ಮಿಚಿಗನ್ ಸಂಸದೆ ರಶೀದಾ ತಾಲಿಬ್ ಮೊದಲಾದ ಅಮೆರಿಕದಲ್ಲಿನ ಮುಸ್ಲಿಂ ನಾಯಕರೆಲ್ಲರಿಗೂ ಪ್ರತಿಯೊಂದು ವಿಚಾರದಲ್ಲೂ ಇಸ್ಲಾಂ ಧರ್ಮವೇ ಮೊದಲು, ಅಮೆರಿಕ-ನೆಲದ ಕಾನೂನು ಹಾಗೂ ಇತರೆ ವಿಚಾರಗಳೆಲ್ಲವೂ ನಂತರದ ಸಂಗತಿಗಳಾಗಿವೆ ಎಂದು ಲೂಮರ್ ಟೀಕಿಸಿದರು.

ಇವರೆಲ್ಲರೂ ಗಾಜಾದ ಹಮಾಸ್ ಉಗ್ರ ಸಂಘಟನೆ, ಇಂಗ್ಲೆಂಡ್‌ನಲ್ಲಿನ ಮುಸ್ಲಿಂ ಬ್ರದರ್ ಹುಡ್‌ಗೆ ಬಹಿರಂಗವಾಗಿಯೆ ಬೆಂಬಲ ಸೂಚಿಸುತ್ತಾರೆ. ಕುರಾನ್ ಮೇಲೆ ಕೈಯಿಟ್ಟು ಅಧಿಕಾರ ವಹಿಸಿಕೊಂಡಿರುವ ಇವರೆಲ್ಲರೂ ಅಮೆರಿಕ ದೇಶಕ್ಕೆ, ಇಲ್ಲಿನ ಕಾನೂನಿಗೆ ಅದೆಷ್ಟು ನಿಷ್ಠಾರಾಗಿರುತ್ತಾರೆಯೋ ಎಂಬ ಬಗ್ಗೆ ನನಗೆ ಬಲವಾದ ಅನುಮಾನವಿದೆ ಎಂದೂ ಲೂಮರ್ ಕಳವಳ ವ್ಯಕ್ತಪಡಿಸಿದರು. ಈಗಲೂ ಅಮೆರಿಕದ 'ಎಚ್1ಬಿ' ವೀಸಾಗೆ ಮಾತ್ರ ತಮ್ಮ ವಿರೋಧ ಮುಂದುವರಿದಿದೆ. ಏಕೆಂದರೆ ವಿದೇಶಿಯರಿಗೆ ನೌಕರಿಗೆ ಒತ್ತಾಸೆ ಕೊಡುವ ಈ ವೀಸಾದಿಂದ ಅಮೆರಿಕದ ಯುವಜನಕ್ಕೆ ನೌಕರಿ ಸಿಗದಂತಾಗಿ ಅನ್ಯಾಯವಾಗುತ್ತಿದೆ ಎಂದೂ ಹೇಳಿದ್ದಾರೆ.

ಟ್ರಂಪ್-ಮೋದಿ-ಬೆಂಜಮಿನ್ ಕಾರಣಕ್ಕೆ ಭಯೋತ್ಪಾದನೆ ಇಳಿಕೆ

ಅಮೆರಿಕದ ಡೊನಾಲ್ಡ್ ಟ್ರಂಪ್, ಭಾರತದ ನರೇಂದ್ರ ಮೋದಿ ಮತ್ತು ಇಸ್ರೇಲ್‌ನ ಬೆಂಜಮಿನ್ ನೆತನ್ಯಾಹು ಅವರುಗಳು ಈಗಿನ ಸಂದರ್ಭದಲ್ಲಿ ಇಲ್ಲದೇ ಹೋಗಿದ್ದರೆ ವಿಶ್ವದಲ್ಲಿ ಭಯೋತ್ಪಾದನೆಯ ಅಟ್ಟಹಾಸವೇ ಜರುತ್ತಿತ್ತು ಎಂದೂ ಲೂಮರ್ ಹೇಳಿದ್ದಾರೆ. ಇಸ್ಲಾಮಿಕ್ ಟೆರರಿಸಂ ಎಂಬುದು ಇಡೀ ವಿಶ್ವಕ್ಕೇ ಕಂಠಕವಾಗಿದೆ. ಭಾರತ, ಅಮೆರಿಕ, ಇಸ್ರೇಲ್ ಭಯೋತ್ಪಾದನೆ ದಾಳಿಗಳಿಗೆ ತುತ್ತಾಗಿವೆ. ಭಯೋತ್ಪಾದನೆ ದಮನ ವಿಚಾರದಲ್ಲಿ ಮೂರೂ ದೇಶಗಳ ಪಾಲುದಾರಿಕೆ ಉತ್ತಮವಾಗಿದೆ. ಭಯೋತ್ಪಾದಕರು ಮತ್ತು ಅವರಿಗೆ ಉತ್ತೇಜನ ಕೊಡುವ ದೇಶಗಳ ವಿರುದ್ಧ ಟ್ರಂಪ್ ಬಲು ಕಠಿಣ ನಿಲುವು ತಳೆದಿದ್ದಾರೆ ಎಂದು ಲೂಮರ್ ಸಮರ್ಥನೆ ಮಾಡಿದ್ದಾರೆ. ವಿಶ್ವಕ್ಕೆ ಇಸ್ಲಾಮಿಕ್ ಭಯೋತ್ಪಾದನೆ ಸರಬರಾಜು ಮಾಡುವುದರಲ್ಲಿ ಪಾಕಿಸ್ತಾನಕ್ಕೆ ಮೊದಲ ಸ್ಥಾನ. ಪಾಕ್ ಬಹಿರಂಗವಾಗಿಯೇ ಜಿಹಾದ್‌ಗೆ ಬೆಂಬಲ ನೀಡುತ್ತದೆ. ವಿಶ್ವದ ಹಲವೆಡೆ ನಡೆದಿರುವ ಭಯೋತ್ಪಾದಕ ದಾಳಿಗಳ ಹಿಂದೆ ಪಾಕಿಸ್ತಾನದ ಕೈವಾಡವಿದೆ. ಹಾಗಾಗಿ ಆ ದೇಶದ ಪ್ರಧಾನಿ ಶೆಹಬಾಜ್ ಷರೀಫ್‌ರನ್ನು ಡೊನಾಲ್ಡ್ ಟ್ರಂಪ್ ಬೆಂಬಲಿಸಬಾರದಾಗಿತ್ತು,

ಬೇಜವಾಬ್ದಾರಿಯ ಪಕ್ಷ: ಅಸ್ಸಾಂ ಸಭೆಯಲ್ಲಿ ಪ್ರಧಾನಿ ಮೋದಿ ವಾಗ್ದಾಳಿ

ಬರಾಕ್ ಕಣಿವೆ ದುರ್ಬಲಗೊಳಿಸಿದ ಕಾಂಗ್ರೆಸ್

ಪ್ರಧಾನಿ ನರೇಂದ್ರ ಮೋದಿ ಅವರು ಅಸ್ಸಾಂನಲ್ಲಿ ಶನಿವಾರ 22864 ಕೋಟಿ ರು. ವೆಚ್ಚದ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಿದ ಬಳಿ ಅವರನ್ನು ಸಿಎಂ ಹಿಮಂತ ಬಿಸ್ವ ಶರ್ಮಾ ಮತ್ತು ಅವರ ಸಚಿವ ಸಂಪುಟ ಸಹೋದ್ಯೋಗಿಗಳು ಸನ್ಮಾನಿಸಿದರು.

ಸಿಲ್ಚಾರ್: ಪ್ರಸ್ತುತ ಇರಾನ್ ವಿರುದ್ಧದ ಅಮೆರಿಕ-ಇಸ್ರೇಲ್ ಯುದ್ಧ ಸೇರಿದಂತೆ ಜಾಗತಿಕ ಸಂಘರ್ಷಗಳಿಂದ ದೇಶದ ನಾಗರಿಕರ ಮೇಲಾಗುವ ಪರಿಣಾಮಗಳನ್ನು ಕಡಿಮೆ ಮಾಡಲು ಕೇಂದ್ರ ಸರಕಾರ ಕೆಲಸ ಮಾಡುತ್ತಿದೆ. ಆದರೆ, ಈ ಯುದ್ಧವನ್ನೇ ನೆಪವಾಗಿಸಿಕೊಂಡು ದೇಶದಲ್ಲಿ ಎಲ್‌ಪಿಜಿ ಕೊರತೆಯಾಗಿದೆ ಎಂದು ಜನರಲ್ಲಿ ಭೀತಿ ಉಂಟು ಮಾಡಲು ಕಾಂಗ್ರೆಸ್ ಯತ್ನಿಸುತ್ತಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಶನಿವಾರ ಆರೋಪಿಸಿದರು.

ಅಸ್ಸಾಂನ ಸಿಲ್ಚಾರ್‌ನಲ್ಲಿ ಸಾರ್ವಜನಿಕ ಸಭೆಯಲ್ಲಿ ಮಾತನಾಡಿದ ಮೋದಿ, ಪ್ರಮುಖ ಪ್ರತಿಪಕ್ಷವಾದ ಕಾಂಗ್ರೆಸ್ 'ಬೇಜವಾಬ್ದಾರಿಯಿಂದ' ವರ್ತಿಸುತ್ತಿದೆ ಎಂದು ಕಿಡಿಕಾರಿದರು.

ಈಶಾನ್ಯ ಭಾರತವನ್ನು ಕಾಂಗ್ರೆಸ್ ದಶಕಗಳಿಂದ ನಿರ್ಲಕ್ಷಿಸಿದೆ. ದೇಶದ ಸ್ವಾತಂತ್ರ್ಯಗೊಂಡ ವೇಳೆ ಗಡಿಗಳನ್ನು ಗುರುತಿಸುವ ಸಂದರ್ಭ ಆಗಿನ ಆಡಳಿತ ಪಕ್ಷವಾಗಿದ್ದ ಕಾಂಗ್ರೆಸ್ ಎಡವಿದೆ. ಪರಿಣಾಮವಾಗಿ ಬರಾಕ್ ಕಣಿವೆಯು ಸಮುದ್ರಕ್ಕೆ ನೇರ ಪ್ರವೇಶವನ್ನು ಕಳೆದುಕೊಳ್ಳುವಂತಾಯಿತು. ಬರಾಕ್ ಕಣಿವೆ ಒಂದು ಕಾಲದಲ್ಲಿ ವ್ಯಾಪಾರ ಮತ್ತು ವಾಣಿಜ್ಯದ ಪ್ರಮುಖ ಕೇಂದ್ರವಾಗಿತ್ತು. ಆದರೆ, ಕಾಂಗ್ರೆಸ್ ಬರಾಕ್ ಕಣಿವೆಯನ್ನು ದುರ್ಬಲಗೊಳ್ಳುವಂತೆ ಮಾಡಿತು ಎಂದು ಮೋದಿ ದೂಷಿಸಿದರು. ಈಗ ಬಿಜೆಪಿ ಸರಕಾರ ಈ ಪರಿಸ್ಥಿತಿಯನ್ನು ಬದಲಿಸುವ ಕೆಲಸ ಮಾಡುತ್ತಿದೆ ಎಂದರು.

ಕಾಂಗ್ರೆಸ್ ಅಸ್ಸಾಂ ಸೇರಿದಂತೆ ಈಶಾನ್ಯದ ರಾಜ್ಯಗಳ ಬಗ್ಗೆ ಯಾವುದೇ ಚಿಂತನೆ ಇಲ್ಲ, ಕೇವಲ ಮೋದಿಯನ್ನು ನಿಂದಿಸುವುದು, ವದಂತಿ ಹರಡಿ ಜನರನ್ನು ದಾರಿ ತಪ್ಪಿಸುವುದಷ್ಟೇ ಅದರ ಕೆಲಸವಾಗಿದೆ ಎಂದು ಕುಟುಕಿದರು.

ಮೋದಿ ರ‍್ಯಾಲಿಗೆ ಟಿಎಂಸಿ ಅಡ್ಡಿ: ಕಲ್ಲೆಸೆತ- ಗಾಯ

ಕೋಲ್ಕತ್ತ: ಅಸ್ಸಾಂ ರಾಜ್ಯ ಪ್ರವಾಸದ ಬಳಿಕ ಪ್ರಧಾನಿ ನರೇಂದ್ರ ಮೋದಿ ಅವರು ಪಶ್ಚಿಮ ಬಂಗಾಳಕ್ಕೆ ತೆರಳಿದ್ದು, ಕೋಲ್ಕತ್ತದಲ್ಲಿ ಬೃಹತ್ ಸಾರ್ವಜನಿಕ ಸಭೆಯನ್ನುದ್ದೇಶಿಸಿ ಮಾತನಾಡಿದ್ದಾರೆ.

ನಗರದ ಬ್ರಿಗೇಡ್ ಪರೇಡ್ ಮೈದಾನದಲ್ಲಿ ಆಯೋಜಿಸಲಾಗಿದ್ದ ಪ್ರಧಾನಿ ಮೋದಿ ಅವರ ರ‍್ಯಾಲಿ ಆರಂಭಕ್ಕೆ ಒಂದು ಗಂಟೆಗೂ ಮುನ್ನ ಕೋಲ್ಕತ್ತ ನಗರದ ಕೇಂದ್ರ ಭಾಗವಾದ ಗಿರೀಶ್ ಪಾರ್ಕ್ ಬಳಿ ತೃಣಮೂಲ ಕಾಂಗ್ರೆಸ್(ಟಿಎಂಸಿ) ಪಕ್ಷ ಮತ್ತು ಭಾರತೀಯ ಜನತಾ ಪಕ್ಷದ ಕಾರ್ಯಕರ್ತರ ನಡುವೆ ಘರ್ಷಣೆ ಉಂಟಾಗಿದೆ.

ಪ್ರಧಾನಿ ಮೋದಿ ಅವರ ಬೃಹತ್ ರ‍್ಯಾಲಿ ಹಿನ್ನೆಲೆಯಲ್ಲಿ ದೊಡ್ಡ ಮೆರವಣಿಗೆಯಲ್ಲಿ ಸಾಗಿಬರುತ್ತಿದ್ದ ಬಿಜೆಪಿ ಕಾರ್ಯಕರ್ತರು, ಬೆಂಬಲಿಗರ ಮೇಲೆ ಟಿಎಂಸಿ ಕಾರ್ಯಕರ್ತರು ಮರೆಯಿಂದ ಕಲ್ಲೆಸೆದಿದ್ದಾರೆ. ಪರಿಣಾಮ, ಒಬ್ಬರು ಪೊಲೀಸ್ ಮತ್ತು ಒಬ್ಬ ಬಿಜೆಪಿ ಬೆಂಬಲಿಗನಿಗೆ ಗಾಯವಾಗಿದೆ.

ಬಿಜೆಪಿ ಕಾರ್ಯಕರ್ತರು ಪ್ರಧಾನಿ ಪರ ಘೋಷಣೆ ಕೂಗುತ್ತಾ ರ‍್ಯಾಲಿ ನಡೆಯಲಿದ್ದ ಮೈದಾನಕ್ಕೆ ಹೋಗುತ್ತಿದ್ದಾಗ ಮೆರವಣಿಗೆ ಮೇಲೆ ಮರೆಯಿಂದ ಕಲ್ಲುಗಳನ್ನು ಎಸೆದು ಕಾರ್ಯಕರ್ತರನ್ನು ಗಾಯಗೊಳಿಸಿದ್ದಾರೆ. ಅಲ್ಲದೇ, ಜತೆಗೆ ಬಿಜೆಪಿಯನ್ನು, ಪ್ರಧಾನಿ ಮೋದಿ ಅವರನ್ನು, ಕಾರ್ಯಕರ್ತರನ್ನು ನಿಂದಿಸಿದರು ಎಂದು ಬಿಜೆಪಿ ನಾಯಕರು ಆರೋಪಿಸಿದ್ದಾರೆ.

ಬಿಜೆಪಿ ಮೆರವಣಿಗೆ ಮುಂದಕ್ಕೆ ಸಾಗದಂತೆ ತಡೆಯಲು ಟಿಎಂಸಿ ಕಾರ್ಯಕರ್ತರು ಯತ್ನಿಸಿದಾಗ ಎರಡೂ ಪಕ್ಷಗಳ ಕಾರ್ಯಕರ್ತರ ನಡುವೆ ಘರ್ಷಣೆಯಾಗಿದೆ. ಪರಿಸ್ಥಿತಿಯನ್ನು ನಿಯಂತ್ರಣಕ್ಕೆ ತರಲು ಸ್ಥಳದಲ್ಲಿ ದೊಡ್ಡ ಪ್ರಮಾಣದಲ್ಲಿ ಪೊಲೀಸ್ ಪಡೆ ನಿಯೋಜಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಟಿಎಂಸಿ ಶೀಘ್ರ ಸರ್ವನಾಶ: ಮೋದಿ ಗುಡುಗು

ಜನವಿರೋಧಿ ಪಕ್ಷವಾದ ತೃಣಮೂಲ ಕಾಂಗ್ರೆಸ್(ಟಿಎಂಸಿ) ಪಕ್ಷವು ಶೀಘ್ರದಲ್ಲೇ ಸರ್ವನಾಶವಾಗಲಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಗುಡುಗಿದರು. ಕೋಲ್ಕತ್ತ ನಗರದಲ್ಲಿನ ಸಾರ್ವಜನಿಕ ಸಭೆಯಲ್ಲಿ ಶನಿವಾರ ಮಧ್ಯಾಹ್ನ ಮಾತನಾಡಿದ ಅವರು, ಇಂದು ನನ್ನ ಸಭೆಗೆ ಜನರು ಬಾರದಂತೆ ತಡೆಯಲು ಟಿಎಂಸಿ ಯತ್ನಿಸಿದೆ. ರಸ್ತೆಗಳನ್ನು ಅಲ್ಲಲ್ಲಿ ತಡೆ ಮಾಡಿಸಿದೆ. ವಾರದ ಹಿಂದೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಗುವಾಹಟಿ ಸಮೀಪದ ಪಟ್ಟಣದಲ್ಲಿ ಬುಡಕಟ್ಟು ಸಮಾವೇಶಕ್ಕೆ ಆಗಮಿಸಿದ್ದಾಗಲೂ ಅವರಿಗೂ ಟಿಎಂಸಿ ನೇತೃತ್ವದ ಸರಕಾರದ ಅಪಮಾನ ಮಾಡಿದೆ. ಇಂಥ ಪಕ್ಷಕ್ಕೆ ಜನರೇ ತಕ್ಕ ಪಾಠ ಕಲಿಸಲಿದ್ದಾರೆ ಎಂದು ಮೋದಿ ಕಿಡಿಕಾರಿದರು.

1 ಸಾವಿರ ಅಪರಾಧ ಕಲಂ ರದ್ದು: ತೇಜಸ್ವಿ ಶಿಫಾರಸು

ದೆಹಲಿ: ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರದ ಬಿಜೆಪಿ ಸದಸ್ಯ ತೇಜಸ್ವಿ ಸೂರ್ಯ ನೇತೃತ್ವದ 'ಜನ್ ವಿಶ್ವಾಸ್ ವಿಧೇಯಕ ಪರಿಶೀಲನಾ ಸಮಿತಿ'ಯು 'ಜನ್ ವಿಶ್ವಾಸ್(ಪ್ರಸ್ತಾವಗಳ ತಿದ್ದುಪಡಿ) ವಿಧೇಯಕ-2025'ಕ್ಕೆ ಸಂಬಂಧಿಸಿದ ವರದಿಯನ್ನು ಲೋಕಸಭೆಯಲ್ಲಿ ಮಂಡನೆ ಮಾಡಿದೆ.

ಸರಾಗವಾಗಿ ಜೀವನ ನಡೆಸುವುದು ಮತ್ತು ಸುಲಭವಾಗಿ ವ್ಯಾಪಾರ ವಹಿವಾಟು ನಡೆಸುವುದಕ್ಕೆ ಅನುಕೂಲವಾಗಿಸುವ ಅಂಶಗಳುಳ್ಳ ಶಿಫಾರಸು ಅಂಶಗಳನ್ನು ಸಂಸದ ತೇಜಸ್ವಿ ಸೂರ್ಯ ಅವರು ಸಮಿತಿ ಪರವಾಗಿ ಸದನದಲ್ಲಿ

ಶುಕ್ರವಾರ ಮಂಡಿಸಿದರು. ಜನ ಸಾಮಾನ್ಯರ ದಿನನಿತ್ಯದ ವಹಿವಾಟುಗಳಿಗೆ ಸಂಬಂಧಿಸಿದ ವಿವಿಧ ವಲಯಗಳಿಗೆ ಸಣ್ಣ ಪುಟ್ಟ ತಪ್ಪುಗಳನ್ನೂ ದೊಡ್ಡ ಅಪರಾಧಗಳಂತೆ ಪರಿಗಣಿಸಿದ್ದ ಹಿಂದಿನ ಕಾಯಿದೆಯಿಂದ ಕೈಬಿಡುವುದಕ್ಕೆ ಅಗತ್ಯ ಶಿಫಾರಸುಗಳನ್ನು ಮಾಡಲಾಗಿದೆ.

ಮುನಿಸಿಪಲ್ ಆಡಳಿತ, ಮೋಟಾರು ವಾಹನಗಳ ನಿಯಂತ್ರಣ, ಎಂಎಸ್‌ಎಂಇ, ವಿದ್ಯುತ್, ಜವಳಿ, ಕೃಷಿ ಸಂಸ್ಕರಣೆ ಮತ್ತು ಮೆಟ್ರಾಲಜಿಗೆ ಸಂಬಂಧಿಸಿದ ಕಾಯಿದೆಯನ್ನು ವಾಣಿಜ್ಯ ಮತ್ತು ಕೈಗಾರಿಕೆಗಳ ಸಚಿವ ಪಿಯೂಶ್ ಗೋಯಲ್ ಅವರು 2025ರ ಆಗಸ್ಟ್ 18ರಂದು ಲೋಕಸಭೆಯಲ್ಲಿ ಮಂಡಿಸಿದ್ದರು. ಆ ಬಳಿಕ ಅದನ್ನು ಅದೇ ದಿನ ವಿಶೇಷ ಸಮಿತಿಯಿಂದ ಪರಿಶೀಲನೆಗೆ ಒಳಪಡಿಸಲು ನಿರ್ಧರಿಸಲಾಗಿತ್ತು.

ಅದರ ಬೆನ್ನಲ್ಲೇ ಅಕ್ಟೋಬರ್ 1ರಂದು ಸಂಸದ ತೇಜಸ್ವಿ ಸೂರ್ಯ ನೇತೃತ್ವದಲ್ಲಿ ಈ ವಿಧೇಯಕದ ಪರಿಶೀಲನೆಗೆ ವಿಶೇಷ ಸಮಿತಿ ರಚಿಸಲಾಗಿತ್ತು. ಆ ಸಮಿತಿಯು ಈಗ 1000 ಕ್ರಿಮಿನಲ್ ಅಫೆನ್ಸ್‌ಗಳನ್ನು ಹೊಸ ವಿಧೇಯಕದಿಂದ ರದ್ದು ಮಾಡಬಹುದಾಗಿದೆ ಎಂದು ಶಿಫಾರಸು ಮಾಡಿರುವ ವರದಿಯನ್ನು ಸದನದಲ್ಲಿ ಮಂಡಿಸಿದೆ.

ನಿಯಮಗಳ ಪಾಲನೆಯಲ್ಲಿ ನಿರ್ಲಕ್ಷ್ಯ ರೀತಿಯ ಸಣ್ಣಪುಟ್ಟ ಲೋಪಗಳನ್ನೂ ದೊಡ್ಡ ಅಪರಾಧಗಳಂತೆ ಪರಿಗಣಿಸಿ ದಂಡಿಸುವ ಕಲಂಗಳನ್ನು ರದ್ದುಗೊಳಿಸಲು ಶಿಫಾರಸು ಮಾಡಲಾಗಿದೆ. ಆ ಮೂಲಕ ಸಾರ್ವಜನಿಕರ ನಿತ್ಯದ ಜೀವನದಲ್ಲಿನ ಕೆಲವು ಸರಳ ಅಡೆತಡೆಗಳನ್ನು ನಿವಾರಿಸುವ, ಆ ಮೂಲಕ ನಿತ್ಯದ ಬದುಕನ್ನು-ವಹಿವಾಟುಗಳನ್ನು ಸರಾಗಗೊಳಿಸುವ ಪ್ರಯತ್ನ ಮಾಡಲಾಗಿದೆ ಎಂದು ಸಂಸದ ತೇಜಸ್ವಿ ಸೂರ್ಯ ಸದನಕ್ಕೆ ತಿಳಿಸಿದರು.

ಅಸ್ಸಾಂ: 166 ಕಿಮೀ ಎಕ್ಸ್‌ಪ್ರೆಸ್‌ವೇಗೆ ರು.22,864 ಕೋಟಿ ವೆಚ್ಚ
8 ಗಂಟೆ ಪಯಣ 5 ಗಂಟೆಗೆ ಇಳಿಕೆ: ಪ್ರಧಾನಿ ನರೇಂದ್ರ ಮೋದಿ

ಶಿಲ್ಲಾಂಗ್-ಸಿಲ್ಚಾರ್ ಕಾರಿಡಾರ್‌ಗೆ ಪ್ರಧಾನಿ ಶಂಕುಸ್ಥಾಪನೆ

ಅಸ್ಸಾಂ: ಅಸ್ಸಾಂ ರಾಜ್ಯದ ಸಿಲ್ಚಾರ್‌ನಲ್ಲಿ 166 ಕಿಮೀ ಉದ್ದದ, 22,864 ಕೋಟಿ ರು. ವೆಚ್ಚದ 'ಸಿಲ್ಚಾರ್-ಶಿಲ್ಲಾಂಗ್-ಗುವಾಹಟಿ ಕಾರಿಡಾರ್' ಯೋಜನೆಗೆ ಪ್ರಧಾನಿ ನರೇಂದ್ರ ಮೋದಿ ಅವರು ಶನಿವಾರ ಶಿಲಾನ್ಯಾಸ ನೆರವೇರಿಸಿದರು.

ಇದು ಈಶಾನ್ಯ ಭಾರತದ ಮೊದಲ 'ಎಂಟ್ರಿ ಕಂಟ್ರೋಲ್ಡ್-ಗ್ರೀನ್ ಫೀಲ್ಡ್-4 ಲೇನ್ ಹೈಸ್ಪೀಡ್ ಕಾರಿಡಾರ್' ಆಗಲಿದೆ. ಈ ಮಾರ್ಗವು ಮೇಘಾಲಯ-ಅಸ್ಸಾಂ ನಡುವಿನ ರಸ್ತೆ ಸಂಪರ್ಕದಲ್ಲಿ ಭಾರೀ ಸುಧಾರಣೆ ತರಲಿದೆ. ಯೋಜನೆ ಪೂರ್ಣಗೊಂಡ ನಂತರ, ಗುವಾಹಟಿ ಮತ್ತು ಸಿಲ್ಚಾರ್ ನಡುವಿನ ಅಂತರ ತಗ್ಗಲಿದೆ. ಎರಡೂ ಮಹಾನಗರದ ನಡುವಿನ ಪ್ರಯಾಣದ ಸಮಯ ಈಗ 8.30 ಗಂಟೆಗಳಷ್ಟಿದ್ದು, ಕಾರಿಡಾರ್ ಪೂರ್ಣಗೊಂಡ ಬಳಿಕ 5 ಗಂಟೆಗೆ ತಗ್ಗಲಿದೆ ಎನ್ನಲಾಗಿದೆ.

ಈ ಹೈ-ಸ್ಪೀಡ್ ಕಾರಿಡಾರ್‌ನಿಂದಾಗಿ ಈ ಭಾಗದಲ್ಲಿ ಆರ್ಥಿಕ ಅಭಿವೃದ್ಧಿ ವೇಗಗೊಳ್ಳಲಿದೆ. ಗಡಿಯಾಚೆಗಿನ ವ್ಯಾಪಾರ ಹೆಚ್ಚಲಿದೆ. ಪ್ರವಾಸೋದ್ಯಮ, ಕೈಗಾರಿಕೆ ಮತ್ತು ಲಾಜಿಸ್ಟಿಕ್ಸ್ ವಲಯಗಳಿಗೆ ಹೆಚ್ಚು ಪ್ರಯೋಜನ ನೀಡಲಿದೆ ಎನ್ನಲಾಗಿದೆ.

ಶಿಲ್ಲಾಂಗ್-ಸಿಲ್ಚಾರ್ ಕಾರಿಡಾರ್ ಮಾತ್ರವಲ್ಲದೇ ಈ ಪ್ರದೇಶದಲ್ಲಿ ರಸ್ತೆ-ರೈಲು ಮಾರ್ಗ ಅಭಿವೃದ್ಧಿ ಅಥವಾ ಕಾಲೇಜು ಸ್ಥಾಪನೆ ಮೊದಲಾದ ಯೋಜನೆಗಳು ಬರಾಕ್ ಕಣಿವೆಯನ್ನು ಈಶಾನ್ಯ ಭಾರತದ ಪ್ರಮುಖ ಲಾಜಿಸ್ಟಿಕ್ಸ್ ಮತ್ತು ವ್ಯಾಪಾರದ ಕೇಂದ್ರವಾಗಿಸಲಿವೆ. ಈ ಎಲ್ಲಾ ಅಭಿವೃದ್ಧಿ ಯೋಜನೆಗಳಿಂದಾಗಿ ಈ ಪ್ರದೇಶದ ಯುವಕರಿಗೆ ಉದ್ಯೋಗ ಮತ್ತು ಸ್ವ-ಉದ್ಯೋಗದ ಅವಕಾಶಗಳು ಹೆಚ್ಚಲಿವೆ ಎಂದು ಪ್ರಧಾನಿ ಮೋದಿ ಹೇಳಿದ್ದಾರೆ.

ಸಿಲ್ಚಾರ್-ಶಿಲ್ಲಾಂಗ್-ಗುವಾಹಟಿ ಎಕ್ಸ್‌ಪ್ರೆಸ್ ವೇ ವೈಶಿಷ್ಟ್ಯ

ಯೋಜನೆ ವೆಚ್ಚ ಕೋಟಿ ರು.	22,864
ಭೂಸ್ವಾಧೀನಕ್ಕೆ ಕೋಟಿ ರು.	12,087
ಎಕ್ಸ್‌ಪ್ರೆಸ್‌ವೇ ಉದ್ದ ಕಿಮೀ	166
ದೊಡ್ಡ ಸೇತುವೆ	19
ಸಣ್ಣ ಸೇತುವೆ	15
ಕಲ್ವರ್ಟ್ಸ್	326
ಅಂಡರ್‌ಪಾಸ್	22
ಓವರ್ ಪಾಸ್	26
ವಯಾಡಕ್ಟ್	34
ಯೋಜನೆ ಪೂರ್ಣ	2029-30

4 ವರ್ಷಕ್ಕೆ ಪೂರ್ಣ: ಈ ಕಾರಿಡಾರ್‌ಗಾಗಿ ಭೂಸ್ವಾಧೀನಕ್ಕೇ 12,087 ಕೋಟಿ ರು. ವಿನಿಯೋಗಿಸಲಾಗಿದೆ. ಹಾಗಾಗಿ ಯೋಜನೆ ವೆಚ್ಚ 22,864 ಕೋಟಿ ರು.ಗೆ ಮುಟ್ಟಿದೆ. 2029-30ರ ವೇಳೆಗೆ ಯೋಜನೆ ಪೂರ್ಣಗೊಳ್ಳಲಿದೆ.

ಸಮಾಚಾರ ಸಣ್ಣದಲ್ಲ

ಪಿಎಂ ಕಿಸಾನ್ ಯೋಜನೆ: ಫಲಾನುಭವಿಗಳ ಸಂಖ್ಯೆ ಇಳಿಕೆ

ದೆಹಲಿ: ಪಿಎಂ ಕಿಸಾನ್ ಸಮ್ಮಾನ್ ಯೋಜನೆಯಡಿ ಕರ್ನಾಟಕದಲ್ಲಿ ಫಲಾನುಭವಿಗಳ ಸಂಖ್ಯೆ ಕಳೆದ ಐದು ವರ್ಷಗಳಲ್ಲಿ 10 ಲಕ್ಷದಷ್ಟು ಕುಸಿತ ಕಂಡಿದೆ. ರಾಜ್ಯಸಭೆಯಲ್ಲಿ ಪ್ರಶ್ನೋತ್ತರ ಅವಧಿಯಲ್ಲಿ ಕಾಂಗ್ರೆಸ್ ಸದಸ್ಯ ರಣದೀಪ್ ಸಿಂಗ್ ಸುರ್ಜೇವಾಲಾ ಕೇಳಿದ ಪ್ರಶ್ನೆಗೆ ಕೃಷಿ ಖಾತೆ ರಾಜ್ಯ ಸಚಿವ ಭಗೀರಥ್ ಚೌಧರಿ ಈ ಬಗ್ಗೆ ಉತ್ತರ ನೀಡಿದ್ದಾರೆ. ಆಯಾ ರಾಜ್ಯ ಹಾಗೂ ಕೇಂದ್ರಾಡಳಿತ ಪ್ರದೇಶಗಳು ಪಿಎಂ-ಕಿಸಾನ್ ಪೋರ್ಟಲ್‌ನಲ್ಲಿ ಅಪ್ಲೋಡ್ ಮಾಡಿದ ಅರ್ಹ ಫಲಾನುಭವಿಗಳ ಪಟ್ಟಿ ಆಧರಿಸಿ ಹಣ ಬಿಡುಗಡೆ ಮಾಡಲಾಗುತ್ತದೆ. ಜಮೀನಿನಲ್ಲಿ ಬಿತ್ತನೆ, ಇ-ಕೆವೈಸಿ, ಬ್ಯಾಂಕ್ ಖಾತೆಗೆ ಆಧಾರ್ ಸಂಖ್ಯೆ ಜೋಡಣೆ ಮಾಡದಿರುವುದು, ಮೃತ ಫಲಾನುಭವಿಗಳು ಮತ್ತಿತರ ಕಾರಣಗಳಿಂದಾಗಿ ಫಲಾನುಭವಿಗಳ ಪಟ್ಟಿಯನ್ನು ಪರಿಷ್ಕರಣೆ ಮಾಡಲಾಗುತ್ತದೆ ಎಂದು ಅವರು ಸ್ಪಷ್ಟಪಡಿಸಿದ್ದಾರೆ.

ಬಿಸಿಲ ತಾಪದಿಂದ ರಕ್ಷಣೆಗೆ ಆರೋಗ್ಯ ಇಲಾಖೆ ಸೂಚನೆ

ಬೆಂಗಳೂರು: ರಾಜ್ಯದಲ್ಲಿ ತಾಪಮಾನ ಹೆಚ್ಚುತ್ತಿರುವ ಕಾರಣ, ಬಿಸಿಲಿನಿಂದ ಮಕ್ಕಳು, ವೃದ್ಧರು ಹಾಗೂ ಗರ್ಭಿಣಿಯರ ರಕ್ಷಣೆಗೆ ಆದ್ಯತೆ ನೀಡುವಂತೆ ಆರೋಗ್ಯ ಇಲಾಖೆ ಸೂಚಿಸಿದೆ. ಹವಾಮಾನ ಇಲಾಖೆ ಪ್ರಕಾರ ಈ ಬಾರಿ ಬೇಸಿಗೆ ಅವಧಿಯಲ್ಲಿ ಅಧಿಕ ಉಷ್ಣಾಂಶ ವರದಿಯಾಗುವ ಸಾಧ್ಯತೆಯಿದೆ. ಸೂರ್ಯನ ವಿಪರೀತ ಶಾಖದಿಂದ ರಕ್ಷಿಸಿಕೊಳ್ಳಬೇಕಿದ್ದು, ಅಧಿಕ ಬಿಸಿಲಿರುವ ಅವಧಿಯಲ್ಲಿ ಹೊರಗಡೆ ಹೋಗುವುದನ್ನು ತಪ್ಪಿಸಬೇಕಿದೆ. ಮಧ್ಯಾಹ್ನ 12ರಿಂದ 3 ಗಂಟೆಯವರೆಗೆ ಬಿಸಿಲು ಹೆಚ್ಚಿರುತ್ತದೆ. ಬಿಸಿಗಾಳಿಯಿಂದ ದೇಹದಲ್ಲಿ ನೀರಿನ ಅಂಶ ಕಡಿಮೆಯಾಗಿ, ಸನ್ ಸ್ಟ್ರೋಕ್ (ಬಿಸಿಲಾಘಾತ) ಆಗುವ ಸಾಧ್ಯತೆ ಇರುತ್ತದೆ ಎಂದು ಇಲಾಖೆ ತಿಳಿಸಿದೆ.

70 ಪಲ್ಲಕ್ಕಿ, 45 ಸಾರಿಗೆ ಬಸ್‌ಗಳಿಗೆ ಚಾಲನೆ ಸಚಿವ ರಾಮಲಿಂಗಾರೆಡ್ಡಿ ಚಾಲನೆ

ಎಲ್ಲ ಕ್ಷೇತ್ರಗಳಲ್ಲೂ ಮಹಿಳೆಯರ ಸಾಧನೆ ಅಪಾರ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಮಹಿಳೆಯರು ನೀಡಿರುವ ಮಹತ್ವದ ಕೊಡುಗೆಗಳನ್ನು ಸ್ಮರಿಸುವುದು, ಅವರ ಹಕ್ಕುಗಳು, ಸಮಾನತೆ ಹಾಗೂ ಗೌರವನ್ನು ಉತ್ತೇಜಿಸುವುದು ಈ ದಿನದ ಉದ್ದೇಶ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಹೇಳಿದರು.

ಕೆಎಸ್‌ಆರ್‌ಟಿಸಿ ಕೇಂದ್ರ ಕಚೇರಿಯಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯ ಕಾರ್ಯಕ್ರಮದಲ್ಲಿ ಭಾಗವಹಿಸಿ, ನೂತನ 45 ಕರ್ನಾಟಕ ಸಾರಿಗೆ, 70 ಪಲ್ಲಕ್ಕಿ ಬಸ್‌ಗಳಿಗೆ ಚಾಲನೆ ನೀಡಿ ಮಾತನಾಡಿ, ಅಂತಾರಾಷ್ಟ್ರೀಯ ಮಹಿಳಾ ದಿನವನ್ನು ಪ್ರತಿ ವರ್ಷ ಮಾರ್ಚ್ 8 ರಂದು ವಿಶ್ವದಾದ್ಯಂತ ಆಚರಿಸಲಾಗುತ್ತದೆ. ಸಮಾಜದಲ್ಲಿ ಕುಟುಂಬ, ಶಿಕ್ಷಣ, ವಿಜ್ಞಾನ, ಸಾಮಾಜಿಕ, ರಾಜಕೀಯ, ಆರ್ಥಿಕತೆ ಸೇರಿದಂತೆ ಎಲ್ಲಾ ಕ್ಷೇತ್ರಗಳಲ್ಲಿಯೂ ಮಹಿಳೆಯರು ಮಹತ್ತರ ಸಾಧನೆಗಳನ್ನು ಮಾಡುತ್ತಿದ್ದಾರೆ. ಮಹಿಳೆಯರ ಸಬಲೀಕರಣವು ಸಮಾಜದ ಅಭಿವೃದ್ಧಿಗೆ ಅತ್ಯಂತ ಮುಖ್ಯವಾಗಿದ್ದು, ಅವರಿಗೆ ಸಮಾನ ಅವಕಾಶಗಳು ಮತ್ತು ಸುರಕ್ಷಿತ ವಾತಾವರಣವನ್ನು ಒದಗಿಸುವುದು ಪ್ರತಿಯೊಬ್ಬರ ಕರ್ತವ್ಯವಾಗಿದೆ ಎಂದರು.

ನಾಲ್ಕು ರಸ್ತೆ ಸಾರಿಗೆ ಸಂಸ್ಥೆಗಳಲ್ಲಿ ಸುಮಾರು 1.04 ಲಕ್ಷ ಸಿಬ್ಬಂದಿಯಿದ್ದು, ಇವರಲ್ಲಿ 8,956 ಮಹಿಳಾ ಸಿಬ್ಬಂದಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಅವರಲ್ಲಿ 3167 ನಿರ್ವಾಹಕರು, 2254-ತಾಂತ್ರಿಕ ಸಿಬ್ಬಂದಿ, 3535-ಆಡಳಿತ ಸಿಬ್ಬಂದಿಯಾಗಿದ್ದಾರೆ. ಶಕ್ತಿ ಯೋಜನೆ ಯಲ್ಲಿ ಮಹಿಳೆಯರಿಗೆ ನಿಗಮದ ಬಸ್‌ಗಳಲ್ಲಿ ಉಚಿತವಾಗಿ ಪ್ರಯಾಣಿಸಲು ಅನುಮತಿಸಿದ್ದು, ಮಾ.12ಕ್ಕೆ 688.83 ಕೋಟಿ ಮಹಿಳೆಯರು ಪ್ರಯಾಣಿಸಿರುತ್ತಾರೆ. ನಿಗಮದ 17 ವಿಭಾಗಗಳಿಂದ ತಲಾ ಒಬ್ಬರಂತೆ ಉತ್ತಮ ಕಾರ್ಯ ಸಾಧನೆ ತೋರಿದ, ತಾಂತ್ರಿಕ ಸಿಬ್ಬಂದಿ-19, ನಿರ್ವಾಹಕರು-15, ಹಾಗೂ ಕರಾಸಾ ಪೇದೆ-12, ಒಟ್ಟು 46 ಮಹಿಳಾ ಸಿಬ್ಬಂದಿ ಪ್ರಶಸ್ತಿಯನ್ನು ಸ್ವೀಕರಿಸಿರುವುದು ಗೌರವದ ವಿಷಯ ಎಂದರು.

ಡಾ.ಶುಭ ವಿ. ಮಾತನಾಡಿ, ಕೆಎಸ್‌ಆರ್‌ಟಿಸಿಯಲ್ಲಿ ಇಷ್ಟು ಸಂಖ್ಯೆಯಲ್ಲಿ ಮಹಿಳಾ ಸಿಬ್ಬಂದಿಯಿರುವುದು ತುಂಬ ಹೆಮ್ಮೆಯ ವಿಷಯ. ಅವರನ್ನು ಗೌರವಿಸಿ ಸನ್ಮಾನಿಸುವ ಕಾರ್ಯಕ್ರಮ ಒಳ್ಳೆಯ ಸಂಪ್ರದಾಯ. ಮಹಿಳೆಯರು, ಪ್ರಾಮಾಣಿಕ, ಬದ್ಧತೆ ಮತ್ತು ಶ್ರದ್ಧೆ ಯಿಂದ ಕೆಲಸ ನಿರ್ವಹಿಸಿದ್ದಲ್ಲಿ ಯಾವುದೇ ಕೆಲಸವನ್ನಾದರೂ ಮಾಡಬಹುದು. ನಾವು ಕಂಡುಹಿಡಿದ ದೃಷ್ಟಿ ಎನ್ನುವ ಸಾಧನವನ್ನು 3 ತಿಂಗಳ ನಿಗದಿ ಮಾಡಿದ ಅವಧಿಯಲ್ಲಿಯೇ ಪೂರ್ಣಗೊಳಿಸಿದ್ದು, 46 ವರುಷಗಳ ವಿಜ್ಞಾನ ಕ್ಷೇತ್ರದಲ್ಲಿ ದೇಶಕ್ಕೆ ಸಲ್ಲಿಸಿದ ಅಳಿಲು ಸೇವೆ ನನ್ನದು ಎಂದು ಭಾವಿಸಿದ್ದೇನೆ. ನನಗೆ ಕೆಎಸ್‌ಆರ್‌ಟಿಸಿಗೆ ಬಂದಿದ್ದು ತುಂಬಾ ಸಂತೋಷವಾಯಿತು ಎಂದು ತಿಳಿಸಿದರು.

ನೂತನ ಬಸ್ ಮಾರ್ಗಗಳು

ಪಲ್ಲಕ್ಕಿ ಬಸ್ಸುಗಳನ್ನು ಉಡುಪಿ, ಮಂಗಳೂರು, ಮೈಸೂರು, ಧರ್ಮಸ್ಥಳ, ಶೃಂಗೇರಿ, ಹೊರನಾಡು, ಆಗುಂಬೆ, ಚಿಕ್ಕಮಗಳೂರು, ದಾವಣಗೆರೆ, ಚಿತ್ರದುರ್ಗ, ಹಂಪಿ, ರಾಯಚೂರು, ಜಮಖಂಡಿ, ಪುತ್ತೂರು, ಕಾಣಿಯೂರು, ಕುಕ್ಕೆ ಸುಬ್ರಹ್ಮಣ್ಯ, ಕಾಸರಗೋಡು, ಮಂತ್ರಾಲಯ, ತಿರುಚಿ, ಕೋಜಿಕ್ಕೋಡ್, ಮುನ್ನಾರ್, ಪಾಂಡಿಚೇರಿ, ತಂಜಾವೂರು, ಕೊಟ್ಟಾಯಂ, ಹೈದಾರಬಾದ್, ಚೆನ್ನೈ , ಪಣಜಿ, ಮಧುರೈ, ಕುಂಭಕೋಣಂ, ಎರ್ನಾಕುಲಂಗೆ ಕಾರ್ಯಾಚರಣೆ ಮಾಡಲಾಗುತ್ತದೆ. ನಿಗಮಕ್ಕೆ ಒಟ್ಟು 805 ಸಂಖ್ಯೆಯ ಹೊಸ ಕರ್ನಾಟಕ ಸಾರಿಗೆ ಹಾಗೂ ನಗರ/ಗ್ರಾಮಾಂತರ ಸಾರಿಗೆ ವಾಹನಗಳು ಏಪ್ರಿಲ್, ಮೇ ಜೂನ್-2026ಕ್ಕೆ ಸೇರ್ಪಡೆಗೊಳ್ಳಲಿದೆ.

ಅರ್ಹತೆಯಿಲ್ಲದೇ ಪಿಸ್ತುಲ್ಲಾ ಶಸ್ತ್ರಚಿಕಿತ್ಸೆಗೆ ಗರಂ

ನಕಲಿ ವೈದ್ಯನ ವಿರುದ್ಧ ಹೈ ಕಿಡಿ

ಬೆಂಗಳೂರು: ವೈದ್ಯಕೀಯ ಅರ್ಹತೆಯಲ್ಲದೇ ಪಿಸ್ತುಲ್ಲಾಗೆ ಶಸ್ತ್ರಚಿಕಿತ್ಸೆ ಮಾಡಿರುವುದು ವಂಚನೆಯಲ್ಲದೆ ಮತ್ತೇನು ಎಂದು ಪ್ರಶ್ನಿಸಿರುವ ಹೈಕೋರ್ಟ್, ಕಾನೂನುಬಾಹಿರವಾಗಿ ಕ್ಲಿನಿಕ್ ನಡೆಸುತ್ತಿರುವುದು ಮತ್ತು ಜನರಿಗೆ ವಂಚಿಸಿದ ಆರೋಪದ ಮೇಲೆ ಚಿತ್ರದುರ್ಗದ ಹಿರಿಯೂರು ತಾಲ್ಲೂಕಿನ ನಯನಾ ಕ್ಲಿನಿಕ್‌ನ ಎಂ.ಕೆ. ಮಡಲ್ ವಿರುದ್ಧ ದಾಖಲಾಗಿರುವ ಪ್ರಕರಣದ ವಿಚಾರಣೆ ಪೂರ್ಣಗೊಳಿಸಿ, ಆದೇಶ ಕಾಯ್ದಿರಿಸಿದೆ.

ಹಿರಿಯೂರಿನ ಟೌನ್ ಠಾಣೆಯಲ್ಲಿ ದಾಖಲಾಗಿರುವ ಪ್ರಕರಣ ರದ್ದತಿ ಕೋರಿ ಮಿಲನ್ ಮಂಡಲ್ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರ ಏಕಸದಸ್ಯ ಪೀಠವು ಆದೇಶ ಕಾಯ್ದಿರಿಸಿದೆ.

ವಿಚಾರಣೆ ಆರಂಭವಾಗುತ್ತಿದ್ದಂತೆ ಪೀಠವು ಯಾರು ಯಾರನ್ನು ವೈದ್ಯರು ಎಂದು ಕರೆದುಕೊಳ್ಳಬಹುದು? ಅನುಭವಿ ಮತ್ತು ವಂಶಪಾರಂಪರಿಕ ವೈದ್ಯರ ಸಂಘದಿಂದ ಸರ್ಟಿಫಿಕೇಟ್ ಪಡೆಯಲಾಗಿದೆ. ಅರ್ಜಿದಾರರಿಗೆ ಡಾಕ್ಟರೇಟ್ ನೀಡಿದ್ದು ಯಾರು? ಪಾರಂಪರಿಕ, ನಾಟಿ, ಆರ್‌ಎಂಪಿ ರಿಜಿಸ್ಟರ್ಡ್ ಮೆಡಿಕಲ್ ಪ್ರಾಕ್ಟೀಷನರ್ ಎಂದು ಹೇಳಿದ್ದೀರಿ. ಪಿಎಂಪಿ ಎಂದರೆ ಫೈಲ್ಸ್ ಮೆಡಿಕಲ್ ಪ್ರಾಕ್ಟಿಷನರೇ? ಡಾಕ್ಟರ್ ಪಿಸ್ತುಲ್ಲಾ, ಅರ್ಹತೆ ಇಲ್ಲದೇ ಪಿಸ್ತುಲ್ಲಾ ಶಸ್ತ್ರಚಿಕಿತ್ಸೆ ಮಾಡಿದ್ದೀರಿ. ಇದು ವಂಚನೆಯಲ್ಲದೇ ಇನ್ನೇನು? ಎಂದು ಪ್ರಶ್ನಿಸಿತು. ಕ್ಲಿನಿಕ್‌ನಲ್ಲಿ ಕುಲ್ತಾಬ್ ಟ್ಯಾಬ್ಲೆಟ್, ಸರ್ಜಿಕಲ್ ಸ್ಪಿರಿಟ್, ಸೀಸರ್ಸ್ ಸಿಕ್ಕಿದೆ. ಶಸ್ತ್ರಚಿಕಿತ್ಸೆಯನ್ನೇ ಮಾಡುವುದಿಲ್ಲ ಎನ್ನುವುದಾದರೆ ಇದೆಲ್ಲಾ ಏತಕ್ಕಾಗಿ ಕ್ಲಿನಿಕ್‌ನಲ್ಲಿ ಸಿಕ್ಕಿದೆ? ಪಿಸ್ತುಲ್ಲಾ ಸರ್ಜರಿ ಮಾಡೋಣ ಎಂದು ಲಘುದಾಟಿಯಲ್ಲಿ ಪೀಠ ಮೌಖಿಕವಾಗಿ ಹೇಳಿತು.

ಪ್ರಕರಣದ ಹಿನ್ನೆಲೆ

ಹುಳಿಯಾರು ರಸ್ತೆಯ ಎಸ್‌ಬಿಐ ಬ್ಯಾಂಕ್ ಪಕ್ಕದಲ್ಲಿರುವ ನಯನಾ ಕ್ಲಿನಿಕ್‌ನ ವೈದ್ಯ ಡಾ. ಎಂ ಕೆ ಮಂಡಲ್ ಅವರು ಯಾವುದೇ ವಿಶ್ವವಿದ್ಯಾಲಯದಿಂದ ವೈದ್ಯಕೀಯ ಪದವಿ ಪಡೆಯದೇ ಕೆಪಿಎಂಇ ಪ್ರಾಧಿಕಾರದಿಂದ ನೋಂದಣಿಯಾಗದೆ, ವೈದ್ಯಕೀಯ ನಿಪುಣತೆಯಿಲ್ಲದೆ ಆರೋಗ್ಯ ಇಲಾಖೆ ಯಿಂದ ಪರವಾನಗಿ ಪಡೆಯದೆ ಸಾರ್ವಜನಿಕರಿಗೆ ವೈದ್ಯಕೀಯ ಚಿಕಿತ್ಸೆ ನೀಡುತ್ತಿದ್ದಾರೆ. ಹಿರಿಯೂರು ತಾಲ್ಲೂಕಿನ ಮ್ಯಾಕ್ಲೂರ ಹಳ್ಳಿಯ ಪಾಂಡುರಂಗಪ್ಪ ಶನಿದೇವರಹಟ್ಟಿ ಅವರಿಗೆ 21-01-2021 ರಂದು ಪಿಸ್ತೂಲ್ ಕಾಯಿಲೆಗೆ ಆಪರೇಷನ್ ಮಾಡಿರುವುದ ರಿಂದ ರೋಗಿಗೆ ಆಂತರಿಕ ಸ್ಪಿಂಕ್ಟರ್‌ಗೆ ಹಾನಿಯಾಗಿದೆ ಎಂದು ಅವರ ಪುತ್ರ 25.11.2025ರಂದು ದೂರು ನೀಡಿದ್ದರು.

ಅರ್ಜಿದಾರರ ಪರ ವಕೀಲರು, ಕೆಪಿಎಂ ಕಾಯಿದೆಯ ಸೆಕ್ಷನ್ 4ರ ಅಡಿ ಅರ್ಜಿದಾರರಿಗೆ ಸರ್ಟಿಫಿಕೇಟ್ ನೀಡಲಾಗಿದೆ. ಅಲೋಪಥಿಗಿಂತ ಇಲ್ಲಿನ ಚಿಕಿತ್ಸಾ ವಿಧಾನ ಪರಿಣಾಮ ಕಾರಿಯಾಗಿದೆ ಎಂದರು. ವಾದ-ಪ್ರತಿವಾದ ಆಲಿಸಿದ ನ್ಯಾಯಾಲಯವು ಆದೇಶ ಕಾಯ್ದಿರಿಸಿತು.

ಪಲಿಮಾರು ಶ್ರೀಗಳಿಂದ ಸುವರ್ಣ ಸಿರಿ ಸವಿನೆನಪಿನ ಸಂಚಿಕೆ ಲೋಕಾರ್ಪಣೆ



ಬೆಂಗಳೂರು: ನಗರದ ಮತ್ತಿಕೆರೆ ಬಡಾವಣೆಯ ಶ್ರೀರಾಘವೇಂದ್ರ ಸ್ವಾಮಿ ಮಠದ ಸುವರ್ಣ ಮಹೋತ್ಸವದ ಅಂಗವಾಗಿ ಸುವರ್ಣ ಸಿರಿ ಸವಿ ನೆನಪಿನ ಸಂಚಿಕೆ ಸ್ಮರಣಿಕೆಯನ್ನು ಉಡುಪಿ ಪಲಿಮಾರು ಮಠದ ಹಿರಿಯ ಪೀಠಾಧಿಪತಿ ಶ್ರೀವಿದ್ಯಾಧೀಶ ತೀರ್ಥ ಶ್ರೀಪಾದರು ಲೋಕಾರ್ಪಣೆಗೊಳಿಸಿದರು.

ಸಂಚಿಕೆ ಬಿಡುಗಡೆ ನಂತರ ಭಕ್ತರನ್ನು ಉದ್ದೇಶಿಸಿ ಆಶೀರ್ವಚನ ನೀಡಿದ ಶ್ರೀವಿದ್ಯಾಧೀಶ ತೀರ್ಥ ಶ್ರೀಪಾದರು ಶ್ರೀಕೃಷ್ಣನ ಭಕ್ತ ಕುಚೇಲನ ಕಥೆಯನ್ನು ಉದಾಹರಣೆಯಾಗಿ ಹೇಳಿದರು. ಕುಚೇಲನು ಲೋಕದ ದೃಷ್ಟಿಯಲ್ಲಿ ಬಡವನಾಗಿದ್ದರೂ, ಅಂತರಂಗದಲ್ಲಿ ಶ್ರೀಕೃಷ್ಣ ಭಕ್ತಿಯಿಂದ ಅಪಾರ ಶ್ರೀಮಂತನಾಗಿದ್ದನು. ಶ್ರೀಕೃಷ್ಣನನ್ನು ಭೇಟಿಯಾದಾಗ ತನಗಾಗಿ ಅಥವಾ ಕುಟುಂಬಕ್ಕಾಗಿ ಏನನ್ನೂ ಬೇಡದೆ ಕೇವಲ ಭಕ್ತಿಯಲ್ಲೇ ಮಿಂದನು. ಆದರೆ ಭಕ್ತನ ಮನದಾಳದ ಆಶಯವನ್ನು ಅರಿತ ಭಗವಂತ, ಅವನ ಮನೆಗೆ ಹಿಂದಿರುಗುವಾಗ ಅವನಿಗೆ ಐಶ್ವರ್ಯಪೂರ್ಣ ಜೀವನವನ್ನು ಅನುಗ್ರಹಿಸಿದನು ಎಂದು ವಿವರಿಸಿದರು.ಭಕ್ತರು ಕೇಳದಿದ್ದರೂ ಅವರ ಮನೋಭಿಲಾಷೆಯನ್ನು ತಿಳಿದು ಭಗವಂತ ಕೃಪೆ ಮಾಡುವನು ಎಂಬ ಸಂದೇಶವನ್ನು ಅವರು ನೀಡಿದರು.

ಮಠಗಳ ಮಹತ್ವವನ್ನು ವಿವರಿಸಿದ ಶ್ರೀಪಾದರು,ಮಠಗಳು ಕೇವಲ ಧಾರ್ಮಿಕ ಕೇಂದ್ರಗಳಲ್ಲ; ಅವು ಧರ್ಮ, ಸಂಸ್ಕೃತಿ, ಸಮಾಜ ಮತ್ತು ಮೌಲ್ಯಗಳ ಜೀವಂತ ಪಾಠಶಾಲೆಗಳು,ಎಂದು ಹೇಳಿದರು.ಮತ್ತಿಕೆರೆ ರಾಯರ ಮಠವು ತನ್ನ ಸ್ಥಾಪನೆಯಿಂದ ಇಂದಿನವರೆಗೆ ಐದು ದಶಕಗಳ ಕಾಲ ಗುರುಪರಂಪರೆಯ ಶುದ್ಧತೆಯನ್ನು ಕಾಪಾಡುತ್ತ ಧರ್ಮಸೇವೆಯಲ್ಲಿ ತೊಡಗಿಕೊಂಡಿರುವುದು ಸಂತಸದ ಸಂಗತಿ ಎಂದರು.

ಸುವರ್ಣ ಮಹೋತ್ಸವ-ಭವಿಷ್ಯದ ಸಂಕಲ್ಪ

ಶ್ರೀಪಾದರು ತಮ್ಮ ಆಶೀರ್ವಚನದಲ್ಲಿ,ಸುವರ್ಣ ಮಹೋತ್ಸವವು ಕೇವಲ ಹಿನ್ನೋಟದ ಆಚರಣೆಯಲ್ಲ; ಅದು ಭವಿಷ್ಯದ ಸಂಕಲ್ಪವೂ ಆಗಿದೆ ಎಂದು ಹೇಳಿದರು. ಮುಂದಿನ ದಶಕಗಳಲ್ಲಿಯೂ ಮತ್ತಿಕೆರೆ ರಾಯರ ಮಠವು ಧರ್ಮ, ಸಂಸ್ಕೃತಿ ಮತ್ತು ಸೇವೆಯ ದೀಪವಾಗಿ ಪ್ರಕಾಶಿಸುತ್ತಿರಲಿ ಎಂಬ ಆಶಯವನ್ನು ವ್ಯಕ್ತಪಡಿಸಿದರು. ಈ ವೇಳೆ ಪುಸ್ತಕದ ಸಂಪಾದಕ ಮಂಡಳಿಯವರಾದ ಡಿ.ವಿ. ಕೃಷ್ಣಮೂರ್ತಿ,ಡಾ. ಎನ್ .ಜಿ. ವಿಜಯಲಕ್ಷ್ಮಿ ,ಸಿ.ಡಿ. ಜಯಂತ್, ದಾಸ ವಿಜಯ ಸಮ್ಮಿಲನ ಸಮೂಹದ ಸುಬ್ರಹ್ಮಣ್ಯ ಆಚಾರ್ಯ, ಪದ್ಮ ಎಸ್. ಆಚಾರ್ಯ, ಕೆ. ನಾರಾಯಣ ಮೂರ್ತಿ ಮತ್ತು ಮತ್ತಿಕೆರೆ ಮಾಧ್ವ ಮಹಿಳಾ ಮಂಡಲಿಯ ಸದಸ್ಯೆಯರು ಮತ್ತಿತರರು ಇದ್ದರು.

ಸಿಲಿಂಡರ್‌ಗಳ ಕೊರತೆ: ತರಕಾರಿ ವ್ಯಾಪಾರ ಕುಸಿತ

ಬೆಂಗಳೂರು: ಅಂತಾರಾಷ್ಟ್ರೀಯ ಯುದ್ಧ ಪರಿಸ್ಥಿತಿಯ ಪರಿಣಾಮದ ಬಿಸಿ ಇದೀಗ ರಾಜ್ಯ ರಾಜಧಾನಿ ಬೆಂಗಳೂರಿನ ಪ್ರಮುಖ ವ್ಯಾಪಾರ ಕೇಂದ್ರಗಳಿಗೂ ತಟ್ಟಲಾರಂಭಿಸಿದೆ. ನಗರದ ಪ್ರಮುಖ ಮಾರುಕಟ್ಟೆಯಾಗಿರುವ ಕೆಆರ್ ಮಾರ್ಕೆಟ್‌ನಲ್ಲಿ ಕಳೆದ ಎರಡು-ಮೂರು ದಿನಗಳಿಂದ ತರಕಾರಿ ಖರೀದಿಸಲು ಬರುತ್ತಿರುವ ಗ್ರಾಹಕರ ಸಂಖ್ಯೆ ಗಮನಾರ್ಹವಾಗಿ ಕುಸಿದಿದ್ದು, ಇದರ ಪರಿಣಾಮವಾಗಿ ವ್ಯಾಪಾರಿಗಳು ಗಂಭೀರ ಸಂಕಷ್ಟವನ್ನು ಎದುರಿಸುತ್ತಿದ್ದಾರೆ.

ಯುದ್ಧದ ಹಿನ್ನೆಲೆಯಲ್ಲಿ ನಗರದಲ್ಲಿನ ಹೋಟೆಲ್‌ಗಳಿಗೆ ಅಗತ್ಯವಿರುವ ವಾಣಿಜ್ಯ ಎಲ್‌ಪಿಜಿ ಸಿಲಿಂಡರ್‌ಗಳ ಪೂರೈಕೆ ಸರಿಯಾಗಿ ನಡೆಯದೆ ಇರುವುದರಿಂದ ಅನೇಕ ದರ್ಶಿನಿ ಹೋಟೆಲ್‌ಗಳು ಹಾಗೂ ಬೀದಿ ಬದಿ ಆಹಾರ ಅಂಗಡಿಗಳು ತಮ್ಮ ವ್ಯವಹಾರವನ್ನು ತಾತ್ಕಾಲಿಕವಾಗಿ ಬಂದ್ ಮಾಡಿವೆ. ಹೋಟೆಲ್‌ಗಳೇ ಕೆಆರ್ ಮಾರ್ಕೆಟ್‌ನ ಪ್ರಮುಖ ಗ್ರಾಹಕರಾಗಿರುವುದರಿಂದ, ಅವುಗಳ ಬಂದ್ ಪರಿಣಾಮವಾಗಿ ತರಕಾರಿ ಖರೀದಿ ಬಹಳ ಮಟ್ಟಿಗೆ ಕುಸಿದಿದೆ ಎಂದು ವ್ಯಾಪಾರಿಗಳು ತಿಳಿಸಿದ್ದಾರೆ. ಸಾಮಾನ್ಯವಾಗಿ ನಗರದ ವಿವಿಧ ಭಾಗಗಳಿಂದ ಸಾವಿರಾರು ಹೋಟೆಲ್ ಮಾಲೀಕರು ಪ್ರತಿದಿನ ಕೆಆರ್ ಮಾರ್ಕೆಟ್‌ಗೆ ಆಗಮಿಸಿ ಕೊತ್ತಂಬರಿ, ಪುದೀನಾ, ತರಕಾರಿ ಸೇರಿದಂತೆ ಹಲವು ಅಗತ್ಯ ವಸ್ತುಗಳನ್ನು ಹೋಲ್‌ಸೇಲ್ ದರದಲ್ಲಿ ಖರೀದಿಸಿ ತಮ್ಮ ಹೋಟೆಲ್‌ಗಳಿಗೆ ಕೊಂಡೊಯ್ಯುತ್ತಿದ್ದರು. ಆದರೆ ಈಗ ಹೋಟೆಲ್‌ಗಳು ಮುಚ್ಚಿರುವ ಕಾರಣ ಶೇ.25 ರಿಂದ ಶೇ.30 ರಷ್ಟು ವ್ಯಾಪರ ಕಡಿಮೆಯಾಗಿ ಜನ ಮಾರುಕಟ್ಟೆಗೆ ಬರುತ್ತಿಲ್ಲ ಎಂಬುದು ವ್ಯಾಪಾರಿಗಳ ಅಳಲು. ಇದರಿಂದ ಮಾರುಕಟ್ಟೆಗೆ ತಂದಿರುವ ತರಕಾರಿ ಹಾಗೂ ಇತರೆ ಸಾಮಾನುಗಳು ಮಾರಾಟವಾಗದೆ ಉಳಿದು ಹಾಳಾಗುತ್ತಿರುವ ಪರಿಸ್ಥಿತಿ ಎದುರಾಗಿದೆ. ಪರಿಣಾಮವಾಗಿ ಅನೇಕ ವ್ಯಾಪಾರಿಗಳು ಹೊಸದಾಗಿ ಮಾಲು ತರಲು ಸಹ ಹಿಂಜರಿಯುತ್ತಿದ್ದಾರೆ. ಒಟ್ಟಾರೆ, ಯುದ್ಧದ ಪರಿಣಾಮವಾಗಿ ಉಂಟಾದ ಗ್ಯಾಸ್ ಸಿಲಿಂಡರ್ ಕೊರತೆ ಈಗ ಹೋಟೆಲ್ ಉದ್ಯಮದ ಮೂಲಕ ತರಕಾರಿ ವ್ಯಾಪಾರಕ್ಕೂ ತೀವ್ರ ಪರಿಣಾಮ ಬೀರುತ್ತಿದ್ದು, ಕೆಆರ್ ಮಾರ್ಕೆಟ್‌ನ ಸಾವಿರಾರು ಸಣ್ಣ ವ್ಯಾಪಾರಿಗಳ ಜೀವನೋಪಾಯದ ಮೇಲೆ ದೊಡ್ಡ ಹೊಡೆತ ಬಿದ್ದಿದೆ.

ಹಿಂದೆ ಪ್ರತಿದಿನ ನಾಲ್ಕು ಸಾವಿರದಿಂದ ಐದು ಸಾವಿರ ರೂಪಾಯಿವರೆಗೆ ವ್ಯಾಪಾರವಾಗುತ್ತಿತ್ತು. ಆದರೆ ಕಳೆದ ಎರಡು-ಮೂರು ದಿನಗಳಿಂದ ಸಾವಿರ ರೂಪಾಯಿ ವ್ಯಾಪಾರವೂ ಆಗುತ್ತಿಲ್ಲ. ಶುಕ್ರವಾರ ಬೆಳಗ್ಗಿನಿಂದ ಸಂಜೆವರೆಗೆ ಕೇವಲ ಎರಡು ನೂರು ರೂಪಾಯಿ ಮಾತ್ರ ವ್ಯಾಪಾರವಾಗಿದೆ. ಹೋಟೆಲ್‌ಗಳು ಬಂದ್ ಆಗಿರುವುದರಿಂದ ನಮ್ಮ ಬಳಿ ಖರೀದಿ ಮಾಡಲು ಯಾರೂ ಬರುತ್ತಿಲ್ಲ. ಇದರಿಂದ ಜೀವನ ಸಾಗಿಸುವುದೇ ತುಂಬಾ ಕಷ್ಟವಾಗಿದೆ.

-ನಂಜಮ್ಮ , ವ್ಯಾಪಾರಿ

ಮತ್ತಷ್ಟು ಜೈವಿಕ ಅನಿಲ ಘಟಕಗಳ ಸ್ಥಾಪನೆ

ಬೆಂಗಳೂರು: ಜಿಬಿಎ ವ್ಯಾಪ್ತಿಯಲ್ಲಿ ಮತ್ತಷ್ಟು ಜೈವಿಕ ಅನಿಲ ಘಟಕಗಳ ಸ್ಥಾಪನೆಗೆ ಕ್ರಮ ಕೈಗೊಳ್ಳಲಾಗುವುದು ಎಂದು ಮುಖ್ಯ ಆಯುಕ್ತ ಮಹೇಶ್ವರ್ ರಾವ್ ತಿಳಿಸಿದರು.

ಜಿಬಿಎ ವ್ಯಾಪ್ತಿಯ ಬೆಂಗಳೂರು ದಕ್ಷಿಣ ನಗರ ಪಾಲಿಕೆ ಕೋರಮಂಗಲದಲ್ಲಿರುವ ಕಸ-ರಸ ಘಟಕಕ್ಕೆ ಭೇಟಿ ನೀಡಿದ ಬಳಿಕ ಮಾತನಾಡಿ, ನಗರದಲ್ಲಿ ಹಸಿ ಕಸದಿಂದ ಜೈವಿಕ ಅನಿಕ ಉತ್ಪತ್ತಿ ಮಾಡುವ ಸಲುವಾಗಿ ಸಮಗ್ರವಾಗಿ ಅಧ್ಯಯನ ನಡೆಸಿ, ಜಿಬಿಎ ನಗರ ಪಾಲಿಕೆಗಳಲ್ಲಿ ಜೈವಿಕ ಅನಿಲ ಘಟಕಗಳನ್ನು ಸ್ಥಾಪಿಸಲು ಕ್ರಮ ವಹಿಸಲಾಗುವುದು. ನಗರದಲ್ಲಿ ವಿಕೇಂದ್ರಿಕೃತ ಕೇಂದ್ರಗಳನ್ನು ಸ್ಥಾಪಿಸಬೇಕಾದರೆ ಆಯಾ ನಗರ ಪಾಲಿಕೆಗಳಲ್ಲಿ 2/3 ಎಕರೆ ಜಾಗ ಬೇಕಾಗುತ್ತದೆ. ಕಡಿಮೆ ಅವಧಿಯಲ್ಲಿ ಪ್ರಸ್ತುತ ಇರುವಂತಹ ಘಟಗಳನ್ನು ಉನ್ನತೀಕಣಗೊಳಿಸಿ ಅಲ್ಲಿ ಬಯೋ ಗ್ಯಾಸ್ ಉತ್ಪತ್ತಿ ಮಾಡಿ, ಸ್ಥಳೀಯ ಹೋಟೆಲ್‌ಗಳಿಗೆ ವಿತರಣೆ ಮಾಡಲು ಕ್ರಮ ವಹಿಸಲಾಗುವುದು ಎಂದು ತಿಳಿಸಿದರು.

ಸ್ಥಳೀಯವಾಗಿ ಹಸಿ ಹಾಗೂ ಒಣ ತ್ಯಾಜ್ಯ ವಿಂಗಡಣೆಯಾದರೆ ಸಾಕಷ್ಟು ಅನುಕೂಲವಾಗಲಿದೆ. ಅದಕ್ಕೆ ನಾಗರೀಕರ ಸಹಕಾರ ಪ್ರಮುಖ ಪಾತ್ರ ವಹಿಸಲಿದ್ದು, ನಾಗರಿಕರು ತ್ಯಾಜ್ಯವನ್ನು ವಿಂಗಡಿಸಿ ಕೊಡಲು ಮನವಿ ಮಾಡಿದರು. ಕಸ-ರಸ ಘಟಕದಲ್ಲಿ 10 ಟನ್ ನಿಂದ ಬಯೋ ಗ್ಯಾಸ್ ಉತ್ಪತ್ತಿಸಿ, ಹತ್ತಿರದ ಹೋಟೆಲ್ ಗೆ ವಿತರಣೆ ಮಾಡಲಾಗುತ್ತಿದ್ದು, ಆ ಪ್ರಮಾಣವನ್ನು ಮತ್ತಷ್ಟು ಹೆಚ್ಚಿಸಲು ಕ್ರಮವಹಿಸಲಾಗುತ್ತದೆ. ಈ ಸ್ಥಳದಲ್ಲಿರುವ ಹೈ ಟೆನ್ಷನ್ ಲೈನ್ ಲೈನ್ ಬದಲಾಯಿಸಿದರೆ, ಬೃಹತ್ ಪ್ರಮಾಣದಲ್ಲಿ ಬಯೋಗ್ಯಾಸ್ ಉತ್ಪತ್ತಿಸಬಹುದಾಗಿದ್ದು, ಆ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲು ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ ಎಂದು ಹೇಳಿದರು.

ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕರೀಗೌಡ ಮಾತನಾಡಿ, ಹಸಿ ಘನ ತ್ಯಾಜ್ಯದ ವ್ಯವಸ್ಥಿತ ಹಾಗೂ ವೈಜ್ಞಾನಿಕ ಸಂಸ್ಕರಣೆ ಘನ ತ್ಯಾಜ್ಯ ನಿರ್ವಹಣೆಯ ಪ್ರಮುಖ ಅಂಶ ವಾಗಿದೆ. ಈ ನಿಟ್ಟಿನಲ್ಲಿ ಬಿಎಸ್‌ಡಬ್ಲ್ಯೂಎಂಎಲ್ ವತಿಯಿಂದ ಹಸಿ ತ್ಯಾಜ್ಯದಿಂದ ಬಯೋಗ್ಯಾಸ್ ಉತ್ಪಾದಿಸಲು ವಿವಿಧ ಬಯೋಮೆಥನೈಸೇಷನ್ ಘಟಕಗಳನ್ನು ನಿರ್ಮಿಸಿ ನಿರ್ವಹಿಸಲಾಗುತ್ತಿದೆ ಎಂದರು.

ಈ ಹಿಂದೆ ಬಿಬಿಎಂಪಿ ವತಿಯಿಂದ ನಿರ್ಮಾಣಗೊಂಡ 12 ಬಯೋಗ್ಯಾಸ್ ಘಟಕಗಳಲ್ಲಿ 6 ಘಟಕಗಳು ಪ್ರಸ್ತುತ ಕಾರ್ಯನಿರ್ವಹಿಸುತ್ತಿದ್ದು, ಪ್ರತಿ ಘಟಕದಲ್ಲಿ ದಿನಕ್ಕೆ 5 ಟನ್ ಹಸಿ ತ್ಯಾಜ್ಯ ಸಂಸ್ಕರಿಸಿ ಒಟ್ಟಾರೆ ಸುಮಾರು 30 ಟನ್ ತ್ಯಾಜ್ಯದಿಂದ ಬಯೋಗ್ಯಾಸ್ ಉತ್ಪಾದಿಸಲಾಗುತ್ತಿದೆ. ಉಳಿದ 6 ಘಟಕಗಳನ್ನು ನವೀಕರಣಗೊಳಿಸುವ ಕಾಮಗಾರಿಯನ್ನು ಕೈಗೊಳ್ಳಲಾಗಿದೆ ಎಂದು ಹೇಳಿದರು. ಈ ವೇಳೆ ದಕ್ಷಿಣ ನಗರ ಪಾಲಿಕೆ ಆಯುಕ್ತ ರಮೇಶ್ ಕೆ.ಎನ್, ಮುಖ್ಯ ಅಭಿಯಂತರ ಬಸವರಾಜ್ ಕಬಾಡೆ ಅಧಿಕಾರಿಗಳು ಇದ್ದರು.

ಹೋಟೆಲ್‌ಗೆ ಬಯೋಗ್ಯಾಸ್ ಸರಬರಾಜು

ಕೋರಮಂಗಲದಲ್ಲಿರುವ 8.5 ಟನ್ ಸಾಮರ್ಥ್ಯದ ಬಯೋಗ್ಯಾಸ್ ಘಟಕದಿಂದ ಸಮೀಪದ ಹೋಟೆಲ್‌ಗೆ ಪ್ರತಿದಿನ ಸುಮಾರು 120 ಕೆಜಿ ಬಯೋಗ್ಯಾಸ್ ಸರಬರಾಜು ಮಾಡಲಾಗುತ್ತಿದ್ದು, ಪ್ರತಿ ಕೆಜಿಗೆ 70 ರು.ನಂತೆ ದಿನಕ್ಕೆ ಸುಮಾರು 8,400 ರು.ನಂತೆ ಆದಾಯ ಲಭ್ಯವಾಗುತ್ತಿದೆ. ಇದರ ಮೂಲಕ ಹಸಿ ತ್ಯಾಜ್ಯದಿಂದ ಉತ್ಪತ್ತಿಯಾಗುವ ಜೈವಿಕ ಅನಿಲವನ್ನು ಅಡುಗೆ ಇಂಧನವಾಗಿ ಬಳಸಲಾಗುತ್ತಿದೆ. ಗೇಲ್ ಗ್ಯಾಸ್ ಇಂಡಿಯಾ ಕಂಪನಿಯ ಸಹಯೋಗದೊಂದಿಗೆ ದಿನಕ್ಕೆ ಸುಮಾರು 300 ಟನ್ ಹಸಿ ತ್ಯಾಜ್ಯ ಸಂಸ್ಕರಿಸುವ ಸಾಮರ್ಥ್ಯದ ಹೊಸ ಬಯೋಗ್ಯಾಸ್ ಘಟಕ ನಿರ್ಮಾಣಕ್ಕೂ ಚಾಲನೆ ನೀಡಲಾಗಿದೆ. ಇದಲ್ಲದೆ ಕನ್ನಹಳ್ಳಿ ಪ್ರದೇಶದಲ್ಲಿ ಸುಮಾರು 1,000 ಟನ್ ಹಸಿ ತ್ಯಾಜ್ಯದಿಂದ ಬಯೋಗ್ಯಾಸ್ ಉತ್ಪಾದಿಸುವ ಘಟಕ ನಿರ್ಮಾಣಕ್ಕೆ ಮೆ. ಸಾತರಾಂ ಸಂಸ್ಥೆಯೊಂದಿಗೆ ಒಪ್ಪಂದಕ್ಕೆ ಅನುಮೋದನೆ ನೀಡಲಾಗಿದೆ.

ಇಂದಿರಾ ಕ್ಯಾಂಟೀನ್‌ಗೆ ಸಿಲಿಂಡರ್ ಪೂರೈಕೆಗೆ ಆದೇಶ

ಬೆಂಗಳೂರು: ಕೇಂದ್ರ ನಗರ ಪಾಲಿಕೆ ವ್ಯಾಪ್ತಿಯ ವಸಂತನಗರದಲ್ಲಿರುವ ಇಂದಿರಾ ಅಡುಗೆ ಕೋಣೆಗೆ ಎಲ್‌ಪಿಜಿ ಸಮಸ್ಯೆ ಉಂಟಾಗದಂತೆ ನೋಡಿಕೊಳ್ಳುವಂತೆ ಎಂದು ಗುತ್ತಿಗೆದಾರರಿಗೆ ಆಯುಕ್ತ ರಾಜೇಂದ್ರ ಚೋಳನ್ ಸೂಚನೆ ನೀಡಿದರು.

ಬೆಂಗಳೂರು ಕೇಂದ್ರ ನಗರ ಪಾಲಿಕೆ ವ್ಯಾಪ್ತಿಯಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳ ಪ್ರಗತಿ ಪರಿಶೀಲನೆ ನಡೆಸಿ ಮಾತನಾಡಿ, ಇಂದಿರಾ ಅಡುಗೆ ಕೋಣೆಗೆ ಭೇಟಿ ನೀಡಿ, ಈ ಅಡುಗೆ ಕೋಣೆಯಿಂದ 14 ಇಂದಿರಾ ಕ್ಯಾಂಟೀನ್‌ಗಳಿಗೆ ಆಹಾರ ಪೂರೈಕೆ ಮಾಡಲಾಗುತ್ತಿದೆ. ಈ ಸಂಬಂಧ ಯಾವುದೇ ಕಾರಣಕ್ಕೂ ಆಹಾರ ಪೂರೈಕೆ ನಿಲ್ಲಿಸುವಂತಿಲ್ಲ. ಎಲ್.ಪಿ.ಜಿ. ವ್ಯವಸ್ಥೆಯನ್ನು ಸಮರ್ಪಕವಾಗಿ ಮಾಡಿಕೊಂಡು ಯಾವುದೇ ಸಮಸ್ಯೆ ಉಂಟಾಗದಂತೆ ಆಹಾರ ಪೂರೈಕೆಗೆ ಕ್ರಮ ವಹಿಸಿ ಎಂದು ಅಧಿಕಾರಿಗಳು ಹಾಗೂ ಗುತ್ತಿಗೆದಾರರಿಗೆ ನಿರ್ದೇಶನ ನೀಡಿದರು.

ಎಂ.ಜಿ ರಸ್ತೆಯಲ್ಲಿ ಟ್ರಿನಿಟಿ ವೃತ್ತದಿಂದ ಮಹಾತ್ಮ ಗಾಂಧೀಜಿ ಉದ್ಯಾನವನದವರೆಗೆ 2.2 ಕಿ.ಮೀ (ಎರಡು ಭಾಗ ಸೇರಿ 4.4 ಕಿ.ಮೀ) ಡಾಂಬರೀಕರಣ ಕಾಮಗಾರಿ ಪ್ರಗತಿಯಲ್ಲಿದೆ. ಈಗಾಗಲೇ ಉದ್ಯಾನವನದಿಂದ ಬ್ರಿಗೇಡ್ ರಸ್ತೆಯವರೆಗೆ 1.2 ಕಿ.ಮೀ (ಎರಡೂ ಭಾಗ ಸೇರಿ 2.4 ಕಿ.ಮೀ) ಉದ್ದದ ರಸ್ತೆಗೆ ಒಂದು ಪದರದ ಡಾಂಬರು ಹಾಕಲಾಗಿದೆ. ವಾಹನಗಳ ಸಂಚಾರಕ್ಕೆ ಯಾವುದೇ ರೀತಿಯ ತೊಂದರೆ ಆಗದಂತೆ ರಾತ್ರಿ ವೇಳೆ ಡಾಂಬರೀಕರಣ ಕಾರ್ಯವನ್ನು ಹಂತ ಹಂತವಾಗಿ ನಡೆಸಲಾಗುತ್ತಿದೆ. ಹಗಲಿನಲ್ಲಿ ರಸ್ತೆ ಬದಿಯ ಸೈಡ್ ಡ್ರೇನ್‌ಗಳಲ್ಲಿ ಹೂಳೆತ್ತುವ ಕೆಲಸ ನಡೆಯುತ್ತಿದೆ. ರಸ್ತೆ ಕಾಮಗಾರಿಯನ್ನು ಸಂಪೂರ್ಣವಾಗಿ 15 ದಿನಗಳೊಳಗೆ ಪೂರ್ಣಗೊಳಿಸಿ ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

ದ್ವಿತೀಯ ಹಂತದ ಘನತ್ಯಾಜ್ಯ ಸಂಸ್ಕರಣಾ ಘಟಕ: ಶಿವಾಜಿನಗರದ ಮಿಲ್ಲರ್ಸ್ ರಸ್ತೆಯಲ್ಲಿ ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತದಿಂದ ದ್ವಿತೀಯ ಹಂತದ ಘನತ್ಯಾಜ್ಯ ಸಂಸ್ಕರಣಾ ಘಟಕದ ಕಾಮಗಾರಿ ಬಹುತೇಕ ಪೂರ್ಣಗೊಂಡಿದ್ದು, ಬಾಕಿ ಉಳಿದಿರುವ ಕಾಮಗಾರಿಯನ್ನು ಏಪ್ರಿಲ್ 15ರೊಳಗೆ ಪೂರ್ಣಗೊಳಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು. ಶಿವಾಜಿನಗರ ವ್ಯಾಪ್ತಿಯಲ್ಲಿರುವ ಜಾನ್ಸನ್ ಮಾರುಕಟ್ಟೆ ಶಿಥಿಲಾವಸ್ಥೆಯಲ್ಲಿದ್ದು, ಸುಮಾರು 24,000 ಚ.ಮೀ ವ್ಯಾಪ್ತಿಯಲ್ಲಿ ವಿಸ್ತರಿಸಿದೆ. ಇರುವ ಕಟ್ಟಡವನ್ನು ನೆಲಸಮಗೊಳಿಸಿ ವಿನೂತನ ಮಾದರಿಯಲ್ಲಿ ಮಾರುಕಟ್ಟೆ ನಿರ್ಮಿಸುವ ಉದ್ದೇಶದಿಂದ ವಿವರವಾದ ಯೋಜನಾ ವರದಿ (ಡಿಪಿಆರ್) ಸಿದ್ಧಪಡಿಸಲು ಅಭಿಯಂತರರಿಗೆ ಸೂಚನೆ ನೀಡಿದರು.

ಶನಿದೇವರ ಕುಂಭಾಭಿಷೇಕ, ರಥೋತ್ಸವ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು



ಮೈಸೂರು ಬ್ಯಾಂಕ್ ವೃತ್ತದಲ್ಲಿರುವ ಶ್ರೀ ಶನಿದೇವರ ದೇವಸ್ಥಾನದಲ್ಲಿ ಪ್ರತಿಷ್ಠಾಪಿಸಲಾಗಿರುವ 36 ಅಡಿ ಎತ್ತರದ ಬೃಹದಾಕಾರದ ಶನಿದೇವರ ಪ್ರತಿಮೆಯ ಲೋಕಾರ್ಪಣೆ, ಪ್ರಥಮ ಮಹಾ ಕುಂಭಾಭಿಷೇಕ ಹಾಗೂ ನೂತನ ರಥೋತ್ಸವ ಅತ್ಯಂತ ಶ್ರದ್ಧಾಭಕ್ತಿಗಳಿಂದ ಅತ್ಯಂತ ವಿಜೃಂಭಣೆಯಿಂದ ನೆರವೇರಿತು.

ರಾಜ್ಯದಲ್ಲೇ ಅತಿ ಎತ್ತರದ 36 ಅಡಿ ಎತ್ತರದ ಶನಿದೇವರ ಪ್ರತಿಮೆಯನ್ನು ಸಾರಿಗೆ ಮತ್ತು ಮುಜರಾಯಿ ಸಚಿವರಾದ ರಾಮಲಿಂಗಾರೆಡ್ಡಿಯವರು ಲೋಕಾರ್ಪಣೆಗೊಳಿಸಿದರು. ಆರೋಗ್ಯ ಸಚಿವರಾದ ದಿನೇಶ್ ಗುಂಡೂರಾವ್ ಅವರು ಕುಂಬಾಭಿಷೇಕಕ್ಕೆ ಚಾಲನೆ ನೀಡಿದರು. ಬೃಹದಾಕಾರದ ಶನಿದೇವರ ಪ್ರತಿಮೆಯ ಮೇಲಿಂದ ಕುಂಭಗಳ ಮೂಲಕ ಜಲಾಭಿಷೇಕ ನೆರವೇರಿಸಿ, ಪುಷ್ಪ ವೃಷ್ಟಿ ನೆರವೇರಿಸಿದಾಗ ಅಲ್ಲಿ ಸೇರಿದ್ದ ಭಕ್ತಸ್ತೋಮ ರೋಮಾಂಚನದಿಂದ ಹರ್ಷೋದ್ಗಾರ ವ್ಯಕ್ತಪಡಿಸಿತು. ಕ್ರೇನ್ ಮೂಲಕ ಸ್ವಾಮಿಗೆ ಪೂಜೆ ಸಲ್ಲಿಸಲಾಯಿತು. ಕುಂಭಾ ಭಿಷೇಕದ ಪ್ರಯುಕ್ತ ಶನಿದೇವರ ಮೂಲ ಮೂರ್ತಿಗೆ ವಿಶೇಷವಾದ ಪುಷ್ಪಾಲಂಕಾರ ಮಾಡ ಲಾಗಿತ್ತು. ಮಧ್ಯಾಹ್ನದ ಮಹಾಮಂಗಳಾರತಿ ಬಳಿಕ ಸಹಸ್ರಾರು ಭಕ್ತಾದಿಗಳಿಗೆ ಅನ್ನಸಂತರ್ಪಣೆ ನಡೆಯಿತು.

ಇದೇ ಸಂದರ್ಭದಲ್ಲಿ ನೂತನ ರಥವನ್ನು ಶನಿದೇವರಿಗೆ ಸಮರ್ಪಿಸಲಾಯಿತು. ಬುಧವಾರ ಬೆಳಗ್ಗೆ ಶನಿದೇವರ ರಥಾರೋಹಣ ನಡೆದು ವೈಭವದ ರಥೋತ್ಸವ ನಡೆಯಿತು. ಮರುದಿನ ಚಿಕ್ಕರಸಿನಕೆರೆಯ ಕಾಲಭೈರವಸ್ವಾಮಿಯ ಬಸವಣ್ಣ ಶ್ರೀ ಕ್ಷೇತ್ರಕ್ಕೆ ಆಗಮಿಸಿ ಪೂಜೆ ಪಡೆದು ಭಕ್ತರಿಗೆ ಆಶೀರ್ವಾದ ನೀಡಿತು. ನೂತನ ಪ್ರತಿಮೆ ಅರ್ಪಣೆ, ಕುಂಬಾಭಿಷೇಕ ಹಾಗೂ ರಥೋತ್ಸವ, ಸಮಾರೋಪ ಕಾರ್ಯಕ್ರಮಗಳು ನಡೆದ ಪ್ರತೀ ದಿನವೂ ಶನಿದೇವರ ಸನ್ನಿಯಲ್ಲಿ ಪ್ರತೀದಿನ ವಿವಿಧ ಹೋಮ ಹವನಗಳು, ಶ್ರೀಸ್ವಾಮಿಗೆ ವಿಶೇಷ ಅಭಿಷೇಕಗಳು, ಪುಷ್ಪ ಅಲಂಕಾರ, ವಿಶೇಷ ಪೂಜೆ, ಸಹಸ್ರಾರು ಭಕ್ತಾದಿಗಳಿಗೆ ನಿತ್ಯವೂ ಅನ್ನಸಂತರ್ಪ ಣೆ ನಡೆಯಿತು.

ಸಚಿವರಾದ ರಾಮಲಿಂಗಾರೆಡ್ಡಿ, ದಿನೇಶ್ ಗುಂಡೂರಾವ್, ಶಾಸಕ ರಿಜ್ವಾನ್ ಅರ್ಷದ್ ,ಬಿಜೆಪಿ ಮುಖಂಡ. ಮಾಜಿ ಕಾರ್ಪೋರೇಟರ್ ಶಿವಕುಮಾರ್, ಸಪ್ತಗಿರಿಗೌಡ, ಬಿಬಿಎಂಪಿ ಮಾಜಿ ಸದಸ್ಯ ಯುವರಾಜ್ ಸೇರಿ ಹಲವಾರು ಗಣ್ಯರು ಪಾಲ್ಗೊಂಡಿದ್ದರು. ಎಲ್ಲ ಕಾರ್ಯಕ್ರಮಗಳೂ ದೇವಸ್ಥಾನದ ಪ್ರಧಾನ ಅರ್ಚಕರಾದ ಗಣೇಶ್ ಅವರ ನೇತೃತ್ವದಲ್ಲಿ ನೆರವೇರಿದವು. ಪ್ರವೀಣ ನಾರಾಯಣ ರಾವ್ ಕಾರ್ಯಕ್ರಮ ನಿರ್ವಹಣೆ ಮಾಡಿದರು.

ನುಸುಳುಕೋರರ ರಕ್ಷಣೆಗಾಗಿ ಎಸ್‌ಐಆರ್‌ಗೆ ವಿರೋಧ: ಟಿಎಂಸಿ ವಿರುದ್ಧ ಪ್ರಧಾನಿ ವಾಗ್ದಾಳಿ

ಮಮತಾ ಸರಕಾರದ ಅಂತ್ಯಕ್ಕೆ ಕ್ಷಣಗಣನೆ: ಮೋದಿ

ಕೋಲ್ಕತ್ತ: ಪಶ್ಚಿಮ ಬಂಗಾಳದಲ್ಲಿನ ಆಡಳಿತಾರೂಢ ಟಿಎಂಸಿ ಪಕ್ಷವು ನುಸುಳುಕೋರರ ತಮ್ಮ ಮತಬ್ಯಾಂಕ್ ರಕ್ಷಿಸಲು ಮತದಾರರ ಪಟ್ಟಿಯ ಸಮಗ್ರ ವಿಶೇಷ ಪರಿಷ್ಕರಣೆಯನ್ನು (ಎಸ್‌ಐಆರ್) ವಿರೋಧಿಸುತ್ತಿದೆ ಎಂದು ಆರೋಪಿಸಿದ ಪ್ರಧಾನಿ ನರೇಂದ್ರ ಮೋದಿ ಅವರು, ಮಮತಾ ಬ್ಯಾನರ್ಜಿ ಸರಕಾರದ ಅಂತ್ಯಕ್ಕೆ ದಿನಗಣನೆ ಆರಂಭವಾಗಿದೆ ಎಂದರು.

ಬ್ರಿಗೇಡ್ ಪರೇಡ್ ಮೈದಾನದಲ್ಲಿ ಶನಿವಾರ ನಡೆದ ಸಭೆಯನ್ನು ಉದ್ದೇಶಿಸಿ ಮಾತನಾಡಿದ ಅವರು, ಅಕ್ರಮ ವಲಸಿಗರಿಂದ ಪಶ್ಚಿಮ ಬಂಗಾಳದ ಹಲವು ಭಾಗಗಳಲ್ಲಿ ಜನಸಂಖ್ಯಾ ಚಿತ್ರಣವೇ ಬದಲಾಗಿದೆ. ಟಿಎಂಸಿ ಸರಕಾರವು ಬಂಗಾಳದಲ್ಲಿ ಹಿಂದೂಗಳನ್ನು ಉದ್ದೇಶಪೂರ್ವಕವಾಗಿ ಅಲ್ಪಸಂಖ್ಯಾತರನ್ನಾಗಿ ಮಾಡುತ್ತಿದೆ. ಕಿರುಕುಳಕ್ಕೆ ಒಳಗಾದ ಹಿಂದೂ ನಿರಾಶ್ರಿತರಿಗೆ ಪೌರತ್ವ ನೀಡಲು ವಿರೋಧಿಸುತ್ತಿದೆ ಎಂದು ಆರೋಪಿಸಿದರು.

ಎಸ್‌ಐಆರ್ ಪ್ರಕ್ರಿಯೆಯು ಅಕ್ರಮ ಮತದಾರರ ಹೆಸರುಗಳನ್ನು ಅಳಿಸುತ್ತದೆ ಮತ್ತು ಮತದಾರರ ಪಟ್ಟಿಯನ್ನು ಶುದ್ಧೀಕರಿಸುತ್ತದೆ. ಆದರೆ, ಅದು ಆಗುವುದು ಟಿಎಂಸಿಗೆ ಬೇಕಿಲ್ಲ, ಅಲ್ಲದೆ ಅವರಿಗೆ, ಮೃತರ ಹೆಸರುಗಳನ್ನು ಅಳಿಸುವುದೂ ಬೇಕಿಲ್ಲ. ಎಸ್‌ಐಆರ್ ವಿಚಾರದಲ್ಲಿ ಟಿಎಂಸಿ ಚುನಾವಣಾ ಆಯೋಗ ಸೇರಿದಂತೆ ಸಾಂವಿಧಾನಿಕ ಸಂಸ್ಥೆಗಳನ್ನು ಗುರಿಯಾಗಿಸಿಕೊಂಡಿರುವುದು ನಾಚಿಕೆಗೇಡಿನ ಸಂಗತಿ. ಆಡಳಿತ ಪಕ್ಷವು ತನ್ನ ಕೊನೆಯ ದಿನಗಳನ್ನು ಎಣಿಸುತ್ತಿದೆ ಎಂದರು.

ಟಿಎಂಸಿ ಸರಕಾರಕ್ಕೆ ಅಪರಾಧಿಗಳ ಬೆಂಬಲ: ಟಿಎಂಸಿ ಆಡಳಿತವು ಗೂಂಡಾಗಳು ಮತ್ತು ಅಪರಾಧಿಗಳ ಬೆಂಬಲದ ಮೇಲೆ ನಡೆಯುತ್ತಿದೆ. ಸುಲಿಗೆ, ಹಣ ಕಡಿತ ಮಾಡುವುದು ಈ ಸರಕಾರದ ಆದಾಯದ ಮೂಲಗಳಾಗಿವೆ. ಇಂತಹ ಗ್ಯಾಂಗ್‌ಗಳನ್ನು ಬಲಪಡಿಸುವುದಕ್ಕೆ ನುಸುಳುಕೋರರನ್ನು ಕರೆತರಲಾಗುತ್ತಿದೆ. ಇವರಿಂದ ಬಂಗಾಳದ ಜನರ ಅನ್ನ, ಹೆಣ್ಣು ಮಕ್ಕಳು ಮತ್ತು ಜಮೀನಿಗೆ ಬೆದರಿಕೆಯಿದೆ. ಟಿಎಂಸಿಯ ಈ ಗೂಂಡಾಗಿರಿ ದಿನಗಳು ಕೊನೆಗೊಳ್ಳಲು ದಿನಗಣನೆ ಆರಂಭವಾಗಿದೆ ಎಂಬುದನ್ನು ಟಿಎಂಸಿಗೆ ಹೇಳಲು ಬಯಸುತ್ತೇನೆ ಎಂದು ಮೋದಿ ಹೇಳಿದರು.

ವಿವಿಧ ಅಭಿವೃದ್ಧಿ ಯೋಜನೆಗಳಿಗೆ ಕೋಲ್ಕತ್ತದಲ್ಲಿ ಶನಿವಾರ ಶಂಕುಸ್ಥಾಪನೆ ನೆರವೇರಿಸಿದ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಪಶ್ಚಿಮ ಬಂಗಾಳ ವಿಧಾನಸಭೆಯ ವಿಪಕ್ಷದ ನಾಯಕ ಸುವೆಂದು ಅಧಿಕಾರಿ ಅವರು ಸ್ಮರಣಿಕೆ ನೀಡಿ ಗೌರವಿಸಿದರು .

ರಾಷ್ಟ್ರಪತಿಗೆ ಅವಮಾನ: ಮೋದಿ ಖಂಡನೆ

ರಾಷ್ಟ್ರಪತಿ ಅವರು ಪಶ್ಚಿಮ ಬಂಗಾಳಕ್ಕೆ ಇತ್ತೀಚೆಗೆ ಭೇಟಿ ನೀಡಿದ್ದ ವೇಳೆ ಉಂಟಾಗಿದ್ದ ಶಿಷ್ಟಾಚಾರ ಉಲ್ಲಂಘನೆ ಕುರಿತು ಪ್ರಸ್ತಾಪಿಸಿದ ಪ್ರಧಾನಿ ನರೇಂದ್ರ ಮೋದಿ ಅವರು ಆಡಳಿತಾರೂಢ ಟಿಎಂಸಿಯು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು ಅವಮಾನಿಸುವ ಮೂಲಕ ಎಲ್ಲಾ ಮಿತಿಗಳನ್ನು ದಾಟಿದೆ ಎಂದು ಆರೋಪಿಸಿದರು. ಆದಿವಾಸಿ ಸಮುದಾಯದ ಮಗಳು ಅತ್ಯುನ್ನತ ಸ್ಥಾನ ಅಲಂಕರಿಸಿರುವುದು ಟಿಎಂಸಿಗೆ ಸಹಿಸಲು ಆಗುತ್ತಿಲ್ಲ ಎಂದ ಅವರು ಸಂವಿಧಾನ ಮತ್ತು ಬಿ. ಆರ್.ಅಂಬೇಡ್ಕರ್ ಅವರಿಗೆ ಟಿಎಂಸಿ ಮಾಡಿದ ಅಪಮಾನವನ್ನು ಪಶ್ಚಿಮ ಬಂಗಾಳದ ಜನರು ಸಹಿಸುವುದಿಲ್ಲ. ಅದಕ್ಕೆ ತಕ್ಕ ಪಾಠ ಕಲಿಸುತ್ತಾರೆ ಎಂದರು. ಸಂತಾಲ್ ಬುಡಕಟ್ಟು ಉತ್ಸವದಲ್ಲಿ ಭಾಗವಹಿಸಲು ರಾಷ್ಟ್ರಪತಿಯವರು ರಾಜ್ಯಕ್ಕೆ ಬಂದಿದ್ದ ವೇಳೆ ರಾಜ್ಯ ಸರ್ಕಾರ ಈ ಕಾರ್ಯಕ್ರಮವನ್ನು ಸರಿಯಾಗಿ ನಿರ್ವಹಿಸಲಿಲ್ಲ ಎಂದು ಪ್ರಧಾನಿ ದೂರಿದರು.

ರಾಜಕೀಯ ಬದಲಾವಣೆಗೆ ಒತ್ತಾಯ: ಟಿಎಂಸಿಗೆ ಮತ ಹಾಕದವರು ಬಂಗಾಳಿಗಳಲ್ಲ, ಅವರಿಗೆ ಸರಕಾರಿ ಸವಲತ್ತು ಸಿಗುವುದಿಲ್ಲ ಎಂದು ಟಿಎಂಸಿ ನಾಯಕರು ರಾಜ್ಯದ ಜನರನ್ನು ಬೆದರಿಸುತ್ತಿದ್ದಾರೆ ಎಂದ ಪ್ರಧಾನಿ, ರಾಜ್ಯದ ಭವಿಷ್ಯಕ್ಕಾಗಿ ನಡೆಯುವ ನಿರ್ಣಾಯಕ ಯುದ್ಧದಲ್ಲಿ (ವಿಧಾನಸಭಾ ಚುನಾವಣೆ) ರಾಜಕೀಯ ಬದಲಾವಣೆ ತನ್ನಿ ಎಂದು ಜನರನ್ನು ಒತ್ತಾಯಿಸಿದರು.

ಮುಂಬರುವ ಚುನಾವಣೆಯು ಕೇವಲ ಸರಕಾರವನ್ನು ಬದಲಿಸುವುದಷ್ಟೇ ಅಲ್ಲ, ಬಂಗಾಳದ ಆತ್ಮವನ್ನು ರಕ್ಷಿಸುವ ಚುನಾವಣೆ ಆಗಿದೆ. ಅಲ್ಲದೆ, ಭಯದಿಂದ ಸ್ವಾತಂತ್ರ್ಯದೆಡೆಗೆ ಸಾಗುವ ಚುನಾವಣೆಯಾಗಿದೆ.

-ನರೇಂದ್ರ ಮೋದಿ ಪ್ರಧಾನಿ

ಪ್ರಧಾನಿಯಿಂದ ಸುಳ್ಳಿನ ಕಥೆ: ಟಿಎಂಸಿ

ಕೋಲ್ಕತ್ತ: ಪಶ್ಚಿಮ ಬಂಗಾಳದ ಬಗ್ಗೆ ತಪ್ಪು ಸಂಕಥನ ಸೃಷ್ಟಿಸುವ ಕಾರ್ಯದಲ್ಲಿ ನಿರತರಾಗಿರುವ ಪ್ರಧಾನಿ ನರೇಂದ್ರ ಮೋದಿ ಅವರು ಪ್ರಧಾನಿ ಎಂಬುದಕ್ಕಿಂತ ಮಿಗಿಲಾಗಿ ಸುಳ್ಳು ಹೇಳುವ ಬಿಜೆಪಿಯ ನಾಯಕನಂತೆ ವರ್ತಿಸುತ್ತಿದ್ದಾರೆ ಎಂದು ಟಿಎಂಸಿ ಶನಿವಾರ ದೂರಿದೆ. ನುಸುಳುಕೋರರು ಬಾಂಗ್ಲಾದೇಶಿಗಳು ಮತ್ತು ರೋಹಿಂಗ್ಯಾಗಳ ಬಗ್ಗೆ ಪದೇ ಪದೇ ಆಧಾರರಹಿತ ಹೇಳಿಕೆಗಳನ್ನು ಪ್ರಧಾನಿ ಉಲ್ಲೇಖಿಸುತ್ತಿದ್ದಾರೆ ಎಂದು ಸಚಿವ ಬ್ರಾತ್ಯಾ ಬಸು ಆರೋಪಿಸಿದರು. ಬಿಜೆಪಿಯು ಮತದಾರರ ಧ್ರುವೀಕರಣಕ್ಕೆ ಯತ್ನಿಸುತ್ತಿದೆ. ಚುನಾವಣಾ ಲಾಭಕ್ಕಾಗಿ ಸಮುದಾಯಗಳನ್ನು ಎತ್ತಿಕಟ್ಟುವ ವಿಭಜಕ ಕಾರ್ಯಸೂಚಿಯು ಪ್ರಧಾನಿ ಅವರ ಭಾಷಣದಲ್ಲಿ ಪ್ರತಿಬಿಂಬಿತವಾಗಿದೆ ಎಂದು ಅವರು ದೂರಿದರು. ರಾಜ್ಯದ ಪ್ರಗತಿಪರ ಜನರು ಇಂತಹದ್ದರಿಂದ ಪ್ರಭಾವಿತರಾಗುವುದಿಲ್ಲ ಎಂದು ಅವರು ತಿಳಿಸಿದರು. ಬಂಗಾಳದ ಹಲವು ಯೋಜನೆಗಳಿಗೆ ನೀಡಬೇಕಾದ ಸುಮಾರು ₹ 2 ಲಕ್ಷ ಕೋಟಿ ತಡೆಹಿಡಿದಿರುವ ಕೇಂದ್ರ ಸರಕಾರವು ರಾಜ್ಯದ ಅಭಿವೃದ್ಧಿ ಬಗ್ಗೆ ಮಾತನಾಡುತ್ತಿದೆ ಎಂದು ಟಿಎಂಸಿ ಸಂಸದೆ ಸಾಯೋನಿ ಘೋಷ್ ವ್ಯಂಗ್ಯವಾಡಿದರು.

ಸಮಾಚಾರ ಸಣ್ಣದಲ್ಲ

ಸ್ವಿಸ್ ಓಪನ್ ಬ್ಯಾಡ್ಮಿಂಟನ್ ತರುಣ್ ಪರಾಜಯ

ಬಾಸೆಲ್: ಭಾರತದ ತರುಣ್ ಮನ್ನೆಪಲ್ಲಿ ಅವರು ಸ್ವಿಸ್ ಓಪನ್ ಸೂಪರ್ 300 ಬ್ಯಾಡ್ಮಿಂಟನ್ ಟೂರ್ನಿಯ ಕ್ವಾರ್ಟರ್‌ಫೈನಲ್‌ನಲ್ಲಿ ಇಂಡೊನೇಷ್ಯಾದ ಅಂಥೋನಿ ಸಿನಿಸುಕಾ ಜಿಂಟಿಂಗ್ ವಿರುದ್ಧ ತೀವ್ರ ಹೋರಾಟ ತೋರಿದ ನಂತರ ಸೋಲನುಭವಿಸಿದರು. ಇದರೊಂದಿಗೆ 2.30 ಕೋಟಿ ಬಹುಮಾನ ಮೊತ್ತದ ಈ ಟೂರ್ನಿಯಲ್ಲಿ ಭಾರತದ ಸವಾಲು ಅಂತ್ಯಗೊಂಡಿದೆ. ಗಾಯಾಳಾಗಿ ಪುನರಾಗಮನ ಮಾಡಿರುವ ಸಿನಿಸುಕಾ ಜಿಂಟಿಂಗ್ 17 ತಿಂಗಳಲ್ಲಿ ಮೊದಲ ಬಾರಿ ಪ್ರಮುಖ ಟೂರ್ನಿಯೊಂದರ ಸೆಮಿಫೈನಲ್ ತಲುಪಿದರು. ಈ ಪಂದ್ಯದಲ್ಲಿ ಅವರು 21–19, 19–21, 21–13 ರಿಂದ ಮನ್ನೆಪಲ್ಲಿ ಅವರನ್ನು ಸೋಲಿಸಿದರು. ತರುಣ್ ಅವರು ವಿಶ್ವ ಕ್ರಮಾಂಕದಲ್ಲಿ 43ನೇ ಸ್ಥಾನದಲ್ಲಿದ್ದಾರೆ.

ವಿರಾಮ
ಪ್ರತಿ ಭಾನುವಾರ

ಸುರಕ್ಷತೆ ಸಂಬಂಧ ತಜ್ಞರ ಸಮಿತಿಗೆ ಕೆಎಸ್‌ಸಿಎ ವಿವರಣೆ

ತವರಿನಲ್ಲಿ ಆರ್‌ಸಿಬಿ ಪಂದ್ಯ: ಇಂದು ಅಂತಿಮ ನಿರ್ಧಾರ

ಬೆಂಗಳೂರು: ಐಪಿಎಲ್ 2026ನೇ ಆವೃತ್ತಿ ಆರಂಭಕ್ಕೆ ದಿನಗಣನೆ ಆರಂಭವಾಗಿದ್ದು, ಬಿಸಿಸಿಐ ಈಗಾಗಲೇ ಮೊದಲ ಹಂತದ ವೇಳಾಪಟ್ಟಿಯನ್ನು ಪ್ರಕಟಿಸಿದೆ. ಹೀಗಿದ್ದರೂ, ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿಯೇ ಆರ್‌ಸಿಬಿಯ ತವರು ಪಂದ್ಯಗಳು ನಡೆಯಲಿವೆಯೇ ಎಂಬುದರ ಕುರಿತು ಅಂತಿಮ ನಿರ್ಧಾರ ಮಾರ್ಚ್ 16 ರಂದು ಪ್ರಕಟವಾಗಲಿದೆ.

ಬಿಸಿಸಿಐ ಘೋಷಿಸಿದ ಆರಂಭಿಕ ವೇಳಾಪಟ್ಟಿಯ ಪ್ರಕಾರ, ಆರ್‌ಸಿಬಿ ಮತ್ತು ಸನ್‌ರೈಸರ್ಸ್ ಹೈದರಾಬಾದ್ ನಡುವಿನ ಇಂಡಿಯನ್ ಪ್ರೀಮಿಯರ್ ಲೀಗ್ 2026ರ ಆವೃತ್ತಿಯ ಉದ್ಘಾಟನಾ ಪಂದ್ಯ ಬೆಂಗಳೂರಿನಲ್ಲಿ ನಡೆಯಲಿದೆ.

ಕರ್ನಾಟಕ ಸರಕಾರ ರಚಿಸಿರುವ ತಜ್ಞರ ಸಮಿತಿಯು ಕರ್ನಾಟಕ ರಾಜ್ಯ ಕ್ರಿಕೆಟ್ ಸಂಘದೊಂದಿಗೆ ಶುಕ್ರವಾರ ಸಭೆ ನಡೆಸಿದೆ. ಚಿನ್ನಸ್ವಾಮಿ ಕ್ರೀಡಾಂಗಣವನ್ನು ಹೆಚ್ಚಿನ ಸಂಖ್ಯೆಯ ಜನರು ಸೇರಿದ ಸಂದರ್ಭದಲ್ಲೂ ಸುರಕ್ಷಿತವಾಗಿಸುವ ಕ್ರಮದ ಭಾಗವಾಗಿ ಕೆಎಸ್‌ಸಿಎ ಪಂದ್ಯದ ದಿನದ ವ್ಯವಸ್ಥೆಗಳ ಪೂರ್ಣ ಪ್ರಮಾಣದ ವಿಡಿಯೋ ಪ್ರಾತ್ಯಕ್ಷಿಕೆ ನೀಡಿದೆ.

ಸಮಿತಿ ಕೆಎಸ್‌ಸಿಎ ಕೈಗೊಂಡಿರುವ ಕೆಲಸಗಳನ್ನು ಪರಿಶೀಲಿಸಿತು. ಈ ವೇಳೆ ಆರ್‌ಸಿಬಿ ಸಿಬ್ಬಂದಿ ಕೂಡ ಇದ್ದರು. ಕ್ರೀಡಾಂಗಣಕ್ಕೆ ಆಗಮಿಸುವ ಪ್ರೇಕ್ಷಕರ ಸುರಕ್ಷತೆಗಾಗಿ ಗೇಟ್‌ಗಳ ಸಂಖ್ಯೆ ಹೆಚ್ಚಿಸಿರುವ ಕೆಎಸ್‌ಸಿಎ, ಪ್ರವೇಶ ದ್ವಾರಗಳನ್ನು 9 ಮೀ.ಗೆ ವಿಸ್ತರಿಸಿದೆ. ಅಲ್ಲದೇ ಇನ್ನೂ ಹಲವು ಕ್ರಮಗಳನ್ನು

ಕೈಗೊಂಡಿದೆ. ಈ ಎಲ್ಲ ಮಾಹಿತಿ ಪಡೆದಿರುವ ತಜ್ಞರ ಸಮಿತಿ, ಸೋಮವಾರ ಪಂದ್ಯಗಳ ಆಯೋಜನೆಗೆ ಅಧಿಕೃತವಾಗಿ ಹಸಿರು ನಿಶಾನೆ ತೋರುವ ನಿರೀಕ್ಷೆ ಇದೆ.

'ಮುಂಬರುವ ಐಪಿಎಲ್ ಪಂದ್ಯಗಳನ್ನು ಸುಗಮವಾಗಿ ಮತ್ತು ಕ್ರಮಬದ್ಧವಾಗಿ ನಡೆಸಲು ಆರ್‌ಸಿಬಿ ಮತ್ತು ಅದರ ಸಂಬಂಧಿತ ಕಾರ್ಯಾಚರಣಾ ಸಂಸ್ಥೆಗಳ ಪ್ರತಿನಿಧಿಗಳು ತಮ್ಮ ಸಿದ್ಧತೆ ಮತ್ತು ಕಾರ್ಯಾಚರಣಾ ಯೋಜನೆಗಳನ್ನು ಮಂಡಿಸಿದರು. ಚರ್ಚೆಗಳು ರಚನಾತ್ಮಕ ಮತ್ತು ಸಕಾರಾತ್ಮಕವಾಗಿದ್ದವು. ಸೋಮವಾರ ಸಂಜೆಯೊಳಗೆ ಹೆಚ್ಚಿನ ಮಾಹಿತಿ ನಿರೀಕ್ಷಿಸಲಾಗಿದೆ ಎಂದು ಕೆಎಸ್‌ಸಿಎ ಪ್ರಕಟಣೆಯಲ್ಲಿ ತಿಳಿಸಿದೆ.

2025ರ ಜೂ.4ರಂದು ಆರ್‌ಸಿಬಿ ತಂಡದ ಸಂಭ್ರಮಾಚರಣೆ ವೇಳೆ ನಡೆದ ಕಾಲ್ತುಳಿತ ಘಟನೆಯಲ್ಲಿ 11 ಜನ ಮೃತಪಟ್ಟ ಹಿನ್ನೆಲೆಯಲ್ಲಿ ಕ್ರೀಡಾಂಗಣದಲ್ಲಿ ಮತ್ತೆ ಪಂದ್ಯಗಳ ಆಯೋಜನೆಗೆ ಸರಕಾರ ನೇಮಿಸಿದ್ದ ನ್ಯಾ.ಕುನ್ಹಾ ಸಮಿತಿ ಹಲವು ಬದಲಾವಣೆಗಳನ್ನು ಮಾಡಲು ಶಿಫಾರಸು ಮಾಡಿತ್ತು. ಜೊತೆಗೆ ಕೆಎಸ್‌ಸಿಎನಲ್ಲಿ ಆಗಬೇಕಿರುವ ಬದಲಾವಣೆಗಳ ಮೇಲ್ವಿಚಾರಣೆಗೆ ಸರಕಾರ ಹಲವು ಇಲಾಖೆಗಳ ಪ್ರತಿನಿಧಿಗಳನ್ನು ಒಳಗೊಂಡಿರುವ ತಜ್ಞರ ಸಮಿತಿಯನ್ನೂ ರಚಿಸಿದೆ.

ರೋಜರ್‌ಬಿನ್ನಿ,ರಾಹುಲ್ ದ್ರಾವಿಡ್‌ಗೆ ಕರ್ನಲ್ ಸಿ.ಕೆ. ನಾಯ್ಡು ಜೀವಮಾನ ಸಾಧನೆ ಪ್ರಶಸ್ತಿ

ವಿಶ್ವಕಪ್ ವಿಜೇತರಿಗಿಂದು ಸನ್ಮಾನ

ಮುಂಬೈ: ಟಿ20 ವಿಶ್ವಕಪ್ ಗೆಲ್ಲುವ ಮೂಲಕ ಇತಿಹಾಸ ಬರೆದ ಸೂರ್ಯಕುಮಾರ್ ಯಾದವ್ ನೇತೃತ್ವದ ಭಾರತ ಕ್ರಿಕೆಟ್ ತಂಡವನ್ನು ಭಾನುವಾರ ಇಲ್ಲಿ ನಡೆಯುವ ವಾರ್ಷಿಕ 'ನಮನ್' ಪ್ರಶಸ್ತಿ' ಪ್ರದಾನ ಸಮಾರಂಭದಲ್ಲಿ ಬಿಸಿಸಿಐ ಸನ್ಮಾನಿಸಲಿದೆ.

ಇತ್ತೀಚೆಗೆ, ಐಸಿಸಿ ಪ್ರಶಸ್ತಿಗಳನ್ನು ಗೆದ್ದ ಭಾರತದ ಪುರುಷ ಮತ್ತು ಮಹಿಳೆಯರ ಐದೂ ತಂಡಗಳನ್ನು ಇಲ್ಲಿ ಸನ್ಮಾನಿಸಲಾಗುವುದು. ಇದು ನಮನ್ ಪ್ರಶಸ್ತಿ 2026ರ ಪ್ರಮುಖ ಅಂಶವಾಗಿದೆ. ಇದು ಐತಿಹಾಸಿಕ ಎಂದು ಭಾರತೀಯ ಕ್ರಿಕೆಟ್ ಮಂಡಳಿ ಹೇಳಿದೆ.

ಮಾರ್ಚ್ 8ರಂದು ಅಹಮದಾಬಾದ್‌ನಲ್ಲಿ ನಡೆದ ಫೈನಲ್‌ನಲ್ಲಿ ನ್ಯೂಜಿಲೆಂಡ್ ತಂಡವನ್ನು 96 ರನ್‌ಗಳಿಂದ ಮಣಿಸಿದ ಭಾರತ ತಂಡ 3 ಬಾರಿ ಟಿ20 ವಿಶ್ವಕಪ್ ಗೆದ್ದ ಮೊದಲ ತಂಡವಾಗಿ ಗುರುತಿಸಿಕೊಂಡಿದೆ. ಪ್ರಶಸ್ತಿಯನ್ನು ಯಶಸ್ವಿಯಾಗಿ ಉಳಿಸಿಕೊಂಡ ಮೊದಲ ಮತ್ತು ತವರು ನೆಲದಲ್ಲಿ ಈ ಸಾಧನೆ ಮಾಡಿದ ಮೊದಲ ತಂಡವಾಗಿಯೂ ಭಾರತ ದಾಖಲೆ ಬರೆದಿದೆ.

ಈ ಸಮಾರಂಭದಲ್ಲಿ ಇತ್ತೀಚೆಗೆ ಐಸಿಸಿ ಟ್ರೋಫಿಗಳನ್ನು ಗೆದ್ದ ಭಾರತದ ಎಲ್ಲ ತಂಡಗಳನ್ನು ಸನ್ಮಾನಿಸಲಾಗುವುದು, ಇದರಲ್ಲಿ 2025ರ ಏಕದಿನ ವಿಶ್ವಕಪ್ ಗೆದ್ದ ಮಹಿಳಾ ತಂಡ, 2025ರ ಐಸಿಸಿ

ಚಾಂಪಿಯನ್ಸ್ ಟ್ರೋಫಿ ಗೆದ್ದ ಪುರುಷರ ತಂಡ, 2026ರ ಅಂಡರ್ –19 ಕ್ರಿಕೆಟ್ ವಿಶ್ವಕಪ್ ಮತ್ತು 2025ರ ಮಹಿಳಾ ಅಂಡರ್ –19 ಟಿ 20 ವಿಶ್ವಕಪ್ ಗೆದ್ದ ತಂಡಗಳು ಸೇರಿವೆ.

ಇದೇ ವೇಳೆ ಭಾರತ ಟೆಸ್ಟ್ ಮತ್ತು ಏಕದಿನ ಕ್ರಿಕೆಟ್ ತಂಡದ ನಾಯಕ ಶುಭಮನ್ ಗಿಲ್, 2024–25ರ ಅವಧಿಯ ಅತ್ಯುತ್ತಮ ಅಂತರರಾಷ್ಟ್ರೀಯ ಕ್ರಿಕೆಟರ್ ಪ್ರಶಸ್ತಿ ಸ್ವೀಕರಿಸಲಿದ್ದಾರೆ. ಮಹಿಳಾ ವಿಭಾಗದಲ್ಲಿ ಸ್ಮೃತಿ ಮಂದಾನ ಅತ್ಯುತ್ತಮ ಅಂತರರಾಷ್ಟ್ರೀಯ ಕ್ರಿಕೆಟ್ ಆಟಗಾರ್ತಿ ಪ್ರಶಸ್ತಿ ಸ್ವೀಕರಿಸಲಿದ್ದಾರೆ. ಮಾಜಿ ದಿಗ್ಗಜರಾದ ರೋಜರ್ ಬಿನ್ನಿ ಮತ್ತು ರಾಹುಲ್ ದ್ರಾವಿಡ್ ಅವರಿಗೆ ಕರ್ನಲ್ ಸಿ.ಕೆ. ನಾಯ್ಡು ಜೀವಮಾನ ಸಾಧನೆ ಪ್ರಶಸ್ತಿಯನ್ನು ನೀಡಲಾಗುತ್ತಿದ್ದು, ಭಾರತ ಮಹಿಳಾ ತಂಡದ ಮಾಜಿ ನಾಯಕಿ ಮಿಥಾಲಿ ರಾಜ್ ಅವರಿಗೆ ಮಹಿಳಾ ವಿಭಾಗದಲ್ಲಿ ಜೀವಮಾನ ಸಾಧನೆ ಪ್ರಶಸ್ತಿಯನ್ನು ನೀಡಲಾಗುತ್ತಿದೆ.

ಕೋಲ್ಕತಾ ತಂಡಕ್ಕೆ ಜಿಂಬಾಬ್ವೆ ಫಾಸ್ಟ್ ಬೌಲರ್ ಮುಜರಬಾನಿ ಬಲ

ಪಾಕ್ ಲೀಗ್‌ಗೆ ವಿದಾಯ ಹೇಳಿ ಕೆಕೆಆರ್ ಸೇರಿದ ಜಿಂಬಾಬ್ವೆ ವೇಗಿ

ಕೋಲ್ಕತಾ: ಐಪಿಎಲ್ 2026ರ ಋತು ಆರಂಭಕ್ಕೆ ಇನ್ನು ಎರಡೇ ವಾರ ಬಾಕಿ ಇದೆ. ಈ ನಡುವೆ ಕೋಲ್ಕತಾ ನೈಟ್ ರೈಡರ್ಸ್ ತಂಡವು ಬಾಂಗ್ಲಾದೇಶದ ವೇಗಿ ಮುಸ್ತಫಿಜುರ್ ರೆಹಮಾನ್ ಬದಲಿಗೆ ಜಿಂಬಾಬ್ವೆಯ ಫಾಸ್ಟ್ ಬೌಲರ್ ಬ್ಲೆಸ್ಸಿಂಗ್ ಮುಜರಬಾನಿ ಅವರನ್ನು ತಂಡಕ್ಕೆ ಸೇರಿಸಿಕೊಂಡಿದೆ. ಫ್ರಾಂಚೈಸಿ ಈ ಸುದ್ದಿಯನ್ನು ಮಾರ್ಚ್ 13, ಶುಕ್ರವಾರದಂದು ಅಧಿಕೃತವಾಗಿ ಖಚಿತಪಡಿಸಿದೆ. ಮುಜರಬಾನಿ ಮಾರ್ಚ್ 17ರಂದು ತಂಡವನ್ನು ಸೇರಿಕೊಳ್ಳಲಿದ್ದಾರೆ. 2026ರ ಟಿ20 ವಿಶ್ವಕಪ್‌ನಲ್ಲಿ 13 ವಿಕೆಟ್ ಪಡೆದು ಮಿಂಚಿದ್ದ ಮುಜರಬಾನಿ, ಐಪಿಎಲ್‌ನಲ್ಲಿ ಆಡಲೆಂದೇ ಪಾಕಿಸ್ತಾನ ಸೂಪರ್ ಲೀಗ್‌ನಿಂದ ಹೊರ ನಡೆದಿದ್ದಾರೆ. ಕಳೆದ ಆವೃತ್ತಿಯಲ್ಲಿ ಕೊನೆಯ ಹಂತದಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದಲ್ಲಿದ್ದ ಬ್ಲೆಸ್ಸಿಂಗ್ ಮುಜ ರಬಾನಿ, ಇದೀಗ ಕೋಲ್ಕತಾ ನೈಟ್ ರೈಡರ್ಸ್ ತಂಡವನ್ನು ಪ್ರತಿನಿಧಿಸಲು ರೆಡಿಯಾಗಿದ್ದಾರೆ.

6 ಅಡಿ 8 ಇಂಚು ಎತ್ತರದ ಈ ಬಲಗೈ ವೇಗಿ, ತಮ್ಮ ಸ್ಪೀಡ್ ಮತ್ತು ಬೌನ್ಸ್‌ನಿಂದ ಅಂತರಾಷ್ಟ್ರೀಯ ಕ್ರಿಕೆಟ್ ಹಾಗೂ ಬೇರೆ ಬೇರೆ ಲೀಗ್‌ಗಳಲ್ಲಿ ಈಗಾಗಲೇ ಹೆಸರು ಮಾಡಿದ್ದಾರೆ. ಮತೀಶ ಪತಿರಾಣ ಮತ್ತು ಹರ್ಷಿತ್ ರಾಣಾ ಅವರ ಗಾಯದಿಂದಾಗಿ ಸಂಕಷ್ಟದಲ್ಲಿದ್ದ ಕೋಲ್ಕತಾ ತಂಡದ ವೇಗದ ಬೌಲಿಂಗ್ ವಿಭಾಗಕ್ಕೆ ಮುಜರಬಾನಿ ಅವರ ಸೇರ್ಪಡೆ ದೊಡ್ಡ ಬಲ ನೀಡಲಿದೆ. ಕೋಲ್ಕತಾ ತಂಡದಿಂದ ರಿಲೀಸ್ ಆದ ಬೆನ್ನಲ್ಲೇ, ಮುಸ್ತಫಿಜುರ್ ರೆಹಮಾನ್ ಪಾಕಿಸ್ತಾನ್ ಸೂಪರ್ ಲೀಗ್‌ನಲ್ಲಿ ಲಾಹೋರ್ ಖಲಂದರ್ಸ್ ತಂಡವನ್ನು ಸೇರಿಕೊಂಡಿದ್ದಾರೆ.

ಕಾನೂನು ಕ್ರಮ: ಪಿಸಿಬಿ ಬೆದರಿಕೆ

ಇದೇ ವೇಳೆ ಪಾಕಿಸ್ತಾನ ಸೂಪರ್ ಲೀಗ್‌ನಿಂದ ಹಿಂದೆ ಸರಿದು ಇಂಡಿಯನ್ ಪ್ರೀಮಿಯರ್ ಲೀಗ್ ಆಯ್ಕೆ ಮಾಡಿಕೊಂಡಿದ್ದಕ್ಕಾಗಿ ಜಿಂಬಾಬ್ವೆ ವೇಗಿ ಬ್ಲೆಸ್ಸಿಂಗ್ ಮುಜರಬಾನಿ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವ ಬಗ್ಗೆ ಪಾಕಿಸ್ತಾನ ಕ್ರಿಕೆಟ್ ಮಂಡಳಿ ಚಿಂತನೆ ನಡೆಸುತ್ತಿದೆ ಎನ್ನಲಾಗಿದೆ.

ಕಳೆದ ವರ್ಷ ನಡೆದ ಐಪಿಎಲ್ ಹರಾಜಿನಲ್ಲಿ ಬಿಕರಿಯಾಗದೆ ಉಳಿದಿದ್ದ ಮುಜರಬಾನಿ ಅವರನ್ನು ಮಾರ್ಚ್ 26ರಂದು ಪ್ರಾರಂಭವಾಗಲಿರುವ ಪಿಎಸ್‌ಎಲ್ ಸೀಸನ್ 11ಕ್ಕಾಗಿ ಇಸ್ಲಾಮಾಬಾದ್ ಯುನೈಟೆಡ್ ತಂಡವು ಪಿಕೆಆರ್ 11 ಮಿಲಿಯನ್‌ಗೆ ಖರೀದಿಸಿತ್ತು. ಇಷ್ಟಾದರೂ ಕೋಲ್ಕತ್ತಾ ಫ್ರಾಂಚೈಸಿ ಸಂಪರ್ಕಿಸಿದಾಗ, ಈ ವೇಗಿ ಐಪಿಎಲ್ ತಂಡವನ್ನು ಸೇರಲು ಪಿಸಿಬಿ ಜತೆಗಿನ ಒಪ್ಪಂದವನ್ನು ತ್ಯಜಿಸಲು ನಿರ್ಧರಿಸಿದ್ದಾರೆ.

ಭಾರತೀಯ ಮಹಿಳೆಯರಿಗೆ ಕ್ರಿಕೆಟ್ ಈಗ ಹೆಚ್ಚು ಇಷ್ಟದ ಕ್ರೀಡೆ

ವನಿತಾ ಕ್ರಿಕೆಟಿಗರ ಸಂಖ್ಯೆ ದ್ವಿಗುಣ

ದೆಹಲಿ: ಹರ್ಮನ್ ಪ್ರೀತ್ ಕೌರ್ ನೇತೃತ್ವದ ಟೀಮ್ ಇಂಡಿಯಾ ಮಹಿಳಾ ತಂಡ ವಿಶ್ವಕಪ್ ಗೆದ್ದ ಬಳಿಕ ಮಹಿಳೆಯರ ಕ್ರಿಕೆಟ್‌ನಲ್ಲಿ ಭಾರೀ ಬೆಳವಣಿಗೆಯಾಗುತ್ತಿದ್ದು, ದೇಶಾದ್ಯಂತ ಕ್ರಿಕೆಟ್‌ನಲ್ಲಿ ಭಾಗವಹಿಸುವವರ ಸಂಖ್ಯೆ ದ್ವಿಗುಣವಾಗಿದೆ ಎಂದು ಬಿಬಿಸಿ ಹಾಗೂ ಕಲೆಕ್ಟಿವ್ ನ್ಯೂಸ್‌ರೂಮ್ ನಡೆಸಿರುವ ಅಧ್ಯಯನ ವರದಿಯಲ್ಲಿ ತಿಳಿದುಬಂದಿದೆ.

10 ಸಾವಿರಕ್ಕೂ ಅಧಿಕ ಮಹಿಳೆಯರ ಸಮೀಕ್ಷೆ ನಡೆಸಲಾಗಿದೆ. 2020ರ ನಂತರ ಕ್ರಿಕೆಟ್‌ನಲ್ಲಿ ಭಾಗವಹಿಸುವ ಮಹಿಳೆಯರ ಸಂಖ್ಯೆಯು ಶೇ.5ರಿಂದ 10ಕ್ಕೆ ಏರಿಕೆಯಾಗಿದೆ. 2024ರ ನಂತರ ಈ ಪ್ರಕ್ರಿಯೆಗೆ ಮತ್ತಷ್ಟು ವೇಗ ಸಿಕ್ಕಿದೆ. 15ರಿಂದ 24ರ ವಯಸ್ಸಿನ ಶೇ.16ರಷ್ಟು ಮಹಿಳೆಯರು ತಾವು ಕ್ರಿಕೆಟ್ ಆಡುತ್ತಿರುವುದಾಗಿ ಹೇಳಿದ್ದಾರೆ. 15ರಿಂದ 24ರ ವಯಸ್ಸಿನ ನಾಲ್ಕು ಯುವ ಮಹಿಳೆಯರ ಪೈಕಿ ಒಬ್ಬರು ಕ್ರಿಕೆಟ್ ಕ್ರೀಡೆಯನ್ನು ವೃತ್ತಿಜೀವನದ ಆಯ್ಕೆಯಾಗಿ ಪರಿಗಣಿಸುತ್ತೇನೆ ಎಂದು ಹೇಳಿದ್ದಾಗಿ ಅಧ್ಯಯನ ತಿಳಿಸಿದೆ.

ಭಾರತೀಯ ಮಹಿಳೆಯರ ಕ್ರಿಕೆಟ್ ತಂಡವು ಇತ್ತೀಚೆಗೆ ತನ್ನ ಚೊಚ್ಚಲ ಏಕದಿನ ವಿಶ್ವಕಪ್ ಜಯಿಸಿತ್ತು. ದಶಕದಲ್ಲಿ ಮೊದಲ ಬಾರಿ ಮೂರು ಪಂದ್ಯಗಳ ಟಿ–20 ಸರಣಿಯಲ್ಲಿ ಆಸ್ಟ್ರೇಲಿಯ ತಂಡವನ್ನು ಮಣಿಸಿತ್ತು. ಇದು ಕ್ರೀಡೆಯಲ್ಲಿ ಜನಪ್ರಿಯತೆ ಹೆಚ್ಚಾಗಲು ಕಾರಣವಾಗಿದೆ.

ಕ್ರಿಕೆಟ್ ಪಂದ್ಯವು ಸಾಂಪ್ರದಾಯಿಕ ಕ್ರೀಡೆ ಕಬಡ್ಡಿಯನ್ನು ಹಿಂದಿಕ್ಕಿದೆ. ಸಮೀಕ್ಷೆ ನಡೆಸಿದ ರಾಜ್ಯಗಳಲ್ಲಿ ಮಹಿಳೆಯರು ಹೆಚ್ಚು ಆಡುವ ಕ್ರೀಡೆಯಾಗಿ ಕ್ರಿಕೆಟ್ ತನ್ನ ಸ್ಥಾನವನ್ನು ಬಲಪಡಿಸಿಕೊಂಡಿದೆ. 2020ರಲ್ಲಿ ಅದು ಕಬಡ್ಡಿಯನ್ನು ಸ್ವಲ್ಪ ಹಿಂದಕ್ಕೆ ತಳ್ಳಿತ್ತು. ಆದರೆ ಹೊಸ ಅಂಕಿ–ಅಂಶಗಳ ಪ್ರಕಾರ ಈಗ ಅದು ಸಾಕಷ್ಟು ಮುಂದಿರುವುದು ಸೂಚಿಸುತ್ತದೆ. ಸಮೀಕ್ಷೆ ನಡೆಸಿದ ಎರಡು ರಾಜ್ಯಗಳನ್ನು ಹೊರತುಪಡಿಸಿ ಉಳಿದೆಲ್ಲ ರಾಜ್ಯಗಳಲ್ಲಿ ಕ್ರಿಕೆಟ್ ಆಡುವ ಮಹಿಳೆಯರ ಸಂಖ್ಯೆಯಲ್ಲಿ ಏರಿಕೆಯಾಗಿದೆ.

ಕ್ರೀಡಾ ಸ್ಫೂರ್ತಿಯ ಪ್ರಶ್ನೆ ಎತ್ತಿದ ಬಾಂಗ್ಲಾ ನಾಯಕ ಮಿರಾಜ್ ನಡೆ

ಸಲ್ಮಾನ್ ರನೌಟ್: ಪಾಕ್ ಆಕ್ರೋಶ

ಢಾಕಾ: ಇಲ್ಲಿನ ಶೇರ್ ಬಾಂಗ್ಲಾ ಕ್ರೀಡಾಂಗಣದಲ್ಲಿ ನಡೆದ ಬಾಂಗ್ಲಾದೇಶ ಮತ್ತು ಪಾಕಿಸ್ತಾನ ನಡುವಿನ ಎರಡನೇ ಏಕದಿನ ಪಂದ್ಯದಲ್ಲಿ ಸಲ್ಮಾನ್ ಅಘಾ ಅವರ ರನೌಟ್‌ವಿವಾದಕ್ಕೆ ಕಾರಣವಾಗಿದ್ದು, ಸಾಮಾಜಿಕ ಜಾಲತಾಣದಲ್ಲಿ ತೀವ್ರ ಚರ್ಚೆಗೆ ಕಾರಣವಾಗಿದೆ

ಟಾಸ್‌ಸೋತು ಮೊದಲು ಬ್ಯಾಟಿಂಗ್ ಮಾಡುತ್ತಿದ್ದ ಪಾಕಿಸ್ತಾನ ತಂಡವು 38.3 ಓವರ್‌ಗಳಲ್ಲಿ 3 ವಿಕೆಟ್ ನಷ್ಟಕ್ಕೆ 227 ರನ್ ಗಳಿಸಿತ್ತು. ಅನುಭವಿ ಆಟಗಾರರಾದ ಮೊಹಮ್ಮದ್ ರಿಜ್ವಾನ್ ಮತ್ತು ಸಲ್ಮಾನ್ ಅಘಾ ಕ್ರೀಸ್‌ನಲ್ಲಿದ್ದರು. ಐದನೇ ವಿಕೆಟ್‌ಗೆ ಶತಕದ ಜೊತೆಯಾಟವಾಡುತ್ತಿದ್ದ ಈ ಜೋಡಿಯನ್ನು ಮುರಿಯುವ ಪ್ರಯತ್ನದಲ್ಲಿ ಬಾಂಗ್ಲಾ ತಂಡವಿತ್ತು.

39ನೇ ಓವರ್‌ಎಸೆಯಲು ಬಂದ ಬಾಂಗ್ಲಾ ನಾಯಕ ಮೆಹಿದಿ ಹಸನ್ ಮಿರಾಜ್, ಹೇಗಾದರು ಮಾಡಿ ವಿಕೆಟ್ ಕೀಳುವ ಪ್ರಯತ್ನದಲ್ಲಿದ್ದರು. ಆ ಓವರ್‌ನಲ್ಲಿ 4ನೇ ಎಸೆತವನ್ನು ಮಿರಾಜ್ ಎಸೆದಾಗ ಸ್ಟ್ರೈಕ್ ರಿಜ್ವಾನ್ ಆ ಎಸೆತವನ್ನು ಡಿಫೆಂಡ್ ಮಾಡಿದರು. ಬಾಲ್ ಬೌಲರ್‌ಕಡೆ ಬರುತ್ತಿರುವುದನ್ನು ನೋಡಿದ ಮಿರಾಜ್‌ಬಾಲ್ ತಡೆಯುವ ಪ್ರಯತ್ನದಲ್ಲಿ ಆ ಕಡೆ ತೆರಳಿದಾಗ ನಾನ್ ಸ್ಟ್ರೈಕರ್‌ನಲ್ಲಿದ್ದ ಸಲ್ಮಾನ್ ಅಘಾ ಅವರಿಗೆ ಡಿಕ್ಕಿ ಹೊಡೆದರು. ಕಾಲಿಗೆ ತಲುಗಿದ ಬಾಲ್ ಅನ್ನು ಕ್ರೀಸ್‌ನ ಹೊರಗಿದ್ದ

ಗಾಯದ ಮೇಲೆ ಬರೆ

ಮೊದಲ ಏಕದಿನ ಪಂದ್ಯದಲ್ಲಿ ಹೀನಾಯವಾಗಿ ಸೋತಿದ್ದ ಪಾಕ್ ವಿರುದ್ಧ ಐಸಿಸಿ ಕ್ರಮ ಕೈಗೊಳ್ಳುವ ಮೂಲಕ ಗಾಯದ ಮೇಲೆ ಬರೆ ಎಳೆದಿದೆ. ಅಂಪೈರ್ ವಿರುದ್ಧ ಮತ್ತು ಬಾಂಗ್ಲಾದೇಶ ನಾಯಕನ ವಿರುದ್ಧ ತಮ್ಮ ಆಕ್ರೋಶ ಹೊರಹಾಕಿದ್ದ ಸಲ್ಮಾನ್ ಅಲಿ ಅಘಾ ವಿರುದ್ಧ ಐಸಿಸಿ ರೆಫರಿ ನಿಯಮೂರ್ ರಶೀದ್ ಕ್ರಮಕೈಗೊಂಡಿದ್ದು ಒಂದು ಡಿಮೆರಿಟ್ ಪಾಯಿಂಟ್ ನೀಡಿದ್ದಾರೆ.

ಅಘಾ, ಬೌಲರ್‌ಗೆ ಕೊಡಲು ತೆರಳುವ ಮುಂಚೆಯೇ ಮಿರಾಜ್ ಅವರನ್ನು ರನೌಟ್ ಮಾಡಿದರು. ಬಾಲ್‌ಡೆಡ್‌ಆಗಿಲ್ಲದ ಕಾರಣ ಮೂರನೇ ಅಂಪೈರ್ ಔಟ್‌ಎಂದು ಘೋಷಿಸಿದರು. 62 ಎಸೆತಗಳಲ್ಲಿ 64 ರನ್‌ಗಳಿಸಿದ್ದ ಸಲ್ಮಾನ್ ಅಘಾ, ಮೈದಾನದಲ್ಲೇ ಮಿರಾಜ್‌ನೊಂದಿಗೆ ತಮ್ಮ ಆಕ್ರೋಶವನ್ನು ವ್ಯಕ್ತಪಡಿಸಿದರು. 'ನಾನ್ ಸ್ಟ್ರೈಕರ್‌ನಲ್ಲಿದ್ದ ಬ್ಯಾಟರ್, ಕ್ರೀಸ್‌ನಿಂದ ಹೊರಗಿದ್ದಾಗ ಆತ ರನ್ ಓಡುವ ಸಾಧ್ಯತೆ ಕೂಡ ಇರುತ್ತದೆ. ಹಾಗಾಗಿ ರನೌಟ್‌ಮಾಡಿದ್ದು ತಪ್ಪಲ್ಲ. ಎಂದು ಬಾಂಗ್ಲಾ ನಾಯಕ ಮಿರಾಜ್ ತಮ್ಮ ನಡೆಯನ್ನು ಸಮರ್ಥಿಸಿಕೊಂಡಿದ್ದಾರೆ.

ವಿಟಾಕೀಸ್

ಒಟಿಟಿಗೆ ಸಂಭವಾಮಿ ಯುಗೇ ಯುಗೇ

ಇತ್ತೀಚೆಗೆ ಬಿಡುಗಡೆಯಾಗಿದ್ದ ಸಂಭವಾಮಿ ಯುಗೇ ಯುಗೇ ಚಿತ್ರಕ್ಕೆ ಪ್ರೇಕ್ಷಕರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿತ್ತು. ಥಿಯೇಟರ್‌ನಲ್ಲಿಯೂ ಒಂದು ವಾರಕ್ಕೂ ಹೆಚ್ಚು ಕಾಲ ಯಶಸ್ವಿ ಪ್ರದರ್ಶನ ಕಂಡಿತ್ತು. ಈಗ ಈ ಚಿತ್ರ ಒಟಿಟಿಗೂ ಎಂಟ್ರಿಕೊಟ್ಟಿದೆ. ಇದು ಕನ್ನಡ ಸಿನಿಪ್ರಿಯರಿಗೆ ಸಂತಸ ತಂದಿದೆ. ಸಂಭವಾಮಿ ಯುಗೇ ಯುಗೇ ಎಂದಾಕ್ಷಣ ಶ್ರೀಕೃಷ್ಣನ ಸಂದೇಶದ ಸಾರ ನೆನಪಿಗೆ ಬರುತ್ತದೆ. ಅಂತೆಯೇ ಚಿತ್ರದಲ್ಲಿ ಮಹಾಭಾರತದ ಕಥೆಯ ಎಳೆಯನ್ನು ಇಟ್ಟುಕೊಂಡು ಅದನ್ನು ಇಂದಿನ ಕಾಲಕ್ಕೆ ಹೊಂದುವಂತೆ ಕಟ್ಟಿಕೊಡಲಾಗಿದೆ. ಇಲ್ಲಿಯೂ ಶ್ರೀಕೃಷ್ಣ ಮತ್ತು ಅರ್ಜುನರ ಕಥೆ ತೆರೆದುಕೊಳ್ಳುತ್ತದೆ. ಆಧುನಿಕ ಯುಗದಲ್ಲಿ ನಡೆಯುತ್ತಿರುವ ಅನ್ಯಾಯಗಳು ಅದರ ವಿರುದ್ಧ ಸಾರುವ ಯುದ್ಧದ ಕುರಿತಂತೆ ಸ್ಟೋರಿ ತೆರೆದುಕೊಳ್ಳುತ್ತದೆ. ಅದನ್ನು ಗ್ರಾಮೀಣ ಹಿನ್ನೆಲೆ ಯಲ್ಲಿ ಕಟ್ಟಿಕೊಡ ಲಾಗಿದೆ. ಹಳ್ಳಿಯಲ್ಲಿ ನಡೆಯುತ್ತಿರುವ ರಾಜಕೀಯ ಮೇಲಾಟ, ಇದರಿಂದ ಬಡಜನತೆ ಎದಿರಿಸುತ್ತಿರುವ ಸಂಕಷ್ಟಗಳು. ಅನ್ನ ದಾತನ ಸಂಕಷ್ಟ, ಅದನ್ನು ಕಂಡು ಅವರ ನೆರವಿಗೆ ಧಾವಿಸದ ಸರಕಾರಗಳು. ಇದರ ಜತೆಗೆ ಉಳುಮೆ ಭೂಮಿಯು ಹೇಗೆ ಉಳ್ಳವರ ಪಾಲಾಗುತ್ತಿದೆ ಎಂಬ ಭೂಗಳ್ಳರ ಕಥೆಯೂ ಚಿತ್ರದಲ್ಲಿದೆ. ಚೇತನ್ ಚಂದ್ರಶೇಖರ್ ರೆಡ್ಡಿ ಚಿತ್ರದ ಕಥೆ ಬರೆದು ನಿರ್ದೇಶನ ಮಾಡಿದ್ದಾರೆ. ಜೈ ಶೆಟ್ಟಿ, ಗಿಲ್ಲಿ ನಟ, ಅಂಬರೀಶ್, ಪ್ರಮೋದ್ ಶೆಟ್ಟಿ, ಭವ್ಯಾ ಸುಧಾರಾಣಿ ಹೀಗೆ ಮುಂತಾದವರು ತಾರಾಗಣದಲ್ಲಿದ್ದಾರೆ. ರಾಜಲಕ್ಷ್ಮಿ ಎಂಟರ್‌ಪ್ರೈಸಸ್ ಬ್ಯಾನರ್‌ನಲ್ಲಿ ಚಿತ್ರ ನಿರ್ಮಾಣವಾಗಿದೆ. ಈಗಾಗಲೇ ಚಿತ್ರದ ಹಿಂದಿ ರೈಟ್ಸ್ ಹೆಚ್ಚಿನ ಮೊತ್ತಕ್ಕೆ ಮಾರಾಟವಾಗಿದೆ.

ವಾರಣಾಸಿ ತಂಡಕ್ಕೆ ಕಿಚ್ಚ

ಕಿಚ್ಚ ಸುದೀಪ್, ಮಾರ್ಕ್ ಚಿತ್ರದಲ್ಲಿ ಭರ್ಜರಿಯಾಗಿ ಅಬ್ಬರಿಸಿದರು. ಮಾರ್ಕ್ ಬಾಕ್ಸ್ ಆಫೀಸ್‌ನಲ್ಲಿಯೂ ಉತ್ತಮ ಗಳಿಕೆ ಕಂಡಿತು. ಈ ಚಿತ್ರದ ಬಳಿಕ ಸುದೀಪ್ ಯಾವ ಸಿನಿಮಾದಲ್ಲಿ ಅಭಿನಯಿಸಲಿದ್ದಾರೆ ಎಂಬ ಕುತೂಹಲ ಎಲ್ಲರಲ್ಲಿಯೂ ಇದೆ. ಸದ್ಯ ಅನೂಪ್ ಭಂಡಾರಿ ನಿರ್ದೇಶನದಲ್ಲಿ ಮೂಡಿಬರುತ್ತಿರುವ ಬಿಲ್ಲ ರಂಗ ಭಾಷ ಚಿತ್ರದಲ್ಲಿ ಅಭಿನಯಿಸುತ್ತಿದ್ದಾರೆ. ಬಿಲ್ಲ ರಂಗ ಭಾಷ ಅದ್ದೂರಿ ವೆಚ್ಚದ ಚಿತ್ರವಾಗಿದ್ದು, ಚಿತ್ರೀಕರಣಕ್ಕೆ ಸಾಕಷ್ಟು ಸಮಯ ಹಿಡಿಯಲಿದೆ. ಮಾತ್ರವಲ್ಲದೆ, ಕಿಚ್ಚ ಸುದೀಪ್ ಈ ಚಿತ್ರದಲ್ಲಿ ವಿಭಿನ್ನ ಲುಕ್‌ನಲ್ಲಿ ಕಂಗೊಳಿಸಲಿದ್ದಾರೆ. ಹಾಗಾಗಿ ಶೂಟಿಂಗ್ ತಡವಾಗಬಹುದು. ಈ ನಡುವೆಯೇ ಸುದೀಪ್ ಅವರ ಮುಂದಿನ ಸಿನಿಮಾ ಯಾವುದು ಎನ್ನುವ ಕಾತರ ಎಲ್ಲರಲ್ಲಿಯೂ ಇದೆ. ಸುದೀಪ್ ತೆಲುಗಿನಲ್ಲಿ ಮೂಡಿಬರುತ್ತಿರುವ ಅದ್ದೂರಿ ವೆಚ್ಚದ ವಾರಣಾಸಿ ಚಿತ್ರತಂಡ ಸೇರಲಿದ್ದಾರೆ ಎಂಬ ಮಾಹಿತಿಯೂ ಇದೆ. ರಾಜಮೌಳಿ ನಿರ್ದೇಶನದಲ್ಲಿ ಸಿದ್ಧವಾಗುತ್ತಿರುವ ವಾರಣಾಸಿ ಪ್ಯಾನ್ ಇಂಡಿಯಾ ಚಿತ್ರವಾಗಿ ನಿರ್ಮಾಣವಾಗುತ್ತಿದೆ.

ಮಹೇಶ್ ಬಾಬು, ಪ್ರಿಯಾಂಕಾ ಚೋಪ್ರಾ, ಪೃಥ್ವಿರಾಜ್ ಸುಕುಮಾರನ್ ಹೀಗೆ ದೊಡ್ಡ ತಾರಾಬಳಗವೇ ಈ ಚಿತ್ರದಲ್ಲಿದೆ. ಈಗ ಸುದೀಪ್ ಕೂಡ ಚಿತ್ರತಂಡ ಸೇರುತ್ತಿರುವುದು ಚಿತ್ರದ ಬಗ್ಗೆ ಮತ್ತಷ್ಟು ಕುತೂಹಲ ಹೆಚ್ಚಿಸಿದೆ.

ರಾಜಮೌಳಿ ನಿರ್ದೇಶನದಲ್ಲಿ ಮೂಡಿಬಂದ ಈಗ ಚಿತ್ರದಲ್ಲಿ ಕಿಚ್ಚ ಸುದೀಪ್ ಅದ್ಭುತವಾಗಿ ಅಭಿನಯಿಸಿದ್ದರು. ಅಲ್ಲದೆ ಅಮೋಘ ಅಭಿನಯಕ್ಕಾಗಿ ಪ್ರಶಸ್ತಿಯನ್ನೂ ಮುಡಿಗೇರಿಸಿಕೊಂಡಿದ್ದರು. ಹಾಗಾಗಿ ಸುದೀಪ್ ಎಂದರೆ ರಾಜಮೌಳಿಗೂ ಅಚ್ಚುಮೆಚ್ಚು, ಇನ್ನು ಸೈರಾ ನರಸಿಂಹ ರೆಡ್ಡಿ ಚಿತ್ರದಲ್ಲಿಯೂ ಕಿಚ್ಚ, ಮೆಚ್ಚುವ ಅಭಿನಯ ತೋರಿದ್ದರು. ಸುದೀಪ್ ಅವರ ಅಭಿನಯ ಕಂಡು ಪ್ರೇಕ್ಷಕರು ಬಹುಪರಾಕ್ ಎಂದಿದ್ದರು. ಸುದೀಪ್ ಅವರ ಅಭಿನಯ ಎಲ್ಲರಿಗೂ

ಅಚ್ಚುಮೆಚ್ಚು, ಹಾಗಾಗಿ ಟಾಲಿವುಡ್‌ನಲ್ಲಿಯೂ ಕಿಚ್ಚ ಅವರಿಗೆ ಅಪಾರ ಅಭಿಮಾನಿಗಳಿದ್ದಾರೆ. ವಾರಣಾಸಿಯಲ್ಲಿ ಪವರ್‌ಫುಲ್ ಪಾತ್ರವಿದ್ದು ಆ ಪಾತ್ರದಲ್ಲಿ ಸುದೀಪ್ ಅಭಿನಯಿಸಲಿದ್ದಾರೆ ಎಂಬ ಮಾಹಿತಿಯೂ ಇದೆ. ಇನ್ನೇನು ಸುದೀಪ್ ವಾರಣಾಸಿ ತಂಡ ಸೇರಲಿದ್ದು ಚಿತ್ರೀಕರಣದಲ್ಲಿ ಪಾಲ್ಗೊಳ್ಳಲಿದ್ದಾರೆ. ವಾರಣಾಸಿ ರಾಮಾಯಣದ ಎಳೆಯನ್ನು ಆಧರಿಸಿ ಮೂಡಿಬರುತ್ತಿರುವ ಚಿತ್ರವಾಗಿದ್ದು, ಪೌರಾಣಿಕ ಕಥೆಯ ಜತೆಗೆ ಪ್ರಸ್ತುತ ಕಾಲಘಟ್ಟದ ಸ್ಟೋರಿಯೂ ತೆರೆಯಲ್ಲಿ ಸಾಗಲಿದೆ. ಆ್ಯಕ್ಷನ್ ಜತೆಗೆ ಫ್ಯಾಂಟಸಿ ಅಂಶಗಳು ಸಿನಿಮಾದ ಕಥೆಯಲ್ಲಿ ಬೆರೆತಿವೆ. ಇನ್ನು ಈ ಹಿಂದೆ ಮಾರ್ಕ್ ಚಿತ್ರವನ್ನು ಘೋಷಿಸಿ ಅಂದುಕೊಂಡ ದಿನದಂದೇ ತೆರೆಗೆ ತಂದ ಸುದೀಪ್, ಈ ಬಾರಿಯೂ ಅಭಿಮಾನಿಗಳಿಗೆ ಅಂತಹದ್ದೇ ಚಿತ್ರವನ್ನು ಉಡುಗೊರೆ ನೀಡಲಿದ್ದಾರೆ ಎಂಬ ನಿರೀಕ್ಷೆಯೂ ಇದೆ.

ದೇವಯಾನಿ ಕಲ್ಯಾಣ

ಬಾಹುಬಲಿಯ ದೇವಯಾನಿ, ಅನುಷ್ಕಾ ಶೆಟ್ಟಿ ಅವರ ಮದುವೆ ಯಾವಾಗ ಎಂಬ ಕುತೂಹಲ ಎಲ್ಲರಲ್ಲಿಯೂ ಇದೆ. ಈ ಹಿಂದೆಯೂ ಹಲವು ಬಾರಿ ಅನುಷ್ಕಾ ಮದುವೆ ವಿಚಾರ ಮುನ್ನೆಲೆಗೆ ಬಂದಿತ್ತು. ದೇವಯಾನಿ, ನಟ ಪ್ರಭಾಸ್ ಅವರನ್ನು ವರಿಸಲಿದ್ದಾರೆ ಎಂಬ ಗಾಸಿಪ್ ಹಬ್ಬಿತ್ತು. ಆದರೆ ಅದ್ಯಾಕೋ ಇಬ್ಬರು ನಾವು ಒಳ್ಳೆಯ ಸ್ನೇಹಿತರು, ಇಬ್ಬರು ಮದುವೆಯಾಗುತ್ತಿಲ್ಲ ಎಂದು ಹೇಳುವ ಮೂಲಕ ಮದುವೆ ವಿಚಾರವನ್ನು ತಳ್ಳಿ ಹಾಕಿದ್ದರು. ಈಗ ಅನುಷ್ಕಾ ಕಲ್ಯಾಣದ ಬಗ್ಗೆ ಸುದ್ದಿಯಿದೆ. ಈ ವರ್ಷವೇ ಅನುಷ್ಕಾ ಶೆಟ್ಟಿ ವಿವಾಹ ನೆರವೇರಲಿದೆ ಎನ್ನಲಾಗುತ್ತಿದೆ. ಅಷ್ಟಕ್ಕೂ ಅನುಷ್ಕಾ ಮದುವೆಯಾಗುತ್ತಿರುವುದು ಸಿನಿಮಾರಂಗದವರನ್ನಲ್ಲ ಬದಲಾಗಿ ಉದ್ಯಮಿಯೊಬ್ಬರನ್ನು ವಿವಾಹವಾಗಲು ಒಪ್ಪಿದ್ದಾರೆ ಎನ್ನಲಾಗಿದೆ. ಅದು ಬೆಂಗಳೂರು ಮೂಲದ ಉದ್ಯಮಿ ಎಂಬುದು ವಿಶೇಷ. ಇಬ್ಬರ ಮನೆಯವರ ಒಪ್ಪಿಗೆಯ ಮೇರೆಗೆ ವಿವಾಹ ನಿಶ್ಚಯವಾಗಿದೆಯಂತೆ. ಚಿತ್ರರಂಗದಲ್ಲಿ ಇಂದಿಗೂ ಬೇಡಿಕೆ ಪಡೆದಿರುವ ಅನುಷ್ಕಾ ಶೆಟ್ಟಿ, ಕಂಟೆಂಟ್ ಇರುವ ಕಥೆಗಳನ್ನು ಮಾತ್ರ ಆಯ್ದುಕೊಳ್ಳುತ್ತಿದ್ದಾರೆ. ಕಳೆದ ವರ್ಷ ತೆರೆಗೆ ಬಂದ ಘಾಟಿ ಚಿತ್ರದಲ್ಲಿ ಅನುಷ್ಕಾ ಶೆಟ್ಟಿ ನಟಿಸಿದ್ದರು. ಈ ಚಿತ್ರದಲ್ಲಿ ರಗಡ್ ಅವತಾರದಲ್ಲಿ ಕಾಣಿಸಿಕೊಂಡು ಗಮನಸೆಳೆದಿದ್ದರು. ಇದರ ಜತೆಗೆ ಮಲೆಯಾಳಂನಲ್ಲಿ ನಿರ್ಮಾಣವಾಗಿರುವ ಕಥನಾರ್ ಚಿತ್ರದಲ್ಲಿಯೂ ಅನುಷ್ಕಾ ಬಣ್ಣಹಚ್ಚಿದ್ದು, ಈ ಸಿನಿಮಾದಲ್ಲಿಯೂ ವಿಭಿನ್ನ ಪಾತ್ರದಲ್ಲಿ ಕಂಗೊಳಿಸಲಿದ್ದಾರೆ. ಈಗಾಗಲೇ ಚಿತ್ರೀಕರಣ ಮುಗಿಸಿರುವ ಕಥನಾರ್ ಚಿತ್ರ ಪೋಸ್ಟ್ ಪ್ರೊಡಕ್ಷನ್‌ನಲ್ಲಿ ಬ್ಯುಸಿಯಾಗಿದ್ದು ಇದೇ ವರ್ಷ ತೆರೆಗೆ ಬರಲಿದೆ.

ಕಾಕ್ ಟೇಲ್ 2 ಫಸ್ಟ್‌ಲುಕ್ ರಿಲೀಸ್

ಟಾಲಿವುಡ್‌ನಲ್ಲಿ ಬೇಡಿಕೆಯ ನಟಿಯಾಗಿರುವ ರಶ್ಮಿಕಾ ಮಂದಣ್ಣ, ಬಾಲಿವುಡ್‌ನಲ್ಲಿಯೂ ಬ್ಯುಸಿಯಾಗಿದ್ದಾರೆ. ಈಗಾಗಲೇ ಛಾವಾ, ಥಮ ಸಿನಿಮಾ ಸೇರಿದಂತೆ ಹಲವು ಹಿಟ್ ಚಿತ್ರಗಳಲ್ಲಿ ನಟಿಸಿ ಪ್ರಸಿದ್ಧಿ ಪಡೆದಿರುವ ರಶ್ಮಿಕಾ, ಈಗ ಕಾಕ್‌ಟೇಲ್ 2 ಚಿತ್ರದಲ್ಲಿಯೂ ಮಿಂಚಲಿದ್ದಾರೆ. ಈ ಚಿತ್ರದ ಫಸ್ಟ್ ಲುಕ್ ಪೋಸ್ಟರ್ ಬಿಡುಗಡೆಯಾಗಿದೆ. ಇದರಲ್ಲಿ ಕಾರಿನಲ್ಲಿ ಕುಳಿತು ಎಲ್ಲೋ ಸಾಗುತ್ತಿರುವ ರಶ್ಮಿಕಾ ಸುಂದರ ಫೋಟೋಗಳನ್ನು ತಮ್ಮ ಮೊಬೈಲ್‌ನಲ್ಲಿ ಸೆರೆಹಿಡಿಯುತ್ತಿದ್ದಾರೆ. ರಶ್ಮಿಕಾ ಜತೆಗೆ ಶಾಹೀದ್ ಕಪೂರ್, ಕೃತಿ ಸನೊನ್ ಫಸ್ಟ್ ಲುಕ್ ಕೂಡ ರಿಲೀಸ್ ಆಗಿದೆ. ಇಬ್ಬರು ಸ್ಟೈಲಿಶ್ ಲುಕ್‌ನಲ್ಲಿ ಕಂಗೊಳಿಸಿದ್ದು, ಕಾರಿನಲ್ಲಿ ತೆರಳುತ್ತಿರುವ ಲುಕ್ ಗಮನಸೆಳೆಯುತ್ತಿದೆ. ಇದನ್ನು ಗಮನಿಸಿದರೆ ಕಾಕ್‌ಟೇಲ್ 2 ಪಯಣದಲ್ಲಿ ಸಾಗುವ ಕಥೆಯಾಗಿದೆ ಎಂಬುದು ತಿಳಿಯುತ್ತದೆ. ಮಾತ್ರವಲ್ಲ ತ್ರಿಕೋನಾ ಪ್ರೇಮಕಥೆಯ ಈ ಸಿನಿಮಾ ಎಲ್ಲರ ಮನಗೆಲ್ಲುತ್ತದೆ ಎಂಬ ನಿರೀಕ್ಷೆಯೂ ಇದೆ. ಕಾಕ್ ಟೇಲ್ 2 ಚಿತ್ರಕ್ಕೆ ಲವ್ ರಂಜನ್ ಚಿತ್ರಕಥೆ ಬರೆದಿದ್ದು, ಹೊಮಿ ಅದಜಾನಿಯಾ ನಿರ್ದೇಶನ ಮಾಡಿದ್ದಾರೆ.

ಧುರಂಧರ್ ಜತೆಗೆ ಟೀಸರ್

ಫಸ್ಟ್‌ಲುಕ್ ಪೋಸ್ಟರ್ ರಿಲೀಸ್ ಮಾಡಿ ನಿರೀಕ್ಷೆ ಹೆಚ್ಚಿಸಿರುವ ಕಾಕ್‌ಟೇಲ್ 2 ಚಿತ್ರತಂಡ ಈಗ ಟೀಸರ್ ರಿಲೀಸ್ ಮಾಡಲು ಸಿದ್ಧತೆ ನಡೆಸಿದೆ. ಇದೇ 18ರಂದು ಧುರಂಧರ್ 2 ಸಿನಿಮಾ ಎಲ್ಲೆಲ್ಲಿ ಪ್ರದರ್ಶನ ಕಾಣಲಿದೆ. ಆ ಚಿತ್ರ ಮಂದಿರಗಳಲ್ಲಿ ಕಾಕ್‌ಟೇಲ್ 2 ಟೀಸರ್ ರಿಲೀಸ್ ಆಗಲಿದ್ದು, ಟೀಸರ್ ಅನ್ನು ದೊಡ್ಡ ಪರದೆಯಲ್ಲಿ ಕಣ್ತುಂಬಿಕೊಳ್ಳಬಹುದಾಗಿದೆ. ಟೀಸರ್ ನೋಡಲು ಸಿನಿಪ್ರಿಯರು ಕೂಡ ಕಾತರರಾಗಿದ್ದಾರೆ. ವಿಭಿನ್ನ ಪಾತ್ರಗಳ ಮೂಲಕ ಮನಗೆದ್ದಿರುವ ಶಾಹೀದ್ ಕಪೂರ್ ಈಗ ಮತ್ತೊಮ್ಮೆ ಲವ್ವರ್ ಬಾಯ್ ಅವತಾರ ತಾಳಿದ್ದಾರೆ. ರಶ್ಮಿಕಾ ಹಾಗೂ ಕೃತಿ ಸನೊನ್ ಗ್ಲಾಮರ್ ಲುಕ್‌ನಲ್ಲಿ ಮಿಂಚಿದ್ದಾರೆ. ಕಾಕ್‌ಟೇಲ್ 2 ಚಿತ್ರವನ್ನು ಇಟಲಿ ಮತ್ತು ಭಾರತದ ಸುಂದರ ತಾಣಗಳಲ್ಲಿ ಸೆರೆಹಿಡಿಯಲಾಗಿದೆ. ಜೂನ್ 19 ರಂದು ವಿಶ್ವಾದ್ಯಂತ ಕಾಕ್‌ಟೇಲ್ 2 ಅದ್ದೂರಿಯಾಗಿ ತೆರೆಗೆ ಬರಲಿದೆ.

ವಿಶ್ವವಾಣಿ
15-03-2026
ಭಾನುವಾರ
ಓದುವ ಲೋಕಕ್ಕೆ ಓದುವ ನಿಲ್ದಾಣ
ವಿರಾಮ

ಚಂದ್ರದರ್ಶನ ಹಿರಿಯರಿಗೆ ನಮಸ್ಕಾರ!

» ಮಲ್ಲಪ್ಪ ಫ ಕರೇಣ್ಣನವರ ಹನುಮಾಪುರ

ಯುಗಾದಿ ಹಬ್ಬವೆಂದರೆ ಸಕಲ ಜೀವ ಸಂಕುಲಕ್ಕೂ ಸಂತಸ ಸಡಗರ ತರುವಂತಹ ಹಬ್ಬವೆಂದೇ ಜನಮನದಲ್ಲಿ ಅಚ್ಚೊತ್ತಿದೆ. ಸಸ್ಯ ಸಂಕುಲವು ಬಹಳಷ್ಟು ಹರ್ಷದಿಂದ ಈ ಹಬ್ಬಕ್ಕಾಗಿ ಕಾಯುತ್ತಿರುತ್ತವೆ. ಕೋಗಿಲೆಯ ಪಾಲಿಗೆ ಎಲ್ಲಿಲ್ಲದ ಹರ್ಷವನ್ನು ತರುವಂತಹ ಕಾಲವಾಗಿದೆ. ಮಾವಿನ ಮರದಲ್ಲಿರುವ ಎಲೆಯನ್ನು ನೀಂಟಿ ನೀಂಟಿ ತಿಂದು ಧ್ವನಿಯ ಮಾಧುರ್ಯವನ್ನು ಹೆಚ್ಚಿಸಿಕೊಂಡು ಇಂಪಾದ ಧ್ವನಿಯನ್ನು ಹೊರಡಿಸುವದರಲ್ಲಿ ಕೋಗಿಲೆ ತೃಪ್ತಿಯನ್ನು ಕಾಣುತ್ತದೆ. ಇದೇ ಸಮಯದಲ್ಲಿ ಮರ-ಗಿಡ- ಬಳ್ಳಿಗಳು ಹಚ್ಚ ಹಸುರಿನಿಂದ ಕೂಡಿಕೊಂಡು ಮೈ-ಮನ ದುಂಬಿರುತ್ತವೆ.

ನಮ್ಮ ಪೂರ್ವಜರು ಸಾಕಷ್ಟು ವೈಜ್ಞಾನಿಕ ಹಿನ್ನೆಲೆಯಿಂದಲೂ ಮತ್ತು ಸೃಷ್ಟಿಯಲ್ಲಾಗುವ ಬದಲಾವಣೆಯ ಕಾರಣದಿಂದಲೂ ಹೊಸ ವರ್ಷವನ್ನಾಗಿಯುಗಾದಿ ಹಬ್ಬವನ್ನು ಆಚರಿಸಿಕೊಂಡು ಬಂದಿದ್ದಾರೆ; ಹಿನ್ನೆಲೆಯಲ್ಲಿ ಹಿರಿಯರು ಈ ಹಬ್ಬದ ವೈಶಿಷ್ಟ್ಯತೆಗಳನ್ನು ಚಿಕ್ಕ ಮಕ್ಕಳಿಗೆ ಹೇಳುತ್ತಿದ್ದರು. ಜೀವನದಲ್ಲಿ ಕಷ್ಟಗಳು ಬಂದಾಗ ಕುಗ್ಗದೇ ಸುಖ ಬಂದಾಗ ಹಿಗ್ಗದೇ ಸರಿಸಮಾನವಾಗಿ ಸ್ವೀಕರಿಸುತ್ತಾ ಮುನ್ನಡೆಯಬೇಕೆಂದು ಹೇಳುತ್ತಿದ್ದುದು ನೆನಪಾಗುತ್ತದೆ. ಹಾಗಾಗಿಯೇ ಬೇವು-ಬೆಲ್ಲವನ್ನು, ಶಾವಿಗೆ ಹಾಲು ಬೇವಿನೊಂದಿಗೆ ಸೇವಿಸುತ್ತೇವೆಂದು ಅಜ್ಜಿಯ ಹೇಳುತ್ತಿದ್ದ ಮಾತುಗಳು ಈಗ ನೆನಪಾಗುತ್ತಿದೆ.

ಚಿಕ್ಕ ಮಕ್ಕಳಿರುವಾಗ ಯುಗಾದಿ ಹಬ್ಬವು ಸಡಗರ ಸಂಭ್ರಮದಿಂದ ತೇಲಾಡುವಂತೆ ಮಾಡುತ್ತಿತ್ತು. ಅಮವಾಸ್ಯೆಯ ಮರುದಿನ ಪಾಡ್ಯದಂದು ನಸುಕಿನಲ್ಲಿಯೇ ಚಳಪಳ ಎನ್ನುವಂತೆ ನೀರನ್ನು ಕಾಯಿಸಿದ ಮೇಲೆ ತಾಯಂದಿರು ಮಕ್ಕಳನ್ನು ಎಬ್ಬಿಸಿ ಬಿಸಿಎಣ್ಣೆಯನ್ನು ತಲೆಗೆ ಹಚ್ಚಿ ತದನಂತರ ಮೈ ಕೈಗೆ ಹಚ್ಚಿ, ಬಿಸಿನೀರನ್ನು ತಲೆ ಮೇಲಿಂದ ಶುರುವಿದಾಗ ಒಂದು ಕ್ಷಣ ಉಸಿರು ಕಟ್ಟಿದಂತಾಗುತ್ತಿತ್ತು. ಒಂದು ತಪಾಲಿ (ದೊಡ್ಡ ಪಾತ್ರೆ) ನೀರನ್ನು ಪೂರ್ಣವಾಗಿ ಹಾಕಿದ ನಂತರವೇ ತಾಯಂದಿರಿಗೆ ಸಮಧಾನವಾಗುತ್ತಿತ್ತು. ಮನಸ್ಸು ಪುಳಕಗೊಳ್ಳುವಂತಾಗಿ, ಜಡ್ಡುಗಟ್ಟಿದ ನರನಾಡಿಗಳು ಚಲನತೆಯನ್ನು ಪಡೆದುಕೊಂಡು, ರಕ್ತ ಸಂಚಾರ ಸರಾಗವಾಗಿ ನಡೆದು ಆಹ್ಲಾದವೆನಿಸುತ್ತಿತ್ತು. ಈ ಪಾಡ್ಯದ ನೆಪದಲ್ಲಿ ತಂದೆ ಮೈಮುರಿದು ಕೂಲಿ ಮಾಡಿದ ಹಣದಿಂದ ತಂದ ಬಟ್ಟೆಯ ಕಡೆಯೇ ಮಕ್ಕಳ ಚಿತ್ತ ವಿರುತ್ತಿತ್ತು. ಲಗುಬಗನೇ ಚೊಣ್ಣ, ಅಂಗಿಯನ್ನು ಹಾಕಿಕೊಂಡು, ಬೇವು ಮಾಡಲು ತಂದ ಬೆಲ್ಲದ ಕಣ್ಣಿಯನ್ನು ದವಡಿಯಲ್ಲಿಟ್ಟು ಸೀಪುತ್ತಾ ಓಣಿಯ ಬೀರ, ಕರಿಯ, ಬಸವ, ರಾಜ, ಜಗ್ಗರನ್ನು ಕೂಡಿಕೊಂಡು ಓಣಿ ಸುತ್ತು ಹಾಕುವುದರಲ್ಲಿ ಏನೊ ಒಂದತರ ಮಜಾಯಿರುತ್ತಿತ್ತು ಬಿಡಿ.

> ಯುಗಾದಿ ಹಬ್ಬದ ಸಂಭ್ರಮದಲ್ಲಿರುವಾಗಲೇ, ಸಂಜೆಯಾಗುತ್ತಿದ್ದಂತೆಯೇ ಆಗಸದಲ್ಲಿ 'ಚಂದ್ರದರ್ಶನವೆಂಬ ಬಹು ಆಯಾಮದ ಸಡಗರ ಆರಂಭವಾಗುತ್ತದೆ. ಎಲ್ಲರೂ ಅಲ್ಲಲ್ಲಿ ನಿಂತು, ಕೆಲವರು ಮನೆಯ ಮೇಲೆ ನಿಂತು ಬಾನಿನಲ್ಲಿ ಚಂದ್ರ ಬಿಂಬವನ್ನು ಹುಡುಕುವವರೆ! ಒಮ್ಮೆ ಚಂದ್ರ ದರ್ಶನವಾಯಿತೆಂದರೆ, ಅದೆಷ್ಟು ಸಂತಸ! ತಕ್ಷಣ ಹಿರಿಯರಿಗೆ ನಮಸ್ಕರಿಸಿ, ಅವರ ಆಶೀರ್ವಾದ ಪಡೆಯಲು ನೂಕುನುಗ್ಗಲು! ಇದೇ ನಮ್ಮ ಹಳ್ಳಿಯ ಯುಗಾದಿಯ ಸಂತಸ!

ಅಪ್ಪನು, ಮನೆಯ ಶ್ರಮಜೀವಿಗಳಾದ ಎತ್ತುಗಳ ಮೈತೊಳೆದು ವರ್ಷದ ಕೃಷಿ ಕಾರ್ಯ ಪ್ರಾರಂಭಿಸಲು ಗಳೇವು ಕಟ್ಟಿಕೊಂಡು ಹೊಲಕ್ಕೆ ಹೋಗುತ್ತಿದ್ದರು. ಹೊಲದಲ್ಲಿ ಭೂಮಿ ತಾಯವ್ವಗ ಪೂಜೆ ಸಲ್ಲಿಸಿ ಎರಡು ದಮ್ಮ (ತಾಸು) ಹೊಲ ಉಳುಮೆ ಮಾಡಿ, ವರ್ಷದ ಕೃಷಿ ಕೆಲಸವನ್ನು ಯುಗಾದಿಯ ಈ ಶುಭ ಮುಹೂರ್ತದಲ್ಲಿ ಪ್ರಾರಂಭಿಸುತ್ತಿದ್ದರು. ಪಾಡ್ಯದ ದಿನ ಪ್ರಾರಂಭಿಸಿದ ಕೃಷಿ ಚಟುವಟಿಕೆಯಿಂದ ದವಸ ಧಾನ್ಯಗಳು ಹುಲುಸಾಗಿ ಬೆಳೆಯುತ್ತವೆ ಎಂಬ ನಂಬಿಕೆ ತಂದೆಯ ಕಂಗಳಲ್ಲಿ ಇತ್ತು. ಹಾಗಾಗಿ ಆ ಪಾಡ್ಯದ ದಿನವನ್ನು ಬಹಳ ಆಸ್ಥೆಯಿಂದ ತಂದೆ ನೋಡುತ್ತಿದ್ದರು.

ಜನಪದ ಆಟಗಳು

ನಮ್ಮ ಊರಿನ ಓಣ್ಯಾಗ ಒಬ್ಬ ಹಿರಿಯ ಸ್ನೇಹಿತನಿದ್ದ. ಅವನು ನಮ್ಮ ಪಾಲಿನ ವಿರಾಟ್ ಕೊಹ್ಲಿ ಇದ್ದಂಗ ಇದ್ದ. ನಿಂಬೆಹಣ್ಣು ಎಸೆಯುವ ಸ್ಪರ್ಧೆಯಲ್ಲಿ ಇವನನ್ನು ಮೀರಿಸುವವರು ನಮ್ಮೂರಲ್ಲಿಯೇ ಇರಲಿಲ್ಲ. ನಿಂಬೆಹಣ್ಣು ಎಸೆಯುವ ಸ್ಪರ್ಧೆಯಲ್ಲಿ ಗೆಲವನ್ನು ಸದಾ ಪಡೆಯುತ್ತಿದ್ದ. ಇವನ ಪರವಾಗಿ ಗುಂಪು ಕಟ್ಟಿಕೊಂಡು ನಾವು ಐದು ಪೈಸೆ, ಹತ್ತ ಪೈಸೆ ಬೆಟ್ ಕಟ್ಟುತ್ತಿದ್ದವು. ಈ ಆಟದಲ್ಲಿ ನಮ್ಮೂರಿನ ಎಲ್ಲಾ ಮಕ್ಕಳ- ಯುವಕರ ದಂಡೇ ಸೇರಿ ಊರಿಗೆ ಊರೇ ಸಡಗರದಿಂದ ಪಾಲ್ಗೊಳ್ಳುತ್ತಿತ್ತು. ಇಂದು, ಅಂದರೆ, ಮಕ್ಕಳ ಕೈಯಲ್ಲಿ ಸ್ಮಾರ್ಟ್‌ಫೋನ್ ಇರುವ ಈ ಕಾಲದಲ್ಲಿ, ಅಂತಹ ಜನಪದ ಆಟಗಳ ದೃಶ್ಯಗಳನ್ನ ಕಾಣುವುದು ವಿರಳವಾಗಿದೆ.

ಇನ್ನೊಂದು ಮುಖ್ಯವಾದ ಆಟವೆಂದರೆ, ಲಗೋರಿ. ಎದುರಾಳಿ ತಂಡದ ಆಟಗಾರರು ಬಟ್ಟೆಯಿಂದ ಮಾಡಿದ ಚೆಂಡಿನಿಂದ ನಮ್ಮ ತಂಡದ ಆಟಗಾರರನ್ನು ಹೊಡೆಯುವ ಮೊದಲೇ ಚಿಪ್ಪುಗಳನ್ನು ಒಂದರ ಮೇಲೊಂದು ಇಟ್ಟು 'ಲಗೋರಿ' ಎನ್ನುವುದು ಬಹು ಸಂತಸ ತರುತ್ತಿತ್ತು. ಇಂತಹ ಆಟ ಆಡುವ ಮಕ್ಕಳು ಈಗ ಕಡಿಮೆಯಾಗಿದ್ದಾರೆ; ಎಲ್ಲರ ಕೈಯಲ್ಲಿಯೂ ಐದಿಂಚು ಉದ್ದದ ಮೂರಿಂಚು ಅಗಲದ ಫೋನು; ಹಬ್ಬದ ದಿನವೂ, ತಲೆತಗ್ಗಿಸಿ ತಮ್ಮಷ್ಟಕ್ಕೆ ತಾವೇ ನಗುತ್ತಾ ಒಬ್ಬಂಟಿಯಾಗಿ ಕುಳಿತುಕೊಂಡಿರುವುದನ್ನು ನೋಡುತ್ತಿದ್ದೇವೆ.

ಸಂಜೆ ಹೊತ್ತಿನ ಹೊಸ ಸಂಭ್ರಮ!

ನಮ್ಮ ಹಳ್ಳಿಯಲ್ಲಿ, ಯುಗಾದಿ ದಿನದಂದು ಸಾಯಂಕಾಲದ ಹೊತ್ತಿಗೆ ಆಟದಿಂದ ಹಿಂತಿರುಗಿ ಕೈ ಕಾಲು ಮುಖ ತೊಳೆದುಕೊಂಡು ಓಣಿಯ ಚಂದ್ರದರ್ಶನಕ್ಕಾಗಿ ಭಕ್ತಿಯಿಂದ ಕಾಯುತ್ತಿದ್ದ ನೆನಪು ಇನ್ನೂ ಹಸಿರಾಗಿದೆ. ಯಾಕೆ ಚಂದ್ರನನ್ನು ನೋಡುತ್ತಾರೆಂಬುದು ಅರಿವಿರದಿದ್ದರೂ, ಸಹಿತ ಹಿರಿಯರೊಂದಿಗೆ 'ಚಂದ್ರನ ದರ್ಶನ'ವನ್ನು ಭಕ್ತಿ ಭಾವದಿಂದ ಪಡೆದುಕೊಂಡು ಓಣಿಯ ಸ್ನೇಹಿತರೊಂದಿಗೆ ಸೇರಿ ಊರಿನ ಹಿರಿಯ ಕಾಲಿಗೆ ನಮಸ್ಕಾರ ಮಾಡುತ್ತಿದ್ದೆವು. ಹೀಗೆ ಹಿರಿಯರ ಆಶೀರ್ವಾದ ಪಡೆಯಲು ಹತ್ತಾರು ಹುಡುಗರಿರುವ ಗುಂಪುಗಳು ಊರಿನ ಅಲ್ಲಲ್ಲಿ ಕಾಣುತ್ತಿದ್ದವು. ಅದರಲ್ಲಿ ನಮ್ಮ ಓಣಿಯ ಗುಂಪೊಂದು ದೊಡ್ಡದಾಗಿರುತ್ತಿತ್ತು. ಜಾತಿ, ಮತ, ಪಂಥ, ನೋಡದೇ ಹಿರಿಯರ ಪಾದ ಚರಣಕ್ಕೆ ಗೌರವದಿಂದ ಎರಗುತ್ತಿದ್ದು ಮನಸ್ಸಿಗೆ ಸಂತಸ ತರುತ್ತಿತ್ತು.

ಹತ್ತು ಹಲವು ರೀತಿಯ ಸಂಪ್ರದಾಯಗಳು, ಆಚರಣೆಗಳು, ಮಹತ್ವಗಳನ್ನು ನಮಗರಿವಿಲ್ಲದೇ ನಮ್ಮ ಕುಟುಂಬ, ಸಮಾಜ, ಊರು ಕಲಿಸುತ್ತಿತ್ತು. ಇಂದು ಬದಲಾದ ಜೀವನ ಶೈಲಿಯಿಂದ ನಮ್ಮ ಪರಂಪರೆಯ ಕೊಂಡಿಗಳಾದ ಆಚರಣೆಗಳು, ಸಂಸ್ಕಾರಯುಕ್ತ ಜೀವನ, ಮೌಲ್ಯಗಳು ದೂರವಾಗುತ್ತ ಹೋಗುತ್ತಿರುವುದು ಬೇಸರ ತರಿಸುತ್ತಿದೆ. ಹಿರಿಯರ ಕಾಲಿಗೆ ನಮಸ್ಕಾರ ಮಾಡುವುವರ ಸಂಖ್ಯೆ ಕಡಿಮೆಯಾಗುತ್ತ ಹೋಗುತ್ತಿರುವುದು ಸಹ ಇಂದಿನ ವಾಸ್ತವ. ಇದಕ್ಕೆ ನಾವು ಪಡೆದುಕೊಂಡ ಆಧುನಿಕ ಶಿಕ್ಷಣ ಕಾರಣವೆಂಬುದು ವಿಪರ್ಯಾಸವೆನ್ನುವಂತಿದೆ. ಚಿಕ್ಕವರಿರುವಾಗ ಆಚರಿಸಿದ ಯುಗಾದಿ ಹಬ್ಬ ಕೊಟ್ಟ ಸಂತಸವನ್ನು ನೆನಪಿಸಿಕೊಂಡರೆ ಮೈ ಮನದೊಳಗೆ ಸಂತಸ ನೂರ್ಮಡಿಯಾಗುತ್ತದೆ.

ನಮ್ಮ ದೇಶದ ವಿವಿಧ ಭಾಗದ ಜನರು ಯುಗಾದಿ ಹಬ್ಬವನ್ನು ಹಲವು ರೀತಿಗಳಲ್ಲಿ ಆಚರಿಸುತ್ತಾರೆ. ನಮ್ಮ ರಾಜ್ಯದಲ್ಲಿ ಬೇವು ಬೆಲ್ಲ ತಿಂದು ಆಚರಿಸುವ ಯುಗಾದಿಗೆ, ಒಬ್ಬಟ್ಟಿನ ಸಿಹಿಯು ಕಿರೀಟಪ್ರಾಯ ಎನಿಸಿದೆ. ಇಷ್ಟೇ ಸಂಭ್ರಮದಿಂದ, ಉತ್ಸಾಹದಿಂದ, ಪಾದಯಾತ್ರೆಯ ಮೂಲಕ ಯುಗಾದಿಯನ್ನು ಆಚರಿಸುವವರು ಉತ್ತರ ಕರ್ನಾಟಕದವರು. ತಮ್ಮ ಮನೆ ಅಳಿಯ ಎಂದೇ ತಿಳಿದಿರುವ ದೂರದ ಶ್ರೀಶೈಲದ ಮಲ್ಲಿಕಾರ್ಜುನನ ದರ್ಶನ ಮಾಡಲು, ಯುಗಾದಿಗೆ ಎರಡು ವಾರ ಮೊದಲೇ ಕಾಲ್ನಡಿಗೆ ಆರಂಭಿಸಿ, ಪ್ರತಿದಿನ 20 ರಿಂದ 40 ಕಿ.ಮೀ. ನಡೆದು, ಯುಗಾದಿಯ ಸಮಯದಲ್ಲಿ ಶ್ರೀಶೈಲವನ್ನು ತಲುಪುತ್ತಾರೆ. ಅಲ್ಲಿಗೆ ಬೇರೆ ಭಾಗಗಳಿಂದಲೂ ಪಾದಯಾತ್ರೆಯ ಭಕ್ತರು ಬಂದಿರುತ್ತಾರೆ. ಪಾದಯಾತ್ರೆಯ ಮೂಲಕ ನಡೆಯುವ ಈ ಯುಗಾದಿ ಸಂಭ್ರಮವು, ಪ್ರಾಮಾಣಿಕ ಭಕ್ತಿಯ ವಿಶೇಷ ಆಚರಣೆ ಎಂದೇ ಹೆಸರಾಗಿದೆ.

ಕಾಲ್ನಡಿಗೆಯ ಯುಗಾದಿ!

» ಎಂ.ಎಸ್.ಹೆಬ್ಬಾರ್

ನಮ್ಮ ರಾಜ್ಯದಲ್ಲಿ ಶಿವರಾತ್ರಿ ಮತ್ತು ಯುಗಾದಿ ಬಂತೆಂದರೆ, ಹಬ್ಬದ ಸಂಭ್ರಮ ಮತ್ತು ಆಚರಣೆಗಳ ಜತೆಯಲ್ಲೇ, ಬಹಳ ವಿಶೇಷ ಎನಿಸುವ ಒಂದು ಭಕ್ತಿಯ ಕೈಂಕರ್ಯವನ್ನು ಕಾಣಬಹುದು. ಅದೆಂದರೆ, ಪಾದಯಾತ್ರೆ! ಶಿವರಾತ್ರಿಯ ಸಮಯದಲ್ಲಿ ಮಲೆಮಾದೇಶ್ವರನ ಬೆಟ್ಟಕ್ಕೆ ಮತ್ತು ಧರ್ಮಸ್ಥಳಕ್ಕೆ ಸಾವಿರಾರು ಜನರು ಪಾದಯಾತ್ರೆ ನಡೆಯುವುದು ದಕ್ಷಿಣ ಕರ್ನಾಟಕದಲ್ಲಿ ಪ್ರಸಿದ್ಧ. ಇತ್ತ, ಉತ್ತರ ಕರ್ನಾಟಕದ ಜನರು, ಶಿವರಾತ್ರಿ ಮತ್ತು ಯುಗಾದಿಯ ಸಮಯದಲ್ಲಿ ಶ್ರೀಶೈಲದ ಮಲ್ಲಿಕಾರ್ಜುನ ದೇಗುಲಕ್ಕೆ ನೂರಾರು ಕಿ.ಮೀ. ನಡೆದೇ ಹೋಗುತ್ತಾ, ಭಕ್ತಿಯ ಪಾದಯಾತ್ರೆಯನ್ನು ಕೈಗೊಳ್ಳುತ್ತಾರೆ.

ಯುಗಾದಿ ಹಬ್ಬ ಬರುತ್ತಿರುವಂತೆಯೇ, ಕಾಲ್ನಡಿಗೆಯ ಮೂಲಕ ಯುಗಾದಿ ಆಚರಿಸಲು ಉತ್ತರ ಕರ್ನಾಟಕದವರು ಸಿದ್ಧರಾಗುತ್ತಾರೆ. ಸಾವಿರಾರು, ಅಷ್ಟೇಕೆ ಲಕ್ಷಾಂತರ ಜನರು ದೂರದ ಶ್ರೀಶೈಲಕ್ಕೆ ಪಾದಯಾತ್ರೆಯನ್ನು ಈಗ ಕೈಗೊಂಡಿದ್ದಾರೆ. ಮಾರ್ಚ್ ಮೊದಲ ವಾರದಲ್ಲಿ ಆರಂಭಗೊಂಡಿರುವ ಪಾದಯಾತ್ರೆಯು, ಈಗ ಶ್ರೀಶೈಲದ ಹತ್ತಿರ ತಲುಪಿದ್ದು, ಯುಗಾದಿಯ ಸಂಭ್ರಮಕ್ಕೆ ಸರಿಯಾಗಿ ಅಲ್ಲಿನ ಮಲ್ಲಿಕಾರ್ಜುನನ ದರ್ಶನ ಪಡೆಯುವದರ ಮೂಲಕ, ತಮ್ಮ ಪಾದ ಯಾತ್ರೆಯೊಂದಿಗೆ ಸಾರ್ಥಕ್ಯವನ್ನು ಪಡೆಯುತ್ತಾರೆ, ಭಕ್ತರು.

ಮನೆ ಅಳಿಯನೆಂಬ ಪ್ರೀತಿ

ನಮ್ಮ ರಾಜ್ಯದ ಉತ್ತರ ಭಾಗದ ಕೆಲವು ಜಿಲ್ಲೆಗಳ ಜನರಿಗೆ, ದೂರದ ಶ್ರೀಶೈಲದಲ್ಲಿರುವ ಮಲ್ಲಯ್ಯ ಅಥವಾ ಮಲ್ಲಿಕಾರ್ಜುನನು ದೇವರಿಗಿಂತ ಹೆಚ್ಚು; ಈ ಭಾಗದ ಎಷ್ಟೋ ಕುಟುಂಬಗಳಿಗೆ ಮಲ್ಲಯ್ಯನು ಮನೆ ದೇವರು. ವಿಜಯಪುರ, ಬಾಗಲಕೋಟೆ ಮತ್ತು ಆ ಸುತ್ತಲಿನ ಹಲವು ಗ್ರಾಮಗಳಲ್ಲಿ, ಕುಟುಂಬಗಳಲ್ಲಿ ಮಲ್ಲಯ್ಯನ ಕುರಿತು ವಿಶೇಷವಾದ ನಂಬಿಕೆ ಇದೆ: ಅದೇನೆಂದರೆ, ಶ್ರೀಶೈಲದ ಮಲ್ಲಿಕಾರ್ಜುನನು ತಮ್ಮ ಮನೆಯ ಅಳಿಯ ಎಂಬ ಶ್ರದ್ಧಾಭಕ್ತಿಯ ನಂಬಿಕೆ. ಆದ್ದರಿಂದ, ಮಲ್ಲಿಕಾರ್ಜುನನ್ನು ಸಂಪ್ರೀತಗೊಳಿಸಲು ಮತ್ತು ತಮ್ಮ ಭಕ್ತಿಯ ಪ್ರಾಮಾಣಿಕ ಆಚರಣೆಯನ್ನು ಜಾರಿಗೆ ತರುವ ಭಾಗವಾಗಿ, ಕಾಲ್ನಡಿಗೆಯಲ್ಲೇ ಶ್ರೀಶೈಲಕ್ಕೆ ತೆರಳುತ್ತಾರೆ. ಸುಮಾರು 300 ರಿಂದ 400 ಕಿ.ಮೀ. ದೂರದ ದಾರಿಯನ್ನು ಕಾಲ್ನಡಿಗೆಯ ಮೂಲಕ ರಸ್ತೆ ಮತ್ತು ಕಾಡುಗಳ ಮೂಲಕ ಸಾಗುವ ಸಾವಿರಾರು ಮಂದಿಗೆ, ಆ ಪಾದ



ಯಾತ್ರೆಯು ಶ್ರಮದ ಕೆಲಸವಲ್ಲ, ಬದಲಿಗೆ ಭಕ್ತಿಯ ಕೈಂಕರ್ಯ, ಪ್ರೀತಿಯಿಂದ ಮಾಡುವ ನಡಿಗೆ; ಹಲವು ದಿನಗಳ ಕಾಲ ನಡೆಯುತ್ತಲೇ ಯಾತ್ರೆ ಮಾಡಿ, ಮಲ್ಲಯ್ಯನ ಮೇಲಿರುವ ಪ್ರೀತಿಯನ್ನು ತೋರುವ ಈ ಪರಿಯು, ಜಗತ್ತಿನಲ್ಲೇ ವಿಶಿಷ್ಟ ಎನಿಸುವ ಆಚರಣೆ.

ಮರಗಾಲಿನ ನಡಿಗೆ!

ನೂರಾರು ಕಿ.ಮೀ. ನಡೆದೇ ಸಾಗುವ ಈ ಪಾದಯಾತ್ರೆಯು ಈಗ ಆಂಧ್ರಪ್ರದೇಶವನ್ನು ಹಾದು, ಶ್ರೀಶೈಲದ ಹತ್ತಿರದ ಹಳ್ಳಿಗಳನ್ನು ತಲುಪಿದೆ. ಮಲ್ಲಿಕಾರ್ಜುನನ ಹೆಸರು ಹೇಳುತ್ತಾ ನಡೆಯುತ್ತಿರುವ ಈ ಪಾದಯಾತ್ರೆಯಲ್ಲಿ ಭಾಗವಹಿಸಿರುವ ಸಾವಿರಾರು ಗ್ರಾಮೀಣರ ನಡುವೆ, ಅಲ್ಲಲ್ಲಿ ಎಂಟರಿಂದ ಹನ್ನೆರಡು ಅಡಿ ಎತ್ತರದಲ್ಲಿ ಸಾಗುವ ಕೆಲವು ಭಕ್ತರನ್ನು, ಉತ್ಸಾಹಿಗಳನ್ನು ಕಾಣಬಹುದು. ಅವರು ತಮ್ಮ ಕಾಲಿಗೆ ಮರದ ಕಾಲನ್ನು ಕಟ್ಟಿಕೊಂಡು, ನಡೆಯುವ ಮರಗಾಲು ಸಾಹಸಿಗರು!

ಎರಡೂ ಕಾಲುಗಳಿಗೆ ಮರಗಾಲನ್ನು (ಮರದ ಕೋಲುಗಳನ್ನು) ಕಟ್ಟಿಕೊಂಡು, ನಡೆಯುವ ಈ ಕಲೆಯನ್ನು ಕರಗತಗೊಳಿಸಿಕೊಳ್ಳಲು ತುಸು ಪರಿಶ್ರಮಬೇಕು. ನಮ್ಮ ಸಹಜ ಕಾಲುಗಳಿಂದ ಹಲವು ಕಿ.ಮೀ. ನಡೆಯಲು ನಾವು ಶ್ರಮ ಪಡುತ್ತೇವೆ; ಇನ್ನು, ಪಾದಗಳಿಗೆ ಉದ್ದನೆಯ ಕೋಲನ್ನು ಕಟ್ಟಿಕೊಂಡು ನಡೆಯಲು ಇನ್ನೆಷ್ಟು ಶ್ರಮವಾದೀತು! ಆದರೆ, ಮಲ್ಲಯ್ಯನ ಮೇಲಿನ ಭಕ್ತಿ ಮತ್ತು ಶ್ರದ್ಧೆಯಿರುವಾಗ, ಮರಗಾಲನ್ನು ಕಟ್ಟಿಕೊಂಡು ನಡೆದರೂ, ಯಾವುದೇ ಭಾದೆಯಾಗದು ಎಂದು ಮರಗಾಲು ಭಕ್ತರು ಹೇಳುತ್ತಾರೆ! ಸಾವಿರಾರು ಪುರುಷ ಮರಗಾಲು ಭಕ್ತರ ನಡುವೆ, ಈ ವರ್ಷ, ಮೊತ್ತಮೊದಲ ಬಾರಿ ಒಬ್ಬರು ಮಹಿಳಾ ಮರಗಾಲು ಭಕ್ತರು ಶ್ರೀಶೈಲದತ್ತ ಹೆಜ್ಜೆ ಹಾಕಿದ್ದಾರೆ. ಅವರೇ ಪ್ರಿಯಾ ಬಂಡಿ.

ಮರಗಾಲನ್ನು ಕಟ್ಟಿಕೊಂಡು ನಡೆಯುವಾಗ ಹೆಚ್ಚು ಶ್ರಮವಾಗಬಹುದು; ಆದರೆ, ಭಕ್ತಿಯ ಸಮರ್ಪಣೆಯು ಪ್ರಾಮಾಣಿಕವಾಗಿರುವಾಗ, ಮರಗಾಲಿನ ನಡಿಗೆಯೇ ಆಗಲಿ, ಮಾಮೂಲಿ ನಡಿಗೆಯೇ ಆಗಲಿ, ಅದೊಂದು ಆನಂದ ಎಂದೇ ಭಾವಿಸುತ್ತಾರೆ, ಭಕ್ತರು.

ಶ್ರೀಶೈಲ ಮಲ್ಲಿಕಾರ್ಜುನನು ತಮ್ಮೂರಿನ ಅಳಿಯ ಎಂದು ಬಾಗಲಕೋಟೆ ಮತ್ತು ವಿಜಯಪುರದ ಜನರು ತಿಳಿದಿರುವುದು ಅದೆಷ್ಟು ಪ್ರಾಮಾಣಿಕ ಎಂದರೆ, ಅಳಿಯನ ಮನೆಗೆ ಹೋಗಿ, ಯುಗಾದಿಯ ಉಡುಗೊರೆಯಾಗಿ,

ಗಂಟೆ, ಬಟ್ಟೆಗಳನ್ನು ಕೊಡುವುದು ತಮ್ಮ ಕರ್ತವ್ಯ ಎಂದು ನಂಬಿದ್ದಾರೆ. ಅದಕ್ಕೆಂದೇ ಯುಗಾದಿಯ ಈ ಪಾದಯಾತ್ರೆ. ಹತ್ತಾರು ದಿನ ನಡೆಯುವ ಈ ಕಾಲ್ನಡಿಗೆಯ ಸಮಯದಲ್ಲಿ, ದಾರಿಯಲ್ಲಿ ಸಿಗುವ ಊರಿನವರು ನೀರು, ಪಾನಕ ಮತ್ತು ಆಹಾರವನ್ನು ನೀಡಿ, ಯಾತ್ರೆಯಲ್ಲಿ ಸಾಗುವವರನ್ನು ಪ್ರೀತಿಭಕ್ತಿಯಿಂದ ಕಾಣುವುದು ಸಹ ವಿಶೇಷ.

ಪಾದಯಾತ್ರೆ ಮಾರ್ಗಗಳು

ಶ್ರೀಶೈಲದತ್ತ ಭಕ್ತರು ಸಾಗುವ ದಾರಿಯೇ ಮಾರ್ಗ! ಆದರೂ, ಜನರ ಅನುಕೂಲಕ್ಕಾಗಿ ಸಂಘ ಮಾಡಿಕೊಂಡು, ಇಂತಹ ದಾರಿಯಲ್ಲೇ ತೆರಳುವುದು ಸೂಕ್ತ ಎಂಬ ಅಭಿಪ್ರಾಯವಿದೆ. ವಿಜಯಪುರದಿಂದ ಹೊರಡುವ ಪಾದಯಾತ್ರೆಯು ಬಸವನ ಬಾಗೇವಾಡಿ, ಕೊಣ್ಣೂರು ಕ್ರಾಸ್, ಹುಣಸಗಿ, ದೇವದುಗಾದ ಮಸರಕಲ್ಲ, ಆಯಿಜ, ಆತ್ಮಕೂರು ಮೊದಲಾದ ಊರುಗಳನ್ನು ಹಾದು, ಶ್ರೀಶೈಲ ತಲುಪಲಿದೆ. ಯುಗಾದಿಯ ಶುಭ ಮುಹೂರ್ತದಲ್ಲಿ ಮಲ್ಲಿಕಾರ್ಜುನನು ಪಾರ್ವತಿಯನ್ನು ವಿವಾಹವಾದನು ಎಂಬ ನಂಬಿಕೆಯ ಹಿನ್ನೆಲೆಯಲ್ಲಿ, ಶ್ರೀಶೈಲದಲ್ಲಿ ನಡೆಯುವ ಈ ಸಂಭ್ರಮ, ಅದರಲ್ಲಿ ಪಾಲ್ಗೊಳ್ಳಲು ಬರುತ್ತಿರುವ ಸಾವಿರಾರು ಯಾತ್ರಿಕರು, ಪಾದಯಾತ್ರೆ ಯಲ್ಲಿ ಬರುವ ಭಕ್ತರು, ಮರಗಾಲು ಕಟ್ಟಿಕೊಂಡು ನಡೆದು ಬರುತ್ತಿರುವ ಉತ್ಸಾಹಿಗಳು ಎಲ್ಲರೂ ಅದೇ ಸಮಯಕ್ಕೆ ಶ್ರೀಶೈಲ ತಲುಪುವುದು ವಿಶೇಷ. ಈ ವರ್ಷ ಪಾದಯಾತ್ರಿಗಳ ಜತೆಯಲ್ಲೇ 151 ಕಿಲೋ ತೂಕದ ಗಂಟೆಯೂ, ಚಿಕ್ಕೋಡಿಯಿಂದ ಯಾತ್ರೆಯಲ್ಲಿ ಪಾಲ್ಗೊಂಡಿರುವುದು ವಿಶೇಷ ಎನಿಸಿದೆ.

ಗಂಟೆಯ ಪಾದಯಾತ್ರೆ!

ಈ ವರ್ಷದ (2026) ಶ್ರೀಶೈಲ ಪಾದಯಾತ್ರೆಯಲ್ಲಿ ಇನ್ನೊಂದು ವಿಶೇಷ ಕಾಣಬಹುದು. ಅದೇನೆಂದರೆ, ಸಾವಿರಾರು ಭಕ್ತರ ಕಾಲ್ನಡಿಗೆಯ ಸಂಭ್ರಮದ ನಡುವೆ, ಒಂದು ಗಂಟೆಯೂ ಪಯಣ ಮಾಡುತ್ತಿದೆ! ಸುಮಾರು 151 ಕಿಲೋ ತೂಕದ, ಪಂಚ ಲೋಹದ ಗಂಟೆಯನ್ನು ಭಕ್ತರು ಕೊಂಡೊಯ್ಯುತ್ತಿದ್ದಾರೆ.

▸▸ ನಾಲ್ಕನೇ ಪುಟಕ್ಕೆ

ಹೋಳಿ ಹಬ್ಬದ ಸಮಯದಲ್ಲಿ ಜೊಂಪೆ ಜೊಂಪೆ ಹೂವುಗಳನ್ನು ಅರಳಿಸಿ, ಆಗಸಕ್ಕೆ ಬಣ್ಣ ಚೆಲ್ಲುವ ಗ್ಲಿರಿಸಿಡಿಯಾದಂತಹ ಹಲವು ಗಿಡಮರಗಳು, ಯುಗಾದಿಯ ಸಮಯದಲ್ಲಿ ಇಡೀ ಜಗತ್ತನ್ನೇ ತಮ್ಮ ಪುಷ್ಪಗಳಿಂದ ಸಿಂಗರಿಸುವ ಪರಿಯು ಬೆರಗು ಹುಟ್ಟಿಸುವಂತಹದ್ದು.

ಹೊದ್ದಲ ಹೂವುಗಳು ಬಣ್ಣ ಚೆಲ್ಲಿವೆ!

» ವಿಶ್ವನಾಥ ಭಟ್ ಧಾರವಾಡ

ಕಾಮಣ್ಣ ಬರುವ ವೇಳೆಯಿಂದ ಬಿಸಿಲು ನೆತ್ತಿಯನ್ನು ಏರುವ ಹೊತ್ತಂತೆ. ಸುಡು ಬಿಸಿಲಿನ ಝಳ ಆರಂಭವಾಗುವಷ್ಟರಲ್ಲಿ ಚಿಗುರೊಡೆಯಲು ಮರಗಳಿಗೂ ತವಕ. ಎಷ್ಟಾದರೂ ವಸಂತನಾಗಮನಕ್ಕೆ ಅಣಿಯಾದುದಲ್ಲವೇ? ಅಲ್ಲಿಲ್ಲಿ ಅಡ್ಡಾಡುತ್ತಿರುವಾಗ ಕೆಲವು ಮರಗಳಿಗೆ ವಿಶೇಷ ಆಕರ್ಷಣೆ. ಮುತ್ತುಗವು ಕೆಂಪ ಹೂವುಗಳನ್ನು ಅರಳಿಸಿ ಅವು ಹಸಿರ ಕೋಡಾಗಿ ಎಲೆಗಳೆಲ್ಲ ಚಿಗುರಿ ಹಸಿರ ಚಪ್ಪರವಾಗುವ ಕಾಲ. ಎಲೆಯುದಿರಿಸಿ ಬೋಳಾಗಿ ಬರಿಯ ಕೆಂಪು ಹೂವುಗಳನ್ನೇ ಧರಿಸುವ ಬೂರುಗದ ಹೊಳಪಿನ ಸಮಯವೂ ಇದೇ. ಅತ್ತ ಹಳದಿಯ ಕೊಂದೆಯೂ ಯುಗಾದಿ ಸಮೀಪಿಸುವುದನ್ನೇ ಕಾಯುತ್ತಿರುವಂತೆ, ಮಂಜರಿಯಾಗಿ ಹೂವುಗಳನ್ನು ಬಿಡಲಾರಂಭಿಸಿವೆ. ಅಷ್ಟರಲ್ಲಿ ನಾನೇನೂ ಕಮ್ಮಿಯಿಲ್ಲ ಎಂಬಂತೆ ನಗರಗಳಲ್ಲಿ, ದಾರಿ ಬದಿಯಲ್ಲಿ ನೆಡಲ್ಪಟ್ಟ ಜಾವಾರಾಣಿಯೂ, ಗ್ರಾಮೀಣ ಭಾಗದ ರೈತರ ಭಾಗ್ಯತರು ಗ್ಲಿರಿಸಿಡಿಯಾ-ಗೊಬ್ಬರದ ಗಿಡಗಳು ಹೂಬಿಟ್ಟು ನಳನಳಿಸುತ್ತಿವೆ. ಇವೆರಡೂ ಸಸ್ಯಗಳು ಪರಸ್ಪರ ಸಂಬಂಧಿಕರೂ ಹೌದು.

ಬದುಗಳ ಇಕ್ಕೆಲಗಳಲ್ಲಿ ಸೊಂಪಾಗಿ

ಗೊಬ್ಬರ ಗಿಡಗಳು ಹೂಬಿಟ್ಟು ಅಲುಗಾಡುವುದು ಬೇಸಿಗೆಯಲ್ಲೇ. ಬೇರೆ ದಿನಗಳಲ್ಲಿ ಯಕಶ್ಚಿತ್ ಬೇಲಿ ಗಿಡದಂತೆ ಕಾಣಿಸುವ ಗೊಬ್ಬರದ ಗಿಡಗಳು, ಈ ಯುಗಾದಿಯ ಸಮಯದಲ್ಲಿ ರಾಶಿರಾಶಿಯಾಗಿ ಅರಳಿಸುವ, ಗುಲಾಬಿ ಅಥವಾ ನೇರಳೆ ಬಣ್ಣದ ಹೂವುಗಳು ನೋಡಲು ಬಹಳ ಸುಂದರ. ಬಹಳ ಹಿಂದೆ, ಫಿಲಿಪೈನ್ಸ್ ಮತ್ತು ಮಧ್ಯ ಅಮೆರಿಕದಲ್ಲಿ ಗೊಬ್ಬರಗಿಡಗಳನ್ನು ಕೋಕೋ ಗಿಡಕ್ಕೆ ನೆರಳು ನೀಡಲು ಬೆಳಸುತ್ತಿದ್ದರಂತೆ. ಸೂರ್ಯನ ಬಿಸಿಲಿನಿಂದ ಕೋಕೋ ಗಿಡಗಳನ್ನು ರಕ್ಷಿಸುತ್ತಿದ್ದದ್ದಕ್ಕೆ ಗ್ಲಿರಿಸಿಡಿಯಾವನ್ನು ಕೋಕೋ ಗಿಡದ ತಾಯಿ ಎಂದು ಅಲ್ಲಿ ಕರೆಯುತ್ತಾರಂತೆ. ಈ ಹೂವುಗಳು ಅರಳಿದಾಗ, ಕಾಫಿ ಮತ್ತು ಕೋಕೋ ತೋಟಗಳು ದೇವಲೋಕದಂತೆ ಕಾಣುತ್ತವೆ ಎಂಬುದು ಅಲ್ಲಿನ ಜನರ ನಂಬಿಕೆ.

ಹೂವುಗಳು ಬಿರಿದಾಗ ನೋಡಲು ಅವು ಅದೆಷ್ಟು ಮನಮೋಹಕ, ಸುಂದರ. ಕವಡೆಯಂತೆಯೂ, ಚಿಟ್ಟೆಯಂತೆಯೂ ನೂರೆಂಟು ನೋಟ ದಿಟ್ಟಿಸಿದವರಿಗೆ. ನೇರ ಸಮರೂಪದ ಸಮ್ಮಿತಿಯ ದಳಗಳು ಈ ಹೂಗಳಿಗೆ ಇಲ್ಲ. ವಿಶಿಷ್ಟವಾದ, ಆಕರ್ಷಕವಾದ, ಬಟಾಣಿ ತರಹದ ರಚನೆಯು ಗೊಬ್ಬರ ಗಿಡದ ಹೂಗಳದ್ದು. ಬರಿಯ ಕೊಂಬೆಗಳ ಮೇಲೆ ದಟ್ಟವಾದ, ನೇರವಾದ ಗುಚ್ಛಗಳಲ್ಲಿ ಗುಲಾಬಿಬಣ್ಣದ ಹೂವುಗಳು ನಿಧಾನಕ್ಕೆ ಅರಳಲು ಆರಂಭಿಸಿದರೆ, ಯಾರೋ ನಮಗಾಗಿಯೇ ಸಿಂಗರಿಸಿದಷ್ಟು ವಿನ್ಯಾಸ, ಚುಂಬಕ ನಮೂನೆ. ಹೂದಳಗಳು ದಳಗಳು ಪ್ರಕಾಶಮಾನವಾದ ಕಡು ಗುಲಾಬಿ, ಕೆನ್ನೇರಳೆ ಬಣ್ಣದ್ದಾಗಿರುತ್ತವೆ. ದಿನಕಳೆದಂತೆ ಬಿಳಿಯೋ ತಿಳಿ ನೇರಳೆ ಬಣ್ಣಕ್ಕೆ ಮಸುಕಾಗುತ್ತವೆ. ಬಿಳಿ, ತಿಳಿ ಗುಲಾಬಿ, ನಸು ಕೆಂಪು, ನೇರಳೆ ಏನೇ ಹೇಳಿ, ಗದ್ದೆಯ



ಬದುವಿಗೋ, ಬೇಲಿಯಲ್ಲೊ ಸ್ವಾವಲಂಬಿಯಾಗಿ ನಿಂತ ಗ್ಲಿರಿಸಿಡಿಯಾ, ನೋಡುಗರ ಗಮನ ಸುಲಭವಾಗಿ ಹೊರಳುತ್ತದೆ.

ಗ್ಲಿರಿಸಿಡಿಯಾ ಹೂವುಗಳಲ್ಲಿ ಪ್ರೋಟೀನ್ ಮತ್ತು ಜೀವಸತ್ವಗಳು ಸಮೃದ್ಧವಾಗಿವೆಯಂತೆ. ಮಧ್ಯ ಅಮೆರಿಕದಂತಹ ದೇಶಗಳಲ್ಲಿ ಈ ಹೂವುಗಳನ್ನು ಅಡುಗೆಯಲ್ಲಿ ಬಳಸಲಾಗುತ್ತದೆ. ತಿನ್ನಲು ಯೋಗ್ಯವಾದ ಹೂವುಗಳಿದ್ದರೂ ಇದರ ತೊಗಟೆ ಮತ್ತು ಬೀಜಗಳು ಇಲಿಗಳಿಗೆ ವಿಷಕಾರಿಯಂತೆ. ಹಾಗಾಗಿ 'ಕ್ವಿಕ್ ಸ್ಟಿಕ್', ಇಲಿ ಸಾಯಿಸುವ ಗಿಡವೆಂಬ ಹೆಗ್ಗಳಿಕೆಯೂ ಗೊಬ್ಬರಗಿಡಕ್ಕಿದೆ. ಬಣ್ಣದ ಹಬ್ಬವಾಗಿರುವ ಹೋಳಿ ಹಬ್ಬದ ಸಮಯ ದಲ್ಲಿ ಜೊಂಪೆಜೊಂಪೆ ಹೂವುಗಳನ್ನು ಅರಳಿಸಿ, ಆಗಸಕ್ಕೆ ಬಣ್ಣ ಚೆಲ್ಲುವ ಗ್ಲಿರಿಸಿಡಿಯಾದಂತಹ ಹಲವು ಗಿಡಮರ ಗಳು, ಯುಗಾದಿಯ ಸಮಯದಲ್ಲಿ ಇಡೀ ಜಗತ್ತನ್ನೇ ಪುಷ್ಪಗಳ ಬಣ್ಣಗಳಿಂದ ಸಿಂಗರಿಸುವ ಪರಿಯು ಬೆರಗು ಹುಟ್ಟಿಸುವಂತಹದ್ದು.

ಪುಸ್ತಕ ವಿಮಾನ

» ಕಲಾ ಭಾಗ್ವತ್

ಬೇಂದ್ರೆ ಕುವೆಂಪು ದರ್ಶನ



ಬೇಂದ್ರೆ ಮತ್ತು ಕುವೆಂಪು ಅವರ ಕುರಿತು ಎರಡು ಮಹತ್ವದ ಗ್ರಂಥಗಳು ಪ್ರಕಟಗೊಂಡಿದ್ದು, ಆ ಎರಡು ಗ್ರಂಥಗಳನ್ನು ಪರಿಚಯಿಸುವ ಪುಸ್ತಕವೊಂದನ್ನು ಮುಂಬೈ ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಮುಖ್ಯಸ್ಥರಾದ ಪ್ರೊ. ಜಿ.ಎನ್. ಉಪಾಧ್ಯ ಅವರು ರಚಿಸಿರುವುದು ವಿಶೇಷ ಎನಿಸಿದೆ.

ನಮ್ಮ ಪರಂಪರೆಯ ನಿಕಟ ಪೂರ್ವ ಮಹಾ ಮೇಧಾವಿ ಸಾಹಿತಿಗಳಲ್ಲಿ ದ. ರಾ. ಬೇಂದ್ರೆ ಹಾಗೂ ಕುವೆಂಪು ಅವರದು ಎದ್ದು ಕಾಣುವ ಹೆಸರು. ಇವರೀರ್ವರ ಕುರಿತು ಕನ್ನಡ ಸಾಹಿತ್ಯದಲ್ಲಿ ಬಿಡಿಯಾದ ಅಧ್ಯಯನ, ವಿಮರ್ಶೆಗಳು ಹಲವಾರು ರೀತಿಯಲ್ಲಿ ನಡೆದಿವೆ. ಇವೆಲ್ಲಕ್ಕಿಂತ ಮಿಗಿಲಾಗಿ ವಿಮರ್ಶೆಯ ಕ್ಷೇತ್ರದಲ್ಲಿ ಗಂಭೀರವಾದ ಅಧ್ಯಯನದಿಂದ ಅವರ ಸಂಪೂರ್ಣ ಸಾಹಿತ್ಯದ ಅಗಾಧತೆಯನ್ನು ಸರಿಯಾದ ರೀತಿಯಲ್ಲಿ ಅರ್ಥೈಸಿಕೊಂಡು ಅದನ್ನು ಲೋಕಕ್ಕೆ ಅನಾವರಣಗೊಳಿಸುವುದು ಆ ಮೂಲಕ ಸಾಂಸ್ಕೃತಿಕ ಅಧ್ಯಯನದ ಹೊಸ ಸಾಧ್ಯತೆಗಳನ್ನು ಪರಿಚಯಿಸುವುದು ಇಂದಿನ ವಿಮರ್ಶಾ ಕ್ಷೇತ್ರದಲ್ಲಿ ಮಾಡಬೇಕಾಗಿರುವ ಮಹತ್ಕಾರ್ಯವಾಗಿದೆ. ಕನ್ನಡ ವಿಮರ್ಶಾ ಲೋಕದಲ್ಲಿ ಹೆಗ್ಗುರುತು ಮೂಡಿಸಿದ ಡಾ. ಜಿ.ಎಸ್. ಅಮೂರ ಹಾಗೂ ಡಾ. ನರಹಳ್ಳಿ ಬಾಲಸುಬ್ರಹ್ಮಣ್ಯ ಅವರು ಬಹಳ ಜವಾಬ್ದಾರಿಯುತವಾಗಿ ಈ ಕಾರ್ಯವನ್ನು ಮಾಡಿರುವುದು ಕನ್ನಡ ಸಾಹಿತ್ಯಕ್ಕೆ ಗರಿ ಮೂಡಲು ಕಾರಣವಾಗಿದೆ. ನಾಡಿನ ಹಿರಿಯ ವಿದ್ವಾಂಸರೂ ವಿಮರ್ಶಕರೂ ಆದ ಡಾ. ಜಿ ಎಂ ಹೆಗಡೆ, ಧಾರವಾಡ ಅವರು ಆಮೂರರ ಬೇಂದ್ರೆ ದರ್ಶನದ ಎಲ್ಲ ಬರಹಗಳನ್ನು, ಅದಕ್ಕೆ ಸಂಬಂಧಿಸಿದ ವಿಮರ್ಶೆ, ಅಭಿಪ್ರಾಯಗಳನ್ನು ಒತ್ತಟ್ಟಿಗೆ ತಂದು 'ಬೇಂದ್ರೆ ಸಮಗ್ರ ದರ್ಶನ' ಎಂಬ ಕೃತಿರೂಪದಲ್ಲಿ ತಂದು ಪ್ರಕಟಿಸಿರುವುದು ಬೇಂದ್ರೆ ಸಾಹಿತ್ಯದ ಓದಿನ ಆಸಕ್ತರಿಗೆ, ಆಮೂರರನ್ನು ಅರಿಯುವ ಆಸ್ಥೆಯುಳ್ಳವರಿಗೆ ಮಹೋಪಕಾರವಾಗಿದೆ. ಅಂತೆಯೇ ನರಹಳ್ಳಿಯವರು ಕೂಡ ಕುವೆಂಪು ಸಮಗ್ರ ಸಾಹಿತ್ಯವನ್ನು ಕಂಡು 'ಬಾ ಕುವೆಂಪು ದರ್ಶನಕೆ' ಎಂಬ ಉದ್ಗ್ರಂಥವನ್ನೇ ಬರೆದಿದ್ದಾರೆ. ಇದರ ಮುಂದುವರಿಕೆ ಎಂಬಂತೆ ಇವೆರಡೂ ಕೃತಿಗಳನ್ನು ಅಷ್ಟೇ ಗಂಭೀರವಾಗಿ ಓದಿ, 'ಶತಮಾನದ ಎರಡು ವಿಮರ್ಶಾ ಕೃತಿಗಳು' ಎಂಬ ಹೆಸರಿನ ಕಿರು ಹೊತ್ತಗೆಯ ರೂಪದಲ್ಲಿ ಪ್ರೊ. ಜಿ. ಎನ್. ಉಪಾಧ್ಯ ಅವರು ತಂದಿದ್ದಾರೆ.

ಎರಡು ಬೃಹತ್ ವಿಮರ್ಶಾ ಗ್ರಂಥಗಳ ಅನನ್ಯತೆಯನ್ನು ಗಟ್ಟಿ ಧ್ವನಿಯಲ್ಲಿ ಹೇಳುವ ವಿಚಾರ ವಿಮರ್ಶೆಯು ಈ ಕಿರು ಕೃತಿಯಲ್ಲಿ ನೆಲೆ ಪಡೆದಿದೆ. ನರಹಳ್ಳಿ ಅವರು ಕುವೆಂಪು ಅವರ ಸಮಗ್ರ ಸಾಹಿತ್ಯದಲ್ಲಿ ಅದರಲ್ಲೂ ಮುಖ್ಯವಾಗಿ ನಾಟಕಗಳಲ್ಲಿ ದಟ್ಟವಾಗಿ ರೂಪುಗೊಂಡ ವೈಚಾರಿಕ ಪ್ರಜ್ಞೆ, ಪ್ರಧಾನ ಸಂಸ್ಕೃತಿಗೆ ಪ್ರತಿಯಾಗಿ ಪರ್ಯಾಯ ಸಂಸ್ಕೃತಿಯ ನಿರ್ಮಾಣದ ಪ್ರಯತ್ನ, ವೈಚಾರಿಕ ಆಕೃತಿಯಾಗಿ ಅವರ ಸಮಗ್ರ ಸಾಹಿತ್ಯದ ನೆಲೆಯಲ್ಲಿ ಕಾಣುವ ಸಂಸ್ಕೃತಿ ಸಂಘರ್ಷ ಇತ್ಯಾದಿ ಅನೇಕ ಸಂಗತಿಗಳನ್ನು ಪರಿಶೀಲಿಸಿ, ವಿಶ್ಲೇಷಿಸುವ ಮೂಲಕ ಅದರ ಸಾಂಸ್ಕೃತಿಕ ಮಹತ್ವವನ್ನು ಮುನ್ನೆಲೆಗೆ ತಂದು ಚರ್ಚಿಸಿರುವುದನ್ನು ಈ ಕೃತಿಯಲ್ಲಿ ಅನಾವರಣಗೊಳಿಸಲಾಗಿದೆ. ಕುವೆಂಪು ಕಾವ್ಯದ ವಿಭಿನ್ನ ನೆಲೆಗಳನ್ನು ಚರ್ಚೆಗೆ ಒಳಪಡಿಸಿ ಅಲ್ಲಿ ಮೊದಲು ಊದಿದ ಗೊಲ್ಲನ ಕೊಳಲು ಮುಂದೆ ಪಾಂಚಜನ್ಯವಾಗಿ ಮೊಳಗಿ ತನ್ನ ಸಾಂಸ್ಕೃತಿಕ ಅಸ್ತಿತ್ವವನ್ನು ಸ್ಥಾಪಿಸಿಕೊಂಡು ಆತ್ಮ ವಿಶ್ವಾಸದಿಂದ ಸಜ್ಜಾಗಿ ನಿಂತಿರುವುದು ಒಂದು ಅದ್ಭುತ ರೂಪಕವಾಗಿದೆ ಎಂಬುದನ್ನು ಎಳೆ ಎಳೆಯಾಗಿ ಬಿಡಿಸಿ ಓದುಗರ ಮುಂದಿಟ್ಟ ನರಹಳ್ಳಿಯವರು ಅವರ ಕವಿತೆಗಳನ್ನು ತೌಲನಿಕವಾಗಿಯೂ ವಿಮರ್ಶೆ ಮಾಡಿರುವುದು ವಿಶೇಷ. ಕುವೆಂಪು ಅವರ ಸಣ್ಣ ಕತೆಗಳು ಮಾಸ್ತಿಯವರ ಕತೆಗಳಿಗಿಂತ ಭಿನ್ನ, ಅನನ್ಯ ಮಾದರಿಯವು. ಅವರ ಕಾದಂಬರಿಗಳು ಕೇವಲ ಕಥನ ವಿಲಾಸವಾಗಿರದೆ ಅದೊಂದು ಸಂಸ್ಕೃತಿ ಚರಿತ್ರೆ. ಅವರ ಕಾವ್ಯ ಚಿಂತನೆಯಲ್ಲಿ ಭಾರತೀಯ ಪರಂಪರೆಯ ದರ್ಶನ ಸಾರದೊಂದಿಗೆ ಆಧುನಿಕ ಜಗತ್ತಿನ ವಿಜ್ಞಾನ ಕಂಡುಕೊಂಡ ದರ್ಶನವೂ ಮೇಳೈಸಿದೆ. ಇಂತಹ ಹತ್ತು ಹಲವು ಸಂಗತಿಗಳನ್ನು ಮುನ್ನೆಲೆಗೆ ತಂದು ನರಹಳ್ಳಿಯವರು ಸ್ಪಷ್ಟಪಡಿಸಿರುವುದರ ಮೇಲೆ ಉಪಾಧ್ಯ ಅವರು ಪ್ರಖರವಾಗಿ ಬೆಳಕು ಹಾಯಿಸಿದ್ದಾರೆ.

ಶತಮಾನದ ಎರಡು ವಿಮರ್ಶಾ ಕೃತಿಗಳು
ಲೇ: ಪ್ರೊ. ಜಿ.ಎನ್. ಉಪಾಧ್ಯ
ಪ್ರ: ಕನ್ನಡ ವಿಭಾಗ ಮುಂಬೈ ವಿಶ್ವವಿದ್ಯಾಲಯ
9220212578

'ಭುವನದ ಭಾಗ್ಯ' ಕೃತಿಯಲ್ಲಿ ಆಮೂರರು ನಾಲ್ಕು ಭಾಗಗಳಲ್ಲಿ ಬೇಂದ್ರೆ ಸಾಹಿತ್ಯವನ್ನು ಸಮೀಕ್ಷೆಗೆ ಒಳಪಡಿಸಿದ್ದಾರೆ. ಬೇಂದ್ರೆಯವರ ದರ್ಶನದ ಅಖಂಡತೆಯನ್ನು, ವಸ್ತು ಮತ್ತು ಆಕೃತಿಗಳ ವಿಕಾಸ ಕ್ರಮವನ್ನು, ಅಭಿವ್ಯಕ್ತಿ ವೈವಿಧ್ಯವನ್ನು ಅದರ ಚಾರಿತ್ರಿಕ ಸಂದರ್ಭದಲ್ಲಿಟ್ಟು ನೋಡುವ ಕ್ರಮವನ್ನೂ, ಅದು ವಿದ್ವತ್ ವಲಯದಲ್ಲಿ ಪ್ರಶಂಸೆಗೆ ಪಾತ್ರವಾಗಿರುವುದನ್ನು, ವಿಭಿನ್ನ ನೆಲೆಗಳಲ್ಲಿ ಬೇಂದ್ರೆ ಕಾವ್ಯದ ಬಗೆಗೆ ಎದ್ದ ತಕರಾರುಗಳಿಗೆ ಸಮಚಿತ್ತದಿಂದ ಪ್ರತಿಕ್ರಿಯಿಸಿ ವಿಚಾರಾತ್ಮಕವಾದ ದೃಷ್ಟಿಕೋನವನ್ನು ಒದಗಿಸಿರುವುದನ್ನು ವ್ಯಾಖ್ಯಾನಿಸುವ ಮೂಲಕ ಆಮೂರರ ವಿಮರ್ಶಾ ವಿವೇಕ ಪ್ರಜ್ಞೆಯನ್ನು ತೋರಿರುವುದು ಈ ಕೃತಿಯ ಹೆಚ್ಚುಗಾರಿಕೆ.

''ಆಧುನಿಕ ಕನ್ನಡ ಸಾಹಿತ್ಯದ ಸಂದರ್ಭದಲ್ಲಿ ಬೇಂದ್ರೆ ಕಾವ್ಯವು ಮಹತ್ವವನ್ನು ಪಡೆದಿರುವುದು ಅದರ ಅಭಿವ್ಯಕ್ತಿನಿಷ್ಠೆಯಿಂದಾಗಿಯೇ ವಿನಃ ಕೆಲವು ಹಿಂದಿನ ವಿಮರ್ಶಕರು ಗುರುತಿಸಿದ ಪ್ರಭಾವಕ್ಕೊಳಗಾಗಿ ಅಲ್ಲ'' ಎಂಬುದಾಗಿ ಸ್ಪಷ್ಟವಾದ ನಿಲುವನ್ನು ಹೊಂದುವುದು ಆಮೂರರ ವಸ್ತುನಿಷ್ಠ ಅಧ್ಯಯನಶೀಲ, ಖಚಿತ ಬರವಣಿಗೆಗೆ ಸಾಕ್ಷಿ. ಬಹುನೆಲೆಯ ಅಂತರಶಿಸ್ತೀಯ ಅಧ್ಯಯನ ವಿಮರ್ಶೆಯು ಕನ್ನಡ ವಿಮರ್ಶಾಲೋಕಕ್ಕೆ ಬಹಳ ಮೌಲಿಕವಾದ ಕೊಡುಗೆ. ಬೇಂದ್ರೆ ಸಮಗ್ರ ಸಾಹಿತ್ಯದ ಕುರಿತು ಸಾಲು ಸಾಲು ಒಳನೋಟಗಳನ್ನು ಕೊಟ್ಟಿರುವ ಈ ಕೃತಿಯು ಆಮೂರರ ಅಧ್ಯಯನ ನಿಷ್ಠೆ ಹಾಗೂ ವಿಮರ್ಶಾ ಪ್ರತಿಭೆಯ ಬಿಂಬವಾಗಿದೆ ಎನ್ನುವುದನ್ನು ಇದರಲ್ಲಿ ಲೋಕಸಮ್ಮುಖ ಗೊಳಿಸಲಾಗಿದೆ. ಬೇಂದ್ರೆ ಸಮಗ್ರ ದರ್ಶನ ಕೃತಿಯು ಏಕಕಾಲಕ್ಕೆ ಬೇಂದ್ರೆಯವರನ್ನು ಅಮೂರರ ವಿಮರ್ಶೆಯನ್ನು ಅರಿಯಲು ಮಹತ್ವದ ಕೃತಿಯಾಗಿದೆ ಎಂಬುದನ್ನು ಈ ಕಿರು ಹೊತ್ತಗೆಯು ಹೇಳುತ್ತದೆ.

ಕರಿಯನ್ನು ಕನ್ನಡಿಯಲ್ಲಿ ತೋರುವ ಪ್ರಯತ್ನವು ಮೊದಲ ಹಂತದಲ್ಲಿ ಡಾ. ಆಮೂರ ಹಾಗೂ ಡಾ. ನರಹಳ್ಳಿ ಅವರಿಂದ ಸಫಲವಾಗಿದ್ದರೆ, ಎರಡನೆಯ ಹಂತದಲ್ಲಿ ಇವರೀರ್ವರ ಕೃತಿಯ ವಿಮರ್ಶೆಯ ಮೂಲಕ ಜಿ. ಎನ್ ಉಪಾಧ್ಯ ಅವರು ಈ ಪ್ರಯತ್ನವನ್ನು ಮಾಡಿ ಸಫಲರಾಗಿದ್ದಾರೆ. ಮೂವರು ವಿಮರ್ಶಕರ ಚಿಂತನಾ ಕ್ರಮವದಿಂದ ಮುಪ್ಪುರಿಗೊಂಡ ಈ ಹೊತ್ತಗೆಯು ಗಾತ್ರದಲ್ಲಿ ಚಿಕ್ಕದಾದರೂ ವಿಮರ್ಶೆಯ ಹೊಸ ವಿಧಾನವನ್ನು ಪರಿಚಯಿಸುವ ಮೂಲಕ ವಿಶಿಷ್ಟವಾಗಿದೆ.

» ಅಜಯ್ ಅಂಚೆಪಾಳ್ಯ

ಹಿರಿಯ ಮಹಿಳೆಯ ಆಪ್ತ ನೆನಪುಗಳು

ಈ ಪುಸ್ತಕ ರೂಪುಗೊಂಡ ಸನ್ನಿವೇಶವೇ ಬಹು ವಿಶಿಷ್ಟ. ಸಾಹಿತಿಗಳನ್ನು ಮತ್ತು ಸಾಹಿತ್ಯವನ್ನು ಅಪಾರವಾಗಿ ಗೌರವಿಸುವ, ಅದೇ ಸಮಯದಲ್ಲಿ, ಕಷ್ಟದಲ್ಲಿರುವವರಿಗೆ ಸಹಾಯ ಮಾಡುವ ಹರಿಹರದ ಲಲಿತಮ್ಮ ಡಾ. ಚಂದ್ರಶೇಖರ್ ಅವರು, ಲೇಖಕಿ ವೈದೇಹಿಯವರಿಗೆ ಬರೆದ ಪತ್ರಗಳಿಂದಲೇ ರೂಪುಗೊಂಡ ಪುಸ್ತಕವಿದು! ಆ ಪತ್ರಗಳನ್ನೆಲ್ಲಾ ಓದಿದ ವೈದೇಹಿಯವರು ನಿಬ್ಬೆರಗಾದರು, ಒಂದು ಕಾಲಘಟ್ಟದ ಸಾಂಸ್ಕೃತಿಕ, ಕೌಟುಂಬಿಕ, ಸಾಹಿತ್ಯಕ ಮತ್ತು ಸಾಮಾಜಿಕ ಜ್ಞಾನಕೋಶವೇ ಆ ಪತ್ರಗಳನ್ನು ಹುದುಗಿರುವುದನ್ನು ಗುರುತಿಸಿದರು. ''ಇಲ್ಲಿರುವ ನೆನಪುಗಳು ಒಂದು ಕಾಲದ ದರ್ಶನದ, ಹೆಣ್ಣು ನಡೆದು ಬಂದ ದಾರಿಯ, ಅವಳನ್ನು ನಡೆಸಿಕೊಂಡ ದಾರಿಯ ರೂಪ-ವಿರೂಪಗಳ ಚಿತ್ರದ ಜೊತೆಗೇ ಸಾಹಿತ್ಯದ ಸಂಗಾತವನ್ನು ಸದಾಕಾಲ ಬಯಸುವ ಅಮಲ ಚೇತನವೊಂದರ ದರ್ಶನವನ್ನೂ ಮಾಡಿಸುತ್ತಿವೆ, ಇಂಥ ಅಮಲ ಚೇತನಗಳೇ ಈ ಜಗತ್ತನ್ನು ಹಿಡಿದಿಟ್ಟಿರುವುದು, ಕಾಪಾಡುತ್ತಿರುವುದು ಅಂತಲೂ; ಇದರೊಂದಿಗೇನೇ, ಹಳೆಮೈಸೂರು ರಾಜ್ಯದ ಒಂದು ಸಮುದಾಯದ ಸ್ತ್ರೀಲೋಕ ಕಟ್ಟಿಕೊಂಡ ಸಾಂಸ್ಕೃತಿಕ ವಿವರಗಳೂ, ಒಳಮನೆಯ ತಿಂಡಿತೀರ್ಥ ಸಡಗರಗಳೂ ಯಾವ ಕೃತಕತೆ ಇಲ್ಲದೆ ಸೀದಾ ಸಾದಾ ಬರಹದ ಓಘದೊಳಗೆ ತನ್ನತನ್ನಂತೆ ದಾಖಲಾಗಿವೆ ಅಂತಲೂ'' (ಪ್ರಸ್ತಾವನೆಯಲ್ಲಿ ವೈದೇಹಿ).

ಹರಿಹರದ ಲಲಿತಮ್ಮ ಡಾ.ಚಂದ್ರಶೇಖರ್ ಅವರಿಗೆ ಸಾಹಿತಿಗಳೆಂದರೆ ಅಚ್ಚುಮೆಚ್ಚು; ಸದಾ ಸಾಹಿತ್ಯವನ್ನೇ ದೇನಿಸುವ ಲಲಿತಮ್ಮ ಅವರು, ಸಾಹಿತಿಗಳೊಡನೆ ಒಡನಾಡಿದ ನೆನಪುಗಳನ್ನು ಸೊಗಸಾಗಿ, ಆಪ್ತವಾಗಿ ಇಲ್ಲಿ ಬರೆದಿದದ್ದಾರೆ. ಈ ಪುಸ್ತಕದ ಸುಮಾರು 25 ಬರಹಗಳು ಸಾಹಿತಿಗಳ ಕುರಿತಾಗಿಯೇ ಇವೆ ಎಂದರೆ, ಅವರ ಸಾಹಿತ್ಯಪ್ರೇಮವನ್ನು ಗುರುತಿಸಬಹುದು. 'ಮನದ ತಂತಿಮೀಟುವ ದ. ರಾ.ಬೇಂದ್ರೆ' ಲೇಖನದಲ್ಲಿ (ಪುಟ 186), 'ನೀ ಹಿಂಗ ನೋಡಬ್ಯಾಡ ನನ್ನ' ಕವನದ ಹಿನ್ನೆಲೆಯನ್ನು ಬೇಂದ್ರೆಯವರೇ ಲಲಿತಮ್ಮ ಅವರ ಬಳಿ ಹೇಳಿದ ಸನ್ನಿವೇಶದ ನಿರೂಪಣೆ ಇದೆ. ಡಾ. ಅನುಪಮಾ ನಿರಂಜನ, ವಿಜಯಾ ದಬ್ಬೆ, ಪುತಿನ, ಕುವೆಂಪು, ಜ್ಯೋತ್ಸ್ನಾ ಕಾಮತ್, ಶಿವರಾಮ ಕಾರಂತ ಎಂ.ಕೆ. ಇಂದಿರಾ ಮೊದಲಾದ ಹಿರಿಯ ಸಾಹಿತಗಳ ಕುರಿತಾಗಿ, ಅವರ ಒಡನಾಟದ ನೆನಪುಗಳನ್ನು ಲಲಿತಮ್ಮ ಅವರು ಬರೆದಿರುವ ಪರಿಯೇ ಅನನ್ಯ.

'ಶ್ರೀಮತಿ ಲಲಿತಮ್ಮನವರ ಈ ಎಲ್ಲ ಬರವಣಿಗೆಯೂ 'ಕುಟುಂಬ ವಿಶ್ವ'ದ ನಿರೂಪಣೆಗಳಂತೆ ಕಾಣಿಸುತ್ತವೆ. ಕುಟುಂಬ ಎಂದರೆ ಯಾವುದು ಎಂದು ಲಲಿತಮ್ಮನವರನ್ನು ಕೇಳಿದರೆ, ನಾನು ಹುಟ್ಟಿ ಬೆಳೆದ ಊರು, ನಾನು ಬಾಳಿ ಬದುಕಿದ ಹರಿಹರ, ಬಂದು ಹೋಗುವ ಬೆಂಗಳೂರು, ನನ್ನ ಸ್ನೇಹಿತರು, ಸಂಬಂಧಿಕರು ಎಂದು ಹೇಳುತ್ತಾ, ಅಷ್ಟೇಕೆ ಎಲ್ಲ ಹೆಣ್ಣು ಮಕ್ಕಳೂ ನನ್ನ ಕುಟುಂಬದವರಿದ್ದಂತೆ ಎಂದೂ ಹೇಳಿಯಾರು.'(ಮುನ್ನುಡಿಯಲ್ಲಿ ಎಂ.ಎಸ್.ಆಶಾದೇವಿ) ಸಾಹಿತ್ಯ, ಸಾಮಾಜಿಕ ಮತ್ತು ಸಾಂಸ್ಕೃತಿಕ ಲೋಕದಲ್ಲಿ ಪ್ರೀತಿಯಿಂದ ತೊಡಗಿಕೊಂಡ ಮಹಿಳೆಯೊಬ್ಬರ ಆಪ್ತ ನೆನಪುಗಳನ್ನು ಹೊಂದಿರುವ ಈ ಪುಸ್ತಕವು, ಕನ್ನಡ ಗದ್ಯದ ಸಾಧ್ಯತೆಗಳ ಉತ್ತಮ ಉದಾಹರಣೆಯಾಗಿ ಕಾಣಿಸುತ್ತಿದೆ.

ನೆನಪಿನ ಉಗ್ರಾಣ
ಸಂ: ವೈದೇಹಿ
ಪರ: ವಸಂತ ಪ್ರಕಾಶನ
7892106719
ಬೆಲೆ ರು. 320/-



» ಎನ್. ಪಿ.

ಪ್ರಾಮಾಣಿಕ ಅನುಭವದ ಕಥೆಗಳು

ಗಿರಿಕರ್ಣಿಕೆ'ಯು ಲೇಖಕಿಯ ಮೊದಲ ಕಥಾ ಸಂಕಲನವಾಗಿದೆ. ಒಟ್ಟು ಹದಿಮೂರು ಕಥೆಗಳನ್ನು ಹೊಂದಿರುವ ಈ ಸಂಕಲನದ ವೈಶಿಷ್ಟ್ಯವೆಂದರೆ ಸಹಜತೆ, ಉನ್ನತ ಆದರ್ಶಗಳು ಹಾಗೂ ಗ್ರಾಮೀಣ ಬದುಕಿನ ಸೊಗಡು. ಕಥಾ ಸಂಕಲನದ ಮೊದಲ ಕಥೆ 'ಮೌನಯಾನ' ತ್ಯಾಗ ಮನೋಭಾವದ ಪ್ರಾಮುಖ್ಯತೆಯನ್ನು ಬಿಂಬಿಸಿದೆ. ಕುಟುಂಬದ ಹಿತ ಹಾಗೂ ಗೌರವಕ್ಕೆ ದಕ್ಕೆಯಾಗದಂತೆ ಸುಕನ್ಯಾ ಮತ್ತು ಶ್ರೀಕಂಠನ ಪಾತ್ರ ಓದುಗರ ಕಣ್ಣುಗಳನ್ನು ಒದ್ದೆಯಾಗಿಸುತ್ತದೆ. ಉಂಡ ಮನೆಗೆ ದ್ರೋಹ ಬಗೆಯಬಾರದೆಂಬ ಔದಾರ್ಯ ಬಳೆಗಾರನ ವಿಶಾಲ ಮನೋಭಾವವು ಕತೆಯ ಕೇಂದ್ರ ಬಿಂದುವಾಗಿದೆ. 'ಸಹಜ ಸಾವಿನ ಸುತ್ತ ' ಕಥೆಯು ತಂದೆಯ ಸಾವನ್ನು ಊರು ಸಹಜವೆಂದು ಭಾವಿಸಿದರೂ, ಅದರ ಹಿಂದೆ ಅಡಗಿರುವ ದುರಾಸೆಯ ನೆರಳನ್ನು ಅನಾವರಣಗೊಳಿಸುತ್ತದೆ. ದುರಾಸೆ ಮನುಷ್ಯನನ್ನು ಪತನದತ್ತ ನೂಕುತ್ತದೆ ಎಂಬುದನ್ನು ಕಥೆಯಲ್ಲಿ ಪರಿಣಾಮಕಾರಿಯಾಗಿ ಕಟ್ಟಿದ್ದಾರೆ, ಸಾತ್ವಿಕ ಮೌಲ್ಯಗಳೇ ನಿಜವಾದ ಸಂಪತ್ತು ಎಂಬ ಸಂದೇಶ ಕಥೆಯಲ್ಲಿದೆ. 'ನಿಗೂಢ ದ್ವೀಪ' ಕತೆಯಲ್ಲಿ ಹರಿಯುವ ನದಿಯ ಮಧ್ಯದಲ್ಲಿರುವ ಪುಟ್ಟ ಹಳ್ಳಿಯೊಂದು ಕಥೆಗೆ ರಹಸ್ಯಮಯ ಹಿನ್ನೆಲೆಯನ್ನು ನೀಡುತ್ತದೆ. ಗಾಂಜಾ ಗಿಡಗಳ ಮೂಲಕ ಮುಗ್ಧ ಮನಗಳ ಶೋಷಣೆಯ ಸಾಮಾಜಿಕ ಅಂಶವನ್ನು ಲೇಖಕಿ ಸ್ಪಷ್ಟಪಡಿಸಿದ್ದಾರಲ್ಲದೆ, ಭಾವನಾತ್ಮಕತೆ, ಕುತೂಹಲ ಮತ್ತು ನೈತಿಕ ಸಂದೇಶಗಳ ಸಮನ್ವಯು ಈ ಕಥೆಯ ವಿಶೇಷತೆಯಾಗಿದೆ.

ಗಿರಿಕರ್ಣಿಕೆ
ಲೇ: ವಿಮಲಾರುಣ ಪಡ್ಡಂಬೈಲು
ಪ್ರ: ನಿವೇದಿತಾ ಪ್ರಕಾಶನ, ಬೆಂಗಳೂರು
ಬೆಲೆ: ರು. 180/-

'ಮುಖಾ ಮುಖಿ' ಕಥೆಯು ನಿಷ್ಕಲ್ಮಷ ಪ್ರೀತಿಯ ತಿರುಳನ್ನು ಸಾರುತ್ತದೆ. ಅನ್ಯಧರ್ಮೀಯ ಪ್ರೇಮಿಗಳು ಸಂಸ್ಕೃತಿ, ಆಚಾರ-ವಿಚಾರಗಳನ್ನು ಪರಸ್ಪರ ಗೌರವಿಸಿದರೂ, ಇಬ್ಬರೂ ಒಂದಾಗುವ ಕನಸು ಕನಸಾಗಿಯೇ ಉಳಿಯುತ್ತದೆ. ಆ ಕಾರಣಕ್ಕೆ ಅವ್ಯಕ್ತ ದುಃಖ ಓದುಗರಲ್ಲೂ ಆವರಿಸುತ್ತದೆ. 'ಗಿರಿಕರ್ಣಿಕೆ' ಶೀರ್ಷಿಕೆಯ ಕಥೆಯು ಪ್ರತೀಕಾರಕ್ಕಿಂತ ಸ್ನೇಹ, ಮಾನವೀಯತೆ ಮತ್ತು ಸಾಮರಸ್ಯವೇ ಶ್ರೇಷ್ಠ ಎಂಬ ಸಂದೇಶ ಸಾರುತ್ತದೆ. ಇಲ್ಲಿನ ಕಥೆಗಳ ವಸ್ತು ವೈವಿಧ್ಯಮಯವಾಗಿದ್ದು, ಭಾಷೆ ಸರಳವಾಗಿ, ಅತ್ಯಾಪ್ತವಾಗಿಯೂ ಇದೆ. ಆ ಕಾರಣಕ್ಕಾಗಿ ಪ್ರತಿಯೊಂದು ಕಥೆಯೂ ಓದುಗರ ಹೃದಯವನ್ನು ಸ್ಪರ್ಶಿಸುತ್ತದೆ.

ಒಟ್ಟಿನಲ್ಲಿ, ಗಿರಿಕರ್ಣಿಕೆ ಕಥಾ ಸಂಕಲನವು ಮಾನವೀಯ ಮೌಲ್ಯಗಳು ಮತ್ತು ಗ್ರಾಮೀಣ ಜೀವನದ ನೈಜ ಚಿತ್ರಣವನ್ನು ಒಟ್ಟುಗೂಡಿಸಿದ ಕಥಾಸಂಕಲನವಾಗಿದೆ.

» ವಿಕ್ರಮ ಜೋಶಿ

ಹುಬ್ಬಳಿಯ ಸಾಹಿತಿ ಪ್ರಶಾಂತ್ ಅಡೂರ್ ಅವರ ಸಾಹಿತ್ಯದ ಶೈಲಿ ಪ್ರಹಸನ. ಇವರ ಲೇಖನಗಳು ವಿದ್ಯುನ್ಮಾನ ಓದುಗರಲ್ಲಿ ತನ್ನದೇ ಆದ ಒಂದು ಬಳಗವನ್ನು ಸೃಷ್ಟಿಸಿದೆ. ಒಳನಾಡಿನ ಹೊರತಾಗಿಯೂ ಹೊರನಾಡಿನಲ್ಲಿ ಅಡೂರ್ ಅವರ ಬರಹಗಳನ್ನು ಮೆಚ್ಚಿದ ಗುಂಪೇ ಇದೆ. ಇಲ್ಲಿಯ ತನಕ 'ಕುಟ್ಟವಲಕ್ಕಿ', 'ಗೊಜ್ಜವಲಕ್ಕಿ', 'ಅಳ್ಳಿಟ್ಟು', 'ತುಂಬಿಟ್ಟು', ಎನ್ನುವ ನಾಲ್ಕು ಪುಸ್ತಕಗಳು ಕೂಡ ಹೊರ ಬಂದಿವೆ. 'ಗಿರ್‌ಮಿಟ್' ಇದು ಅಡೂರ್ ಅವರ ಐದನೆಯ ಪುಸ್ತಕ. ಹುಬ್ಬಳ್ಳಿ ಧಾರವಾಡದಲ್ಲಿದ್ದು ಗಿರ್‌ಮಿಟ್ ತಿಂದವರಿಗೆ ಗೊತ್ತು ಅದರಲ್ಲಿನ ಉಪ್ಪು, ಖಾರ, ಸಿಹಿಯ ಹೊಂದಾಣಿಕೆ. ಹಾಸ್ಯವೇ ಪ್ರಧಾನವೆನಿಸಿದರೂ ಕೂಡ ಈ ಪುಸ್ತಕದಲ್ಲಿ ಗಿರ್‌ಮಿಟ್‌ನಂತೆ ಭಾವಾರಸಗಳ ಮಿಶ್ರಣವಿದೆ.

ಗಿರ್‌ಮಿಟ್ ಪುಸ್ತಕದಲ್ಲಿ 40 ಪ್ರಹಸನಗಳಿವೆ. ಅಡೂರ್ ಅವರ ಉಳಿದ ಪುಸ್ತಕಗಳಂತೆ ಈ ಲೇಖನಗಳ ಸಂಗ್ರಹದಲ್ಲೂ ಮಹಿಳೆಯೇ ಕೇಂದ್ರಬಿಂದು. 'ಹೆಂಡತಿ' ಎಂಬ ಶಬ್ದವು ಪುಸ್ತಕದಲ್ಲಿ ಅತಿ ಹೆಚ್ಚು ಸಿಗುವಂತದ್ದು. ಗಿರ್‌ಮಿಟ್ ಪುಸ್ತಕವಾದರೆ ಅದರಲ್ಲಿ ಹೆಂಡತಿ ಪಾತ್ರ ಮಂಡಕ್ಕಿಯದು! ಬದುಕಿನ ಒಡನಾಟದಲ್ಲಿ ಮಹಿಳೆಯ ಸಹಭಾಗಿತ್ವದ ಮಹತ್ವವನ್ನು ಬಹಳ ಸಹಜವಾದ ರೀತಿಯಲ್ಲಿ ಚಿತ್ರಿಸಿಕೊಟ್ಟಿದ್ದಾರೆ. ಗಿರ್‌ಮಿಟ್‌ನಲ್ಲಿ ಹೆಚ್ಚು ಮೆಣಸಿಲ್ಲ, ಉಪ್ಪು ಕಡಿಮೆಯಾಗಿಲ್ಲ, ಎಲ್ಲವೂ ಎಷ್ಟು ಬೇಕೋ ಅಷ್ಟು, ರುಚಿಗೆ ತಕ್ಕ, ಪ್ರಮಾಣದಲ್ಲಿವೆ. ಇದಕ್ಕೊಂದು ಉದಾಹರಣೆ ಎಂದರೆ 'ಹೆಂಡತಿ ಬೆಕ್ಕಿಗೆ ಅಡ್ಡ ಹೋದರ..' ಎನ್ನುವ ಪ್ರಹಸನ; ಇದರಲ್ಲಿ ಮಡದಿ ಹಾಗೂ ಸಹೋದರಿ ಇಬ್ಬರದ್ದು ಪ್ರಮುಖ ಪಾತ್ರ, ಅಷ್ಟೇ ಸಮತೋಲನ! ಇನ್ನೊಂದು ಸೊಗಸಾದ ನಿದರ್ಶನವೆಂದರೆ – 20ನೆಯ ವರ್ಷದ ವಿವಾಹ ವಾರ್ಷಿಕೋತ್ಸವದ ಸಂದರ್ಭದಲ್ಲಿ ಬರೆದ ಲೇಖನ. ಮೇಲ್ನೋಟಕ್ಕೆ ಎಲ್ಲಿ ಮಹಿಳೆಯ ಪಾತ್ರವನ್ನು ಹಾಸ್ಯಾಸ್ಪದವಾಗಿ ಬಳಸಲಾಗುತ್ತಿದೆಯೋ ಅನಿಸುತ್ತದೆ ಆದರೆ ವಾಸ್ತವದಲ್ಲಿ ಅದರೊಳಗಿನ ಗಂಭೀರತೆಯನ್ನು ವಿವರಿಸಿದಷ್ಟು ಕಡಿಮೆ. ಇದನ್ನು ಜೀರ್ಣಿಸಿಕೊಳ್ಳಲು 'ಉಳ್ಳಾಗಡ್ಡಿ ಅನ್ನೋ ರಾಹು ಎಷ್ಟ ಮನ್ಯಾಗ ಇದ್ದಾನ' ಎಂಬ ಲೇಖನದಲ್ಲಿ 'ಮತ್ತ ನಾ ಯಾರ ಗಂಡಾ' ಎನ್ನುವ ವಾಕ್ಯವನ್ನು ಗಮನಿಸಬೇಕು. ಸಂಸಾರದ ಬೇರೆ ಬೇರೆ ಘಟ್ಟಗಳ ಬಗೆಗೆ ಹೇಳುವಾಗ, ಈಜಿಪ್ತಿನ ಪ್ರಾಚೀನ ನಂಬಿಕೆಯನ್ನು ಚರ್ಚಿಸುವಾಗ, ಅಲ್ಲಿ, ಇಲ್ಲಿ, ಕೆಲವೊಮ್ಮೆ ಅಡೂರ ಅವರೇ ಹೇಳುವಂತೆ ಇಲ್ಲಿಯ ಲೇಖನಗಳು 'ಪ್ರಹಸನ ಅಲ್ಲಾ, ಪ್ರವಚನಗಳು' ಅನಿಸುವುದಂತು ನಿಜ.



ಗಿರ್‌ಮಿಟ್
ಲೇ: ಪ್ರಶಾಂತ ಆಡೂರ
ಪ್ರ: ಮನೋಹರ ಗ್ರಂಥಮಾಲಾ ಧಾರವಾಡ
ಬೆಲೆ ರು.250/-

» ಎಂ.ಎಸ್.

ವ್ಯಕ್ತಿತ್ವ ವಿಕಸ ಕೈಪಿಡಿ

ವ್ಯಕ್ತಿತ್ವ ತರಬೇತಿ ಕ್ಷೇತ್ರದಲ್ಲಿ ಸಾಕಷ್ಟು ಕೆಲಸ ಮಾಡಿರುವ, ಹಲವು ತರಬೇತಿ ಶಿಬಿರಗಳನ್ನು ನಡೆಸಿ, ಹಲವು ಜನರನ್ನು ನಾಯಕರನ್ನಾಗಿ ರೂಪಿಸುವ ಕೆಲಸದಲ್ಲ ಹಲವು ವರ್ಷಗಳಿಂದ ತೊಡಗಿಕೊಂಡಿರುವ ಜಯಪ್ರಕಾಶ್ ಪುತ್ತೂರು ಅವರು, 'ವ್ಯಕ್ತಿ ವಿಕಸ ವಿಚಾರಧಾರೆ' ಎಂಬ ಪುಸ್ತಕವನ್ನು ಇದೀಗ ಹೊರತಂದಿದ್ದಾರೆ. ಹಲವು ವರ್ಷಗಳಿಂದ ವ್ಯಕ್ತಿತ್ವ ತರಬೇತಿಯನ್ನು ನಡೆಸಿಕೊಡುತ್ತಿರುವ ಇವರಿಂದ ಹೊರಬಂದ ಈ ಪುಸ್ತಕದಲ್ಲಿ, ಅವರ ಅನುಭವದ ಸಾರವು ಹರಳುಗಟ್ಟಿರುವುದು ವಿಶೇಷ. ಯುವ ಜನಾಂಗದ ಪ್ರಗತಿಗಾಗಿ ಈ ಪುಸ್ತಕವನ್ನು ರೂಪಿಸಿರುವುದಾಗಿ ಲೇಖಕರು ಹೇಳಿಕೊಂಡಿದ್ದು, ಇದರಲ್ಲಿ 41ಕ್ಕೂ ಅಧಿಕ ಲೇಖನಗಳಿವೆ.

ಈ ಪುಸ್ತಕಕ್ಕೆ ಸದಾಶಯವನ್ನು ಬರೆದಿರುವ ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ. ನಿರಂಜನ ವಾನಳ್ಳಿಯವರ ಮಾತುಗಳು ಈ ಕೆಳಕಂಡ ಗಮನಾರ್ಹ ಎನಿಸಿವೆ:

''ಜಯಪ್ರಕಾಶ ರಾವ್ ಅವರು ಹಿರಿಯ ಚೇತನ ಅಬ್ದುಲ್ ಕಲಾಂ ಅವರ ಜೊತೆ ಬಹಳ ವರ್ಷ ಕೆಲಸ ಮಾಡಿದವರು. ಮಿಲಿಟರಿ ಶಿಸ್ತಿನವರು. ಕಲಾಂ ಅವರ 'ಅಗ್ನಿಯ ರೆಕ್ಕೆಗಳು' ಪುಸ್ತಕವನ್ನು ಕನ್ನಡಕ್ಕೆ ತಂದು ಜನಮಾನಸದಲ್ಲಿ ನೆಲೆ ನಿಂತವರು. ಜಯಪ್ರಕಾಶರು ಸಾರ್ವಜನಿಕ ಸಂಪರ್ಕ ಕ್ಷೇತ್ರದವರು. ನಡೆಯಲ್ಲೂ ನುಡಿಯಲ್ಲೂ ಅದನ್ನೇ ಜಪ ಮಾಡಿದವರು. ಸಾರ್ವಜನಿಕ ಸಂಪರ್ಕ ನಮ್ಮ ಪತ್ರಿಕೋದ್ಯಮ ಹಾಗೂ ಸಂವಹನ ತರಗತಿಗಳ ಭಾಗವಾಗಿದೆ. ಪತ್ರಿಕೋದ್ಯಮ ಪಾಠಮಾಡುವಾಗ ಸಾಮಾನ್ಯವಾಗಿ ಅಧ್ಯಾಪಕರು ಪುಸ್ತಕದ ಹೇಳಿಕೆಗಳನ್ನೇ ನಂಬಿಕೊಂಡು ಪಾಠಮಾಡುತ್ತಿರುತ್ತಾರೆ. ಆಯಾ ಕ್ಷೇತ್ರದಲ್ಲಿ ಕೃಷಿ ಮಾಡಿದವರ ಅನುಭವದ ಮೂಸೆಯಿಂದ ಬಂದಾಗ ವಿಷಯಕ್ಕೆ ಅಧಿಕೃತತೆ ಬರುತ್ತದೆ. ಕನ್ನಡದಲ್ಲಿ ಆ ರೀತಿಯಲ್ಲಿ ಅನುಭವ ಜನ್ಯ ಪುಸ್ತಕಗಳು ಕಡಿಮೆ. ಜಯಪ್ರಕಾಶರಂಥವರು ಜೀವನ ಪರ್ಯಂತ ಕಂಡುಂಡ ಅನುಭವಗಳ ಆಧಾರದಲ್ಲಿ ಇಂಥ ಪುಸ್ತಕ ತರುವುದು ಅದೂ ಕನ್ನಡದಲ್ಲೇ ಅಭಿವ್ಯಕ್ತಿಸಿರುವುದು ಕನ್ನಡಿಗರ ಪುಣ್ಯ. ಅದಕ್ಕೇ ಜಯಪ್ರಕಾಶರ ಈ ಪುಸ್ತಕವನ್ನು ಮೊದಲಿಗೆ ಪತ್ರಿಕೋದ್ಯಮ ಪ್ರಾಧ್ಯಾಪಕನಾಗಿ ಪ್ರೀತಿಯಿಂದ ಸ್ವಾಗತಿಸುತ್ತೇನೆ.

''ಈ ಪುಸ್ತಕದ ಹೆಸರು 'ವ್ಯಕ್ತಿತ್ವ ವಿಕಸನ ವಿಚಾರ ಧಾರೆ' ಎಂಬುದಾಗಿ. ಅಂದರೆ ಇದು ಸಾರ್ವಜನಿಕ ಸಂಪರ್ಕದ ಬಗ್ಗೆ ಮಾತ್ರ ಮಾತನಾಡುವುದಿಲ್ಲ. ಒಟ್ಟಾರೆ ವ್ಯಕ್ತಿತ್ವ ವಿಕಸನ ಈ ಪುಸ್ತಕದ ಸರಳ ಉದ್ದೇಶ. ವ್ಯಕ್ತಿತ್ವ ವಿಕಸನ ಎಂಬುದು ಯಾವುದೇ ವಿದ್ಯಾಲಯಗಳಲ್ಲಿ ಹೇಳಿಕೊಡುವ ಪಾಠವಲ್ಲ, ಪ್ರಪಂಚವೆಂಬ ವಿದ್ಯಾಲಯದಲ್ಲಿ ನಾವೇ ಕಲಿಯಬೇಕಾದ ಪಾಠ ಎಂಬುದು ಜಯಪ್ರಕಾಶರ ದೃಷ್ಟಿ ಆದರೂ ಇಂದು ಜಗತ್ತಿನಲ್ಲಿ ವ್ಯಕ್ತಿತ್ವ ವಿಕಸನ ಕಲಿಸುವುದು ಒಂದು ದೊಡ್ಡ ಉದ್ದಿಮೆ ಅಥವಾ ಬಿಸಿನೆಸ್ಸು. ಅದಕ್ಕಾಗಿ ದೊಡ್ಡದೊಡ್ಡ ಕಂಪನಿಗಳೇ ಇದ್ದಾವೆ. ನಮ್ಮ ಉನ್ನತ ಶಿಕ್ಷಣ ತರಗತಿಗಳ ಭಾಗವೇ ವ್ಯಕ್ತಿತ್ವ ವಿಕಸನ ತರಗತಿಗಳು ಎಂದು ಬಿಂಬಿಸಲಾಗಿದೆ. ಯಾವುದೇ ಪದವೀಧರ, ಪರೀಕ್ಷೆಗಳಲ್ಲಿ ಅಂಕ ಪಡೆದರಷ್ಟೇ ಸಾಲದು ವ್ಯಕ್ತಿತ್ವವೂ ವಿಕಸನಗೊಂಡಿರಬೇಕು ಎಂಬುದು ನಿರೀಕ್ಷೆ, ಒಳ್ಳೆಯ ಭಾಷೆ, ಸಂವಹನ ಕಲೆ, ಸಲೀಸಾಗಿ ಭಾಷಣ ಮಾಡುವ ಚತುರತೆ, ನಾಯಕತ್ವದ ಗುಣಗಳು, ಮಾನವ ಸಂಬಂಧಗಳು,ಸಕಾರಾತ್ಮಕ ಮನೋಭಾವ, ಪೂರ್ವಾಗ್ರಹರಾಹಿತ್ಯ, ಮೊದಲು ಮಾನವನಾಗು, ಆತ್ಮ ವಿಶ್ವಾಸ, ಸಮಯ ಪ್ರಜ್ಞೆ, ಸಾಂಘಿಕ ಜೀವನ ಮುಂತಾಗಿ ಇಲ್ಲಿ 41 ಅಧ್ಯಾಯಗಳಲ್ಲಿ ಹೇಳಿರುವ ಎಲ್ಲವೂ ವ್ಯಕ್ತಿತ್ವ ವಿಕಸನಕ್ಕೆ ಸಂಬಂಧಿಸಿದವೇ.

''ಹೀಗಾಗಿ ಈ ಪುಸ್ತಕ ಒಂದು ರೀತಿಯಲ್ಲಿ ವ್ಯಕ್ತಿತ್ವ ವಿಕಾಸ ಕೈಪಿಡಿ. ಒಳ್ಳೆಯ ಜೀವನಕ್ಕೆ ಒಂದು ಮುನ್ನುಡಿ. ಮೂವತ್ತು ನಲವತ್ತು ವರ್ಷ ಈ ಕ್ಷೇತ್ರದಲ್ಲೇ ಕೆಲಸಮಾಡಿದ, ಜನಗಳ ಮನಸ್ಸನ್ನು ಅರ್ಥಮಾಡಿಕೊಂಡು ಸರಿದೂಗಿಸಿಕೊಂಡು ಹೋದ ವೃತ್ತಿಪರನೊಬ್ಬ ತಮ್ಮ ಅನುಭವವನ್ನೇ ದಾಖಲಿಸಿದಂತಿದೆ ಈ ಪುಸ್ತಕ. ಕನ್ನಡ ಸಾಹಿತ್ಯಕ್ಕೂ ವ್ಯಕ್ತಿತ್ವ ವಿಕಸನ ಸರಣಿಗೂ ಒಳ್ಳೆಯ ಸೇರ್ಪಡೆ, ಕನ್ನಡದಲ್ಲಿ ವ್ಯಕ್ತಿತ್ವ ವಿಕಾಸಕ್ಕೆ ಸಂಬಂಧಿಸಿ ಅನೇಕ ಪುಸ್ತಕಗಳು ಬಂದಿವೆ. ಹೆಚ್ಚಿನವು ಯಾರದೋ ಇಂಗ್ಲೀಷಿನ ಭಾಷಾಂತರದಂತೆ ಕಂಡರೆ ಅಚ್ಚರಿಯಿಲ್ಲ. ಆದರೆ ಜಯಪ್ರಕಾಶರದು ಸ್ವಾನುಭವ. ಎಲ್ಲಿಯೋ ಓದಿದ್ದನ್ನು ಭಟ್ಟಿ ಇಳಿಸುವ ಪ್ರಯತ್ನವಲ್ಲ. ನೆನಪಿನಾಳದಿಂದ ಬರೆದ ಅಧಿಕೃತ ಸಂಗತಿ. ಇದಕ್ಕೆ ಸಹಜವಾಗಿ ಹೆಚ್ಚು ಬೆಲೆ. ನಂಬಲರ್ಹವಾದ ವಿಷಯ. ಕನ್ನಡದಲ್ಲಿ ವಿಶಿಷ್ಟವೆನಿಸುವ ಕೃತಿ.'' (ಪ್ರೊ. ನಿರಂಜನ ವಾನಳ್ಳಿಯವರ ಸದಾಶಯದ ಆಯ್ದ ಭಾಗ)

ವ್ಯಕ್ತಿತ್ವ ವಿಕಸನದ ಕುರಿತಾದ ಈ ಅಪರೂಪದ ಪುಸ್ತಕವು ನಾಡಿನ ಪ್ರಖ್ಯಾತ ಪ್ರಕಾಶನ ಸಂಸ್ಥೆಯಾದ ಸಪ್ನ ಬುಕ್ ಹೌಸ್‌ನಿಂದ ಹೊರಬಂದಿರುವುದು ವಿಶೇಷ ಎನಿಸಿದೆ.



ವ್ಯಕ್ತಿತ್ವ ವಿಕಸನ ವಿಚಾರಧಾರೆ
ಲೇ: ಜಯಪ್ರಕಾಶ್ ಪುತ್ತೂರು
ಪ್ರ: ಸಪ್ನ ಬುಕ್ ಹೌಸ್ ಬೆಂಗಳೂರು
ಬೆಲೆ ರು. 300/-

ವಿಶ್ವವಾಣಿ ಅಂಕಿತ ಟಾಪ್ ಟೆನ್

1
ವಿಕ್ರಮಾದಿತ್ಯ
(ಯುದ್ಧಗಳನ್ನು ಎಂದೂ ಸೋಲದ, ಇಮ್ಮಡಿಯ ನಂತರ ಅತಿ ಹೆಚ್ಚು ಕಾಲ ವಾತಾಪಿ ಶಾಸನ ನಿರ್ವಹಿಸಿದ ಪುಲಕೇಶಿ ಪುತ್ರನ ಸಾಹಸಗಾಥೆ)
ಲೇ: ಸಂತೋಷಕುಮಾರ ಮೆಹೆಂದಳೆ
ಪ್ರ: ಸಾಹಿತ್ಯಲೋಕ ಪಬ್ಲಿಕೇಷನ್ಸ್, ಬೆಂ.
ಬೆಲೆ: ರೂ 499/-



2
ಶಾಕ್ಯ ಶಕ್ತ ಶಿಲ್ಪ
(ಭಾರತದಲ್ಲಿಯೂ ಕಾಣದ ಹಿಂದೂ ಮತ್ತು ಬೌದ್ಧ ದೇವಾಲಯಗಳು ಕಾಂಬೋಡಿಯದಲ್ಲಿ ಹೇಗೆ ಬಂದವು? ಕುತೂಹಲ ಕೆರಳಿಸುವ ಕಥೆಯಿದು)
ಲೇ: ಕೆ.ಎನ್. ಗಣೇಶಯ್ಯ
ಪ್ರ: ಅಂಕಿತಪುಸ್ತಕ, ಬೆಂಗಳೂರು
ಬೆಲೆ: ರೂ 450/-



3
ಜ್ಞಾನಯೋಗಿ
(ಪೂಜ್ಯಶ್ರೀ ಸಿದ್ದೇಶ್ವರ ಮಹಾಸ್ವಾಮಿಗಳ ಜೀವನ-ಸಾಧನೆ - ಬೋಧನೆ)
ಸಂ: ಶರಣಯ್ಯ ಹಿರೇಮಠ
ಪ್ರ: ನಿರಂತರ ಪ್ರಕಾಶನ, ಬೆಂಗಳೂರು
ಬೆಲೆ: ರೂ 100/-



4
ಮಿಸ್ಟರಿ ಆಫ್ ಮಾರಿಕಟ್ಟೆ
(ಪತ್ತೇದಾರಿ ಪುಸ್ತಕಗಳಿಗೆ ಮರುಜನ್ಮ ನೀಡಿದ ಕೌಶಿಕ್ ಕೂಡುರಸ್ತೆ ಅವರ ಹೊಸ ಪತ್ತೇದಾರಿ ಕಾದಂಬರಿ ಇದು)
ಲೇ: ಕೌಶಿಕ್ ಕೂಡುರಸ್ತೆ
ಪ್ರ: ಸ್ನೇಹ ಬುಕ್ ಹೌಸ್, ಬೆಂಗಳೂರು
ಬೆಲೆ: ರೂ 275/-



5
ಔಶನಸ ಚಾಣಕ್ಯ
(ಇತಿಹಾಸದ ಮಗ್ಗುಲನ್ನೇ ಬದಲಿಸಿದ ಜಾಗತಿಕ ಅರ್ಥ ವ್ಯವಸ್ಥೆಗೆ ಮಾರ್ಗದರ್ಶನ ನೀಡಿದ ಪ್ರಸಿದ್ಧ ಪುರುಷನ ಕಥೆ)
ಲೇ: ಸದ್ಯೋಜಾತ ಭಟ್ಟ
ಪ್ರ: ಈಶಾನ ಸಾಂಸ್ಕೃತಿಕ ಅಧ್ಯಯನ ಕೇಂದ್ರ, ಬೆಂಗಳೂರು
ಬೆಲೆ; ರೂ 400/-



6
ನಾನೂ ಕಾಫಿರ
(ಬಾಬಾ ಸಾಹೇಬರ ಹಿಂದುತ್ವ ಕಥನ - ಅಂಬೇಡ್ಕರ್ ಚಿಂತನೆಗಳು)
ಲೇ: ಡಾ। ಸುಧಾಕರ ಹೊಸಳ್ಳಿ
ಪ್ರ: ಸ್ವರಾಷ್ಟ್ರ ಪ್ರಕಾಶನ, ಬೆಂಗಳೂರು
ಬೆಲೆ: ರೂ 300/-

ಸಹ್ಯಾದ್ರಿಯ ಸೆರೆಯಲ್ಲಿ
(ಸ್ವಾತಂತ್ರ್ಯ ಪೂರ್ವದಲ್ಲಿದ್ದ ಮಲೆನಾಡಿನ ಸಣ್ಣ ಹಳ್ಳಿಗಳ ಕೆಲವು ವ್ಯಕ್ತಿಗಳ ಜೀವನ ಕ್ರಮದ ಪರಿಚಯ)
ಲೇ: ಗಣೇಶ ಭಟ್ಟ ಕೊಪ್ಪಲತೋಟ
ಪ್ರ: ಅಯೋಧ್ಯ ಪ್ರಕಾಶನ, ಬೆಂಗಳೂರು
ಬೆಲೆ: ರೂ 499/-

8
ಯದುರಾಯ
(ಮೈಸೂರು ಅರಸರ ಮೂಲಪುರುಷನಾದ ಯದುರಾಯರನ್ನು ಕುರಿತ ಕಾದಂಬರಿ)
ಲೇ: ಕೆ.ಪಿ. ಸ್ವಾಮಿ
ಪ್ರ: ಆನಂದನಿಲಯ ಪ್ರಕಾಶನ, ಬೆಂಗಳೂರು
ಬೆಲೆ: ರೂ 300/-

9
ಬದುಕು ಬದಲಿಸುವ 21 ಅಭ್ಯಾಸಗಳು
(ಸರಳ ಅಭ್ಯಾಸಗಳಿಂದ ಸುಂದರ ಬದುಕು - ವ್ಯಕ್ತಿತ್ವ ವಿಕಸನ ಕುರಿತ ಇತ್ತೀಚಿನ ಪುಸ್ತಕ)
ಲೇ: ತಾರಾ ಮಂಜುನಾಥ್
ಪ್ರ: ಸಾವಣ್ಣ ಪ್ರಕಾಶನ, ಬೆಂಗಳೂರು
ಬೆಲೆ: ರೂ 180/-



10
ಅನ್ನಪೂರ್ಣ ದೇವಿ
(ಖ್ಯಾತ ಸಂಗೀತ ಕಲಾವಿದೆ, ಶಿಕ್ಷಕಿ, ಪಂಡಿತ್ ರವಿಶಂಕರ್ ಅವರ ಪತ್ನಿ ಅನ್ನಪೂರ್ಣದೇವಿ ಅವರ ಜೀವನ ಚರಿತ್ರೆ)
ಲೇ: ಅತುಲ್ ಮರ್ಚಂಟ್ ಜಟಾಯು
ಅನು: ಎನ್. ಸಂಧ್ಯಾರಾಣಿ
ಪ್ರ: ನುಡಿ ಪುಸ್ತಕ, ಬೆಂಗಳೂರು
ಬೆಲೆ: ರೂ 549/-

ಮಾಹಿತಿ: ಅಂಕಿತಪುಸ್ತಕ, 53, ಗಾಂಧಿಬಜಾರ್ ಮುಖ್ಯರಸ್ತೆ, ಬಸವನಗುಡಿ, ಬೆಂಗಳೂರು-560004. ದೂರವಾಣಿ: 26617100/26617755 ಮೊಬೈಲ್ ನಂ: 9019190502

ವಿದ್ಯುದಾಲಿಂಗನಕ್ಕೆ ಸಿಕ್ಕಿದರೂ...

» ಬೊ. ನಾ. ಕೃಷ್ಣಮೂರ್ತಿ, ಸಾಗರ

ಲಹರಿ

ಕಳೆದ ಮಳೆಗಾಲದಲ್ಲಿ ನಮ್ಮ ಮನೆಯ ಹೊರಬದಿಯ ಕೆಳ ಅಂತಸ್ತಿನ ಮುಂಬದಿಯ ಕಿರು ಮುಚ್ಚಿಗೆಯ ಮೇಲ್ಭಾಗ ಹಾಗೂ ಮೇಲೆ ಹೋಗಲು ಇರುವ ಕಾಂಕ್ರೀಟ್ ಮೆಟ್ಟಿಲುಗಳು ಸಿಕ್ಕಾಪಟ್ಟೆ ಪಾಚಿ ಕಟ್ಟಿದ್ದರಿಂದ, ತುಂಬಾ ಹೊಲಸಾಗಿರುವಂತೆ ಕಾಣುತ್ತಿದ್ದವು. ಅದನ್ನು ಸ್ವಚ್ಛಗೊಳಿಸಲು ಆಳುಗಳ ಸಹಾಯ ಬೇಕೆಂದರೆ ಸುಲಭವಾಗಿ ಸಿಗುವುದಿಲ್ಲ. ಇದೇನೂ ನನ್ನಿಂದ ಮಾಡಲಾಗದ ಅಂಥಾ ದೊಡ್ಡ ಕೆಲಸವಲ್ಲ, ಒಂದಲ್ಲದಿದ್ದರೆ ಎರಡೋ ಮೂರೋ ದಿನಗಳಲ್ಲಿ ಮುಗಿಸಿದರಾಯಿತು ಎಂದು ನಿರ್ಧರಿಸಿ, ನಾನೇ ಕೆಲಸಕ್ಕಿಳಿದೆ.

'ಸಹಾಯಕ್ಕೆ ಬರ್ತೀಯಾ' ಎಂದು ನಮ್ಮ ಮನೆಯ ಒಂದು ಮೂಲೆಯಲ್ಲಿ ಶುದ್ಧ ಸೋಮಾರಿಯಂತೆ ಮುಸುಕಿನ ಮರೆಯಲ್ಲಿ ತೂಕಡಿಸುತ್ತಾ ಕುಳಿತಿದ್ದ, ನಮ್ಮ ಸೆಲೆರಿಯೋ ಕಾರಿನ ಅಭ್ಯಂಜನಕ್ಕೆಂದು ಮೂರು ವರ್ಷಗಳ ಹಿಂದೆ ಕೊಂಡಿದ್ದ, ಎಲೆಕ್ಟ್ರಿಕ್ ಪ್ರೆಷರ್ ವಾಟರ್ (ಇನ್ನು ಮುಂದೆ ಈ ಬರಹದಲ್ಲಿ ಪ್ರೆವಾಮರಿ ಎನ್ನುತ್ತೇನೆ) ಯಂತ್ರವನ್ನು ಕೇಳಿದೆ. ಬಹಳ ದಿನಗಳ ನಂತರ ತನಗೂ ಕೆಲಸ ಸಿಕ್ಕಿತೆಂದು ಅದಕ್ಕೂ ಸಂತೋಷವಾಯಿತು.

'ಹೋ! ನನಗೂ ಕೆಲಸವಿಲ್ಲದೆ ಕುಳಿತು ಕುಳಿತು ಮೈ ಜಡ್ಡುಗಟ್ಟಿದೆ. ನಡಿ, ನಿನಗೆ ಸಹಾಯ ಮಾಡಲು ನನಗೂ ಖುಷಿಯೇ!' ಎನ್ನುತ್ತಾ, ತನ್ನ ಮುಸುಕನ್ನು ಎತ್ತಿ ಬದಿಗೆಸೆದು ನಲಿಯುತ್ತಲೇ ನನ್ನ ನೆರವಿಗೆ ಬಂತು. ಜೊತೆಗೆ ವಿದ್ಯುತ್ ಸಂಪರ್ಕದ ಸಾಧನ, ನೀರು ತುಂಬಲು ದೊಡ್ಡ ಪ್ಲಾಸ್ಟಿಕ್ ಪೀಪಾಯಿ ಕೂಡಾ ಹರ್ಷದಿಂದಲೇ ಕೈಜೋಡಿಸಿದವು.

ಮೊದಲ ದಿನದ ಕೆಲಸ ಯಾವ ಅಡಚಣೆಯಾಗಲೀ ಅಪಾಯವಾಗಲೀ ಇಲ್ಲದೆ ಸುಸೂತ್ರವಾಗಿ ನಡೆಯಿತು. ಎರಡನೇ ದಿನದ ಕೆಲಸದ ಅಂತಿಮ ಹಂತ. ಇನ್ನು ಕೆಲವೇ ನಿಮಿಷಗಳಲ್ಲಿ ಸೂರ್ಯ ಪಶ್ಚಿಮದ ಕಡಲಾಚೆ ಕಣ್ಣಮರೆಯಾಗಲಿದ್ದ. ಕತ್ತಲಾದ ಮೇಲೆ ಕೆಲಸ ಕಷ್ಟ ಎಂದು ನಾನೂ ಅಂದಿನ ಕೆಲಸವನ್ನು ಅಷ್ಟಕ್ಕೇ ಬಿಟ್ಟು ವಿರಮಿಸುವ ಮನಸ್ಥಿತಿಗೆ ಬಂದಿದ್ದೆ. ಏನಾಯಿತೆಂದು ಗೊತ್ತಾಗಲಿಲ್ಲ. 'ಪ್ರೆವಾಮರಿ'ಯು ತನ್ನ ಮೂರು ಮಾರುದ್ದದ ಕೊಳವೆಯ ಮೂಲಕ ತೂರಿಸುತ್ತಿದ್ದ ನೀರನ್ನು ನಿಲ್ಲಿಸಿ ತಟಸ್ಥವಾಯಿತು. ಯಂತ್ರದ ಚಲನೆಯ ಸದ್ದೂ ಇಲ್ಲವಾಯಿತು. ನೀರು ಖಾಲಿಯಾಯಿತಾ ಎಂದರೆ ಎರಡು ನಿಮಿಷಗಳ ಹಿಂದಷ್ಟೇ ತುಂಬಿಸಿದ್ದೆ. ವಿದ್ಯುತ್ ಸರಬರಾಜು ನಿಂತಿತಾ ಎಂದರೆ ಸಮೀಪದಲ್ಲೇ ಹೊಸ ಮನೆಯ ನೆಲದ ಹಾಸಿನ ಕಾಮಗಾರಿಯ ವಿದ್ಯುತ್ ಯಂತ್ರಗಳ ಗುರ್‌ಗುಡುವ ಸದ್ದು ನಿಂತಿರಲಿಲ್ಲ.

ಪಾಚಿಗಟ್ಟಿದ ಮೆಟ್ಟಿಲುಗಳನ್ನು ಚೊಕ್ಕಟಮಾಡಲು ಪುಟಾಣಿ ಯಂತ್ರದ ಸಹಾಯವನ್ನು ಪಡೆದಾಗ, ಆದ ಎಡವಟ್ಟೇನು? ಅದೇಕೆ ಆ ಯಂತ್ರ ಪ್ರೀತಿಯಿಂದ ಇವರನ್ನು ಅಪ್ಪಿಕೊಳ್ಳಲಿಲ್ಲ?

ಏನಾಗಿರಬಹುದು ನೋಡೋಣವೆಂದು ನಿಂತ ಜಾಗದಿಂದ ಕದಲಿ, ಹಲವು ಮೆಟ್ಟಿಲುಗಳನ್ನು ಹತ್ತಿ ನೋಡಿದವನಿಗೆ ಬಹು ದೊಡ್ಡ ಅಚ್ಚರಿ! ನಮ್ಮ 'ಪ್ರೆವಾಮರಿ' ತಾನು ಕುಳಿತಿದ್ದ ಜಾಗದಿಂದ ಮೇಲೆದ್ದು, ಕೆಳಗಿದ್ದ ನೀರು ತುಂಬಿದ್ದ ಪೀಪಾಯಿಯೊಳಗೆ ಧುಮುಕಿ, ಮಾರ್ಚ್ ತಿಂಗಳ ಮೊದಲ ವಾರದಲ್ಲೇ ಮೇರೆ ಮೀರತೊಡಗಿದ್ದ ಸೆಖೆಯಿಂದ ಮುಕ್ತಿಯನ್ನು ಪಡೆಯಲೋ ಎಂಬಂತೆ ತಣ್ಣಗೆ ನೀರೊಳಗೆ ಮುಳುಗಿ ಕುಳಿತಿತ್ತು!

ವಿದ್ಯುತ್ ಚಾಲಿತ ಯಂತ್ರವೊಂದು ಕೆಲಸ ಮಾಡುತ್ತಿರುವಾಗಲೇ ನೀರೊಳಗೆ ಬಿದ್ದರೆ, ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸದೇ ಅದನ್ನು ನೀರೊಳಗಿಂದ ಮೇಲೆತ್ತಲು ಹೋದರೆ ಪರಿಣಾಮ ಏನಾಗಬಹುದು ಎಂಬ ಯೋಚನೆಯಿಲ್ಲದೆ, 'ಛೆ! ಪಾಪ, ನೀರೊಳಗೆ ಬಿದ್ದುಬಿಟ್ಟೆಯಾ' ಎಂದು ಅನುಕಂಪದಿಂದ 'ಪ್ರೆವಾಮರಿ'ಯನ್ನು ನೀರೊಳಗಿಂದ ಎತ್ತಲೆಂದು ಕೈ ಹಾಕಿಯೇ ಬಿಟ್ಟೆ.

ಜುಂ!!! ಅತ್ತ ಪ್ರಬಲವೂ ಅಲ್ಲದ, ತ್ತ ಲಘುವೂ ಅಲ್ಲದ ಮಧ್ಯಮ ಪ್ರಮಾಣದ ಜುಂಗುಡಿತದೊಂದಿಗೆ 'ಏಯ್! ಹೋಗು ದೂರ. ನನ್ನ ಮುಟ್ಟಿ ಮೈಲಿಗೆ ಮಾಡಬೇಡ, ನಾನೀಗ ಪವಿತ್ರ ವಿದ್ಯುತ್ ಸಂಪರ್ಕದಲ್ಲಿದ್ದೇನೆ ಎಂಬುದು ಗೊತ್ತಿಲ್ಲವಾ ನಿನಗೆ?' ಎಂದು ಅಬ್ಬರಿಸಿದ 'ಪ್ರೆವಾಮ' ನನ್ನನ್ನು ತಳ್ಳಿಯೇ ಬಿಟ್ಟಿತು. ಆಗ ಅರಿವಿಗೆ ಬಂತು ನಾನೆಂಥಾ ಅಪಾಯವನ್ನು ಆಹ್ವಾನಿಸಲು ಹೊರಟಿದ್ದೆ ಎಂದು. ತಡ ಮಾಡದೆ 'ಪ್ರೆವಾಮರಿ'ಯನ್ನು ವಿದ್ಯುತ್ ಸಂಪರ್ಕದಿಂದ ಬಿಡುಗಡೆಗೊಳಿಸಿ, ನೀರೊಳಗೆ ಕೈಹಾಕಿ, ಮೆಲ್ಲಗೆ ಹಿಡಿದೆತ್ತಿ ನೆಲದ ಮೇಲೆ ಕೂರಿಸಿ ಅದಕ್ಕೇನಾದರೂ ಪೆಟ್ಟಾಗಿದೆಯಾ ಎಂದು ನೋಡಿದೆ. ಪೆಟ್ಟಾದ ಯಾವ ಬಾಹ್ಯ ಲಕ್ಷಣವೂ ಕಾಣಲಿಲ್ಲ. ಅದರ ಶರೀರದೊಳಗೆ ಏನೇನಾಗಿರಬಹುದೋ ಗೊತ್ತಿಲ್ಲ.

'ಪ್ರೆವಾಮರಿ'ಯನ್ನು ನನಗೆ ಮಾರಿದವರನ್ನು ಸಂಪರ್ಕಿಸಿ ನಡೆದ ಘಟನೆಯನ್ನು ವಿವರಿಸಿದೆ. 'ನೀವು ಒಂದು ದೊಡ್ಡ ಗಂಡಾಂತರದಿಂದ ಪಾರಾದಿರಿ. ನೀವು ಮುಟ್ಟಿದಾಗ ಅದೇನಾದರೂ ನಿಮ್ಮನ್ನು ಹಿಡಿದುಕೊಂಡಿದ್ದರೆ ಬಿಡುತ್ತಲೇ ಇರಲಿಲ್ಲ. ಬಿಡಿಸಲು ಯಾರೂ ಇಲ್ಲದೆ ನಿಮ್ಮ ಕಥೆ ಏನಾಗುತ್ತಿತ್ತೋ' ಎಂದು ಸಂತಾಪದಿಂದ ಕೂಡಿದ ಸಾಂತ್ವನದ ಮಾತಾಡಿದರು.

ಹೌದಾ? ಅದು ನನ್ನನ್ನು ಬಿಡುತ್ತಿರಲಿಲ್ಲವಾ? ಹಾಗಿದ್ದರೆ ನೀರೊಳಗೆ ಮುಳುಗಿರುವ ಮೈಯಲ್ಲಿ ವಿದ್ಯುತ್ ಹರಿಯುತ್ತಿರುವ ಯಂತ್ರಗಳನ್ನು ಮುಟ್ಟಿದರೆ ಮುಟ್ಟಿದವರನ್ನು ಹಿಡಿದು ಮುದ್ದಾಡುವಷ್ಟು ಪ್ರೀತಿಯಾ ಅವುಗಳಿಗೆ? ಕುತೂಹಲವನ್ನು ತಡೆಯಲಾಗದೆ ಗೂಗಲ್ ಮಹಾಶಯರನ್ನು ಕೇಳಿದೆ. ಅವರು ನೀಡಿದ ಉತ್ತರವೂ, ಆ ದಿನ ನನ್ನ ಅದೃಷ್ಟ ಚೆನ್ನಾಗಿತ್ತು ಎಂಬುದನ್ನು ಸಮರ್ಥಿಸಿತು.

ಮಧುಮೇಹ ಬಂದಾಗ ಮಧುಮೋಹ!



ಕ್ಷ ಕಿರಣ

» ಡಾ ಶಶಿಕಿರಣ್ ಉಮಾಕಾಂತ್

ದಿನಾ ಎಷ್ಟೊಂದು ಜನ ಆಸ್ಪತ್ರೆಗೆ ಬರ್ತಾರೆ. ಆದ್ರೆ ಡಯಾಬಿಟಿಸ್ ಇರೋರು ಹೇಳೋ ಕಾಮನ್ ಡೈಲಾಗ್ ಒಂದೇ: ಡಾಕ್ಟ್ರೇ, ನೀವು ನಂಬಿದ್ರೆ ನಂಬಿ, ಬಿಟ್ರೆ ಬಿಡಿ. ನನಗೆ ಶುಗರ್ ಬರೋ ಮುಂಚೆ ಸ್ವೀಟ್ಸ್ ಅಂದ್ರೆ ಆಗ್ತಾನೇ ಇರ್ಲಿಲ್ಲ. ಲಾಡು, ಮೈಸೂರ್‌ಪಾಕ್ ಅದೆಲ್ಲಾ ಎದುರಿಗೆ ಇಟ್ಟಿದ್ರೂ ತಿನ್ನೋ ಆಸೆ ಇರ್ಲಿಲ್ಲ. ಆದ್ರೆ ಯಾವಾಗ ನೀವು 'ನಿಮಗೆ ಶುಗರ್ ಇದೆ, ಇನ್ನೂ ಸ್ವೀಟ್ ತಿಂದ್ರೆ ಒಳ್ಳೇದಲ್ಲಾ' ಅಂತ ಹೇಳಿದ್ರೋ, ಅವತ್ತಿನಿಂದಲೇ ಸಿಕ್ಕಾಪಟ್ಟೆ ಸ್ವೀಟ್ ತಿನ್ಬೇಕು ಅನ್ನಿಸ್ತಿದೆ!

ಇದು ಬರೀ ಅವರೊಬ್ಬರ ಕಥೆಯಲ್ಲ, ಮಧುಮೇಹ ಬಂದವರ 'ಯೂನಿವರ್ಸಲ್' ವ್ಯಥೆ! ಅವರಿಗೆ ನಾನು ತಮಾಷೆಯಾಗಿ ಹೇಳೋದು ಹೀಗೆ: ನಿಮಗೆ 'ಮಧುಮೇಹ' ಬಂದ ಮೇಲೆ, 'ಮಧುಮೋಹ' ಸಹಾ ಶುರುವಾಯಿತಲ್ಲಾ!

ನಮ್ಮ ಮನಸ್ಸು ಇದೆಯಲ್ಲ, ಅದು ಬಲು ವಿಚಿತ್ರ. ಅದಕ್ಕೆ ಇದನ್ನ ಮಾಡಬೇಡ ಅಂದ್ರೆ ಸಾಕು, ಅದನ್ನೇ ಮಾಡಬೇಕು ಅಂತ ಹಠ ಹಿಡಿಯುತ್ತೆ. ಇದಕ್ಕೆ ಒಂದು ಫೇಮಸ್ ಕಥೆ ಇದೆ: ಒಮ್ಮೆ ಒಬ್ಬ ಗುರುಗಳು ಶಿಷ್ಯನಿಗೆ ಧ್ಯಾನ ಮಾಡೋದು ಹೇಳಿಕೊಡ್ತಾ ಇದ್ರಂತೆ. ನೋಡಪ್ಪಾ, ಕಣ್ಮುಚ್ಚಿ ಧ್ಯಾನಕ್ಕೆ ಕೂತ್ಕೋ. ನೀನು ಯಾವುದರ ಬಗ್ಗೆ ಬೇಕಿದ್ರೂ ಯೋಚನೆ ಮಾಡು, ಆದ್ರೆ 'ಒಂದು ಕೊಂಬಿನ ಹುಲಿ' ಬಗ್ಗೆ ಮಾತ್ರ ಯೋಚನೆ ಮಾಡ್ಬೇಡ ಅಂತ ಹೇಳಿದ್ರು. ಮುಂದೇನಾಯ್ತು ಗೊತ್ತಲ್ಲ?

ಆ ಶಿಷ್ಯ ಕಣ್ಮುಚ್ಚಿದ ತಕ್ಷಣ, ಅವನಿಗೆ ಬೇರೇನೂ ಕಾಣಿಸ್ತಾ ಇರ್ಲಿಲ್ಲ, ಬರೀ ಆ ಒಂದು ಕೊಂಬಿನ ಹುಲಿಗಳೇ ಎಲ್ಲ ಕಡೆಯಿಂದ ಬಂದು ಹೆದರಿಸಲಿಕ್ಕೆ ಶುರು ಮಾಡಿದ್ವಂತೆ! ನಮ್ಮೆಲ್ಲರ ಕಥೆಯೂ ಅಷ್ಟೇ. ಇನ್ಮುಂದೆ ಸಿಹಿ ತಿನ್ಬೇಡಿ ಅಂತ ಹೇಳೋವರೆಗೂ ಅವರಿಗೆ ಸ್ವೀಟ್ ನೆನಪೇ ಇರ್ತಿರಲಿಲ್ಲ. ಈಗ?

ಈ ವಿಪರ್ಯಾಸಕ್ಕೆ ನಮ್ಮ ಸಿನಿಮಾಗಳ ಕೆಲವು ಡೈಲಾಗ್ಸ್ ಪಕ್ಕಾ ಮ್ಯಾಚ್ ಆಗುತ್ತವೆ. ಸ್ವೀಟ್ ಅಂಗಡಿಗಳ ಮುಂದೆ ಹೋದ್ರೆ ಸಾಕು, ಅವು ಇವರನ್ನ ಹೇಗೆ ಕರೀ ತಾವೆ ಗೊತ್ತಾ? ಆಪ್ತಮಿತ್ರ ಸಿನಿಮಾದಲ್ಲಿ ನಾಗವಲ್ಲಿ ರಾರಾ... ರಾರಾ... ಸರಸಕೆ ಬಾರಾ.. ಅಂತ ಎದೆಯಲ್ಲಿ ನಡುಕ ಹುಟ್ಟಿಸೋ ಹಾಗೆ ಕರೆದ ಹಾಗೇನೇ, ಈ ಲಾಡು-ಜಹಾಂಗೀರ್‌ಗಳು ಇವರನ್ನ ಕೈಬೀಸಿ ಕಣ್ಣಲ್ಲಿ ಕಣ್ಣಿಟ್ಟು ಕರೀತಾವೆ! ಪಾಪ, ಆಸೆ ಇದ್ರೂ, ಹತ್ತಿರ ಹೋಗೋ ಹಾಗಿಲ್ಲ!

ಈ ಮನಸ್ಸಿರೋದೇ ನಮಗೆ ಕನ್‌ಫ್ಯೂಸ್ ಮಾಡಕ್ಕೆ. ಮನಸ್ಸಿನ ಮಾತು ಕೇಳಿ ಕಂಟ್ರೋಲ್ ತಪ್ಪಿದ್ರೆ ಕಷ್ಟ. 'ಗಣೇಶನ ಮದುವೆ' ಕನ್ನಡ ಸಿನಿಮಾದ ಫೇಮಸ್ ಡೈಲಾಗ್ ನೆನಪಿದೆಯಾ? ಅದರಲ್ಲಿ ಮುಖ್ಯಮಂತ್ರಿ ಚಂದ್ರು, ಜಿಪುಣ ರಮಣಮೂರ್ತಿಯ ಪಾತ್ರದಲ್ಲಿ, ಹೊಟ್ಟೆ ಮೇಲೆ ಕೈ ಹಿಡ್ಕೊಂಡು ಮುಖ ಹಿಂಡ್ಕೊಂಡು ಒದ್ದಾಡ್ತಾ ಹೇಳ್ತಾರೆ, ಅಯ್ಯೋ, ಸಿಕ್ತೂ ಸಿಕ್ತೂ ಅಂತಾ ಸಿಕ್ಕಾಪಟ್ಟೆ ತಿಂದ್‌ಬಿಟ್ಟೇ...! ಮಧುಮೇಹದಲ್ಲಿ ಇದೇ ಪ್ರಾಬ್ಲಮ್. ಕಂಟ್ರೋಲ್ ಇಲ್ದೆ ತಿಂದ್ರೆ, ಶುಗರ್ ಲೆವೆಲ್ ರಾಕೆಟ್ ಹಾಗೆ ಏರುತ್ತೆ. ಹೆಚ್ಚಾದ ಶುಗರ್ ಅದರ ಕೆಟ್ಟ ಕೆಲಸ ಮಾಡೇ ಮಾಡುತ್ತೆ.

ಸಮಸ್ಯೆ ಇರೋದು ನಾಲಿಗೆಯಲ್ಲಲ್ಲ, ಮನಸ್ಸಿನಲ್ಲಿ. ಆ ಒಂದು ಕೊಂಬಿನ ಹುಲಿ ತರಹದ ಸ್ವೀಟ್ ಬಗ್ಗೆ ಯೋಚನೆ ಮಾಡೋದು ಬಿಟ್ಟು, ಆರೋಗ್ಯದ ಬಗ್ಗೆ ಧ್ಯಾನ ಮಾಡ್ಬೇಕು.

ಮನಸ್ಸು ಗಟ್ಟಿ ಮಾಡ್ಕೋಬೇಕು. ಯಾವಾಗ್ಲೋ ವರ್ಷಕ್ಕೆ ಒಂದು ಎಂಟ್‌ಹತ್ ಸಲ, ಅಪ್ಪಿ-ತಪ್ಪಿ ಒಂದು 'ಮಧು' (ಸ್ವೀಟ್) ತಿಂದ್ರೆ, 'ಮೋಹ'ನೂ ತೀರುತ್ತೆ, ಆರೋಗ್ಯನೂ ಅಷ್ಟು ಹಾಳಾಗಲ್ಲ! ಇಲ್ನೋಡಿ... ಸರಿಯಾಗಿ ಓದಿ, ವರ್ಷಕ್ಕೆ ಅಂತಾ ಹೇಳಿದ್ದು, ವಾರಕ್ಕೆ ಎಂಟ್‌ಹತ್ ಸಲ ಅಲ್ಲ!

ಜ್ಞಾಪಕ ಇರ್ಲಿ: ನಾಲಿಗೆ ಕೇಳಿದ್ದನ್ನೆಲ್ಲಾ ಕೊಡ್ತಾ ಹೋದ್ರೆ, ಕೊನೆಗೆ ದೇಹ ನಮ್ಮ ಮಾತು ಕೇಳಲ್ಲ... ಸಿಹಿ ತಿನ್ನೋ ಆಸೆಗೋಸ್ಕರ, ಜೀವನಾನೇ 'ಕಹಿ' ಮಾಡ್ಕೋಬೇಡಿ!

» ವಾ.ಮುರಳೀಧರ, ತೀರ್ಥಹಳ್ಳಿ

ಕುಟುಂಬ ವ್ಯವಸ್ಥೆಗೆ ಹಾಸ್ಯದ ಕನ್ನಡಿ

ಬೆಂಗಳೂರಿನ 'ಅಂತರಂಗ ಬಹಿರಂಗ' ತಂಡದ ಹಾಸ್ಯಪ್ರಧಾನ ನಾಟಕ 'ಕ್ರೇಜಿ ಕುಟುಂಬ' ಇತ್ತೀಚೆಗೆ ಎರಡನೇ ಪ್ರದರ್ಶನ ಕಂಡಿತು. ಕೃತಕ ಬುದ್ಧಿಮತ್ತೆಯ, ಸಂಪೂರ್ಣ ಯಾಂತ್ರೀಕೃತ ಯುಗದಲ್ಲಿ ನಶಿಸಿಹೋಗುತ್ತಿರುವ ಕುಟುಂಬ ವ್ಯವಸ್ಥೆಯ ಮಹತ್ವವನ್ನು ಎತ್ತಿ ಹಿಡಿಯುವ ಪ್ರಯತ್ನದ ಈ ನಾಟಕವನ್ನು ಸತೀಶ್ ಹುಳಿಯಾರ್ ರಚಿಸಿದ್ದಾರೆ. ಕುಟುಂಬದ ಯಜಮಾನನ ಪಾತ್ರದೊಂದಿಗೆ ನಿರ್ದೇಶಕನ ಹೊಣೆಯನ್ನು ಸತೀಶ್ ಐತಾಳ್ ಸಮರ್ಥವಾಗಿ ನಿರ್ವಹಿಸಿದ್ದಾರೆ.



ನಾವಿಬ್ಬರು ನಮಗಿಬ್ಬರು ಸೂತ್ರದ ನಾಗರಾಜಪ್ಪ ನಾಗವೇಣಿಯ ಸಂಸಾರದಲ್ಲಿ ಮೊದಲ ಮಗನ ಸಂಸಾರ ಸೊಸೆಯ ಲೆಕ್ಕಾಚಾರದ ನಿರ್ವಹಣೆಯಿಂದ ಸೂತ್ರ ತಪ್ಪಿದರೆ, ಎರಡನೆಯ ಮಗ ಕೋ ಲಿವಿಂಗ್ ಹೆಸರಿನಲ್ಲಿ ಮನೆಗೆ ಮತ್ತೊಂದು ಸಮಸ್ಯೆಯ ಸೊಸೆ ತರುವುದರೊಂದಿಗೆ ಕಥೆ ಹಾಸ್ಯಕ್ಕೆ ಹೊರಳುತ್ತದೆ. ಮೊದಲ ಮಗ 'ಸಾಮಾಜಿಕ ' ಎರಡನೇ ಮಗ 'ಪೌರಾಣಿಕ' ಎಂಬ ಕಲ್ಪನೆ ಸೊಗಸಾಗಿದೆ. ವಿಕಾಸ್ ತಮ್ಮ ಅಸ್ಖಲಿತ ಪೌರಾಣಿಕ ಶೈಲಿಯ ಸಂಭಾಷಣೆಗಳಿಂದ ನಗಿಸಿದರೆ, ಶಿವರಾಜ್ ಪೆದ್ದು ಶೈಲಿಯಿಂದ ಗಮನಸೆಳೆಯುತ್ತಾರೆ. ಮದುವೆಯಾಗದೆ ಕೋ ಲಿವಿಂಗ್ ನಲ್ಲಿ ಇರಲು ಒಪ್ಪಿ ಬರುವ ಸಿಮ್ರಾನ್ ಪಾತ್ರಧಾರಿ ಪಲ್ಲವಿ ತಮ್ಮ ಕಲುಷಿತ ಕನ್ನಡ ಸಂಭಾಷಣೆಗಳಿಂದಲೇ ನಗಿಸಿ ಗೆಲ್ಲುತ್ತಾರೆ. ಕಣ್ಸನ್ನೆಯಲ್ಲೇ ಗಂಡನನ್ನು ಕುಣಿಸುವ ನಾಗವೇಣಿಯಾಗಿ ರಾಜೇಶ್ವರಿ ಇಷ್ಟವಾಗುತ್ತಾರೆ. ಮಾಮೂಲಿ ಮಧ್ಯಮ ವರ್ಗದ ಗಂಡ ಹೆಂಡಿರ ಜಗಳದಂತೆ ಆರಂಭವಾಗುವ ನಾಟಕ ಮುದ್ದಣ ಮನೋರಮೆಯರ ಸರಸ ಸಲ್ಲಾಪದಂತೆ ಮುಕ್ತಾಯವಾಗುತ್ತದೆ. ತಡೆರಹಿತ ಸಂಭಾಷಣೆಗಳ ನಡುವೆ ಪ್ರೇಕ್ಷಕರಿಗೆ ಸ್ವಲ್ಪ ನಗಲು ಅನುಕೂಲವಾಗುವ ಸನ್ನಿವೇಶಗಳು ಗಮನ ಸೆಳೆದವು. ದೃಶ್ಯ ಬದಲಾವಣೆಯ ಸಂದರ್ಭದಲ್ಲಿ ಬಳಸುವ ಹಳೆಯ ಚಲನಚಿತ್ರ ಗೀತೆಗಳು ವಿಶೇಷ ಪರಿಣಾಮವನ್ನೇನೂ ಬೀರಲಿಲ್ಲ. ಈ ನಾಟಕವು ಸಾಕಷ್ಟು ಜನಪ್ರಿಯವಾಗಿತ್ತು ಎಂಬುದಕ್ಕೆ ಪುರಾವೆಯಾಗಿ, ಜನಸಂದಣಿಯ ಯೋಚನೆಯಿಲ್ಲದೇ, ಸ್ಥಳದಲ್ಲೆ ಟಿಕೇಟುಗಳನ್ನು ವಿತರಿಸಿದ್ದರಿಂದ ಮುಂಚಿತವಾಗಿ ಹಣ ತೆತ್ತವರಿಗೂ ಕೂರಲು ಜಾಗ ಸಿಗಲಿಲ್ಲ! ಈ ಅಪಾರ ಜನಸಂದಣಿಯು ನಗೆನಾಟಕದ ಯಶಸ್ಸು ಎನ್ನಬಹುದು.

ದೇಹಕ್ಕೆ ಭಾರವಾಗುವ ಭಾರಲೋಹ!

» ಡಾ. ನೇತ್ರಾವತಿ.ವಿ

ಇಂದಿನ ಆಧುನಿಕ ಜೀವನಶೈಲಿಯಲ್ಲಿ, ಭಾರಲೋಹಗಳು ಪರಿಸರವನ್ನು ಮತ್ತು ಮನುಷ್ಯನ ದೇಹವನ್ನು ಸೇರುವ ಅವಕಾಶ ಅಧಿಕವಾಗಿದೆ ಮತ್ತು ಅದರಿಂದ ಹಲವು ಬಗೆಯ ಆರೋಗ್ಯ ಸಮಸ್ಯೆಗಳು ಎದುರಾಗಬಲ್ಲವು.

ಲೋಹಗಳು ನೈಸರ್ಗಿಕವಾಗಿ ಭೂಮಿಯಲ್ಲಿ ಹಾಗು ಎಲ್ಲ ಜೀವಿಗಳ ದೇಹದಲ್ಲಿ ಇರುವಂತಹವು. ಮನುಷ್ಯನ ಆರೋಗ್ಯಕರ ಜೀವನಕ್ಕಾಗಿ ಸೋಡಿಯಂ , ಪೊಟ್ಯಾಸಿಯಂ , ಮೆಗ್ನಿಶಿಯಂ, ಕ್ಯಾಲ್ಸಿಯಂ, ಐರನ್, ಜಿಂಕ್ ಮತ್ತು ಕಾಪರ್ ಮುಂತಾದ ಲೋಹಗಳು ಅವಶ್ಯಕ. ಈ ಅಗತ್ಯ ಲೋಹಗಳ ಕೊರತೆ ಉಂಟಾದರೆ ರಕ್ತ ಹೀನತೆ, ಅಪೌಷ್ಟಿಕತೆ, ನಿಶ್ಯಕ್ತಿ ಹಾಗೂ ಇತರ ಆರೋಗ್ಯ ಸಮಸ್ಯೆಗಳು ಉಂಟಾಗಬಹುದು.

ನಿಸರ್ಗದಲ್ಲಿ ಇನ್ನೊಂದು ಬಗೆಯ ಲೋಹಗಳಿವೆ, ಅವೇ ಭಾರಲೋಹಗಳು. ಭಾರಲೋಹಗಳು ಅಗತ್ಯ ಲೋಹಗಳಿಗೆ ಹೋಲಿಸಿದರೆ ಹೆಚ್ಚು ಸಾಂದ್ರತೆ, ಹೆಚ್ಚು ಪರಮಾಣು ಸಂಖ್ಯೆ ಹಾಗು ಭಾರವನ್ನು ಹೊಂದಿವೆ. ಭಾರಲೋಹಗಳು ಹೆಚ್ಚು ವಿಷಕಾರಿ ಮತ್ತು ಅಪಾಯಕಾರಿ ಧಾತುಗಳು. ಕ್ಯಾಡ್ಮಿಯಂ, ನಿಕ್ಕಲ್, ಆರ್ಸೆನಿಕ್, ಕ್ರೋಮಿಯಂ, ಅಲ್ಯೂಮಿನಿಯಂ, ಮರ್ಕ್ಯುರಿ (ಪಾದರಸ) ಮತ್ತು ಲೆಡ್ (ಸೀಸ) ಇವೆಲ್ಲವೂ ಭಾರಲೋಹಗಳೆ. ಪರಿಸರದಲ್ಲಿರುವ ಈ ಅಪಾಯಕಾರಿ ಧಾತುಗಳು ಹಲವು ಮಾರ್ಗಗಳ ಮೂಲಕ ಮನುಷ್ಯರ ಹಾಗು ಇತರ ಪ್ರಾಣಿಗಳ ದೇಹವನ್ನು ಪ್ರವೇಶಿಸಿ, ಬೇರೆ ಬೇರೆ ಅಂಗಾಂಗಳಲ್ಲಿ ಕೆಲವು ನ್ಯೂನತೆಗಳನ್ನೂ ಖಾಯಿಲೆಗಳನ್ನೂ ಸೃಷ್ಟಿಸಿದ ಉದಾಹರಣೆಗಳಿವೆ.

ಭಾರಲೋಹಗಳು ಮುಖ್ಯವಾಗಿ ಕೈಗಾರೀಕರಣ, ಗಣಿಗಾರಿಕೆ, ವಾಹನಗಳು ಉಗುಳುವ ಹೊಗೆ, ಮದ್ದುಗುಂಡುಗಳು ಮತ್ತು ಪರಮಾಣು ಅಸ್ತ್ರಗಳು ಬಿಡುಗಡೆಗೊಳಿಸುವ ತ್ಯಾಜ್ಯಗಳಿಂದ, ಕೃಷಿಯಲ್ಲಿ ಬಳಸುವ ರಸಗೊಬ್ಬರ ಮತ್ತು ಕೀಟನಾಶಕಗಳ ಮೂಲಕ ಪ್ರಕೃತಿಯನ್ನು ಸೇರುತ್ತವೆ; ಕ್ರಮೇಣ ಜೀವಿಗಳ, ಜಲಚರಗಳ ದೇಹವನ್ನು ಪ್ರವೇಶಿಸುತ್ತವೆ.

ಭಾರಲೋಹಗಳು ಕಲುಷಿತ ಮಣ್ಣು, ನೀರು ಮತ್ತು ಗಾಳಿಯಿಂದ ಹಾಗೆಯೇ ಕೃಷಿಯಲ್ಲಿ ಬಳಸುವ ರಾಸಾಯನಿಕ ರಸಗೊಬ್ಬರ ಮತ್ತು ಕೀಟನಾಶಕಗಳ ಮೂಲಕ ಹಣ್ಣು, ತರಕಾರಿ, ಧಾನ್ಯ, ಸೊಪ್ಪು, ಸಮುದ್ರಾಹಾರ, ಮಾಂಸ ಹಾಗು ಇನ್ನಿತರೆ ಆಹಾರ ಪದಾರ್ಥಗಳ ಮೂಲಕ ನಮ್ಮ ದೇಹವನ್ನು ಅಲ್ಪ ಪ್ರಮಾಣದಲ್ಲಿ ಪ್ರವೇಶಿಸುತ್ತವೆ. ಉದಾಹರಣೆಗೆ, ಬೆಂಗಳೂರಿನ ಸುತ್ತಲೂ ಕೊಳಚೆ ನೀರನ್ನು ಉಪಯೋಗಿಸಿ, ತರಕಾರಿ ಮತ್ತು ಗಡ್ಡೆಗಳನ್ನು (ಉದಾ: ಬೀಟ್‌ರೂಟ್) ಬೆಳೆಯುವಾಗ, ಭಾರಲೋಹಗಳು ಆ ತರಕಾರಿಯೊಳಗೂ ಪ್ರವೇಶಿಸುತ್ತವೆ. ಇದಲ್ಲದೆ ನಾವು ಬಳಸುವ ಸೌಂದರ್ಯವರ್ಧಕಗಳು, ಶ್ಯಾಂಪೂ, ಸುಗಂಧ ದ್ರವ್ಯಗಳು, ಧುರ್ಗಂಧ ನಾಶಕಗಳು,ಡಿಯೋಡೊರೆಂಟ್ಸ್, ರೂಮ್ ಫ್ರೆಶ್ನರ್ ಹಾಗು ಇನ್ನು ಹಲವು ದಿನ ಬಳಕೆ ವಸ್ತುಗಳ ಮೂಲಕ ಶೇಖರಣೆಗೊಳ್ಳುತ್ತವೆ. ತ್ವಚೆ ಸಂರಕ್ಷಕ ಲೇಪನಗಳು, ಚರ್ಮದ ಕಾಂತಿವರ್ಧಕ ಲೇಪನಗಳು ಸಹ ಹಲವು ಭಾರಲೋಹಗಳನ್ನು ಒಳಗೊಂಡಿರುತ್ತವೆ. ಅವುಗಳನ್ನು ನಿಯಮಿತವಾಗಿ ಬಳಸುವುದರಿಂದ ಚರ್ಮದ ಮೂಲಕವೂ ಸಹ ಈ ಭಾರಲೋಹಗಳು ನಮ್ಮ ದೇಹವನ್ನು ಪ್ರವೇಶಿಸುತ್ತವೆ.

ಕಲುಷಿತ ಗಾಳಿಯಲ್ಲಿಯ ಭಾರಲೋಹಗಳು ಉಸಿರಾಟದ ಮೂಲಕ ಶ್ವಾಸಕೋಶಗಳನ್ನು ತಲುಪಿ ಅಲ್ಲಿಂದ ರಕ್ತದೊಡನೆ ಬೆರೆತು ಮೆದುಳು, ನರವ್ಯೂಹ ಸೇರಿದಂತೆ ಬೇರೆ ಬೇರೆ ಅಂಗಾಂಗಳಲ್ಲಿ ವಿಲೀನ ಗೊಂಡು ಹತ್ತು ಹಲವು ತೊಂದರೆಗಳಿಗೆ ದಾರಿಮಾಡಿಕೊಡುತ್ತವೆ. ಇವು ಶ್ವಾಸಕೋಶ ಸಂಬಂಧಿ ಖಾಯಿಲೆಗಳಿಂದ ಮೊದಲುಗೊಂಡು, ಉರಿಯೂತ, ವಿಷತ್ವ, ಆಮ್ಲಜನಕ ವಿಶತ್ವವನ್ನು ಉತ್ತೇಜಿಸಿ, ನಮ್ಮ ದೇಹದಲ್ಲೇ ಇರುವ ಪ್ರಕೃತಿದತ್ತವಾದ ಪ್ರತಿರೋಧ ಸಾಮರ್ಥ್ಯವನ್ನು ಕುಗ್ಗಿಸಿ ದೇಹವನ್ನು ಖಾಯಿಲೆಗೀಡು ಮಾಡಬಲ್ಲವು.

ಭಾರಲೋಹಗಳು ನಿರಂತರವಾಗಿ ದೇಹದಲ್ಲಿ ಶೇಖರಣೆಗೊಂಡು ಒಂದು ನಿರ್ದಿಷ್ಟ ಅಪಾಯಕಾರಿ ಪ್ರಮಾಣವನ್ನು ತಲುಪಿದಾಗ ಹಲವಾರು ದೀರ್ಘಕಾಲೀನ ಕಾಯಿಲೆಗಳು ಕಾಣಿಸಿಕೊಳ್ಳುವ ಸಾಧ್ಯತೆಗಳಿವೆ. ಅವುಗಳಲ್ಲಿ ಮುಖ್ಯವಾದವು ಎಂದರೆ, ನರಮಂಡಲ ಸಂಬಂಧಿತ ಖಾಯಿಲೆಗಳಾದ ಅಸಹಜ ಮರೆವು, ಸಂವೇದನೆಯ ಕೊರತೆ, ಆಲ್ಜೈಮರ್ ಡಿಸೀಸ್, ಪಾರ್ಕಿನ್ಸನ್ ಡಿಸೀಸ್, ಅಮಯೋಟ್ರೋಫಿಕ್ ಲ್ಯಾಟರಲ್ ಸ್ಕ್ಲೀರೋಸಿಸ್ ಮತ್ತು ಹಂಟಿಂಗ್ಟನ್ ಡಿಸೀಸ್‌ಗಳು. ಇದಲ್ಲದೆ ಕಿಡ್ನಿ ವೈಫಲ್ಯ, ಹೃದಯ ಹಾಗು ರಕ್ತ ನಾಳಗಳಲ್ಲಿ ತೊಂದರೆ, ಜೀವತಂತುಗಳಲ್ಲಿ ಅನಾವಶ್ಯಕ ಮಾರ್ಪಾಡುಗಳಾಗಿ ಕ್ಯಾನ್ಸರ್ ಉಂಟಾಗಬಹುದು ಎಂದು ಹಲವಾರು ಅಧ್ಯನಗಳು ಧೃಡೀಕರಿಸಿವೆ.

ಭಾರಲೋಹಗಳು ಮಹಿಳೆಯರ ಮತ್ತು ಪುರಷರ ರಸದೂತಗಳನ್ನು (ಹಾರ್ಮೋನ್) ಸ್ರವಿಸುವ ನಿರ್ನಾಳ (ಎಂಡೋಕ್ರೈನ್) ಗ್ರಂಥಿಗಳ ಚಟುವಟಿಕೆಗಳ ಮೇಲೆ ಹಿಡಿತ ಸಾದಿಸಿ ಹಲವು ರೀತಿಯಲ್ಲಿ ಚಯಾಪಚಯ ಕ್ರಿಯೆ, ಫಲವತ್ತತೆ ಮತ್ತು ಸಂತಾನೋತ್ಪತ್ತಿಯ ಮೇಲೆ ಪರಿಣಾಮ ಬೀರುತ್ತದೆ. ಇದಲ್ಲದೆ, ಜೀರ್ಣಕ್ರಿಯೆಯಲ್ಲಿ ಪ್ರಮುಖ ಪಾತ್ರ ವಹಿಸುವ ಥೈರಾಯಿಡ್ ರಸದೂತ, ಕಾರ್ಟಿಸೋಲ್ ಮತ್ತು ಇನ್ಸುಲಿನ್ ಸ್ರವಿಕೆ ಕ್ಷೀಣಿಸಿ ಹಸಿವು, ಜೀರ್ಣಕ್ರಿಯೆಯಲ್ಲಿ ಅಸಮತೋಲನ, ಸ್ಥೂಲಕಾಯ ಉಂಟುಮಾಡುವುದಲ್ಲದೆ ಮಾನಸಿಕ ಆರೋಗ್ಯವನ್ನೂ ಸಹ ಭಾದಿಸುತ್ತವೆ.

ಪರಿಹಾರವೇನು?

ಇಂದಿನ ಆಧುನಿಕ ದಿನಚರಿಯಲ್ಲಿ ಭಾರಲೋಹಗಳನ್ನು ನಮ್ಮ ಆಧುನಿಕ ಬದುಕಿನಿಂದ ಬೇರ್ಪಡಿಸುವುದು ಕಷ್ಟಸಾಧ್ಯ. ಇದರಿಂದ ರಕ್ಷಣೆ ನೀಡುವುದು ಒಂದು ಸಾಮಾಜಿಕ ಹೊಣೆ. ವಿವಿಧ ಉದ್ಯಮಿಗಳು, ವ್ಯಾಪಾರಸ್ಥರು, ರೈತರು, ರಾಜಕಾರಣಿಗಳು ಹಾಗು ಸಮಾಜದ ಎಲ್ಲ ಸ್ತರಗಳಲ್ಲಿ ಕೆಲಸ ಮಾಡುವಂತಹವರಲ್ಲಿ ಭಾರಲೋಹಗಳ ಸಂಭವನೀಯ ಅಪಾಯದ ಎಚ್ಚರಿಕೆ ಇರಬೇಕು ಹಾಗು ಅವುಗಳನ್ನು ಹೊಂದಿರುವಂತಹ ವಸ್ತು ಅಥವಾ ಪದಾರ್ಥಗಳ ತಯಾರಿಕೆಯ ಮೇಲೆ ನಿಯಂತ್ರಣ ಮತ್ತು ಸರಿಯಾದ ಪ್ರಮಾಣದಲ್ಲಿ ಬಳಕೆ ಮಾಡುವ ಹೊಣೆಗಾರಿಕೆಯ ಅಗತ್ಯವಿದೆ. ಸರಕಾರಿ ನಿಯಂತ್ರಣ ಸಂಸ್ಥೆಗಳು ಸಕ್ರಿಯವಾಗಿ ಭಾರಲೋಹಗಳನ್ನು ಆಹಾರ ಪದಾರ್ಥಗಳಲ್ಲಿ, ಕುಡಿಯುವ ನೀರಿನಲ್ಲಿ ಮತ್ತು ಇತರೆ ದಿನಬಳಕೆ ವಸ್ತುಗಳಲ್ಲಿ ಇರುವಿಕೆಯನ್ನು ಪತ್ತೆಹಚ್ಚಿ, ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕು.

ವೈಯಕ್ತಿಕವಾಗಿ ನಾವು ಕೆಲವು ಮುನ್ನೆಚ್ಚರಿಕೆಗಳನ್ನೂ ಪಾಲಿಸಬೇಕು, ಸೌಂದರ್ಯ ವರ್ಧಕಗಳನ್ನು ಖರೀದಿಸುವಾಗ ಲೇಬಲ್ ಮೇಲೆ ನಮೂದಿಸಿರುವಂಥಹ ಎಲ್ಲ ವಿವರಗಳನ್ನು ಪರಿಶೀಲಿಸಿ ಬಳಸಬೇಕು. ಭಾರಲೋಹಗಳನ್ನು ಒಳಗೊಂಡಂತಹ ಶ್ಯಾಂಪೂ, ಸುಗಂಧ ದ್ರವ್ಯಗಳು, ಡಿಯೋಡೊರೆಂಟ್ಸ್, ರೂಮ್ ಫ್ರೆಶ್ನರ್, ಸೊಳ್ಳೆ ನಾಶಕಗಳನ್ನು ಕೊಳ್ಳುವಾಗ ಹಾಗು ಬಳಸುವಾಗ ಜಾಗ್ರತೆ ವಹಿಸಬೇಕಿದೆ. ಹಣ್ಣು, ತರಕಾರಿ, ಧಾನ್ಯಗಳನ್ನು ಚೆನ್ನಾಗಿ ತೊಳೆದು, ಅಗತ್ಯವಿದ್ದಲ್ಲಿ ಉಪ್ಪು ಮಿಶ್ರಿತ ನೀರಿನಲ್ಲಿ ನೆನೆಸಿ ತೊಳೆದು ಬಳಸುವುದರಿಂದ ಭಾರಲೋಹಗಳ ಪ್ರಮಾಣವನ್ನು ಸ್ವಲ್ಪ ಮಟ್ಟಿಗೆ ಕಡಿಮೆಮಾಡಬಹುದು.

ಪೋಸ್ಟ್ ಆಫೀಸು

ವಿರಾಮ' ಪುರವಣಿಯಲ್ಲಿ 'ನಮ್ಮ ಹಳ್ಳಿಯ ವೀರವನಿತೆ' ಲೇಖನದಲ್ಲಿ ಕಲ್ಯಾಣಿಯವರ ಬಗ್ಗೆ ಪೂರ್ಣಿಮಾ ಕಮಲಶಿಲೆಯವರು ಬರೆದ ಲೇಖನ ಸತ್ವಪೂರ್ಣ ಹಾಗೂ ಮನಮಿಡಿಯುವಂತಹದ್ದು. ಕಲ್ಯಾಣಿಯವರ ಧೈರ್ಯ, ಸಮಯಪ್ರಜ್ಞೆ, ಬದುಕಿನ ಪ್ರೀತಿ, ಹೊಣೆಗಾರಿಕೆ ಮುಂತಾದವು ಹೃದಯ ತಟ್ಟುತ್ತವೆ ಹಾಗೂ ಮಾರ್ಗದರ್ಶಿಯಾಗುತ್ತವೆ. ಕೆಂಚನ ಚಿತ್ರಣ ಮನಸ್ಸನ್ನು ಆರ್ದ್ರಗೊಳಿಸುತ್ತದೆ. ಕುಂದಾಪುರದ ಆಡುಭಾಷೆಯು ಲೇಖನಕ್ಕೆ ಹೊಸ ಮೆರುಗನ್ನು ತಂದಿದೆ.

★ಮಾರ್ತಾಂಡರಾವ್ ನಾಡಿಗೇರ

ಬಡವರಲ್ಲಿ ಬಡವರೆಂದೇ ಗುರುತಿಸಲ್ಪಟ್ಟಿರುವ ಕೊರಗ ಜನಾಂಗದವರಿಗೆ ಹಲವು ಮನೆಗಳನ್ನು ಉಚಿತವಾಗಿ ನಿರ್ಮಿಸಿಕೊಟ್ಟ ಎಚ್. ಶ್ರೀನಿವಾಸ ಶೆಟ್ಟಿಯವರ ಹೃದಯವೈಶಾಲ್ಯದ ಕುರಿತು ವಿರಾಮದಲ್ಲಿ ಪ್ರಕಟಗೊಂಡ ಬರಹವು ಗಮನ ಸೆಳೆಯಿತು. ಇವರ ಸೇವಾ ಮನೋಭಾವವು ಅನುಕರಣಾರ್ಹ.

★ಕೆ.ಎಸ್.ಹೆಬ್ಬಾರ್, ಜೆ.ಪಿ.ನಗರ

ರಣರಂಗ

» ಚಂದ್ರಶೇಖರ ಹೆಗಡೆ

ಹಸುಗೂಸುಗಳ ಸಮಾಧಿ
ಪ್ರತಿಷ್ಠೆ ಅಹಮ್ಮುಗಳ ಗುಡ್ಡೆಯಲ್ಲಿ
ಸಮರ ಕಲೆಯದ್ದೇ ಆರ್ಭಟ
ಜನಾಂಗೀಯ ರಂಗಭೂಮಿಯಲ್ಲಿ

ಹೆಣಗಳ ಮೇಲೆ ಸಾಮ್ರಾಜ್ಯ
ಕಟುಕರ ನರನಾಡಿಗಳದ್ದೇ ರಾಜತಂತ್ರ
ಉಳ್ಳವರ ಕಾಲು ಹಿಡಿದು
ಪಠಿಸುತ್ತಿದೆ ಪತಾಕೆ ವಿಜಯದ ಮಂತ್ರ

ದಿಗ್ವಿಜಯವೆಂದರೇನು
ಹಾರಿಸುವುದೇ ಮದ್ದುಗಳ ವಿಮಾನ
ಗೆಲ್ಲುವುದೆಂದರೇನು
ತೆಗೆಯುವುದೇ ದನಿಯಿಲ್ಲದವರ ಪ್ರಾಣ
ಕಂಡಿರಲಿಲ್ಲ ಪ್ರಳಯ
ವಿಮಾನಗಳ ದುಂದುಭಿಯೇ ಮುನ್ನುಡಿ
ಬೆಂಕಿಯ ಮಳೆಗಿಲ್ಲ
ನಮ್ಮಂತೆ ಪಕ್ಷಪಾತದ ಕನ್ನಡಿ

ಮೊರೆ ಕೇಳುವುದೆಂತು
ತ್ರಿಕರಣಗಳಲ್ಲೀಗ ಕ್ಷಿಪಣಿಗಳ ಹಿಂಡು
ಭ್ರಾತೃತ್ವದ ಮಡಿಲಲ್ಲಿಯೇ
ಧಗಧಗಿಸುತ್ತಿವೆ ಸಿಡಿತಲೆಗಳ ದಂಡು

ಧರೆ ಹೊತ್ತಿ ಉರಿದರೆ
ಇನ್ನಾರಿಗೆ ದೂರಲಿ ಬಸವಣ್ಣ
ಸುಟ್ಟು ಅಸುನೀಗುವುದಷ್ಟೇ
ನಮಗಿರುವ ಹೆಗ್ಗಳಿಕೆಯ ಕಸುವಣ್ಣ

ಸೊಸೆ ರೀಲ್ಸ್ ಮಾಡಿದರೆ ಅತ್ತೆಗೆ ಕೋಪ ಬರುತ್ತಾ?

ಭವ್ಯಶ್ರೀ ಬೆಂಗ್ರೆ, (ಇಮೇಲ್ ಮೂಲಕ)

- **ಸಂಪಾದಕರೇ, ನನಗೆ ಮೂವತ್ತೈದು ವರ್ಷ ವಯಸ್ಸು. ಒಬ್ಬಳು ಮಗಳಿದ್ದಾಳೆ. ನನಗೆ ರೀಲ್ಸ್ ನೋಡುವುದು ಮತ್ತು ನಾನೇ ರೀಲ್ಸ್‌ಗಳಲ್ಲಿ ಕಾಣಿಸಿಕೊಳ್ಳುವುದು ತುಂಬಾ ಇಷ್ಟ. ಆದರೆ ನನ್ನ ಅತ್ತೆಯವರಿಗೆ ಇದೆಲ್ಲ ಇಷ್ಟವಿಲ್ಲ. ಮನೆಯಲ್ಲಿ ಹೆಂಗಸರು ಹೇಗಿರಬೇಕೋ, ಹಾಗಿರಬೇಕು ಅಂತ ಕಟ್ಟುನಿಟ್ಟಾಗಿ ಹೇಳುತ್ತಾರೆ. ಈ ವಿಷಯದಲ್ಲಿ ಅನಗತ್ಯ ವಿವಾದ ಏಕೆಂದು ನಾನು ಸುಮ್ಮನೆ ಇದ್ದೇನೆ. ನನ್ನ ಮನಸ್ಸಿನ ಆಸೆಯನ್ನು ಈಡೇರಿಸಿಕೊಳ್ಳುವುದು ಹೇಗೆ?**

– ಭವ್ಯಶ್ರೀ ಅವರೇ, ನಿಮ್ಮ ಪರಿಸ್ಥಿತಿ ನೋಡಿದರೆ 'ಅತ್ತೆಗೊಂದು ಕಾಲ, ಸೊಸೆಗೊಂದು ಕಾಲ' ಎಂಬ ಗಾದೆ ಮಾತು, ಈಗ 'ಅತ್ತೆಗೊಂದು ಕಾಲ, ಸೊಸೆಗೊಂದು ರೀಲ್ಸ್ ಕಾಲ' ಅಂತ ಬದಲಾದಂತಿದೆ! ಮೂವತ್ತೈದು ವರ್ಷ ಅಂದರೆ ಲೈಫಿನ ಸೆಕೆಂಡ್ ಇನ್ನಿಂಗ್ಸ್ ಸಖತ್ತಾಗಿ ಶುರುವಾಗುವ ಸಮಯ. ಮಗಳೂ ಇದ್ದಾಳೆ ಅಂದಮೇಲೆ ಅವಳೇ ನಿಮಗೆ ದೊಡ್ಡ ಸಪೋರ್ಟ್ ಸಿಸ್ಟಮ್.

ಅತ್ತೆಯವರ 'ಓಲ್ಡ್ ಸ್ಕೂಲ್' ವಿಚಾರಧಾರೆ ಮತ್ತು ನಿಮ್ಮ 'ನ್ಯೂ ಏಜ್' ಕ್ರೇಜ್ ನಡುವೆ ಬ್ಯಾಲೆನ್ಸ್ ಮಾಡುವುದು ಒಂದು ದೊಡ್ಡ ಕಲೆ. ಅದನ್ನು ಸ್ವಲ್ಪ ತಮಾಷೆಯಾಗಿ ಮತ್ತು ಚತುರತೆಯಿಂದ ನಿಭಾಯಿಸಬಹುದು.

ಮೊದಲನೆಯದು, ಅತ್ತೆಯವರು ಪೂಜೆ ಮಾಡುತ್ತಿರುವಾಗ ಅಥವಾ ಅವರ ನೆಚ್ಚಿನ ಸೀರಿಯಲ್‌ನಲ್ಲಿ ಮಗ್ನರಾಗಿರುವಾಗ ನಿಮ್ಮ ಶೂಟಿಂಗ್ ಮುಗಿಸಿಕೊಳ್ಳಿ. ಅವರು ಸೀರಿಯಲ್ ನೋಡಿ ಅಳುತ್ತಿದ್ದರೆ, ನೀವು ರೀಲ್ಸ್ ಮಾಡಿ ನಗುತ್ತಿರಿ. ಕಣ್ಣಿಗೆ ಕಾಣದಿದ್ದರೆ ಮನಸ್ಸಿಗೆ ನೋವಿಲ್ಲ ಎಂಬ ಸೂತ್ರ ಪಾಲಿಸಿ.

ಎರಡನೆಯದು, ಸಂಪ್ರದಾಯದ ಮುಖವಾಡ. ಅಂದರೆ ದೇಸಿ ಟ್ವಿಸ್ಟ್. ಅತ್ತೆಯವರಿಗೆ ಮಾಡರ್ನ್ ಬಟ್ಟೆ ಅಥವಾ ವೆಸ್ಟರ್ನ್ ಡ್ಯಾನ್ಸ್ ಇಷ್ಟವಿಲ್ಲದಿರಬಹುದು. ಹೀಗಾಗಿ, ನೀವು ಸಾಂಪ್ರದಾಯಿಕ ಸೀರೆಯುಟ್ಟು, ಭಕ್ತಿಗೀತೆಗಳಿಗೆ ಅಥವಾ ಹಳೆಯ ಕನ್ನಡ ಸಿನಿಮಾದ ಹಾಡುಗಳಿಗೆ ಹೆಜ್ಜೆಹಾಕಿ, ರೀಲ್ಸ್ ಮಾಡಿ. ಆಗ ಅವರಿಗೆ ನಮ್ಮ ಸೊಸೆ ಸಂಪ್ರದಾಯ ಉಳಿಸುತ್ತಿದ್ದಾಳೆ ಎನ್ನುವ ಭ್ರಮೆ ಇರುತ್ತದೆ, ನಿಮ್ಮ ಆಸೆಯೂ ತೀರುತ್ತದೆ!

ಮೂರನೆಯದು, ಅತ್ತೆಯವರನ್ನೇ ಸ್ಟಾರ್ ಮಾಡಿ. ಇದು ಮಾಸ್ಟರ್ ಸ್ಟ್ರೋಕ್. ಯಾರಿಗಾದರೂ ವಿರೋಧ ಮಾಡುವುದನ್ನು ನಿಲ್ಲಿಸಬೇಕೆಂದರೆ ಅವರನ್ನು ನಿಮ್ಮ ತಂಡಕ್ಕೆ ಸೇರಿಸಿಕೊಳ್ಳಿ. 'ಅತ್ತೆ, ಈ ಅಡುಗೆ ಹೇಗೆ ಮಾಡೋದು ಅಂತ ಒಂದು ವಿಡಿಯೋ ಮಾಡೋಣ, ಎಲ್ಲರೂ ನಿಮ್ಮನ್ನು ನೋಡಿ ಕಲಿಯಲಿ' ಅಂತ ಹೊಗಳಿ ನೋಡಿ. ಕ್ಯಾಮೆರಾ ಮುಂದೆ ಅವರು ಒಮ್ಮೆ ಸ್ಟಾರ್ ಆದ ಮೇಲೆ, ಆಮೇಲೆ ನೀವು ಏನು ಮಾಡಿದರೂ ಅವರು 'ಅಯ್ಯೋ ಬಿಡು, ಅದು ಅಷ್ಟೆ' ಅಂದುಬಿಡುತ್ತಾರೆ.

ನಾಲ್ಕನೆಯದು, ಮಗಳ ಸಹಾಯ ಪಡೆಯಿರಿ. ನಿಮ್ಮ ಮಗಳು ಖಂಡಿತವಾಗಿಯೂ ಟೆಕ್-ಸ್ಯಾವಿ ಇರುತ್ತಾಳೆ. ಅವಳನ್ನು ಕ್ಯಾಮೆರಾಮನ್ ಮಾಡಿಕೊಳ್ಳಿ. ಮಗಳಿಗೆ ಪ್ರಾಜೆಕ್ಟ್ ಇದೆ ಅತ್ತೆ ಅಂತ ಸಣ್ಣ ಸುಳ್ಳು ಹೇಳಿ ಶೂಟಿಂಗ್ ಮುಗಿಸಬಹುದು. ಅತ್ತೆಯವರಿಗೆ ಮಗಳ ಜತೆ ಆಟವಾಡುತ್ತಿದ್ದೀವೆ ಎಂಬ ನಂಬಿಕೆ ಬರುತ್ತದೆ.

ಐದನೆಯದು, ಪ್ರೈವೇಸಿ ಕಾಪಾಡಿಕೊಳ್ಳಿ. ಇನ್ಸ್ಟಾಗ್ರಾಮ್‌ನಲ್ಲಿ Close Friends ಎಂಬ ಆಪ್ಷನ್ ಇದೆ. ಅಲ್ಲಿ ನಿಮಗೆ ಬೇಕಾದವರಿಗೆ ಮಾತ್ರ ನಿಮ್ಮ ರೀಲ್ಸ್ ಕಾಣುವಂತೆ ಮಾಡಿ. ಅಪ್ಪಿತಪ್ಪಿಯೂ ಅತ್ತೆಯವರ ಕಡೆಯ ಸಂಬಂಧಿಕರು ನಿಮ್ಮ ವಿಡಿಯೋ ನೋಡಿ ಚಾಡಿ ಹೇಳದಂತೆ ಹೈಡ್ ಮಾಡಿಬಿಡಿ. ಮನೆಯಲ್ಲಿ ಲಕ್ಷ್ಮಿ, ರೀಲ್ಸ್‌ನಲ್ಲಿ ರಾಕಿಂಗ್ ಸ್ಟಾರ್ ಆಗಿರಿ!

ಕೊನೆಯದಾಗಿ ಒಂದು ಮಾತು – ಜೀವನ ಇರುವುದೇ ಒಮ್ಮೆ. ಮನೆಯವರನ್ನು ನೋಯಿಸದೇ ನಿಮ್ಮ ಸಣ್ಣ ಸಣ್ಣ ಸಂತೋಷಗಳನ್ನು ಕಂಡುಕೊಳ್ಳುವುದರಲ್ಲಿ ತಪ್ಪಿಲ್ಲ. ಮನೆಯಲ್ಲಿ ಅತ್ತೆ ಮುಂದೆ 'ಮೌನಂ ಸಮ್ಮತಿ ಲಕ್ಷಣಂ', ಮೊಬೈಲ್ ಮುಂದೆ 'ರೀಲ್ಸ್ ಸಮ್ಮತಿ ಲಕ್ಷಣಂ'!



ಸತಾಯಿಸುವ ಪ್ರಶ್ನೆಗಳಿಗೆ ಸಂತೈಸುವ ಉತ್ತರ

ಯಾವುದೇ ವಿಷಯದ ಬಗ್ಗೆ ಏನು ಪ್ರಶ್ನೆಯನ್ನಾದರೂ ಕೇಳಿ

asktheeditorvv@gmail.com

ಜೀವನ್, ಬೆಂಗಳೂರು

- **ಭಟ್ರೇ, ನನಗೆ ಯಾವ ಪುಸ್ತಕವನ್ನೂ ಪೂರ್ತಿಯಾಗಿ ಓದಲು ಸಾಧ್ಯವಾಗುತ್ತಿಲ್ಲ. ಮೂವತ್ತು-ನಲವತ್ತು ಪುಟಗಳನ್ನು ಓದಿದ ಬಳಿಕ ಮುಂದೆ ಓದಲು ಸಾಧ್ಯವಾಗುವುದಿಲ್ಲ. ಕಾಲೇಜಿನಲ್ಲಿ ಓದುವಾಗ ಪಠ್ಯ-ಪುಸ್ತಕ ಓದಿದ್ದೇ ಕೊನೆ. ಈಗ ಕತೆ-ಕಾದಂಬರಿ-ಪ್ರಬಂಧಗಳನ್ನು ಓದುವುದು ಸಾಧ್ಯವೇ ಇಲ್ಲ ಎನ್ನುವಂತಾಗಿದೆ. ಆದರೆ ನನಗೆ ಪುಸ್ತಕ ಓದಬೇಕು ಎಂಬ ಆಸೆಯಿದೆ.**

– ಜೀವನ್ ಅವರೇ, ಪುಸ್ತಕ ಓದಬೇಕು ಎನ್ನುವ ಹಂಬಲ ಇರುವುದೇ ಒಂದು ದೊಡ್ಡ ಆರಂಭ. ಇತ್ತೀಚಿನ ಡಿಜಿಟಲ್ ಯುಗದಲ್ಲಿ ಮೊಬೈಲ್ ಮತ್ತು ಸೋಶಿಯಲ್ ಮೀಡಿಯಾದಿಂದಾಗಿ ನಮ್ಮ Attention Span (ಗಮನ ಕೇಂದ್ರೀಕರಿಸುವ ಅವಧಿ) ಕಡಿಮೆಯಾಗಿರುವುದು ಇದಕ್ಕೆ ಮುಖ್ಯ ಕಾರಣ. ಕಾಲೇಜು ಮುಗಿದ ಮೇಲೆ ಈ ಅಭ್ಯಾಸ ತಪ್ಪಿಹೋಗಿರುವುದು ಸಹಜ. ಅದನ್ನು ಮರಳಿ ಪಡೆಯಲು ನೀವು ಕೆಲವು ಕ್ರಮಗಳನ್ನು ಅನುಸರಿಸಬಹುದು.

ಆರಂಭದಲ್ಲಿ ದಪ್ಪ ಕಾದಂಬರಿಗಳ ತಂಟೆಗೆ ಹೋಗಬೇಡಿ. ನೀವು ನೇರವಾಗಿ ಮುನ್ನೂರು ಪುಟಗಳ ಕಾದಂಬರಿ ಹಿಡಿದರೆ ಅರ್ಧಕ್ಕೇ ನಿಲ್ಲಿಸುವ ಸಾಧ್ಯತೆ ಹೆಚ್ಚು. ಮೊದಲು ಸಣ್ಣ ಕಥೆಗಳ ಸಂಕಲನ ಅಥವಾ ಲಘು ಪ್ರಬಂಧಗಳ ಪುಸ್ತಕವನ್ನು ಆರಿಸಿಕೊಳ್ಳಿ. ಒಂದು ಕಥೆ ನಾಲ್ಕೈದು ಪುಟಗಳಷ್ಟಿದ್ದರೆ, ಅದನ್ನು ಮುಗಿಸಿದಾಗ ನಿಮಗೆ ಒಂದು ರೀತಿಯ 'ಗೆದ್ದೆ' ಎನ್ನುವ ಖುಷಿ ಸಿಗುತ್ತದೆ. ಇದು ಮುಂದಿನ ಕಥೆ ಓದಲು ಸ್ಫೂರ್ತಿ ನೀಡುತ್ತದೆ.

ಮೂವತ್ತು ಪುಟಗಳ ಮಿತಿಯನ್ನೇ ಗುರಿಯಾಗಿಸಿ. ನೀವು ಮೂವತ್ತು-ನಲವತ್ತು ಪುಟ ಓದಿದ ಮೇಲೆ ನಿಲ್ಲಿಸುತ್ತೀರಿ ಎಂದಾದರೆ, ಅದನ್ನೇ ನಿಮ್ಮ ಸಾಧನೆ ಎಂದು ಭಾವಿಸಿ. ದಿನಕ್ಕೆ ಕೇವಲ ಹತ್ತರಿಂದ ಹದಿನೈದು ಪುಟ ಓದುವ ಗುರಿ ಇಟ್ಟುಕೊಳ್ಳಿ. ಇವತ್ತು ಇಷ್ಟೇ ಓದುತ್ತೇನೆ ಎಂದು ಮುಂಚಿತವಾಗಿ ನಿರ್ಧರಿಸಿ. ಗುರಿ ಸಣ್ಣದಿದ್ದಷ್ಟೂ ಅದನ್ನು ತಲುಪುವುದು ಸುಲಭ.

ಆಸಕ್ತಿಯ ವಿಷಯದಿಂದ ಆರಂಭಿಸಿ. ಗಂಭೀರ ಸಾಹಿತ್ಯ ಅಥವಾ ತತ್ವಶಾಸ್ತ್ರದ ಪುಸ್ತಕಗಳನ್ನು ಓದಬೇಕೆಂಬ ಒತ್ತಡ ಹೇರಬೇಡಿ. ನಿಮಗೆ ಕ್ರೈಮ್ ಥ್ರಿಲ್ಲರ್ ಇಷ್ಟವೇ? ಅಥವಾ ಪ್ರೇಮ ಕಥೆಗಳೇ? ಅಥವಾ ಪ್ರವಾಸ ಕಥನಗಳೇ? ನಿಮ್ಮ ಮನಸ್ಸಿಗೆ ಆಪ್ತವಾಗುವ ವಿಷಯದ ಪುಸ್ತಕ ಎತ್ತಿಕೊಳ್ಳಿ. ವಿಷಯ ಕುತೂಹಲ ಕಾರಿಯಾಗಿದ್ದರೆ ಪುಟಗಳು ತಾವಾಗಿಯೇ ಉರುಳುತ್ತವೆ.

ಹಾಗೇ ಓದುವ ಪರಿಸರ ಬದಲಿಸಿ. ಓದುವಾಗ ಮೊಬೈಲ್ ಅನ್ನು ಬೇರೆ ಕೋಣೆಯಲ್ಲಿ ಇಡಿ ಅಥವಾ 'ಸೈಲೆಂಟ್' ಮಾಡಿ. ಮಲಗುವ ಮುನ್ನ ಅಥವಾ ಬೆಳಗ್ಗೆ ಎದ್ದ ತಕ್ಷಣದ ಹದಿನೈದು ನಿಮಿಷಗಳನ್ನು ಓದಿಗೆ ಮೀಸಲಿಡಿ. ಜತೆಯಲ್ಲಿ, ಆಡಿಯೋ ಬುಕ್ಸ್ ಪ್ರಯತ್ನಿಸಿ. ನಿಮಗೆ ಕಣ್ಣಿನಿಂದ ಓದಲು ಕಷ್ಟವಾಗುತ್ತಿದ್ದರೆ, ಕೆಲಸ ಮಾಡುತ್ತಾ ಅಥವಾ ಪ್ರಯಾಣದ ಸಮಯದಲ್ಲಿ ಕಥೆಗಳನ್ನು ಕೇಳಿಸಿಕೊಳ್ಳಿ. ಇದು ಕೂಡ ಪುಸ್ತಕದ ಪ್ರಪಂಚದೊಳಗೆ ನಿಮ್ಮನ್ನು ಕರೆದೊಯ್ಯುತ್ತದೆ ಮತ್ತು ನಂತರ ಪುಸ್ತಕ ಓದುವ ಆಸಕ್ತಿಯನ್ನು ಹೆಚ್ಚಿಸುತ್ತದೆ.

ಸಂಕೇತ್, (ಇಮೇಲ್ ಮೂಲಕ)

- **ಸಂಪಾದಕರೇ, ನನಗೆ ಇಪ್ಪತ್ತೇಳು ವರ್ಷ. ನನ್ನ ತಂದೆಯವರೊಂದಿಗೆ ಸದಾ ಸಂಘರ್ಷ, ವಾಗ್ವಾದ ಆಗುತ್ತಾ ಇರುತ್ತದೆ. ಪ್ರತಿಯೊಂದನ್ನೂ ಅವರು ಹೇಳಿದಂತೆ ಕೇಳಬೇಕು. ಇನ್ ಶರ್ಟ್ ಮಾಡಬೇಕೋ, ಬೇಡವೋ ಎಂಬ ಬಗ್ಗೆಯೂ ಅವರು ಮೂಗು ತೋರಿಸುತ್ತಾರೆ. ಅವರನ್ನು ಹೇಗೆ ನಿಭಾಯಿಸಬೇಕೋ ಗೊತ್ತಾಗುತ್ತಿಲ್ಲ.**

– ಸಂಕೇತ್ ಅವರೇ, ಇಪ್ಪತ್ತೇಳು ವರ್ಷದ ಒಬ್ಬ ವ್ಯಕ್ತಿಗೆ ಸ್ವಂತ ನಿರ್ಧಾರಗಳನ್ನು ತೆಗೆದುಕೊಳ್ಳುವ ಸ್ವಾತಂತ್ರ್ಯ ಇರಬೇಕು ಎನಿಸುವುದು ಬಹಳ ಸಹಜ. ತಂದೆಯವರು ಪ್ರತಿಯೊಂದು ಸಣ್ಣ ವಿಷಯದಲ್ಲೂ (ಇನ್-ಶರ್ಟ್‌ನಂಥ ವಿಷಯಗಳಲ್ಲೂ) ಹಸ್ತಕ್ಷೇಪ ಮಾಡಿದಾಗ ಉಸಿರುಗಟ್ಟಿದಂತಾಗುವುದು ಅಥವಾ ಸಿಟ್ಟು ಬರುವುದು ತೀರಾ ಸ್ವಾಭಾವಿಕ. ಈ ಪರಿಸ್ಥಿತಿಯನ್ನು ಸ್ವಲ್ಪ ಸಂಯಮದಿಂದ ಮತ್ತು ಯುಕ್ತಿಯಿಂದ ನಿಭಾಯಿಸಬೇಕಾಗುತ್ತದೆ.

ನೆನಪಿಡಿ, ಈ ವಯಸ್ಸಿನಲ್ಲಿ ಅವರು ನಿಮ್ಮನ್ನು ಬದಲಾಯಿಸಲು ಪ್ರಯತ್ನಿಸುತ್ತಿರುವುದು ಅಧಿಕಾರ ಚಲಾಯಿಸಲಿಕ್ಕಲ್ಲ, ಬದಲಿಗೆ ಅವರಿಗೆ ನಿಮ್ಮ ಮೇಲೆ ಇರುವ ಅತಿಯಾದ ಕಾಳಜಿ ಅಥವಾ ಭಯ ಕಾರಣವಾಗಿರಬಹುದು. ನೀವು ಅವರ ಮಾತಿಗೆ ಎದುರುತ್ತರ ಕೊಟ್ಟಾಗ ಅದು ವಾಗ್ವಾದವಾಗಿ ಬದಲಾಗುತ್ತದೆ. ಅವರು ಏನನ್ನಾದರೂ ಹೇಳಿದಾಗ ತಕ್ಷಣ ನಿಮಗೆ ಗೊತ್ತಿಲ್ಲ, ನನಗೆ ಗೊತ್ತು ಎನ್ನುವ ಬದಲು, ಸರಿ, ಆಯ್ತು, ಯೋಚನೆ ಮಾಡುತ್ತೇನೆ ಎಂದು ಹೇಳಿ ಆ ಕ್ಷಣದ ಗದ್ದಲವನ್ನು ತಪ್ಪಿಸಿ.

ತಂದೆಯವರಿಗೆ ನಿಮ್ಮ ಮೇಲೆ ನಂಬಿಕೆ ಬರಬೇಕೆಂದರೆ, ನೀವು ಜವಾಬ್ದಾರಿಯುತ ವ್ಯಕ್ತಿ ಎಂಬುದು ಅವರಿಗೆ ಮನವರಿಕೆಯಾಗಬೇಕು. ಮನೆಯ ಸಣ್ಣಪುಟ್ಟ ಜವಾಬ್ದಾರಿಗಳನ್ನು (ಬಿಲ್ ಕಟ್ಟುವುದು, ತರಕಾರಿ ತರುವುದು ಇತ್ಯಾದಿ) ಅವರೇ ಹೇಳುವ ಮೊದಲೇ ನೀವೇ ಮಾಡಿ ಮುಗಿಸಿ. ನೀವು ನಿಮ್ಮ ಜೀವನದ ದೊಡ್ಡ ನಿರ್ಧಾರಗಳನ್ನು ಗಂಭೀರವಾಗಿ ತೆಗೆದುಕೊಳ್ಳುತ್ತಿದ್ದೀರಿ ಎಂದು ಅವರಿಗೆ ಕಂಡಾಗ, ಸಣ್ಣ ವಿಷಯಗಳಲ್ಲಿ (ಬಟ್ಟೆಯಂಥ) ಅವರು ತಲೆ ಹಾಕುವುದನ್ನು ಕ್ರಮೇಣ ಕಡಿಮೆ ಮಾಡಬಹುದು.

ಜಗಳವಾಗುತ್ತಿರುವಾಗ, ಅವರಿಗೆ ಪ್ರತಿಯಾಗಿ ನೀವು ಏನು ಹೇಳಿದರೂ ಅವರಿಗೆ ಅದು ಅಹಂಕಾರದಂತೆ ಕೇಳಿಸುತ್ತದೆ. ಯಾವುದಾದರೂ ಒಂದು ದಿನ ವಾತಾವರಣ ಶಾಂತವಾಗಿದ್ದಾಗ, ಅವರ ಜತೆ ಕುಳಿತು ನೇರವಾಗಿ ಮಾತನಾಡಿ. 'ಅಪ್ಪಾ, ನಿಮ್ಮ ಅನುಭವದ ಬಗ್ಗೆ ನನಗೆ ಗೌರವವಿದೆ. ಆದರೆ ಕೆಲವು ವೈಯಕ್ತಿಕ ವಿಷಯಗಳಲ್ಲಿ ನನಗೂ ಸ್ವಂತ ಇಷ್ಟ-ಕಷ್ಟಗಳಿರುತ್ತವೆ. ನೀವು ಸಣ್ಣ ವಿಷಯಗಳಿಗೂ ಒತ್ತಾಯ ಮಾಡಿದಾಗ ನನಗೆ ಸಂಕಟವಾಗುತ್ತದೆ' ಎಂದು ಪ್ರೀತಿಯಿಂದ ತಿಳಿಸಿ ಹೇಳಿ.

ಎಲ್ಲ ವಿಷಯಗಳಿಗೂ ಜಗಳವಾಡುವುದು ಬೇಡ. ಕೆಲವು ವಿಷಯಗಳಲ್ಲಿ ಅವರ ಮಾತಿಗೆ ಒಪ್ಪಿಗೆ ಸೂಚಿಸಿ (ಉದಾಹರಣೆಗೆ, ಆರೋಗ್ಯ ಅಥವಾ ಹಣಕಾಸಿನ ಶಿಸ್ತು). ಇನ್-ಶರ್ಟ್‌ನಂಥ ಸಣ್ಣ ವಿಷಯಗಳಲ್ಲಿ, 'ಇವತ್ತು ಆಫೀಸಿನಲ್ಲಿ ಇಂಥದ್ದೇ ಡ್ರೆಸ್ ಕೋಡ್ ಇದೆ ಅಪ್ಪಾ' ಎಂದು ಯಾವುದಾದರೂ ಒಂದು ಸಕಾರಣ ನೀಡಿ ಸೌಮ್ಯವಾಗಿ ನಿರಾಕರಿಸಿ. ನೀವು ಆರ್ಥಿಕವಾಗಿ ಅವರ ಮೇಲೆ ಅವಲಂಬಿತರಾಗಿದ್ದರೆ, ಅವರಿಗೆ ನಿಮ್ಮ ಮೇಲೆ ಹತೋಟಿ ಇರಬೇಕು ಎನಿಸುವುದು ಹೆಚ್ಚು. ನಿಮ್ಮ ವೃತ್ತಿಜೀವನದ ಮೇಲೆ ಹೆಚ್ಚು ಗಮನ ಹರಿಸಿ. ನೀವು ಎಷ್ಟು ಸ್ವತಂತ್ರವಾಗಿ ಬೆಳೆಯುತ್ತೀರೋ, ಅಷ್ಟು ಅವರ ಹಸ್ತಕ್ಷೇಪ ಕಡಿಮೆಯಾಗುತ್ತಾ ಹೋಗುತ್ತದೆ. ತಂದೆಯವರನ್ನು ಬದಲಾಯಿಸುವುದು ಕಷ್ಟ, ಆದರೆ ಅವರ ಮಾತಿಗೆ ನಾವು ಹೇಗೆ ಪ್ರತಿಕ್ರಿಯಿಸುತ್ತೇವೆ ಎಂಬುದನ್ನು ಬದಲಾಯಿಸಿಕೊಳ್ಳುವುದು ನಮ್ಮ ಕೈಯಲ್ಲಿದೆ.

ಕೊನೆಯದಾಗಿ ಒಂದು ಮಾತು ಹೇಳುತ್ತೇನೆ – ಈ ಜಗತ್ತಿನಲ್ಲಿ ನಿಮಗೆ, ನಿಮ್ಮ ತಂದೆಯವರಷ್ಟು ಒಳ್ಳೆಯ ಹಿತೈಷಿ, ಮಾರ್ಗದರ್ಶಕ ಬೇರಾರೂ ಇಲ್ಲ ಎಂಬುದನ್ನು ಮಾತ್ರ ಮರೆಯಬೇಡಿ.

ಸತೀಶ ಶಿವಮೊಗ್ಗ, (ಇಮೇಲ್ ಮೂಲಕ)

- **ಭಟ್ರೇ, ನನಗೊಬ್ಬಳು ಒಳ್ಳೆಯ ಸ್ನೇಹಿತೆ ಇದ್ದಾಳೆ. ಆದರೆ ಅವಳನ್ನು ಕಂಡರೆ ನನ್ನ ಹೆಂಡತಿಗೆ ಆಗುವುದಿಲ್ಲ. ಹೆಂಡತಿಗೆ ಗೊತ್ತಾದರೆ ಎಂಬ ಭಯ ನನಗೆ. ಇಂದಲ್ಲ, ನಾಳೆ ಗೊತ್ತಾಗಬಹುದು. ಆದರೂ ಹೆಂಡತಿಗೆ ಗೊತ್ತಾಗದಂತೆ ಅವಳ ಜತೆ ಸ್ನೇಹ ಮುಂದುವರಿಸಿಕೊಂಡು ಹೋಗುವುದು ಹೇಗೆ? ಒಂದು ವೇಳೆ ಗೊತ್ತಾದರೆ?**

– ಸತೀಶ ಅವರೇ, ಅಬ್ಬಬ್ಬಾ... ನೀವು ಅಕ್ಷರಶಃ ಬೆಂಕಿಯ ಜೊತೆ ಸರಸ ಆಡುತ್ತಿದ್ದೀರಿ! ಒಬ್ಬ ಕಡೆ ಪ್ರಾಣಪ್ರಿಯ ಸ್ನೇಹಿತೆ, ಇನ್ನೊಂದು ಕಡೆ ಪ್ರಾಣ ಸಂಕಟ ನೀಡಬಲ್ಲ ಹೆಂಡತಿ. ಈ 'ತ್ರಿಕೋನ' ಪ್ರೇಮವಲ್ಲದಿದ್ದರೂ, ಹೆಂಡತಿಯ ಪಾಲಿಗೆ ಇದು 'ಬರ್ಮುಡಾ ಟ್ರಯಂಗಲ್' ಥರವೇ ಕಾಣಿಸುತ್ತದೆ. ನಿಮ್ಮ ಈ ಗುಪ್ತ ಸ್ನೇಹದ ನೌಕೆಯನ್ನು ಮುಳುಗದಂತೆ ಮಾಡಲು ಕೆಲವು 'ಅಪಾಯಕಾರಿ' ಆದರೆ ತಮಾಷೆಯ ಸಲಹೆಗಳನ್ನು ಹೇಳಬಹುದು.

ಹೆಂಡತಿಯ ಕೈಗೆ ಫೋನ್ ಸಿಕ್ಕರೆ ಅದು 'ಬ್ಲ್ಯಾಕ್ ಬಾಕ್ಸ್' ಸಿಕ್ಕಂತೆಯೇ ಸರಿ. ಸ್ನೇಹಿತೆಯ ಹೆಸರನ್ನು ಫೋನ್‌ನಲ್ಲಿ 'ಬ್ಯಾಂಕ್ ಮ್ಯಾನೇಜರ್' ಅಥವಾ 'ಕಚೇರಿ ಅಟೆಂಡರ್' ಅಥವಾ 'ಜಿಮ್ ಟ್ರೈನರ್' ಎಂದು ಸೇವ್ ಮಾಡಿ. ರಾತ್ರಿ ಹೊತ್ತು 'ಬ್ಯಾಂಕ್ ಮ್ಯಾನೇಜರ್' ಮೆಸೇಜ್ ಮಾಡಿದರೆ ಹೆಂಡತಿಗೆ ಅನುಮಾನ ಬರುವುದು ಖಚಿತ, ಹಾಗಾಗಿ 'ಆರ್ಕೈವ್' ಫೀಚರ್ ಬಳಸಿ.

ಅವಳನ್ನು ಒಬ್ಬಳೇ ಭೇಟಿಯಾಗುವ ಬದಲು, ಒಂದು ದೊಡ್ಡ ಫ್ರೆಂಡ್ಸ್ ಗ್ರೂಪ್ ಮಧ್ಯೆ ಭೇಟಿಯಾಗಿ. ನನ್ನ ಹಳೆಯ ಸ್ಕೂಲ್ ಫ್ರೆಂಡ್ಸ್ ಎಲ್ಲ ಸಿಗುತ್ತಿದ್ದೇವೆ ಎಂದು ಹೇಳಿ ಹೋಗಿ. ಅಲ್ಲಿ ಹತ್ತು ಜನರ ಮಧ್ಯೆ ನಿಮ್ಮ ಸ್ನೇಹಿತೆಯೂ ಇದ್ದರೆ ಅದು 'ಸೋಷಿಯಲ್ ಮೀಟಿಂಗ್' ಥರ ಕಾಣುತ್ತದೆ, 'ಪರ್ಸನಲ್ ಮೀಟಿಂಗ್' ತರಹ ಅಲ್ಲ!

ಸ್ನೇಹಿತೆಯನ್ನು ಭೇಟಿಯಾದ ದಿನ ಹೆಂಡತಿಗೆ ಅತಿಯಾದ ಪ್ರೀತಿ ತೋರಿಸಲು ಹೋಗಬೇಡಿ. ಅಕಸ್ಮಾತ್ ನೀವು ಅವತ್ತೇ ಮಲ್ಲಿಗೆ ಹೂವು ಅಥವಾ ಐಸ್‌ಕ್ರೀಮ್ ತಗೊಂಡು ಹೋದರೆ, ಇವತ್ತು ಏನೋ ಗೇಮ್ ನಡೆದಿದೆ ಎಂದು ಹೆಂಡತಿಯ 'ಸಿಬಿಐ' ಬುದ್ಧಿ ಕೆಲಸ ಮಾಡಲು ಶುರು ಮಾಡುತ್ತದೆ. ಸಹಜವಾಗಿರಿ.

ತಮಾಷೆ ಒಂದು ಕಡೆಯಿರಲಿ, ಹೆಂಡತಿಯರಿಗೆ 'ಆರನೇ ಇಂದ್ರಿಯ' (Sixth Sense) ತುಂಬಾ ಶಾರ್ಪ್ ಇರುತ್ತದೆ. ನೀವು ಎಷ್ಟು ಹೈಡ್ ಮಾಡಿದರೂ ಯಾವುದೋ ಒಂದು ದಿನ ಸ್ಕ್ರೀನ್ ಮೇಲೆ ಮೆಸೇಜ್ ಪಾಪ್-ಅಪ್ ಆಗಿಯೇ ಆಗುತ್ತದೆ. ಸುಳ್ಳು ಹೇಳಿ ಸಿಕ್ಕಿಬಿದ್ದು ಜಗಳ ಮಾಡುವುದಕ್ಕಿಂತ, ಇಬ್ಬರನ್ನೂ ಎದುರುಬದುರು ಕೂರಿಸಿ, 'ಇವಳು ನನ್ನ ಬೆಸ್ಟ್ ಫ್ರೆಂಡ್ ಅಷ್ಟೇ' ಎಂದು ಒಮ್ಮೆಲೆ ಧೈರ್ಯ ಮಾಡಿ ಹೇಳಿಬಿಡುವುದು ನಿಮ್ಮ ಪ್ರಾಣಕ್ಕೆ ಕ್ಷೇಮ!

ಕಿರಣ್ (ಇಮೇಲ್ ಮೂಲಕ)

- **ಭಟ್ರೇ, ನನಗೆ ನಲವತ್ತು ವರ್ಷ. ಎರಡು-ಮೂರು ದಿನವಾದರೂ ನಾನು ಸ್ನಾನ ಮಾಡುವುದಿಲ್ಲ. ನಂಗೆ ಇದೇ ಹಿತ ಎನಿಸುತ್ತದೆ. ಇದರಿಂದ ನನಗೆ ಯಾವ ಸಮಸ್ಯೆಯೂ ಆಗಿಲ್ಲ. ಬೇರೆಯವರಿಗೆ ಇದರಿಂದ ತೊಂದರೆ ಆಗಿರಬಹುದು. ಆ ಬಗ್ಗೆ ನಾನು ತಲೆ ಕೆಡಿಸಿಕೊಳ್ಳುವುದಿಲ್ಲ. ಈ ವಿಷಯದಲ್ಲಿ ನನ್ನ ನಿರ್ಧಾರ ಸರಿ ಇದೆಯಾ?**

– ಕಿರಣ್ ಅವರೇ, ಖಂಡಿತ, ನಿಮ್ಮ ನಿರ್ಧಾರ 'ಪರಿಸರ ಸ್ನೇಹಿ'! ನೀರು ಉಳಿಸುವ ನಿಮ್ಮ ಈ ತ್ಯಾಗಕ್ಕೆ ಜಲಮಂಡಳಿಯವರು ಪ್ರಶಸ್ತಿ ಕೊಟ್ಟರೂ ಆಶ್ಚರ್ಯವಿಲ್ಲ. ಆದರೆ ನೆನಪಿಡಿ, ಸ್ನಾನ ಮಾಡದಿರುವುದು ನಿಮಗೆ 'ಹಿತ' ಎನಿಸಿದರೂ, ನಿಮ್ಮ ಸುತ್ತಮುತ್ತಲಿನವರಿಗೆ ಅದು 'ಹಿತೋಪದೇಶ' ಕೇಳಿದಂತೆ ಕಷ್ಟವಾಗಬಹುದು!

ನಲವತ್ತರ ಹರೆಯದಲ್ಲಿ ಮೈ ಬೆವರಿನ ವಾಸನೆ ಸೆಂಟ್ ಥರ ಇರುವುದಿಲ್ಲ. ನಿಮ್ಮ ಈ 'ಘಮ'ಕ್ಕೆ ಜನ ದೂರ ಹೋದರೆ ಅದು ಸಾಮಾಜಿಕ ಅಂತರವಲ್ಲ. ನಿಮ್ಮ ನಿರ್ಧಾರ ವೈಯಕ್ತಿಕವಾಗಿ ಸರಿಯಿರಬಹುದು, ಆದರೆ ಸಂಬಂಧಗಳು ಗಬ್ಬು ನಾರದಿರಲಿ ಅಷ್ಟೇ.

ಮುದ್ದಾದ ವಾಚಾಳಿ!

» ಹೊಸ್ಮನೆ ಮುತ್ತು

ಮನೆಯ ಸುತ್ತಲೂ ಹಸಿರು ಮರ-ಗಿಡಗಳಿದ್ದರೆ ಪ್ರಕೃತಿಯ ಸಣ್ಣಪುಟ್ಟ ಅದ್ಭುತಗಳನ್ನು ದಿನವೂ ಕಾಣಬಹುದು. ಬೆಳಗಿನ ಸೂರ್ಯನ ಕಿರಣಗಳು ತೋಟದ ಮೇಲೆ ಬೀಳುತ್ತಿದ್ದಂತೆ, ನಮ್ಮ ಕೈತೋಟದ ಶಾಶ್ವತ ನಿವಾಸಿಗಳಾದ ಬೂದು ಬಣ್ಣದ ಬಾಬ್ಲರ್ ಹಕ್ಕಿಗಳ ಆಗಮನ ವಾಗುತ್ತದೆ. ಗುಂಪಾಗಿ ತಿರುಗುತ್ತಾ, ಸದಾ ಕಿಚಿಪಿಚಿ ಸದ್ದು ಮಾಡುವ ಈ ಹಕ್ಕಿಗಳಿಗೆ 'ಹರಟೆಮಲ್ಲ' ಎಂಬ ಹೆಸರು ಅನ್ವರ್ಥ. ಹಸಿರಿನ ನಡುವೆ ಇವುಗಳ ಗಲಾಟೆ ಕೇಳಿ ಬಂದಾಗಲೆಲ್ಲ ಮುಖದಲ್ಲಿ ಮಂದಹಾಸ ಮೂಡುವುದು ಸಹಜ.

ಈ ಹಕ್ಕಿಗಳಿಗೆ ಒಂದು ಕ್ಷಣವೂ ಸುಮ್ಮನೆ ಕೂರಲು ಬರುವುದಿಲ್ಲ. ಮರದ ಕೊಂಬೆಯಿಂದ ಪೊದೆಗೆ, ಪೊದೆಯಿಂದ ನೆಲಕ್ಕೆ ಜಿಗಿಯುತ್ತಾ, ಒಣಗಿದ ಎಲೆಗಳನ್ನು ತಮ್ಮ ಪುಟ್ಟ ಕಾಲುಗಳಿಂದ

ಈ ಪಕ್ಷಿಗಳು ಕೇವಲ ಹಕ್ಕಿಗಳಲ್ಲ, ನಮ್ಮ ಮನೆಯ ದಿನಚರಿಯ ಅವಿಭಾಜ್ಯ ಅಂಗ. ಮುಂಜಾನೆ ಅವುಗಳ ಸದ್ದು ಕೇಳದಿದ್ದರೆ, ಕೈತೋಟವಷ್ಟೇ ಅಲ್ಲ, ಮನಸ್ಸು ಕೂಡ ಬಿಕೋ ಎನ್ನುತ್ತದೆ.

ಕೆದಕುತ್ತಾ ಆಹಾರ ಹುಡುಕುವ ಶೈಲಿಯೇ ಚೇತೋಹಾರಿ. ಸದಾ ಗುಂಪಿನಲ್ಲಿದ್ದು, ಏರು ದನಿಯಲ್ಲಿ ಪರಸ್ಪರ ಹರಟುತ್ತಲೇ ಇರುತ್ತವೆ. ಮೇಲ್ನೋಟಕ್ಕೆ ಯಾವುದೋ ದೊಡ್ಡ ಜಗಳವೇ ನಡೆಯುತ್ತಿದೆ ಎನಿಸಿದರೂ, ಸ್ವಲ್ಪ ಹೊತ್ತು ಗಮನಿಸಿದರೆ ಆ ಗಲಾಟೆಯ ನಡುವೆಯೂ ಒಂದು ಲಯವಿದೆ, ಅಕ್ಕರೆಯ ಕರೆಯಿದೆ ಎಂಬುದು ಅರ್ಥವಾಗುತ್ತದೆ. ಅವುಗಳ ಆಟ, ನೆಗೆದಾಟ ಮತ್ತು ಮುಗ್ಧತೆಯನ್ನು ನೋಡುತ್ತಾ ನಿಂತರೆ ನಮ್ಮ ಯೋಚನೆಗಳೆಲ್ಲ ಮರೆಯಾಗಿ, ಸಮಯ ಸರಿದದ್ದೇ ತಿಳಿಯುವುದಿಲ್ಲ.

ಈ ಹಕ್ಕಿಗಳು ಒಂಟಿಯಾಗಿರದೆ, ಯಾವಾಗಲೂ 7 –8 ಪಕ್ಷಿಗಳು ಗುಂಪಿನಲ್ಲೇ ಇರುವ ಕಾರಣ ಆಡುಮಾತಿನಲ್ಲಿ ಇವುಗಳನ್ನು 'ಸೆವೆನ್ ಸಿಸ್ಟರ್ಸ್' ಎನ್ನುತ್ತಾರೆ. ಇವುಗಳ ನಿಜವಾದ ಸೌಂದರ್ಯ ಅಡಗಿರುವುದೇ ಈ ಒಗ್ಗಟ್ಟು ಹಾಗೂ ಪರಸ್ಪರ ತೋರುವ ಪ್ರೀತಿಯಲ್ಲಿ. ಹೊಟ್ಟೆ ತುಂಬಿದ ಮೇಲೆ ಅಥವಾ ಬಿಡುವಿನ ವೇಳೆಯಲ್ಲಿ, ಮರದ ಕೊಂಬೆಯ ಮೇಲೆ ಮೂರ್ನಾಲ್ಕು ಹಕ್ಕಿಗಳು ಒಂದಕ್ಕೊಂದು ಅಂಟಿಕೊಂಡು ಕೂರುವ ದೃಶ್ಯವಂತೂ ಮನಮೋಹಕ. ಪಕ್ಕಪಕ್ಕದಲ್ಲೇ ಕೂತು, ಕೊಕ್ಕಿನಿಂದ ಪರಸ್ಪರ ಗರಿಗಳನ್ನು ನೇವರಿಸುತ್ತಾ ಸ್ವಚ್ಛಗೊಳಿಸಿಕೊಳ್ಳುವ ಪರಿ ಅವುಗಳ ನಡುವಿನ ಪ್ರೀತಿ ಹಾಗೂ ಸಂಬಂಧವನ್ನು ಬಿಂಬಿಸುತ್ತದೆ. ತಾಯಿ ಹಕ್ಕಿ ಮರಿಗಳಿಗೆ ಗುಟುಕು ಕೊಡುವಾಗ ಇಡೀ ಗುಂಪೇ ಆ ಮರಿಗಳ ರಕ್ಷಣೆಗೆ ನಿಲ್ಲುವ ರೀತಿ, ಮನುಷ್ಯರಾದ ನಮಗೂ ಕುಟುಂಬದ ಮೌಲ್ಯಗಳನ್ನು ಮೌನವಾಗಿ ಬೋಧಿಸುವಂತಿರುತ್ತದೆ.

ಬದುಕಿನ ಪಾಠ: ಆಹಾರ ಕಂಡಾಗ ಎಲ್ಲವೂ ಒಟ್ಟಾಗಿ ಸೇರಿ ಸಣ್ಣದಾಗಿ ಕಿತ್ತಾಡಿದರೂ, ಕೆಲವೇ ಕ್ಷಣಗಳಲ್ಲಿ ಆ ಮುನಿಸು ಮರೆತು ಮತ್ತೆ ಜೊತೆಯಾಗಿ ಆಹಾರ ಹುಡುಕುತ್ತವೆ. ಹಾಗೆಯೇ, ಒಂದು ಪಕ್ಷಿಗೆ ಅಪಾಯದ ಮುನ್ಸೂಚನೆ ಸಿಕ್ಕರೆ ತಕ್ಷಣ ಶಬ್ದ ಮಾಡಿ ಉಳಿದವನ್ನು ಎಚ್ಚರಿಸಿ, ಕ್ಷಣಾರ್ಧದಲ್ಲಿ ಎಲ್ಲವೂ ಒಂದೇ ದಿಕ್ಕಿಗೆ ಹಾರಿಹೋಗುತ್ತವೆ. ಒಬ್ಬರ ಕಷ್ಟಕ್ಕೆ ಎಲ್ಲರೂ ಓಡಿ ಬರುವ, ಒಬ್ಬರ ಆಹಾರಕ್ಕೆ ಎಲ್ಲರೂ ಸೇರುವ ಈ ಗುಣ ಕೇವಲ ಪಕ್ಷಿಗಳ ಸ್ವಭಾವವಲ್ಲ; ಅದೊಂದು ಜೀವನದ ತತ್ವ. ಒಟ್ಟಿಗಿದ್ದರೆ ಬೆಚ್ಚಗೆ; ಒಟ್ಟಿಗಿದ್ದರೆ ಸುರಕ್ಷಿತ ಎಂಬುದು ಅವು ಕಲಿತ ಪಾಠ.

ಇಂದಿನ ಜಂಜಾಟದ ಬದುಕಿನಲ್ಲಿ, ನಮ್ಮ ಕೈತೋಟಕ್ಕೆ ಬರುವ ಈ ಹರಟೆಮಲ್ಲಗಳ ಗುಂಪು, ಒತ್ತಡ ಮರೆಸುವ ನಿಸರ್ಗದ ಮದ್ದಿನಂತಿವೆ. ಸದಾ ಕೂಡಿ ಬಾಳುವ ಈ ಪಕ್ಷಿಗಳು, ಸಾಂಗತ್ಯದ ಅರ್ಥವನ್ನು ನಮಗೆ ಹೇಳಿಕೊಡುತ್ತವೆ. ಈ ಪಕ್ಷಿಗಳು ಕೇವಲ ಹಕ್ಕಿಗಳಲ್ಲ, ನಮ್ಮ ಮನೆಯ ದಿನಚರಿಯ ಅವಿಭಾಜ್ಯ ಅಂಗ. ಮುಂಜಾನೆ ಅವುಗಳ ಸದ್ದು ಕೇಳದಿದ್ದರೆ, ಕೈತೋಟವಷ್ಟೇ ಅಲ್ಲ, ಮನಸ್ಸು ಕೂಡ ಬಿಕೋ ಎನ್ನುತ್ತದೆ. ಪ್ರಕೃತಿಯ ಈ ಸುಂದರ ಉಡುಗೊರೆಯನ್ನು ಸದಾ ಪ್ರೀತಿಸೋಣ, ಜೋಪಾನ ಮಾಡೋಣ.



» ಡಾ.ಎಸ್.ಎಂ.ಶಶಿಧರ

ನಗರದ ಸಿರಿವಂತರ ಮನೆಗಳಲ್ಲಿ ಅಥವಾ ಕಾರ್ಪೊರೇಟ್ ಆಫೀಸುಗಳ ರಿಸೆಪ್ಷನ್ ಟೇಬಲ್ ಮೇಲೆ ಒಂದು ಪುಟ್ಟ ಗಿಡವಿರುತ್ತದೆ. ಬೋನ್ಸಾಯ್! ನೋಡಲು ಬಲು ಅಂದ. ಪುಟ್ಟ ಕುಂಡದಲ್ಲಿ ಅರಳಿ ನಿಂತ ಆಲದ ಮರವದು.

ಆದರೆ, ಸೂಕ್ಷ್ಮವಾಗಿ ಗಮನಿಸಿದರೆ ಆ ಮರದ ಬಗ್ಗೆ ಕನಿಕರ ಹುಟ್ಟುತ್ತದೆ. ಕಾಡಿನಲ್ಲಿ ಆಕಾಶಕ್ಕೆ ತಲೆ ಎತ್ತಿ, ಭೂಮಿಯಾಳಕ್ಕೆ ಬೇರು ಬಿಟ್ಟು, ಸಾವಿರಾರು ಹಕ್ಕಿಗಳಿಗೆ ಆಶ್ರಯ ನೀಡಬೇಕಿದ್ದ ಹೆಮ್ಮರ ಅದು. ಆದರೆ, ಮನುಷ್ಯ ತನ್ನ ಅಂದಕ್ಕಾಗಿ ಅದನ್ನು ಪುಟ್ಟ ಕುಂಡದಲ್ಲಿ ಕೂರಿಸಿ, ಅದರ ಬೇರು ಕತ್ತರಿಸಿ, 'ನೀನು ಇಷ್ಟೇ ಬೆಳೀಬೇಕು' ಅಂತ ಕಟ್ಟಿ ಹಾಕಿದ್ದಾನೆ. ಆ ಗಿಡಕ್ಕೆ ಪಾಪ ಗೊತ್ತಿಲ್ಲ, ತಾನು ಮುಗಿಲೆತ್ತರಕ್ಕೆ ಬೆಳೆಯುವ ತಾಕತ್ತು ಇಟ್ಟುಕೊಂಡೇ ಹುಟ್ಟಿದ್ದೇನೆ ಅಂತ. ಅದು ಆ ಪುಟ್ಟ ಕುಂಡವನ್ನೇ ಜಗತ್ತು ಎಂದುಕೊಂಡಿದೆ.

ನಿಜ ಹೇಳಬೇಕೆಂದರೆ, ಮನುಷ್ಯರ ಕತೆಯೂ ಅಷ್ಟೆ!

ಸಾಕಿದ ಆನೆಯನ್ನು ನೋಡಿದ್ದೀರಲ್ಲಾ? ದೈತ್ಯಾಕಾರದ ಪ್ರಾಣಿ. ಅದು ಮನಸ್ಸು ಮಾಡಿದರೆ ದೊಡ್ಡ ಮರಗಳನ್ನೇ ಬುಡಮೇಲು ಮಾಡಬಲ್ಲದು. ಆದರೆ, ಮಾವುತ ಅದರ ಕಾಲಿಗೆ ಕಟ್ಟಿರುವುದು ಒಂದು ಸಣ್ಣ ಹಗ್ಗವನ್ನು ಮಾತ್ರ! ಆನೆ ಸುಮ್ಮನೆ ಕಾಲು ಜಾಡಿಸಿದರೂ ಆ ಹಗ್ಗ ತುಂಡಾಗುತ್ತದೆ. ಆದರೂ ಆನೆ ತಪ್ಪಿಸಿಕೊಳ್ಳಲು ಪ್ರಯತ್ನಿಸುವುದೇ ಇಲ್ಲ. ಯಾಕೆ ಗೊತ್ತಾ?

ಅದು ಮರಿ ಆನೆಯಾಗಿದ್ದಾಗ, ಇದೇ ಹಗ್ಗವನ್ನು ಅದರ ಕಾಲಿಗೆ ಕಟ್ಟಲಾಗಿತ್ತು. ಆಗ ಅದು ಪುಟ್ಟದಾಗಿತ್ತು, ಹಗ್ಗ ಗಟ್ಟಿಯಾಗಿತ್ತು. ಪಾಪ, ಆ ಮರಿ ಆನೆ ಹಗ್ಗ ಕೀಳಲು ಸಾವಿರ ಸಲ ಪ್ರಯತ್ನಿಸಿ ಸೋತು ಸುಮ್ಮನಾಗಿತ್ತು. ಈ ಹಗ್ಗ ಕೀಳಲು ನನ್ನಿಂದ ಸಾಧ್ಯವಿಲ್ಲ ಎನ್ನುವ ನಿರ್ಧಾರಕ್ಕೆ ಅದು ಆಗಲೇ ಬಂದಿತ್ತು.

ಈಗ ಆನೆ ಬೆಟ್ಟದಷ್ಟು ಬೆಳೆದಿದೆ. ಆದರೆ ಅದರ ನಂಬಿಕೆ ಮಾತ್ರ ಇನ್ನೂ ಆ ಮರಿ ಆನೆಯಷ್ಟೇ ಇದೆ! 'ನನ್ನಿಂದ ಸಾಧ್ಯವಿಲ್ಲ' ಎಂಬ ಹಳೆಯ ನಂಬಿಕೆಯೇ ಆ ಬಲಶಾಲಿ ಆನೆಯನ್ನು ಒಂದು ಸಣ್ಣ ಹಗ್ಗಕ್ಕೆ ದಾಸನನ್ನಾಗಿ ಮಾಡಿದೆ.

ನಮ್ಮ ಬದುಕು ಕೂಡ ಹೀಗೆಯೇ ಅಲ್ವಾ? ನಮ್ಮ ಸುತ್ತಲೂ ನಾವೇ ಹಾಕಿಕೊಂಡ, ಅಥವಾ ಸಮಾಜ ಹಾಕಿದ 'ಹಗ್ಗ'ಗಳು ಇರುತ್ತವೆ. ಅದಕ್ಕೆ ನಾವು ಇಟ್ಟಿರುವ ಮುದ್ದಾದ ಹೆಸರು– 'ಪ್ರಾಕ್ಟಿಕಲ್ ಆಗಿರೋದು'.

ಬಸ್ ಸ್ಟಾಪ್‌ನಲ್ಲೋ, ಪಾರ್ಕ್ ಬೆಂಚಿನ ಮೇಲೋ ಕುಳಿತಿರುವ ಎಷ್ಟೋ ಜನರನ್ನು ಗಮನಿಸಿ. ಅವರ ಕಣ್ಣಲ್ಲಿ ಒಂದು ಬಗೆಯ ದೌರ್ಬಲ್ಯ ಕಾಣುತ್ತದೆ. ಜೀವನದಲ್ಲಿ ಸೋತಿದ್ದರಿಂದ ಬಂದ ಬೇಸರವಲ್ಲ ಅದು; ಗೆಲ್ಲುವ ಪ್ರಯತ್ನವನ್ನೇ ಮಾಡದಿದ್ದುದ್ದರಿಂದ ಆವರಿಸಿದ ಜಡತ್ವ. 'ನನಗೆ ಜಾಸ್ತಿ ಏನೂ ಬೇಡ, ಒಂದು ಸಣ್ಣ ಕೆಲಸ, ವಾಸಿಸಲು ಒಂದು ಪುಟ್ಟ ಮನೆ, ತಿಂಗಳ ಸಂಬಳ ಬಂದರೆ ಸಾಕು' ಎಂದು ತೃಪ್ತಿ ಪಟ್ಟುಕೊಳ್ಳುವವರೇ ಹೆಚ್ಚು.

ಸಮಸ್ಯೆ ಇರುವುದು ಅವರ ಲೈಫ್‌ನಲ್ಲಿ ಅಲ್ಲ, ಅವರ ನಂಬಿಕೆಯಲ್ಲಿ. ಬದುಕಿನ ಸಮುದ್ರದ ಹತ್ತಿರ ಹೋದಾಗ, ಬಹುತೇಕರು ಕೈಯಲ್ಲಿ ಹಿಡಿದುಕೊಂಡು ಹೋಗುವುದು ಕೇವಲ ಒಂದು ಚಹಾ ಚಮಚವನ್ನು! ಸಮುದ್ರ ಅಷ್ಟು ವಿಶಾಲವಾಗಿರುತ್ತದೆ, ಅಲ್ಲಿ ಅದೆಷ್ಟು ಬೇಕೋ ಅಷ್ಟು ನೀರಿರುತ್ತದೆ. ಆದರೆ ಪಾತ್ರೆ ಚಿಕ್ಕದಾದಾಗ, ಸಿಗುವುದು ಪಾತ್ರೆಯಷ್ಟೇ ನೀರು ಮಾತ್ರ.

ಅದೇ ಗುಂಪಿನಲ್ಲಿ ಯಾರೋ ಒಬ್ಬ ಬಕೆಟ್ ಹಿಡಿದು ನಿಂತಿರುತ್ತಾನೆ. ಅವನಿಗೆ ಬಕೆಟ್ ತುಂಬ ನೀರು ಸಿಗುತ್ತದೆ. ಹಾಗಾದರೆ ಎಲ್ಲರಿಗೂ ಒಂದು ಬಕೆಟ್ ನೀರು ಏಕೆ ಸಿಗಲಿಲ್ಲ? ತಪ್ಪು ಸಮುದ್ರದ್ದಲ್ಲ, ಪಾತ್ರೆಹಿಡಿದವನದ್ದು!

ಡೇವಿಡ್ ಜೆ. ಶ್ವಾರ್ಟ್ಸ್ ಅಂತ ಒಬ್ಬ ಲೇಖಕರು ಒಂದು ಮಾತು ಹೇಳ್ತಾರೆ– ದೊಡ್ಡದಾಗಿ ಯೋಚಿಸಿ; ನಿಮ್ಮ ಯಶಸ್ಸಿನ ಗಾತ್ರವು ನಿಮ್ಮ ನಂಬಿಕೆಯ ಗಾತ್ರದಿಂದ ನಿರ್ಧರಿಸಲ್ಪಡುತ್ತದೆ.

ವಿಚಿತ್ರ ಫ್ಯಾಕ್ಟರಿ!

ಮನುಷ್ಯನ ಮನಸ್ಸು ಒಂದು ವಿಚಿತ್ರವಾದ ಫ್ಯಾಕ್ಟರಿ. ಅಲ್ಲಿ ನನ್ನಿಂದ ಇದು ಸಾಧ್ಯವಿಲ್ಲ, ನಾನು ಸಾಮಾನ್ಯ ಮನುಷ್ಯ ಅನ್ನೋ ಕಚ್ಚಾ ವಸ್ತುವನ್ನು ಹಾಕಿದರೆ, ಆ ಫ್ಯಾಕ್ಟರಿ ನಿರಂತರವಾಗಿ ಸೋಲನ್ನೇ ತಯಾರಿಸಿ ಕೊಡುತ್ತದೆ. ಅದೇ ನಾನು ಏನನ್ನಾದರೂ ಸಾಧಿಸಬಲ್ಲೆ, ಐ ಆಮ್ ದ ಬೆಸ್ಟ್ ಅನ್ನೋ ನಂಬಿಕೆಯನ್ನು ಹಾಕಿದರೆ, ಅದು ಗೆಲುವಿನ ದಾರಿಗಳನ್ನು ತೋರಿಸುತ್ತದೆ.

ಸಾಹಿತಿ ಪೌಲೋ ಕೊಯ್ಲೋ ಕೂಡ ಇದನ್ನೇ ಹೇಳುವುದು. ನೀವು ಏನನ್ನಾದರೂ ಮನಸಾರೆ ಬಯಸಿದರೆ, ಇಡೀ ಬ್ರಹ್ಮಾಂಡವೇ ಅದನ್ನು ನಿಮಗೆ ದಕ್ಕಿಸಿಕೊಡಲು ಪಿತೂರಿ ನಡೆಸುತ್ತದೆ ಅಂತ. ಆದರೆ ಜನ ಬಯಸೋದು ಕಡಿಮೆ. ಸಂತೆಗಳಲ್ಲಿ ತರಕಾರಿ ಕೊಳ್ಳುವಾಗ ಚೌಕಾಶಿ ಮಾಡಿದ ಹಾಗೆ ಬದುಕಿನ ಜೊತೆ ಚೌಕಾಶಿ ಮಾಡುತ್ತಾರೆ. ದೇವರೇ, ನನಗೇನೂ ಬೇಡ, ಎಲ್ರೂ ತರ ಇದ್ರೆ ಸಾಕು ಅಂತ ಬೇಡಿಕೊಳ್ಳುತ್ತಾರೆ. ನೆನಪಿಡಿ, ಕನಸು ಕಾಣುವುದಕ್ಕೆ ಸರಕಾರ ಟ್ಯಾಕ್ಸ್ ಹಾಕಿಲ್ಲ. ಆದರೂ ಜನ ಕನಸು ಕಾಣಲು ಜಿಪುಣತನ ಮಾಡುತ್ತಾರೆ. ಸಣ್ಣ ಆಲೋಚನೆಗಳು ಮನುಷ್ಯನನ್ನು ಸಣ್ಣದಾಗಿಯೇ ಉಳಿಸುತ್ತವೆ. ಅದೊಂದು ರೀತಿ ಕನ್ನಡಿಯ ಮುಂದೆ ನಿಂತು ಕಣ್ಣು ಮುಚ್ಚಿಕೊಂಡ ಹಾಗೆ. ಕನ್ನಡಿ ಇದೆ, ಪ್ರತಿಬಿಂಬ ಇದೆ, ಆದರೆ ನೋಡುವ ದೃಷ್ಟಿ ಇಲ್ಲ. ನಾವು ಎಷ್ಟರ ಮಟ್ಟಿಗೆ ನಂಬುತ್ತೇವೋ, ಅಷ್ಟರ ಮಟ್ಟಿಗೆ ಬೆಳೆಯುತ್ತೇವೆ.

ಇಲ್ಲಿ ಜಾದೂ ಇಲ್ಲ

ಅದು 'ಮ್ಯಾಜಿಕ್' ಅಲ್ಲ, ಅದು ಮನಶಾಸ್ತ್ರ. ಯಾವಾಗ ನಾನು ದೊಡ್ಡದನ್ನು ಸಾಧಿಸುತ್ತೇನೆ ಎಂದು ಒಬ್ಬ ವ್ಯಕ್ತಿ ನಂಬುತ್ತಾನೋ, ಆಗ ಅವನ ಮೆದುಳು 'ಅದು ಹೇಗೆ ಸಾಧ್ಯ?' ಎಂದು ದಾರಿ ಹುಡುಕಲು ಶುರುಮಾಡುತ್ತದೆ. ಯಾವಾಗ ನನ್ನಿಂದ ಆಗಲ್ಲ ಅಂತ ನಂಬುತ್ತಾನೋ, ಆಗ ಮೆದುಳು ಸುಮ್ಮನೆ ಶಟರ್ ಎಳೆದು ಮಲಗುತ್ತದೆ.

ಹಾಗಂತ ಸುಮ್ಮನೆ ಹಗಲುಗನಸು ಕಂಡರೆ ಸಾಲದು. ಆ ಕನಸಿಗೆ ತಕ್ಕಂತೆ ಎದ್ದು ಓಡಬೇಕು. ಆದರೆ ಓಡುವುದಕ್ಕೂ ಮುನ್ನ, ನಾನು ತಲುಪೇ ತಲುಪುತ್ತೇನೆ ಅನ್ನೋ ಧೈರ್ಯ ಬೇಕಲ್ಲ? ಆ ಧೈರ್ಯವೇ 'ದೊಡ್ಡ ನಂಬಿಕೆ'.

ಯದ್ಭಾವಂ ತದ್ಭವತಿ

ನಮ್ಮ ಹಿರಿಯರು 'ಯದ್ಭಾವಂ ತದ್ಭವತಿ' ಅಂತ ಸುಮ್ಮನೆ ಹೇಳಿಲ್ಲ. ರಾತ್ರಿ ಮಲಗುವ ಮುನ್ನ ಪ್ರತಿಯೊಬ್ಬರೂ ಸಕಾರಾತ್ಮಕವಾಗಿ ಒಮ್ಮೆ ಯೋಚಿಸಬೇಕು. ಬೋನ್ಸಾಯ್ ಗಿಡದ ಹಾಗೆ ಕುಬ್ಜರಾಗಿ ಉಳಿಯಲು ಇಷ್ಟಪಡುತ್ತೀರಾ? ಅಥವಾ ಕಾಡಿನ ಹೆಮ್ಮರದ ಹಾಗೆ ಆಕಾಶಕ್ಕೆ ಕೈ ಚಾಚುತ್ತೀರಾ? ನಿಮ್ಮ ಕಾಲಿಗೆ ಕಟ್ಟಿದ ಹಗ್ಗ ಯಾವುದು? ಆ ಹಗ್ಗ ಹರಿದು ಮುನ್ನಡೆಯುತ್ತೀರಾ? ಆಕಾಶಕ್ಕೆ ಸೂರು ಇಲ್ಲ. ಮನುಷ್ಯನ ನಂಬಿಕೆಗೂ ಮಿತಿ ಇರಬಾರದು.

ನಂಬಿ, ಪ್ರತಿಯೊಬ್ಬರೂ ಅವರು ಅಂದುಕೊಂಡಿದ್ದಕ್ಕಿಂತ ದೊಡ್ಡವರು. ಒಳಗಿನ ಆ ಸಣ್ಣ ದನಿಯನ್ನು ಅಡಗಿಸಿ, ದೊಡ್ಡದಾಗಿ ಯೋಚಿಸಬೇಕು. ಯಾಕೆಂದರೆ, ಜಗತ್ತು ಜಾಗ ಮಾಡಿಕೊಡುವುದು ತನ್ನ ಸಾಮರ್ಥ್ಯವನ್ನು ನಂಬಿದವನಿಗೆ ಮಾತ್ರ, ಅನುಮಾನಿಸುತ್ತಾ ಕೂರುವವನಿಗಲ್ಲ!

ಕಾಲ್ನಡಿಗೆಯ ಯುಗಾದಿ!

▸▸ ಮೊದಲ ಪುಟದಿಂದ

ಉತ್ತರ ಕರ್ನಾಟಕದ ''ಮರಗಾಲು ಮಲ್ಲಯ್ಯಗಳ ಸಂಘ'' ಮತ್ತು ಬೆಂಗಳೂರಿನ ಅಮ್ಮ ಫೌಂಡೇಶನ್ ವತಿಯಿಂದ ತಯಾರಿಸಲಾಗಿರುವ ಈ ಬೃಹತ್ ಗಂಟೆಯನ್ನು, ಪಾದಯಾತ್ರೆಯ ಜತೆಯಲ್ಲೇ ವಾಹನದಲ್ಲಿಟ್ಟು ಕೊಂಡು ಕೊಂಡೊಯ್ಯಲಾಗುತ್ತಿದ್ದು, ಇದನ್ನು ಶ್ರೈಶೈಲದ ಮಲ್ಲಿಕಾರ್ಜುನನಿಗೆ ಸಮರ್ಪಿಸಲಾಗು ವುದು. ಇನ್ನೂ ವಿಶೇಷವೆಂದರೆ, ಮರಗಾಲನ್ನು ಕಟ್ಟಿಕೊಂಡು ಶ್ರೀಶೈಲಕ್ಕೆ ಹೊರಟಿ ರುವ ಸುಮಾರು 150 ಮರಗಾಲು ಮಲ್ಲಯ್ಯ (ಮರಗಾಲು ಕಟ್ಟಿ ಕೊಂಡು ಉತ್ಸಾಹಿಗಳು) ಭಕ್ತಿಯಿಂದ ಈ ಗಂಟೆಯನ್ನು ನಿರ್ಮಿಸಲಾ ಗಿದ್ದು, ಇದೊಂದು ಅಭೂತಪೂರ್ವ ಭಕ್ತಿಯಾಚರಣೆಯಾಗಿ ಹೊರಬೊಮ್ಮಿದೆ. 151 ಕಿಲೋ ತೂಕದ ಬೃಹತ್ ಗಂಟೆಯು ಚಿಕ್ಕೋಡಿ ತಾಲೂಕಿನ ಯಡೂರಿನಲ್ಲಿ ಮಾರ್ಚ್ 1ರಂದು ತನ್ನ ಪಯಣವನ್ನು ಆರಂಭಿಸಿದೆ. ವಾಹನದಲ್ಲಿರುವ ಈ ಗಂಟೆಯ ಜತೆಜತೆ ಹೊರ ಟಿರುವ ನೂರಾರು ಜನರ ಪಾದ ಯಾತ್ರೆಯು ಹೋಳಿಹುಣ್ಣಿಮೆ ಸಮಯದಲ್ಲಿ ಆರಂಭ ವಾಯಿತು. ಹಲವು ಪ್ರದೇಶಗಳಿಂದ ನಡೆ ಯುತ್ತಾ ಬರುವ ಸಾವಿರಾರು ಭಕ್ತರು, ಯುಗಾದಿಯ ಸಮಯಕ್ಕೆ (ಮಾರ್ಚ್ 14) ಶ್ರೀಶೈಲ ತಲುಪು ವುದು ಮತ್ತೊಂದು ವಿಶೇಷ. ಸಾವಿರಾರು ಭಕ್ತಿಯ ನದಿಗಳು, ಶ್ರೀಶೈಲದಲ್ಲಿ ಸಂಗಮ ಗೊಳ್ಳುವ ಇಂತಹ ಅಭೂತಪೂರ್ವ ಪಾದ ಯಾತ್ರೆಗೆ ಜೈ ಎನ್ನುತ್ತಾ, ನಾವೂ ಯುಗಾದಿ ಆಚರಿಸೋಣ!